ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ಅಕ್ಟೋಬರ್ 5, 2011 ಪುಟ 20 ರೂ. 14/-

ಶಿರಸಿ ಕಾಡುಗಳ್ಳರ ಕೂಟದಲ್ಲಿ ಅರಣ್ಯ ಅಧಿಕಾರಿಗಳು


ರಾಮುಲು ಆಸ್ತಿ ಎಷ್ಟು ಗೊತ್ತಾ?





ರುದ್ರವಿಲಾಸದ ಕವಿ ಕಂಬಾರ

ಯೂನಿಪೇ ದೋಚಿದ್ದು 250 ಕೋಟಿ



ಅಕ್ರಮ ಬಡಾವಣೆ ನ್ಯಾಯಾಧೀಶರೇ ಫಲಾನುಭವಿಗಳು

ಶಿವಮೊಗ್ಗ: ಯಡ್ಡಿ ಈಶ್ವರಿ ಕದನ-ತುಳಸಿರಾಮ್ ಕೊಲೆ

ನಾಲ್ಕನೆ ಮದುವೆ ಆದ ಅಪ್ಪಯ್ಯ

ನನ್ನ ಅಪ್ಪಯ್ಯನಿಗೆ ಒಂಟಿತನ ಕಾಡಲು ಶುರುವಾಯಿತು. ನನ್ನ ಅಕ್ಕ ಸುಶೀಲ ಮತ್ತು ನನಗೆ ಮದುವೆಯಾಗಿ ಬೇರೆ ಇದ್ದೆವು. ಯೌವನಕ್ಕೆ ಕಾಲಿಟ್ಟಿದ್ದ ನನ್ನ ತಮ್ಮ ಶಿವಕುಮಾರ್ ಕೂಡ ತಾಸಾಯಿತು, ತನ್ನ ಸ್ನೇಹಿತರಾಯಿತು ಎಂದು ಓಡಾಡಿಕೊಂಡಿದ್ದ. ಮನೆಯಲ್ಲಿ ಅಪ್ಪಯ್ಯ ಒಬ್ಬರೇ. ಹೊತ್ತಿಗೆ ಸರಿಯಾಗಿ ಊಟ, ತಿಂಡಿ ಯಾವುದೂ ಇಲ್ಲ. ಆಗ ಅಪ್ಪಯ್ಯ ಮರು ಮದುವೆ ಆಗಲು ತೀರ್ಮಾನಿಸಿದರು. ಅಪ್ಪಯ್ಯ ಇದರ ಬಗ್ಗೆ ನಮ್ಮ ಮುಂದೆ ಪ್ರಸ್ತಾಪಿಸಿದಾಗ ಲಂಕೇಶ್ ಮತ್ತು ನಾನು ನಮ್ಮ ಸಹಮತವನ್ನು ಸೂಚಿಸಿದೆವು. ಅಪ್ಪಯ್ಯ ಹೆಣ್ಣು ನೋಡಲು ಶುರು ಮಾಡಿದರು.

ವಾಸ್ತವವಾಗಿ ಆಗ ಅಪ್ಪಯ್ಯ ತಮ್ಮ ಜೀವನದಲ್ಲಿ ನಾಲ್ಕನೆಯ ಬಾರಿಗೆ ಮದುವೆಯಾಗಲು ಸಿದ್ಧರಾಗುತ್ತಿದ್ದರು ಎಂದರೆ ಯಾರಿಗಾದರೂ ಅಚ್ಚರಿ ಆಗಬಹುದು. ಆದ್ದರಿಂದ ಇಲ್ಲಿ ಅವರ ಬಗ್ಗೆ ಸ್ವಲ್ಪ ಹೇಳಲೇಬೇಕು.

ನನ್ನ ಅಪ್ಪಯ್ಯ ಮೊದಲ ಬಾರಿಗೆ ಮದುವೆ ಆದಾಗ ಅವರಿಗೆ ಇನ್ನೂ 17 ವರ್ಷ ವಯಸ್ಸು. ಆಗ ಅವರು ಮದುವೆಯಾಗಿದ್ದು ನನ್ನ ಚಿನ್ನವಜ್ಜಿಯ ಮೊದಲ ಮಗಳಾದ ಮಲ್ಲಮ್ಮಳನ್ನು. ಆಗ ಮಲ್ಲಮ್ಮಳಿಗೆ 14 ವರ್ಷ ವಯಸ್ಸು. ನನ್ನ ಅಕ್ಕ ಜನಿಸಿ ಐದು ತಿಂಗಳಾದಾಗ ಮಲ್ಲಮ್ಮ ತೀರಿಕೊಂಡರು. ಆಗ ಅಪ್ಪಯ್ಯ ಹೊರಗಿನವರನ್ನು ಮದುವೆಯಾದರೆ ಹೊಸ ಮಲತಾಯಿ ತಮ್ಮ ಮೊಮ್ಮಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಎಂಬ ಚಿಂತೆ ನನ್ನ ಅಜ್ಜಿಯನ್ನು ಕಾಡಿತು. ಆದ್ದರಿಂದ ತಮ್ಮ ಎರಡನೆ ಮಗಳನ್ನೇ ಅಳಿಯನಿಗೆ ಮದುವೆ ಮಾಡಿದರೆ ಆಕೆ ತನ್ನ ಅಕ್ಕನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ ಎಂದು ಅಜ್ಜಿ ನಿರ್ಧರಿಸಿದರು. ಆಗ ಅಪ್ಪಯ್ಯನಿಗೆ ತಮ್ಮ ಎರಡನೆ ಮಗಳಾದ ನನ್ನ ತಾಯಿ ಗೌರಮ್ಮನನ್ನು ಕೊಟ್ಟು ಮದುವೆ ಮಾಡಿದರು.

ಗೌರಮ್ಮ ನನಗೆ ಮತ್ತು ಅದಾದ ಎರಡು ವರ್ಷಗಳ ನಂತರ ನನ್ನ ತಮ್ಮ ಶಿವಕುಮಾರ್‌ಗೆ ಜನ್ಮ ನೀಡಿದರು. ಆದರೆ ನನ್ನ ತಮ್ಮ ಇನ್ನೂ ಮೂರು ತಿಂಗಳ ಕೂಸಾಗಿರುವಾಗಲೇ ಗೌರಮ್ಮ ಕೂಡ ತೀರಿಕೊಂಡರು. ಆಗ ತನ್ನ ಮೂರು ಮೊಮ್ಮಕ್ಕಳ ಗತಿ ಏನು ಎಂದು ಮತ್ತೆ ಚಿನ್ನವಜ್ಜಿ ಚಿಂತಿಸಿದರು. ಕೊನೆಗೆ ತನ್ನ ಮೂರನೆ ಮಗಳಾದ ಸಾವಿತ್ರಮ್ಮ ಅವರನ್ನೂ ಅಪ್ಪಯ್ಯನಿಗೆ ಕೊಟ್ಟು ಮದುವೆ ಮಾಡಿದರು.



ಸಾವಿತ್ರಮ್ಮ ಕೂಡ ಒಂದು ಮಗುವಿಗೆ ಜನ್ಮ ನೀಡಿದರು. ಆದರೆ ಕೆಲ ತಿಂಗಳಲ್ಲಿ ಅವರು ಮತ್ತು ಅವರ ಮಗು, ಇಬ್ಬರೂ ತೀರಿಕೊಂಡರು.

ಹೀಗೆ ಮೂರು ಬಾರಿ ಮದುವೆಯಾಗಿ, ಮೂರು ಮಕ್ಕಳ ತಂದೆಯಾಗಿ, ಮೂರು ಬಾರಿ ಹೆಂಡತಿಯನ್ನು ಕಳೆದುಕೊಳ್ಳುವ ಹೊತ್ತಿಗೆ ನನ್ನ ಅಪ್ಪಯ್ಯನಿಗೆ ಕೇವಲ 27 ವರ್ಷ ವಯಸ್ಸು. ನನ್ನ ಅಜ್ಜಿ ಹೆತ್ತಿದ್ದ ನಾಲ್ವರು ಹೆಣ್ಣು ಮಕ್ಕಳಲ್ಲಿ ಮೂವರನ್ನು ಅಪ್ಪಯ್ಯನಿಗೆ ಕೊಟ್ಟು ವಿಧಿಗೆ ಕಳೆದುಕೊಂಡಿದ್ದರು.

ಮೂವರು ಮಡದಿಯರನ್ನು ಒಬ್ಬರನಂತರ ಒಬ್ಬರಂತೆ ಕಳೆದುಕೊಂಡಿದ್ದ ಅಪ್ಪಯ್ಯ ಆನಂತರ ಮತ್ತೆ ಮದುವೆಯ ಉಸಾಬರಿಗೆ ಹೋಗದೆ ನಮ್ಮ ಪಾಲನೆಯಲ್ಲಿ, ನಮ್ಮ ವಿದ್ಯಾಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ಹಲವಾರು ವರ್ಷಗಳನ್ನು ಕಳೆದ ಅಪ್ಪಯ್ಯ ನಾಲ್ಕನೆ ಬಾರಿಗೆ ಮದುವೆಯಾಗಲು ಹೊರಟಾಗ ಅವರಿಗೆ 45 ವರ್ಷ ವಯಸ್ಸಾಗಿತ್ತು. ತಾನು ಮದುವೆ ಆಗಲಿರುವ ಮಹಿಳೆಗೆ ಕನಿಷ್ಠ 30ರ ಮೇಲಾಗಿರಬೇಕು ಎಂದು ನಿರ್ಧರಿಸಿದರು.

ಒಂದೆರಡು ಕಡೆ ಹೋಗಿ ಮಹಿಳೆಯರನ್ನು ನೋಡಿ ಬಂದ ಅಪ್ಪಯ್ಯ "ಅಲ್ಲಿ ಹುಡುಗಿ ಚೆನ್ನಾಗಿಲ್ಲ" ಎಂದರು. ಆಗ ನಾನು ಅಪ್ಪಯ್ಯನಿಗೆ "ನೋಡಲು ಚೆನ್ನಾಗಿರುವ ಹುಡುಗಿಯರು 30, 35 ವರ್ಷದವರೆಗೂ ಮದುವೆ ಆಗದೆ ಎಲ್ಲಿ ಇರುತ್ತಾರೆ?" ಎಂದೆ.

ಅದೇ ಹೊತ್ತಿಗೆ ಮಡಕಶಿರದಲ್ಲಿದ್ದ ಒಂದು ಸಂಸಾರದ ಬಗ್ಗೆ ಗೊತ್ತಾಯಿತು. ಈ ಹಿಂದೆ ಆ ಮನೆಯವರು ತುಂಬಾ ಅನುಕೂಲಸ್ಥರಾಗಿದ್ದರಂತೆ. ಆದರೆ ಆ ಮನೆಯ ಹಿರಿಯ ಚುನಾವಣೆಯಲ್ಲಿ ನಿಂತು ಎಲ್ಲಾ ಆಸ್ತಿ ಕಳೆದುಕೊಂಡಿದ್ದರಿಂದ ತಮ್ಮ ಹೆಣ್ಣುಮಕ್ಕಳಿಗೆ ಮದುವೆ ಮಾಡಲಾಗದೆ ಕೈಚೆಲ್ಲಿದ್ದರು. ಅವರ ಮನೆಯ ಒಬ್ಬಳನ್ನು ನೋಡಿ ಅಪ್ಪಯ್ಯ ಒಪ್ಪಿಕೊಂಡರು.

1963ರ ಜೂನ್ 3 ರಂದು ಅಪ್ಪಯ್ಯ ನಾಲ್ಕನೆ ಬಾರಿಗೆ ಮದುವೆಯಾದಾಗ ಅವರಿಗೆ 46 ವರ್ಷ ವಯಸ್ಸು. ಬೆಳೆದು ನಿಂತಿದ್ದ ಮಕ್ಕಳ ಮುಂದೆ, ಮಕ್ಕಳನ್ನು ಹೆತ್ತಿದ್ದ ಹೆಣ್ಣು ಮಕ್ಕಳ ಮುಂದೆ ಅಪ್ಪಯ್ಯ ಹಸೆಮಣೆಯಲ್ಲಿ ಕುಳಿತು ನಮ್ಮ ಕಡೆ ನೋಡುತ್ತಿದ್ದರು. ಅವರಿಗೆ ಸಂಕೋಚ. ಅವತ್ತು ಅದೇ ಮಂಟಪದಲ್ಲಿ ನನ್ನ ಚಿಕ್ಕಮ್ಮನ ತಂಗಿಯ ಮದುವೆಯೂ ನಡೆಯಿತು. ಆಕೆಯ ಕೈಹಿಡಿದವರು ಅಪ್ಪಯ್ಯನಿಗಿಂತ ವಯಸ್ಸಿನಲ್ಲಿ ಚಿಕ್ಕವರು. ಆದರೆ ನನ್ನ ಅಪ್ಪಯ್ಯ ಅವರಿಗಿಂತಲೂ ಸ್ಮಾರ್ಟ್ ಆಗಿ ಕಾಣಿಸುತ್ತಿದ್ದರು.


ನನ್ನ ಚಿಕ್ಕಮ್ಮನಾಗಿ ಬಂದವರ ಹೆಸರು ಕೂಡ ದೇವೀರಮ್ಮ. ನನ್ನ ಅತ್ತೆಯ ಹೆಸರು. ಅವರಿಗೆ ಸ್ವಲ್ಪ ಹಲ್ಲು ಉಬ್ಬಿತ್ತು, ಮದುವೆಯಾದ ನಂತರ ಅಪ್ಪಯ್ಯ ಚಿಕ್ಕಮ್ಮನ ಮುಂದಿನ ನಾಲ್ಕು ಹಲ್ಲುಗಳನ್ನು ಕೀಳಿಸಿ ಮತ್ತೆ ಕಟ್ಟಿಸಿದರು. ಚಿಕ್ಕಮ್ಮನ ಮನೆಯ ಭಾಷೆ ತೆಲುಗು. ಅವರಿಗೆ ಕನ್ನಡ ಸರಿಯಾಗಿ ಬರುತ್ತಿರಲಿಲ್ಲ, ಅಪ್ಪಯ್ಯ ಅವರಿಗೆ ಕನ್ನಡ ಬರೆಯಲು ಮತ್ತು ಓದಲು ಕಲಿಸಿದರು. ಅಪ್ಪಯ್ಯ ಯಾವಾಗಲೂ "ಸರಸ್ವತಿ ಬಂಡೆಕಲ್ಲಿನ ಮೇಲೆ ಕೂತಿರುತ್ತಾಳೆ. ಆದರೆ ಲಕ್ಷ್ಮಿ ಕಮಲದ ಮೇಲೆ ಕೂತಿರುತ್ತಾಳೆ. ಕಮಲದ ಹೂ ಯಾವಾಗಲಾದರೂ ತೇಲಿ ಹೋಗಬಹುದು, ಆದರೆ ಸರಸ್ವತಿ ಮಾತ್ರ ಯಾವಾಗಲೂ ಗಟ್ಟಿ" ಎನ್ನುತ್ತಿದ್ದರು.



ಅಪ್ಪಯ್ಯನಿಗೆ ಮದುವೆಯಾದ ಸಮಯದಲ್ಲೇ ತನ್ನ ಭಾವನ ತಮ್ಮ ದಕ್ಷಿಣಾಮೂರ್ತಿ ಅವರಿಗೂ ತುಮಕೂರಿನಲ್ಲಿ ಮದುವೆಯಾಯಿತು. ಅವರ ಕೈ ಹಿಡಿದಾಕೆಯ ಹೆಸರು ಶಾಂತ.

ಗೌರಿ ಎಂಟು ತಿಂಗಳ ಮಗುವಾಗಿದ್ದಾಗ ಲಂಕೇಶರಿಗೆ ಬೆಂಗಳೂರಿಗೆ ಟ್ರಾನ್ಸ್‌ಫರ್ ಆಯಿತು. ಲಂಕೇಶರು ರಾಜಾಜಿನಗರದಲ್ಲಿ ಒಂದು ಮನೆ ನೋಡಿದ್ದರು. ನನ್ನನ್ನು ಮನೆ ತೋರಿಸಲು ಕರೆದುಕೊಂಡು ಹೋದರು. ಆದರೆ ಆಗ ರಾಜಾಜಿನಗರ ಇನ್ನೂ ಬೆಳೆದಿರಲಿಲ್ಲ, ಎಲ್ಲೆಡೆ ಖಾಲಿ ಖಾಲಿ. ಆದ್ದರಿಂದ ಆ ಮನೆ ಬೇಡ ಎಂದು ವಾಪಸ್ ಬಂದೆವು. ಕೊನೆಗೆ ಜಯನಗರದ ನಾಲ್ಕನೇ ಬ್ಲಾಕ್‌ನಲ್ಲಿ ಒಂದು ಪುಟ್ಟ ಮನೆಯನ್ನು ಬಾಡಿಗೆಗೆ ಹಿಡಿದೆವು. ಅದೊಂದು ಔಟ್‌ಹೌಸ್. ಆದರೂ ಪ್ರವೇಶದ್ವಾರ ಪ್ರತ್ಯೇಕವಾಗಿತ್ತು. ನಿಜವಾದ ನಮ್ಮ ಹೊಸ ಸಂಸಾರ ಆ ಮನೆಯಲ್ಲಿ ಶುರುವಾಯಿತು.

ಲಂಕೇಶರು ಬೆಳಗ್ಗೆ ಒಂಭತ್ತು ಗಂಟೆಗೆ ಕಾಲೇಜಿಗೆ ಹೊರಡುತ್ತಿದ್ದರು. ಆಗ ಬೆಂಗಳೂರಿನಲ್ಲಿ ಊಟದ ಕ್ಯಾರಿಯರ್ ತೆಗೆದುಕೊಂಡು ಹೋಗುವವರು ಇದ್ದರು. ಅವರು ಕಾಲೇಜಿಗೆ ಹೋದನಂತರ ನಾನು ಅಡುಗೆ ಮಾಡಿ ಕ್ಯಾರಿಯರ್ ಕಳುಹಿಸುತ್ತಿದ್ದೆ. ಒಮ್ಮೆ ಮಗಳಿಗೆ ಜಾಂಡೀಸ್ ಆಗಿ ದಪ್ಪಗಿದ್ದವಳು ಸಣ್ಣಗಾಗಿಬಿಟ್ಟಳು.



• ಇಂದಿರಾ ಲಂಕೇಶ್

ತಮಾಷೆಯ ಸಂಗತಿ ಎಂದರೆ ಮಗಳಿಗೆ ಹಲ್ಲು ಬರಲಾರಂಭಿಸಿದಾಗ ಲಂಕೇಶರಿಗೂ ವಿಸ್‌ಡಮ್ ಟೂತ್ (ವಿವೇಕ ದಂತ) ಬರಲು ಪ್ರಾರಂಭಿಸಿ ದವಡೆಯ ಚರ್ಮ ಓಪನ್ ಆಗದೆ ನೋವು ಶುರುವಾಯಿತು. ಡಾಕ್ಟರ್ ಹತ್ತಿರ ಹೋಗೋಣ ಬನ್ನಿ ಎಂದರೆ ಲಂಕೇಶರು ಬರಲು ಒಪ್ಪುತ್ತಿರಲಿಲ್ಲ, ಕೊನೆಗೊಂದು ದಿನ ಅವರಿಗೆ ನೋವು ತಡೆಯಲಾಗದೆ ಇಬ್ಬರೂ ಡಾಕ್ಟರ್ ಹತ್ತಿರ ಹೋದೆವು. "ಚರ್ಮವನ್ನು ಸ್ವಲ್ಪ ಓಪನ್ ಮಾಡಬೇಕು" ಅಂತ ಡಾಕ್ಟರ್ ಬಾಯಲ್ಲಿ ಕೈ ಇಟ್ಟಾಗ ಲಂಕೇಶರು ತಪಾಸಣೆ ಪರಿಕರ ಸಮೇತ ಅವರನ್ನು ಜೋರಾಗಿ ತಳ್ಳಿಬಿಟ್ಟರು.

ನಿಸಾರ್ ಅಹಮದ್ ಅವರ ಮನೆ ಕೂಡ ಆಗ ಜಯನಗರದಲ್ಲಿ (8ನೇ ಬ್ಲಾಕ್ ಎಂದು ನೆನಪು) ಇತ್ತು. ಅವರು ನಮ್ಮ ಮನೆಗೆ ಆಗಾಗ ಬರುತ್ತಿದ್ದರು. ಹಲವೊಮ್ಮೆ ನನ್ನ ಮಗಳನ್ನು ಅವರ ಮನೆಗೆ ಕರೆದುಕೊಂಡು ಹೋಗಿ ಆಕೆಯ ತಲೆ ಬಾಚಿ, ಬೈತಲೆಯಲ್ಲಿ ಮಿಣಮಿಣ ಚಮಕಾರಿ ಹಾಕಿ ಅಲಂಕಾರ ಮಾಡಿ ಕಳುಹಿಸುತ್ತಿದ್ದರು. ಅವರ ಅಮ್ಮ-ಅಪ್ಪ ಎಲ್ಲಾ ತುಂಬಾ ಒಳ್ಳೆಯ ಜನ.

ಬೆಂಗಳೂರಿಗೆ ಬಂದ ನಂತರ ಲಂಕೇಶರ ಇತರೆ ಸ್ನೇಹಿತರ ಪರಿಚಯವಾಯಿತು. ಜಿ.ಎಸ್. ಸದಾಶಿವ, ರಾಜ್‌ಗೋಪಾಲ್, ವೈಎನ್ಕೆ, ಅಡಿಗರು, ಮರುಳಸಿದ್ದಪ್ಪ ಜಿ.ಎಸ್. ಶಿವರುದ್ರಪ್ಪ ಅನಂತಮೂರ್ತಿ ಇವರನ್ನೆಲ್ಲಾ ಅ... ನೋಡುತ್ತಿದ್ದೆ.

ನನ್ನ ಭಾವನ ತಮ್ಮ ದಕ್ಷಿಣಾಮೂರ್ತಿಯ ಹೆ... ಶಾಂತ ಮತ್ತು ನಾನು ಒಂದೇ ವಯಸ್ಸಿನವರಾಗಿದ್ದ... ತುಂಬಾ ಬೇಗ ಸ್ನೇಹಿತರಾದೆವು. ಲಂಕೇಶ್ ಮತ್ತು ... ಎಲ್ಲಿಗಾದರೂ ಹೋದರೆ ನಮ್ಮ ಮಗಳು ಗೌರಿಯ... ಶಾಂತ ಹತ್ತಿರ (ಮಿನರ್ವ ಸರ್ಕಲ್ ಹತ್ತಿರದ ಮನೆ... ಬಿಟ್ಟು ಹೋಗುತ್ತಿದ್ದೆವು. ಭಾನುವಾರ ಬಂದರೆ ನಂದಿಹಿ... ಅಥವಾ ಎಂ.ಜಿ. ರೋಡ್‌ಗೆ ಹೋಗುತ್ತಿದ್ದೆವು. ... ಇದಕ್ಕೂ ಮುಂಚೆ ಜಾಸ್ತಿ ಇಂಗ್ಲಿಷ್ ಪಿಕ್ಚರ್ ನೋಡುತ್ತಿ... ಲಂಕೇಶರು ನನ್ನನ್ನು ಬಹಳಷ್ಟು ಇಂಗ್ಲಿಷ್ ಸಿನಿಮಾ... ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆ ಥಿಯೇಟ... ಕ್ಯಾಂಟೀನ್‌ನಲ್ಲಿ ನನಗೆ ಪಫ್ ಕೊಡಿಸಿದರು. ನ... ನಾನ್‌ವೆಜ್ ತಿನ್ನುವುದಿಲ್ಲ, ಅವತ್ತು "ಯಾಕೋ ಈ ... ಟೇಸ್ಟ್ ಬೇರೆ ತರಹ ಇದೆ" ಅಂದೆ. "ಏನಿಲ್ಲ ಸು... ತಿನ್ನು" ಅಂತ ಹೇಳಿ ತಿನ್ನಿಸಿಬಿಟ್ಟರು. ಆಮೇಲೆ ... ನಾನ್‌ವೆಜ್ ಪಫ್ ಅಂತ ಹೇಳಿದರು. ಅಷ್ಟರಲ್ಲಾ... ಅದು ನನ್ನ ಹೊಟ್ಟೆಯಲ್ಲಿ ಜೀರ್ಣ ಆಗಿಹೋಗಿತ್ತು.

ಒಮ್ಮೊಮ್ಮೆ ಲಂಕೇಶರು ಕಾಲೇಜಿಗೆ ಹೋಗು... ನನ್ನನ್ನು ಮಿನರ್ವ ಸರ್ಕಲ್ ಮನೆಗೆ ಬಿಟ್ಟು ಹೋಗುತ್ತಿ... ವಾಪಸ್ ಬರುವಾಗ ನನ್ನನ್ನು ನಮ್ಮ ಮನೆಗೆ ಕರೆದುಕೊ... ಬರುತ್ತಿದ್ದರು. ಶಾಂತಳನ್ನು ಲಂಕೇಶರು ಎಂದೂ ಹೆಸ... ಹಿಡಿದು ಕರೆಯುತ್ತಿರಲಿಲ್ಲ, ಬದಲಾಗಿ ಆಕೆಯನ್ನು "... ಎಂದು ಕರೆಯುತ್ತಿದ್ದರು. ಅದಕ್ಕೆ ಶಾಂತ ಕೂಡ ಲಂಕೇ... 'ವ್ಯಕ್ತಿ' ಎಂದೇ ಕರೆಯುತ್ತಿದ್ದಳು. ಅಷ್ಟೇ ಅಲ್ಲ, ಲಂಕೇ... ನನ್ನ ಅಪ್ಪಯ್ಯನನ್ನು ಕೂಡ ಎಂದೂ ಮಾವ ಎ... ಕರೆಯುತ್ತಿರಲಿಲ್ಲ, ಬದಲಾಗಿ "ನಿನ್ನ ಅಪಾಯ" ಎನ್ನುತ್ತಿ...

ಒಮ್ಮೆ ಸಿಟಿ ಮಾರ್ಕೆಟ್‌ಗೆ ಇಬ್ಬರೂ ಹೋಗಿ ಚ... ವಿಹಾರ್ ಹೋಟೆಲ್‌ನಲ್ಲಿ ತಿಂಡಿ ತಿಂದು ಹೊರ... ನಾನು ಇನ್ನೂ ಸ್ಕೂಟರ್ ಹತ್ತಿ ಕುಳಿತಿರಲಿಲ್ಲ, ಆದ... ಇವರು ಗಾಡಿ ಸ್ಟಾರ್ಟ್ ಮಾಡಿಕೊಂಡು ಹೊರಟೇ ಬಿ... ನಾನು ರೀ, ರೀ ಅಂತ ಕರೆದರೆ ಅವರಿಗೆ ಕೇಳಿ... ಇಲ್ಲ. ಟೌನ್‌ಹಾಲ್‌ವರೆಗೂ ಹೋದ ನಂತರ ನ... ಸ್ಕೂಟರ್ ಮೇಲೆ ಇಲ್ಲದಿದ್ದದ್ದು ಅವರ ಅರಿವಿಗೆ ಬಂ... ಅವರು ವಾಪಸ್ ಬಂದು ಕರೆದುಕೊಂಡು ಹೋ... ವರೆಗೂ ನಾನು ಅಲ್ಲೇ ನಿಂತಿದ್ದೆ.

(ಮುಂದಿನ ವಾ...

ನೋ ಕಾಮೆಂಟ್ಸ್

ಭ್ರಷ್ಟಾಚಾರ ವಿರುದ್ಧದ ಅಧ್ವಾನಿ ಅವರ ರಥಯಾತ್ರೆಯ ಸಂಚಾಲಕನನ್ನಾಗಿ ಅನಂತಕುಮಾರ್ ಅವರನ್ನು ನೇಮಿಸಿರುವುದು ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ. ಇದೇ ಅನಂತಕುಮಾರ್ ವಿರುದ್ಧ ಸುಪ್ರೀಂಕೋರ್ಟ್ ಮುಂದೆ 14,000 ಕೋಟಿ ರೂಪಾಯಿಯ ಹುಡ್ಕೊ ಹಗರಣದ ವಿಚಾರಣೆ ನಡೆಯುತ್ತಿದೆ. ಅಷ್ಟೇ ಅಲ್ಲದೆ, ನೀರಾ ರಾಡಿಯಾಳೊಂದಿಗೆ ಅನಂತಕುಮಾರನ ನಂಟನ್ನು ಮರೆಯಲಾದೀತೆ?


- ಯದ್ವಿ ಬಣದ ಚಡ್ಡಿಗಳು

ತಾವು 2014ರ ಚುನಾವಣೆಯಲ್ಲಿ ಪ್ರಧಾನಿ ಪಟ್ಟದ ಆಕಾಂಕ್ಷಿ ಅಲ್ಲ ಎಂದು ಸ್ಪಷ್ಟಪಡಿಸಿದರೆ ಮಾತ್ರ ನಾವು ನಿಮ್ಮ ರಥಯಾತ್ರೆಗೆ ಬೆಂಬಲ ನೀಡುತ್ತೇವೆ.

- ಅಧ್ವಾನಿಗೆ ಆರೆಸ್ಸೆಸ್ ನಾಯಕರು.

ಭ್ರಷ್ಟಾಚಾರ ವಿರುದ್ಧದ ಅಧ್ವಾನಿಯವರ ಯಾತ್ರೆ ಒಂದು ರಾಜಕೀಯ ಗಿಮಿಕ್.

- ಅಣ್ಣಾ ಹಜಾರೆ.



2002ರಲ್ಲಿ ಗುಜರಾತಿನ ಗುಲ್ಬರ್ಗ್ ಸೊಸೈಟಿಯಲ್ಲಿ ನಡೆದ ಮಾರಣ ಹೋಮಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪು ತನ್ನನ್ನು ಖುಲಾಸೆಗೊಳಿಸಿದೆ ಎಂದು ನರೇಂದ್ರ ಮೋದಿ ಬಿಂಬಿಸಿದ್ದಾನೆ. ಆದರೆ ವಾಸ್ತವವಾಗಿ ಆ ತೀರ್ಪಿನಿಂದಾಗಿ ಮೋದಿ ವಿರುದ್ಧದ ಕಾನೂನುಕ್ರಮ ಜಾರಿಯಾಗಿದೆ. ಆತ ಈಗ ಗುಜರಾತಿನ ಟ್ರೈಲ್ ಕೋರ್ಟಿನ ಮುಂದೆ ಹಾಜರಾಗಿ ತಾನು ನಿರಪರಾಧಿ ಎಂಬುದನ್ನು ಸಾಬೀತುಪಡಿಸಬೇಕಿದೆ. ಅಷ್ಟೇ ಅಲ್ಲ, ಮೋದಿ ವಿರುದ್ಧದ ಆರೋಪಗಳನ್ನೂ ನ್ಯಾಯಾಲಯ ಆಲಿಸಬೇಕಿದೆ. ಪರಿಸ್ಥಿತಿ ಹೀಗಿರುವಾಗ ಈ ಪ್ರಕರಣದಿಂದ ಮೋದಿ ಮುಕ್ತನಾಗಿದ್ದಾನೆ ಎಂದು ಆತನಾಗಲಿ, ಬಿಜೆಪಿಯಾಗಲಿ ಹೇಳುವುದು ಸತ್ಯಕ್ಕೆ ವಿರುದ್ಧವಾಗಿದೆ.

- ಗುಜರಾತಿನ ಕೋಮುಗಲಭೆಗಳ ಸಂತ್ರಸ್ತರ ಪರವಾಗಿ ಹೋರಾಟ ಮಾಡುತ್ತಿರುವ ತೀಸ್ತಾ ಸೆಟಲ್ವಾಡ್

ನೀವು ನಮ್ಮ ಮನೆಯಿಂದ ತೆಗೆದುಕೊಂಡು ಹೋಗಿರುವ ಚಿನ್ನಾಭರಣಗಳನ್ನು ಆದಷ್ಟು ಬೇಗ ಹಿಂದಿರುಗಿಸಿ. ನಾವು ಯಾವುದೋ ಮದುವೆ ಸಮಾರಂಭಕ್ಕೆ ಅವುಗಳನ್ನು ತೊಟ್ಟು ಹೋಗಬೇಕಿದೆ.

- ಜನಾರ್ದನ ರೆಡ್ಡಿಯ ಪತ್ನಿ ಅರುಣಾ ಸಿಬಿಐಗೆ ಸಲ್ಲಿಸಿದ ಮನವಿ ಪತ್ರ.

ಕನ್ನಡ ಚಿತ್ರರಂಗದಲ್ಲಿ ಅಪಾತ್ರಭೂತಿಗಳು, ನಿವರ್ತಕರು ಮತ್ತು ಕ್ರೂರಿಗಳು ತುಂಬಿದ್ದಾರೆ. ತನ್ನ ಹೆಂಡತಿಯನ್ನು ಬಡಿದವನ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲಾಗಿ ಇಲ್ಲಿ ನಡೆಯುತ್ತಿರುವುದರೊಂದಿಗೆ ಯಾವುದೇ ಸಂಬಂಧ ಇಲ್ಲದ ಹುಡುಗಿಯ ವಿರುದ್ಧ ಕ್ರಮ ತೆಗೆದುಕೊಂಡಿದ್ದಾರೆ. ನಾವು ಎಂತಹ ಅನಾಗರಿಕ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಈ ಪ್ರಕರಣ ಸ್ಪಷ್ಟಪಡಿಸುತ್ತದೆ.



- ಗಿರೀಶ ಕಾರ್ನಾಡ್, ಖ್ಯಾತ ಲೇಖಕ

ಗಂಡನಿಂದ ಅಮಾನುಷವಾಗಿ ಬಡಿಸಿಕೊಂಡ ಹೆಂಡತಿ ವಿಧಿ ಇಲ್ಲದೆ ಎರಡೇ ದಿನಗಳಲ್ಲಿ ಆಸ್ಪತ್ರೆಯಿಂದ ಹೊರಬರುತ್ತಾಳೆ. ಆದ... ಆಕೆಯನ್ನು ಹೊಡೆದ ಗಂಡ ಹದಿಮೂರು ದಿನಗಳ ಕಾಲ ಸರ್ಕಾರಿ ವೆಚ್ಚದ... ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾನೆ.

- ಪತ್ರಿಕಾ ವರ...

ವಾರದ ರಾಜಕೀಯ ಜೋಕ್

ಅಮರ್ ಸಿಂಗ್ ಕೂಡ ಜೈಲಿಗೆ ಬಂದದ್ದನ್ನು ನೋಡಿ ಎ.ರಾಜಾ ಮತ್ತು ಕಲ್ಮಾಡಿ ನಗಲಾರಂಭಿಸಿದರು. ಯಾಕೆ ಎಂದು ಅಮರ್ ಸಿಂಗ್ ಕೇಳಿದಾಗ: "ಅಯ್ಯೋ ಪೆದ್ದ, ನಾವು ಹಣ ಪಡೆದದ್ದಕ್ಕೆ ಜೈಲಿಗೆ ಬಂದರೆ ನೀನು ಹಣ ಕೊಟ್ಟದ್ದಕ್ಕೆ ಬಂದಿದ್ದೀಯಲ್ಲಾ?" ಎಂದು ನಕ್ಕರು.

...ರಹಂತಕನ ಎಸಿ ಉಪವಾಸವೂ ...ಾಮಾನ್ಯಜನರ ನೈಜ ಹೋರಾಟವೂ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

...ಕಳೆದ ವಾರ ದೂರದ ಗುಜರಾತಿನಲ್ಲಿ ನರಹಂತಕ ...ಂದ್ರ ಮೋದಿ ದುಷ್ಟ ಉದ್ದೇಶದಿಂದ ಸೆಪ್ಟೆಂಬರ್ ...ಂದ ಮೂರು ದಿನಗಳ ಕಾಲ ಎಸಿ ಹಾಲಿನಲ್ಲಿ ...ಪವಾಸ ಕೂತಿದ್ದಾಗ ಎಲ್ಲಾ ಮಾಧ್ಯಮಗಳು ಆತನ ...ಗಳನ್ನೇ ಪ್ರಸಾರ ಮಾಡಿದವು, ಪತ್ರಿಕೆಗಳೂ ಅದರ ...ಯೇ ಬರೆದವು. ಆದರೆ ಅದೇ ಸಂದರ್ಭದಲ್ಲಿ ನಮ್ಮ ...ಯ ತಮಿಳುನಾಡಿನಲ್ಲಿ ಸೆಪ್ಟೆಂಬರ್ 11ರಿಂದಲೇ ...ಾರು ಜನ ಉಪವಾಸ ಕೂತಿದ್ದ ವಿಷಯವನ್ನು ಯಾರೂ ...ಿ ಮಾಡಲಿಲ್ಲ, ಯಾಕೆಂದರೆ ಇಲ್ಲಿ ಉಪವಾಸ ...ತಿದ್ದವರು ಹಳ್ಳಿ ಜನರು, ಅಧಿಕಾರ ಇಲ್ಲದವರು, ...ಜವರು, ನಿಜ ಕಾಳಜಿಯನ್ನು ಹೊಂದಿದ್ದವರು.

...ಮುಗ್ಧ ಪ್ರಾಮಾಣಿಕ, ನಿಜ ಕಾಳಜಿಯ ನೂರಾರು ...ಜನರು ಈ ಉಪವಾಸ ಪ್ರತಿಭಟನೆ ಕೈಗೊಂಡಿದ್ದು ...ಂತಕರೈ ಎಂಬ ಸಣ್ಣಗ್ರಾಮದಲ್ಲಿ. ಅವರು ಪ್ರತಿಭಟಿಸು...ದ್ದು ಆ ಹಳ್ಳಿಯ ಪಕ್ಕ ಸದ್ಯದಲ್ಲೇ ಪ್ರಾರಂಭವಾಗುವ ...ಡನ್ಕುಲಂ ಅಣುವಿದ್ಯುತ್ ಸ್ಥಾವರದ ವಿರುದ್ಧ ಸಾವಿರಾರು



...ಟಿ ರೂಪಾಯಿಗಳನ್ನು ಸುರಿದು ಕೇಂದ್ರ ಸರ್ಕಾರ ...ರ್ಮಿಸಿರುವ ಈ ಕೂಡನ್ಕುಲಂ ಅಣುವಿದ್ಯುತ್ ಸ್ಥಾವರವು ...ುವ ಡಿಸೆಂಬರ್ ತಿಂಗಳಲ್ಲಿ ತನ್ನ ಕಾರ್ಯಾಚರಣೆಯನ್ನು ...ರಂಭಿಸಲಿದೆ. ರಷ್ಯಾದ ಸಹಕಾರ ಮತ್ತು ತಂತ್ರಜ್ಞಾನವನ್ನು ...ಪಯೋಗಿಸಿ ನಿರ್ಮಿಸಲಾಗಿರುವ, 1,000 ಮೆಗಾವ್ಯಾಟ್ ...ನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುವ ಈ ...ವರದಿಂದಾಗಿ ತಮಿಳುನಾಡಿನಲ್ಲಿರುವ ವಿದ್ಯುತ್ ಕೊರತೆ...ನ್ನು ನೀಗಿಸಬಹುದಾಗಿದೆ. ಅಷ್ಟೇ ಅಲ್ಲ, ಈ ಸ್ಥಾವರ ...ಸಂಭವಾದ ನಂತರ ಅದೇ ತಿರುನಲ್ವೇಲಿ ಜಿಲ್ಲೆಯಲ್ಲಿ ...00 ಮೆ.ವ್ಯಾ ಸಾಮರ್ಥ್ಯ ಹೊಂದಿರುವ ಇನ್ನೂ ಆರು ...ಣುವಿದ್ಯುತ್ ಸ್ಥಾವರಗಳ ನಿರ್ಮಾಣದಲ್ಲಿ ಭಾರತಕ್ಕೆ ನೆರವು ...ಕಲು ರಷ್ಯಾ ಉತ್ಸುಕವಾಗಿದೆ. ಅದು ಸಾಧ್ಯವಾದರೆ ...ನಲ್ವೇಲಿ ಜಿಲ್ಲೆ 'ಎನರ್ಜಿ ಪಾರ್ಕ್' ಆಗಲಿದೆ.

ಆದರೆ ಈಗ ಅಮೆರಿಕ ಮತ್ತು ಜರ್ಮನಿ ತರಹದ ...ಶಗಳೇ ಸುರಕ್ಷತೆಯ ಕಾರಣಗಳಿಗೆ ಅಣು ವಿದ್ಯುತ್ ...ವರಗಳನ್ನು ಮುಚ್ಚುತ್ತಿರುವಾಗ ಭಾರತಕ್ಕೆ ಇಂತಹ ಸ್ಥಾವರ ...ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ...ದರೆ ಇಂತಹ ಪ್ರಶ್ನೆಗಳಿಗೆ ಭಾರತ ಸರ್ಕಾರ ಮತ್ತು ...ಷ್ಯದ ತಂತ್ರಜ್ಞರು ಕೊಡುತ್ತಿರುವ ಉತ್ತರಗಳು ಮಾತ್ರ ...ಾಘೆಯಿಂದ ಕೂಡಿವೆ.

...ದೆಹಲಿಯಲ್ಲಿರುವ ರಷ್ಯಾದ ರಾಯಭಾರಿಯಲ್ಲಿರುವ ...ಕರ್ಮಲಿಟೊ ಎಂಬ ಅಧಿಕಾರಿ "ಕೂಡನ್ಕುಲಂನಲ್ಲಿ ...ನ ಅಣುವಿದ್ಯುತ್ ಸ್ಥಾವರವನ್ನು ಅತಿ ಆಧುನಿಕ ...ತ್ರಜ್ಞಾನವನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಅಷ್ಟೇ ... ಈ ಹಂತದಲ್ಲಿ ಆ ಸ್ಥಾವರವನ್ನು ಆರಂಭಿಸದಿದ್ದರೆ ...ರತ ಮತ್ತು ರಷ್ಯಾ ನಡುವಿನ ಹಲವಾರು ಇತರೆ ...ಟ ಯೋಜನೆಗಳ ಮೇಲೆ ಕೆಟ್ಟ ಪರಿಣಾಮ ಆಗಲಿದೆ" ...ದು ಎಚ್ಚರಿಸುತ್ತಾರೆ.

...ಹಾಗೆಯೇ ಟಿ.ಪಿ.ಶ್ರೀನಿವಾಸನ್ ಎಂಬ ಭಾರತದ ...ಣುವಿಜ್ಞಾನಿ "ಕೂಡನ್ಕುಲಂ ಸ್ಥಾವರವು ತುಂಬಾ ಮುಖ್ಯ...ವಾದದ್ದು, ಏಕೆಂದರೆ ಭಾರತವು ವಿದೇಶದಿಂದ ಆಮದು ...ಡಿಕೊಂಡಿರುವ ಪ್ರಥಮ ಅಣುವಿದ್ಯುತ್ ಸ್ಥಾವರ ...ವಾಗಿದೆ. ಆದ್ದರಿಂದ ಏನೇ ಅಡಚಣೆ ಎದುರಾದರೂ, ...ಿಣಾಮ ಏನೇ ಇದ್ದರೂ ನಾವು ಈ ಸ್ಥಾವರವನ್ನು ...ರಂಭಿಸಲೇಬೇಕಿದೆ" ಎನ್ನುತ್ತಾರೆ. ಇವರಿಬ್ಬರ ಅಭಿಪ್ರಾಯದಲ್ಲಿ ಜನರ ಸುರಕ್ಷತೆ ಮುಖ್ಯವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ವಾಸ್ತವವಾಗಿ 2004ರಲ್ಲಿ ಈ ಸ್ಥಾವರ ನಿರ್ಮಾಣ ಕೆಲಸ ಪ್ರಾರಂಭವಾದಾಗಿನಿಂದ ಇದರ ವಿರುದ್ಧ ಸ್ಥಳೀಯರು ಪ್ರತಿಭಟಿಸುತ್ತಲೇ ಬಂದಿದ್ದಾರೆ. ಆದರೆ ಯಾವಾಗ ಕಳೆದ ಮಾರ್ಚ್ ತಿಂಗಳಲ್ಲಿ ಜಪಾನಿನಲ್ಲಿ ಭೂಕಂಪ ಮತ್ತು ಸುನಾಮಿ ಸಂಭವಿಸಿದವೋ ಆಗ ಜನ ಭಯಭೀತರಾದರು. ಅದರಲ್ಲೂ ಜಪಾನಿನ ಫುಕುಶಿಮಾ ಅಣುಸ್ಥಾವರದಲ್ಲಾದ ಅನಾಹುತವನ್ನು ಟಿವಿ ಪರದೆಗಳ ಮೇಲೆ ನೋಡಿದ ನಂತರವಂತೂ ಕೂಡನ್ಕುಲಂ ಸ್ಥಾವರ ವಿರುದ್ಧದ ಜನರ ಆಕ್ರೋಶ ಹೆಚ್ಚಾಯಿತು.

ಜಪಾನಿನಂತಹ ಅಭಿವೃದ್ಧಿ ಹೊಂದಿರುವ ದೇಶದಲ್ಲೇ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಒಂದು ಅಣುಸ್ಥಾವರದಲ್ಲಿ ಅಪಘಾತ ಸಂಭವಿಸುತ್ತದೆಂದರೆ ಇನ್ನು ಭಾರತದಂತಹ ದೇಶದಲ್ಲಿ ಏನಾಗುತ್ತದೆ ಎಂದು ಜನ ಚಿಂತಿಸಿದರು. ಅಣುವಿಜ್ಞಾನ ಎಷ್ಟು ಅಪಾಯಕಾರಿ ಎಂದು ಅರಿತರು. ತಾವು ಅಣು ವಿಕಿರಣದಿಂದ ಮರಣ ಹೊಂದಿದರೆ ಎಂದು ಚಿಂತಾಕ್ರಾಂತರಾದರು.

ಇದೆಲ್ಲದರ ಜೊತೆಗೆ ತಮಿಳುನಾಡಿನ ಉತ್ತರದಲ್ಲಿರುವ ಕಲ್ಪಾಕಂ ಅಣುಸ್ಥಾವರದಿಂದಾಗಿ ಏನೇನಾಗುತ್ತಿದೆ ಎಂದು ಕೇಳಿ ತಿಳಿದುಕೊಂಡರು. ಕಲ್ಪಾಕಂನಲ್ಲಿ ಅಣು ವಿಕಿರಣದಿಂದಾಗಿ ಹಲವಾರು ಜನ ಸತ್ತಿದ್ದಾರೆಂದೂ, ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕ್ಯಾನ್ಸರ್ ರೋಗ ಹೆಚ್ಚಾಗಿ ಕಾಣಿಸಿಕೊಂಡಿದೆಯೆಂದೂ, ಅಣುಸ್ಥಾವರಗಳ ಬಗ್ಗೆ ಸರ್ಕಾರ ಜನಸಾಮಾನ್ಯರಿಗೆ ಯಾವುದೇ ಮಾಹಿತಿ ನೀಡುವುದಿಲ್ಲವೆಂದೂ ಅವರಿಗೆ ಗೊತ್ತಾಯಿತು. ಅಷ್ಟು ಮಾತ್ರವಲ್ಲದೆ ಕಲ್ಪಾಕಂನಲ್ಲಿರುವ ಘಟಕಕ್ಕಿಂತಲೂ ಐದುಪಟ್ಟು ಹೆಚ್ಚು ವಿದ್ಯುತ್ ಅನ್ನು ಉತ್ಪಾದಿಸಲಿರುವ ಕೂಡನ್ಕುಲಂ ಸ್ಥಾವರದಿಂದ ಐದುಪಟ್ಟು ಹೆಚ್ಚು ಅಣುವಿಕಿರಣವಾಗಬಹುದು ಎಂದು ಅಂದಾಜಿಸಿದರು. ಇನ್ನು ಮುಂದೆ ಇಂತಹದ್ದೇ ಆರು ಹೊಸ ಸ್ಥಾವರಗಳೂ ತಲೆ ಎತ್ತಿದರೆ ತಾವು ಬದುಕುವುದು ಕಷ್ಟ ಎಂದು ಅರಿತರು.

ರಷ್ಯಾ ದೇಶದ ಸಹಕಾರ ಮತ್ತು ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸ್ಥಾಪಿಸಲಾಗುತ್ತಿರುವ ಈ ಸ್ಥಾವರ ಎಷ್ಟು ಅಸುರಕ್ಷಿತ ಎಂಬುದರ ಬಗ್ಗೆ ಹಲವು ಅಣುಸ್ಥಾವರ ವಿರೋಧಿಗಳು ಮಾಹಿತಿಗಳನ್ನು ಸಂಗ್ರಹಿಸಿ ಅವರಿಗೆ ಕೊಟ್ಟರು. ಫುಕುಶಿಮಾ ದುರಂತ ಸಂಭವಿಸಿದ ನಂತರ ರಷ್ಯಾದ ಅಧ್ಯಕ್ಷ ದಿಮಿಟ್ರಿ ಮೆಡ್ವಡೇವ್ ರಷ್ಯಾದಲ್ಲಿರುವ ಅಣುವಿದ್ಯುತ್ ಸ್ಥಾವರಗಳ ಬಗ್ಗೆ ತಮಗೆ ವರದಿಯನ್ನು ನೀಡಲು ಅಲ್ಲಿನ ಅಧಿಕಾರಿಗಳಿಗೆ ಹೇಳಿದರು. ಅಧಿಕಾರಿಗಳು ತಯಾರಿಸಿದ ವರದಿ ಬಹಿರಂಗಗೊಂಡು ರಷ್ಯಾದಲ್ಲಿರುವ ಸ್ಥಾವರಗಳು ಯಾವ ಕಾರಣಕ್ಕೂ ಜಪಾನಿನಲ್ಲಿ ಆದ ಪ್ರಕೃತಿ ವಿಕೋಪವನ್ನಾಗಲಿ ಅಥವಾ ಮಾನವ ನಿರ್ಮಿತ ದಾಳಿಗಳನ್ನಾಗಲಿ ಎದುರಿಸುವ ತಾಂತ್ರಿಕತೆ ಹೊಂದಿಲ್ಲ ಎಂಬುದು ಇಡೀ ಜಗತ್ತಿಗೆ ಸ್ಪಷ್ಟವಾಯಿತು. ನೆನಪಿಡಿ ಇದೇ ರಷ್ಯಾದ ಚೆರ್ನೋಬಿಲ್ ನಗರದಲ್ಲಿರುವ ಅಣು ವಿದ್ಯುತ್ ಸ್ಥಾವರ 1986ರಲ್ಲಿ ಸ್ಫೋಟಗೊಂಡು ಸಾವಿರಾರು ಜನ ಮರಣ ಹೊಂದಿದರು. ಆನಂತರದ ವರ್ಷಗಳಲ್ಲಿ ಕನಿಷ್ಠ ಎರಡು ಲಕ್ಷ ಜನ ಕ್ಯಾನ್ಸರ್‌ಗೆ ಬಲಿಯಾದರು. 1986 ರಲ್ಲಿ ಚೆರ್ನೋಬಿಲ್‌ನಿಂದ ಐದು ಲಕ್ಷ ಜನರನ್ನು ಸ್ಥಳಾಂತರಿಸಬೇಕಾಗಿತ್ತು, ಈ ಒಂದು ದುರಂತದಿಂದ ರಷ್ಯಾದ ಖಜಾನೆಗೆ 18 ಬಿಲಿಯನ್ ರೂಬಲ್ ನಷ್ಟವಾಗಿ ಆ ದೇಶದ ಆರ್ಥಿಕ ವ್ಯವಸ್ಥೆಯೇ ಕುಂಠಿತವಾಯಿತು. ಇನ್ನು ಆ ದೇಶದ ತಂತ್ರಜ್ಞಾನವನ್ನು ಆಧರಿಸಿ ಇಲ್ಲಿ ನಿರ್ಮಿಸುವ ಸ್ಥಾವರ ಎಷ್ಟು ಸುರಕ್ಷಿತವಾಗಿರುತ್ತದೆ?

ಇಷ್ಟೆಲ್ಲ ಅರ್ಥ ಮಾಡಿಕೊಂಡ ಜನ ಕೊನೆಗೆ ತಮಗೆ ಈ ಸ್ಥಾವರವೂ ಬೇಕಿಲ್ಲ, ಅದು ಉತ್ಪಾದಿಸಲಿರುವ ವಿದ್ಯುತ್ತೂ ಬೇಕಿಲ್ಲ ಎಂದು ನಿರ್ಧರಿಸಿದರು. ಸುತ್ತಮುತ್ತಲಿನ ಎಲ್ಲಾ ಗ್ರಾಮಗಳ ಪಂಚಾಯತಿಗಳು ಮತ್ತು ಗ್ರಾಮಸಭೆಗಳು ಈ ಸ್ಥಾವರವನ್ನು ವಿರೋಧಿಸಿ ನಿರ್ಣಯಗಳನ್ನು ತೆಗೆದುಕೊಂಡವು. ತಮ್ಮ ಬದುಕನ್ನು ಮತ್ತು ಜೀವನೋಪಾಯವನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ, ಅಣು ವಿದ್ಯುತ್ತನ್ನು ಬಯಸಿ ಭಾರತವು ಅಮೆರಿಕ, ರಷ್ಯಾ ಮತ್ತು ಫ್ರಾನ್ಸ್ ತರಹದ ದೇಶಗಳ ಗುಲಾಮ ಆಗುವುದಕ್ಕಿಂತ ಹೊಸ ಶಕ್ತಿ, ಸೂಕ್ತ ತಂತ್ರಜ್ಞಾನ ಮತ್ತು ಊರ್ಜಿತವಾಗಬಲ್ಲ ಅಭಿವೃದ್ಧಿಯ ಮಾರ್ಗಗಳನ್ನು ಅನುಸರಿಸುವ ಮೂಲಕ ಜಗತ್ತಿನ ಹೊಸ ನಾಯಕ ಆಗಬೇಕೆಂಬ ನಿಲುವಿಗೆ ಬಂದರು.

ಆಗ ಜನ ಈ ಸ್ಥಾವರದ ವಿರುದ್ಧ ಪ್ರತಿಭಟಿಸಲಾರಂಭಿಸಿದರು. ಆದರೆ ಅವರನ್ನು ಯಾರೂ ಕ್ಯಾರೆ ಅನ್ನಲಿಲ್ಲ, ಅವರ ಆತಂಕಗಳನ್ನು ನಿವಾರಿಸಲು ಮುಂದಾಗಲಿಲ್ಲ, ಇದೆಲ್ಲದರಿಂದ ರೋಸತ್ತ ಜನ ಅನ್ಯ ಮಾರ್ಗವಿಲ್ಲವೆಂದು ಉಪವಾಸ ಪ್ರತಿಭಟನೆ ಕೈಗೊಳ್ಳುವುದಾಗಿ ಹೇಳಿದಾಗ, ಪೊಲೀಸರು ಸುಮಾರು ಐನೂರು ಜನರ ವಿರುದ್ಧ ಖೊಟ್ಟಿ ಕೇಸುಗಳನ್ನು ದಾಖಲಿಸಿಕೊಳ್ಳುವ ಮೂಲಕ ಅವರನ್ನು ಬೆದರಿಸಲು ಯತ್ನಿಸಿದರು. ಅದೂ ಸಾಲದೆಂಬಂತೆ, ಐವರನ್ನು ಬಂಧಿಸಿ ಜೈಲಿಗೆ ಅಟ್ಟಿದರು.

ಇದ್ಯಾವುದಕ್ಕೂ ಜಗ್ಗದೆ ಕೊನೆಗೂ ಸೆಪ್ಟೆಂಬರ್ 11ರಂದು ಒಂದು ದೊಡ್ಡ ಚಪ್ಪರದ ಅಡಿ 127 ಜನ ಉಪವಾಸ ಕೂತೇ ಬಿಟ್ಟರು. ಅವರಲ್ಲಿ ಹಿಂದೂಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು, ಬೇರೆ ಬೇರೆ ಜಾತಿಯವರು, ಕ್ರೈಸ್ತ ಸನ್ಯಾಸಿನಿಯರು, ಅಂಗವಿಕಲರು, ಯುವಕರು, ವೃದ್ಧರೂ, ಮಕ್ಕಳೂ ಇದ್ದರು. ಅವರ ಜೊತೆ ದನಿಗೂಡಿಸಲು ಇದಿಂತ್ತಕರೈ ಗ್ರಾಮದ ಸುತ್ತಮುತ್ತಲಿನ ಥೂತುಕುಡಿ, ತಿರುನಲ್ವೇಲಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳಿಂದ ಸಾವಿರಾರು ಜನ ಬಂದರು.

ಇಷ್ಟೆಲ್ಲ ನಡೆಯುತ್ತಿದ್ದರೂ ಯಾರೂ ಅವರತ್ತ ತಿರುಗಿಯೂ ನೋಡಲಿಲ್ಲ, ಸ್ಥಳೀಯ ಪತ್ರಿಕೆಗಳ ಹೊರತಾಗಿ ಯಾವ ಟಿವಿ ಚಾನೆಲ್‌ನವರೂ ಅವರತ್ತ ಗಮನಹರಿಸಲಿಲ್ಲ. ಇನ್ನು ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರು ಪ್ರತಿಭಟನೆ ಶುರುವಾಗಿ ಐದು ದಿನಗಳಾಗಿದ್ದರೂ, ಪ್ರತಿಭಟನೆಯಲ್ಲಿ ನಿರತರಾಗಿದ್ದ ಹಲವರ ಆರೋಗ್ಯ ಹದಗೆಟ್ಟಿದ್ದರೂ, ಮೊನ್ನೆ ಅಂದರೆ ಸೆಪ್ಟೆಂಬರ್ 16ರಂದು "ತಮಿಳುನಾಡಿನಲ್ಲಿ ವಿದ್ಯುತ್ತಿನ ಅಭಾವವಿದೆ. ಕೂಡನ್ಕುಲಂ ಸ್ಥಾವರದಿಂದ ರಾಜ್ಯಕ್ಕೆ ಉಪಯೋಗವಾಗಲಿದೆ. ನಾನು ಅಣುವಿಜ್ಞಾನಿಗಳು ಮತ್ತು ಇಂಜಿನಿಯರ್‌ಗಳೊಂದಿಗೆ ಚರ್ಚಿಸಿದ್ದೇನೆ. ಅವರೆಲ್ಲ ಕೂಡನ್ಕುಲಂ ಸ್ಥಾವರದಿಂದ ಯಾವ ಅಪಾಯವೂ ಇಲ್ಲ ಎಂದು ನನಗೆ ಹೇಳಿದ್ದಾರೆ. ಜಪಾನಿನ ಫುಕುಶಿಮಾಗಿಂತ ಉತ್ತಮವಾದ ಸ್ಥಾವರವನ್ನು ಇಲ್ಲಿ ನಿರ್ಮಿಸಲಾಗಿದೆ. ಆದ್ದರಿಂದ ಜನರ ಈ ಪ್ರತಿಭಟನೆ ಯಾವ ಕಾರಣಕ್ಕೂ ಸಮರ್ಥನೀಯವಲ್ಲ" ಎಂದೇ ಅಭಿಪ್ರಾಯಪಟ್ಟಿದ್ದರು.

ಆದರೆ ಇದಾದ ಕೆಲದಿನಗಳಲ್ಲೇ ಕೂಡನ್ಕುಲಂ ಅಣುಸ್ಥಾವರ ವಿರುದ್ಧದ ಪ್ರತಿಭಟನೆಯ ಸುದ್ದಿ ಕಾಡ್ಗಿಚ್ಚಿನಂತೆ ಎಲ್ಲೆಡೆ ಹಬ್ಬಿತು. ಅದಕ್ಕೆ ಇನ್ನಿಲ್ಲದಂತಹ ಜನಬೆಂಬಲ ಸಿಗಲಾರಂಭಿಸಿತು. ಇದಿಂತ್ತಕರೈ ಹಳ್ಳಿಗೆ ಹತ್ತಿರದ ಗ್ರಾಮಗಳಿಂದ ಮತ್ತು ನಗರಗಳಿಂದ ಪ್ರತಿದಿನ ಸುಮಾರು ಹದಿನೈದು ಸಾವಿರ ಜನ ಬಂದು ಪ್ರತಿಭಟನೆಯಲ್ಲಿ ಭಾಗವಹಿಸಲಾರಂಭಿಸಿದರು. ಚೆನ್ನೈ ಸೇರಿದಂತೆ ತಮಿಳುನಾಡಿನ ಇತರೆ ನಗರಗಳಲ್ಲಿ ನೂರಾರು ಜನರೂ ಬೆಂಬಲ ಸೂಚಿಸುವ ಒಂದು ದಿನದ ಉಪವಾಸ ಕಾರ್ಯಕ್ರಮಗಳನ್ನು, ಮೆರವಣಿಗೆಗಳನ್ನು ಮಾಡಲಾರಂಭಿಸಿದರು. ಕನ್ಯಾಕುಮಾರಿಯಲ್ಲಿ 5,000 ಗ್ರಾಮಸ್ಥರು ಉಪವಾಸ ಕೈಗೊಂಡರು. ಲೆಕ್ಕವಿಲ್ಲದಷ್ಟು ಊರುಗಳಲ್ಲಿ ಜನರು ಬಂದ್ ಆಚರಿಸಿದರು. ಶಾಲಾಮಕ್ಕಳೂ ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

ನರ್ಮದಾ ಬಚಾವೋ ಆಂದೋಲನದ ನಾಯಕಿ ಮೇಧಾ ಪಾಟ್ಕರ್ ಕೂಡ ಇದಿಂತ್ತಕರೈ ಗ್ರಾಮಕ್ಕೆ ಹೋಗಿ ತಮ್ಮ ಬೆಂಬಲವನ್ನು ಸೂಚಿಸಿದರು. ಕೊಯಲಿಷನ್ ಫಾರ್ ನೂಕ್ಲಿಯರ್ ಡಿಸ್‌ಆರ್ಮಮೆಂಟ್ ಅಂಡ್ ಪೀಸ್ ಎಂಬ ಸಂಘಟನೆಯ ಪ್ರಫುಲ್ ಬಿದ್ವಾಯಿ ಮತ್ತು ಅಚಿನ್ ವಿನಾಯಕ್ ತರಹದ ಚಿಂತಕರು ಪ್ರತಿಭಟನಾಕಾರರೊಂದಿಗೆ ದನಿಗೂಡಿಸಿದರು. ಪ್ರತಿಭಟನಾಕಾರರ ವಿರುದ್ಧ ಖೊಟ್ಟಿ ಕೇಸುಗಳನ್ನು ಹಾಕುವ ಮೂಲಕ ಅವರ ಹೋರಾಟವನ್ನು ದಮನ ಮಾಡಬಾರದೆಂದೂ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಣುಸ್ಥಾವರಗಳ ಸ್ಥಾಪನೆ ಕುರಿತು ಪ್ರಜಾಸತ್ತಾತ್ಮಕವಾಗಿಯೂ, ಪಾರದರ್ಶಕವಾಗಿಯೂ ನಡೆದುಕೊಳ್ಳಬೇಕೆಂದು ಆಗ್ರಹಿಸಿದರು.


ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಮತ್ತು ಸದಾ ಜನಪರ ನಿಲುವು ತೆಗೆದುಕೊಳ್ಳುವ ಹಿರಿಯ ಚಿಂತಕ ವಿ.ಆರ್. ಕೃಷ್ಣ ಅಯ್ಯರ್ ಅವರೂ ಮುಖ್ಯ ಮಂತ್ರಿ ಜಯಲಲಿತಾ ಅವರಿಗೆ ಪತ್ರ ಬರೆದು ಪ್ರತಿಭಟನಾಕಾರರ ಆತಂಕಗಳನ್ನು ನಿವಾರಿಸಬೇಕೆಂದು ಕೇಳಿಕೊಂಡರು.

ಹೀಗೆ ಇದಿಂತ್ತಕರೈ ಹಳ್ಳಿಯಲ್ಲಿ ಶುರುವಾದ ಪ್ರತಿಭಟನೆಯ ದನಿ ತಮಿಳುನಾಡನ್ನೂ ದಾಟಿ ಯಾವಾಗ ಹೊರಗೂ ಕೇಳಲಾರಂಭಿಸಿತೋ ಆಗ ಜಯಲಲಿತಾ ಪ್ಲೇಟ್ ಬದಲಿಸಿದರು. ಕೂಡನ್ಕುಲಂ ವಿರುದ್ಧದ ಜನರ ಪ್ರತಿಭಟನೆ ಸಮರ್ಥನೀಯವಲ್ಲ ಎಂದು ಹೇಳಿದ್ದ ಕೇವಲ ಮೂರು ದಿನಗಳ ನಂತರ ಜಯಲಲಿತಾ ಸೆಪ್ಟೆಂಬರ್ 18ರಂದು ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರಿಗೆ ಪತ್ರ ಬರೆದು ಅದರಲ್ಲಿ "ಫುಕುಶಿಮಾ ದುರಂತದ ನಂತರ ಇಲ್ಲಿನ ಜನ ಆತಂಕಿತರಾಗಿದ್ದಾರೆ. ನನ್ನ ಸರ್ಕಾರ ಕರಾವಳಿ ತೀರದ ಜನರಿಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದರೂ ಅವರೆಲ್ಲ ಕೇಂದ್ರ ಸರ್ಕಾರದ ಈ ಸ್ಥಾವರದ ವಿರುದ್ಧ ಹೋರಾಡುತ್ತಿದ್ದಾರೆ. ಆದರೆ ಇಲ್ಲಿಯತನಕ ಯಾವ ಕೇಂದ್ರ ಮಂತ್ರಿಯೂ ಅವರೊಂದಿಗೆ ಮಾತುಕತೆ ನಡೆಸದಿರುವುದು ನನಗೆ ಅಚ್ಚರಿ ಮೂಡಿಸಿದೆ. ಕೇಂದ್ರ ಸರ್ಕಾರ ಹೀಗೆ ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದು ದುರದೃಷ್ಟಕರ. ಅಣುವಿದ್ಯುತ್ ಆಯೋಗ ನಿಮ್ಮ ನೇರ ಅಧಿಕಾರದಲ್ಲಿರುವುದರಿಂದ ಇಲ್ಲಿನ ಜನರ ಪರವಾಗಿ ತಾವು ಸೂಕ್ತ ಪ್ರತಿನಿಧಿಯನ್ನು ಇಲ್ಲಿಗೆ ಕಳುಹಿಸಿ ಜನರ ಆತಂಕಗಳು ದೂರ ಆಗುವಂತೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅಷ್ಟೇ ಅಲ್ಲ, ಈ ವಿವಾದ ಅಂತ್ಯಗೊಳ್ಳುವವರೆಗೂ ಕೂಡನ್ಕುಲಂ ಸ್ಥಾವರದ ಕೆಲಸವನ್ನು ಸ್ಥಗಿತಗೊಳಿಸಬೇಕೆಂದೂ ಕೋರುತ್ತೇನೆ" ಎಂದರು.

ಕೇಂದ್ರ ಸರ್ಕಾರಕ್ಕೆ, ಅದರಲ್ಲೂ ಸಿಂಗ್‌ಗೆ ಇದು ಒಂದು ಬಿಕ್ಕಟ್ಟು. ಕೆಲ ತಿಂಗಳ ಹಿಂದೆ ಮಹಾರಾಷ್ಟ್ರದ ಜೈತಾಪುರ್‌ನಲ್ಲಿ ಪ್ರಾರಂಭಿಸಬೇಕೆಂದಿದ್ದ ಅಣು ವಿದ್ಯುತ್ ಸ್ಥಾವರದ ವಿರುದ್ಧ ಅಲ್ಲಿನ ಜನ ಪ್ರತಿಭಟಿಸಿದ್ದರು. ಈಗ ನೋಡಿದರೆ ಈ ಕೂಡನ್ಕುಲಂ ಸ್ಥಾವರವನ್ನೂ ಜನ ವಿರೋಧಿಸುತ್ತಿದ್ದಾರೆ. ವಿಧಿ ಇಲ್ಲದೆ ಅವರು ತಮ್ಮ ಕಚೇರಿಯಲ್ಲಿ ರಾಜ್ಯ ಮಂತ್ರಿ ಆಗಿರುವ ವಿ.ನಾರಾಯಣಸ್ವಾಮಿ ಎಂಬುವವರನ್ನು ಕಳುಹಿಸಿದರು. ನಾರಾಯಣಸ್ವಾಮಿ ಪ್ರತಿಭಟನಾಕಾರರೊಂದಿಗೆ ಚರ್ಚಿಸಿ ಅವರ ಅಹವಾಲನ್ನು ಪ್ರಧಾನಿಗೆ ಹೇಳುವುದಾಗಿ ಭರವಸೆ ನೀಡಿದ್ದರಿಂದ ನಿನ್ನೆ - ಅಂದರೆ ಸೆ 21, ಬುಧವಾರ - ಅವರೆಲ್ಲ ತಮ್ಮ ಉಪವಾಸ ಪ್ರತಿಭಟನೆಯನ್ನು ಅಂತ್ಯಗೊಳಿಸಿದ್ದಾರೆ. ಆದರೆ ಅವರ ಹೋರಾಟ ಇಲ್ಲಿಗೆ ನಿಂತಿಲ್ಲ, ಪ್ರಧಾನಮಂತ್ರಿಯಿಂದ ಪ್ರತಿಕ್ರಿಯೆ ಬಂದನಂತರ ಅವರು ತಮ್ಮ ಮುಂದಿನ ಹೆಜ್ಜೆ ಇಡುವುದು ನಿಸ್ಸಂದೇಹವಾಗಿದೆ.

ತಮಿಳುನಾಡಿನ ಪುಟ್ಟ ಗ್ರಾಮದ ಜನ ಎಲ್ಲರನ್ನೂ ಸೇರಿಸಿಕೊಂಡು ದಿಟ್ಟವಾಗಿ ನಡೆಸಿದ ಈ ಅಹಿಂಸಾತ್ಮಕ ಹೋರಾಟ ಎಲ್ಲರೂ ಮೆಚ್ಚುವಂತಹದ್ದಲ್ಲವೇ....

ರೈಲ್ವೆ ಕೂಲಿಯ ಮಗ ರಾಮುಲು ಆಸ್ತಿ ಎಷ್ಟು ಗೊತ್ತಾ?



ಚಿನ್ನ-ಬೆಳ್ಳಿ ಹಣ ಬ್ಯಾಂಕ್ ಅಕೌಂಟ್-ಕಾರು....

ಪೂರ್ಣ ವಿವರಗಳು

ಬಳ್ಳಾರಿಯ ರೈಲ್ವೆ ಗ್ಯಾಂಗ್‌ಮೆನ್ ಬಿ. ತಿಮ್ಮಪ್ಪ - ಹೊನ್ನುರಮ್ಮ ದಂಪತಿಗಳ ಪುತ್ರರತ್ನ, ಕ್ರಿಮಿನಲ್ ರಾಜಕಾರಣಿ ಬಿ.ಶ್ರೀರಾಮುಲುನ ಆಸ್ತಿ ಎಷ್ಟಿದೆ?

ಆವನ ಹತ್ತಿರ ಎಷ್ಟು ಕೇಜಿ ಚಿನ್ನ - ಬೆಳ್ಳಿ ಇದೆ? ಬ್ಯಾಂಕ್ ಅಕೌಂಟ್‌ಗಳಲ್ಲಿರುವ ನಗದು ಹಣ ಎಷ್ಟು. ಕಾರುಗಳ ಸಂಖ್ಯೆ - ಬೆಲೆ ಏನಿದೆ?

ಮನೆ - ಜಮೀನು - ಸೈಟುಗಳ ವಿವರ ಏನು?

ಇದುವರೆಗೂ ಜನರ ಗಮನಕ್ಕೆ ಬಂದಿರದಿದ್ದ ರಾಮುಲುವಿನ ಆಸ್ತಿ ವಿವರಗಳು ಇಲ್ಲಿವೆ. ಓರ್ವ ಸಾಧಾರಣ ರೈಲ್ವೆ ಕೂಲಿಕಾರನ ಮಗನಾಗಿದ್ದ ರಾಮುಲು ಈಗ ಕೋಟಿಗಳಿಗೆ ಲೆಕ್ಕವಿಡಲಾಗದ ಶ್ರೀಮಂತ.

ಕೇವಲ ಹದಿನೈದು ವರ್ಷಗಳ ಹಿಂದೆ ಬಳ್ಳಾರಿಯ ಕೌನ್ಸಿಲರ್ ಲೆವೆಲ್ ರಾಜಕಾರಣಿಯಾಗಿದ್ದ ರಾಮುಲು ಮುಂದಿನ ಆರೆಂಟು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರವನ್ನೇ ನಿಯಂತ್ರಿಸುವ ಮಟ್ಟಕ್ಕೆ ಹೇಗೆ ಬೆಳೆದ ಎಂದು ನೋಡಿದರೆ ಅದು ಅಕ್ರಮ ಗಣಿಗಾರಿಕೆಯ ದುಡ್ಡಿನಿಂದ ಸಿಕ್ಕ ಬಲ ಎಂಬುದು ಗೊತ್ತಾಗುತ್ತದೆ.

ರಾಮುಲುವಿನ ಗೆಳೆಕಾರ ಜನಾರ್ದನ ರೆಡ್ಡಿ ಸಾವಿರಾರು ಕೋಟಿಗಳಿಗೆ ತೂಗಿದರೆ ಭಂಟ ರಾಮುಲು ತಾನೆ ಏನು ಕಮ್ಮಿ? ಅವನು ಈಗ ನೂರಾರು ಕೋಟಿ ತೂಗುತ್ತಿದ್ದಾನೆ. ಸಿಬಿಐನವರು ಬಂದು ಕುಂಡೆ ಮೇಲೊದ್ದು ಎಳಕೊಂಡು ಹೋಗುವವರೆಗೂ ಇವೆಲ್ಲಾ ಆಸ್ತಿಗೆ ರಾಮುಲುವೇ ಮಾಲೀಕ ನಿಜ.

ಆದರೆ ಆಮೇಲೆ?

ಗ್ಯಾಂಗ್‌ಮೆನ್ ಮಗ ಗ್ಯಾಂಗ್ ಕಟ್ಟಿದ

ಒಂದು ಡಜನ್ ಕ್ರಿಮಿನಲ್ ಕೇಸುಗಳು, ಕೊಲೆ ಯತ್ನ, ಹಲ್ಲೆ, ಬೆದರಿಕೆ, ಅಕ್ರಮ ಗಣಿಗಾರಿಕೆಯ ಹಿನ್ನೆಲೆಯ ರಾಮುಲುನ 'ನೀನ್ಯಾರಪ್ಪ?' ಅಂತ ಕೇಳಿದರೆ 'ಸಮಾಜ ಸೇವಕ' ಅಂದು ಬಿಡುತ್ತಾನೆ! ಸುಭಾಶ್ ಚಂದ್ರ ಬೋಸು, ಸ್ವಾಮಿ ವಿವೇಕಾನಂದ, ಚಂದ್ರಶೇಖರ್ ಆಜಾದ್‌ರವರ ಹೆಸರುಗಳನ್ನು ಹೇಳಿ 'ನನಗೆ ಅವರೇ ಆದರ್ಶ' ಅನ್ನುತ್ತಾನೆ.

ಮಾಡೋದು ಹಲ್ಕಾ ಕೆಲಸ, ಮನೆ ಮುಂದೆ ಬೃಂದಾವನ ಅನ್ನುವಂತೆ ವಾಸ್ತವವಾಗಿ ಈ ರಾಮುಲು ಊಟಕ್ಕೂ ಕಷ್ಟವಿದ್ದ ಬಡ ಕುಟುಂಬದಲ್ಲಿ ಹುಟ್ಟಿದವನು. ಜೋಳದ ರಾಶಿ ಗ್ರಾಮದವನಾಗಿದ್ದ ತಂದೆ ಬಿ.ತಿಮ್ಮಪ್ಪ ಬಳ್ಳಾರಿಯ ರೈಲ್ವೆ ಯಾರ್ಡಿನಲ್ಲಿ ಗ್ಯಾಂಗ್‌ಮೆನ್ ಆಗಿದ್ದ. ಈಗಲೂ ರಾಮುಲುವಿನ ಅಣ್ಣ ಗೋವಿಂದ ಅಲ್ಲೇ ವಾಟರ್‌ಮೆನ್ ಆಗಿದ್ದಾನೆ. ಇನ್ನೊಬ್ಬ ಸೋದರ ಮಲ್ಲಿ ಎಂಬಾತ ನಲ್ಲಿ ಕಂಟ್ರಾಕ್ಟರ್, ಮಗದೊಬ್ಬ ಸೋದರ ಸೀನ ಮೊದಲು ಟೈಲರ್ ಆಗಿದ್ದವನು ಈಗ ರಾಮುಲುವಿನ ಪವರ್ ನೋಡಿ ತಾನೊಂದು ಇಸ್ಪೀಟ್ ಕ್ಲಬ್ ನಡೆಸುತ್ತಾ ಬಳ್ಳಾರಿಯನ್ನು ಹಾಳುಮಾಡಲು ಶಕ್ತಿ ಮೀರಿ ಕೊಡುಗೆ ನೀಡುತ್ತಿದ್ದಾನೆ. ಇವರೆಲ್ಲ ಈಗ ಬಳ್ಳಾರಿಯೊಳಗೆ ದಾದಾಗಿರಿ, ರಾಜಿ ಪಂಚಾಯತಿ, ಹಫ್ತಾ ವಸೂಲಿ ಹಾಗೂ ದೋ ನಂಬರ್ ದಂಧೆಗಳಿಗೆ ಪೋಷಕರು-ರಕ್ಷಕರೂ ಆಗಿದ್ದಾರೆ.

ಬಳ್ಳಾರಿಯ ಶಾಂತಿ ಶಿಶುವಿಹಾರ ಹಾಗೂ ಎಸ್.ಜಿ ಹೈಸ್ಕೂಲ್‌ನಲ್ಲಿ ಓದಲು ಯತ್ನಿಸಿ ಪಿಯುಸಿ ಮುಗಿಸುವ ಹೊತ್ತಿಗೆ ರಾಮುಲು ಪುಂಡಾಟಿಕೆ ಮೈಗೂಡಿಸಿಕೊಂಡ. 1996 ರಲ್ಲಿ ಬಳ್ಳಾರಿ ಪುರಸಭೆಯ ಕೌನ್ಸಿಲರ್ ಎಲೆಕ್ಷನ್‌ಗೆ ನಿಂತಾಗ ರಾಮುಲು ಮುಂಡ್ಲೂರು ಬಾಬು ಫ್ಯಾಮಿಲಿಗೆ ಬಂಟನಾಗಿದ್ದ. ಮುಂದೆ ಬಸವರಾಜೇಶ್ವರಿಯ ಮಗ ಡಾ|| ವೆಂಕಟ ಮಾಹಿತಾಲ್‌ಗೆ ಕಾಂಗ್ರೆ ಟಿಕೆಟ್ ಸಿಕ್ಕು ದಿವಾಕರ ಬಾಬು ಪಕ್ಷೇತರನಾಗಿ ರೈಲು ಗಾಡಿ ಚಿಹ್ನೆ ಮೇಲೆ ಸ್ಪರ್ಧಿಸಿದಾಗ ಮಾಹಿತಾಲ್ ಜೊತೆ ಕಾಂಗ್ರೆಸಲ್ಲಿದ್ದರೂ ರಾಮುಲು ದಿವಾಕರಬಾಬು ಪರ ಕೆಲಸ ಮಾಡಿದ. 1980ರ ದಶಕದಲ್ಲೇ ಕರುಣಾಕರರೆಡ್ಡಿ ಹೆಂಗಸೊಬ್ಬಳನ್ನು ಕಿಡ್‌ನಾಪ್ ಮಾಡಿಸಿದಾಗ ಅವರೊಂದಿಗೆ ರಾಮುಲುನೂ ಇದ್ದ ಎನ್ನುತ್ತಾರೆ.

ರೆಡ್ಡಿಗಳು ಎನೋಬೆಲ್ ಇಂಡಿಯಾ ಎನ್ನುವ ವಂಚಕರ ಹಣಕಾಸು ಕಂಪನಿ ಸ್ಥಾಪಿಸಿ ಬಳ್ಳಾರಿಯ ಜನರಿಗೆ ಟೋಪಿ ಹಾಕುತ್ತಿದ್ದಾಗ ಅವರ ಪರವಾಗಿ ಹಣ ವಸೂಲಿಗೆ ಹೋಗುತ್ತಿದ್ದವನೇ ಈ ರಾಮುಲು. ಇಂತಹ ಸಂದರ್ಭಗಳಲ್ಲಿ ರಾಮುಲು ತನ್ನ ಪರಿಶಿಷ್ಟ ಜಾತಿ ಕಾರ್ಡನ್ನು ಬಳಸಿ ಒದೆ ತಿಂದವರು ತನ್ನ ವಿರುದ್ಧ ದೂರು ಕೊಡದಂತೆ ನೋಡಿಕೊಳ್ಳುತ್ತಿದ್ದ.


1999 ರಲ್ಲಿ ಸೋನಿಯಾ ಗಾಂಧಿ, ಸುಷ್ಮಾ ಸ್ವರಾಜ್ ಎಲೆಕ್ಷನ್ ಯುದ್ಧಕ್ಕಿಳಿದಾಗ ರಾಮುಲು ಬಳ್ಳಾರಿ ಕ್ಷೇತ್ರದಿಂದ ಅಸೆಂಬ್ಲಿಗೆ ನಿಂತು ಸೋತ. ಆದರೆ ಆಗಲೇ ರೆಡ್ಡಿಗಳ ಇಂಟರ್‌ನ್ಯಾಷನಲ್ ಮೈನಿಂಗ್ ದಂಧೆ ಚಾಲು ಆಗುತ್ತಿತ್ತು, ರಾಮುಲು ಅವರೊಂದಿಗೇ ಸೇರಿ ಶಾಸಕನೂ ಆದ. ಅಕ್ರಮ ಗಣಿಗಾರಿಕೆಯನ್ನು ನಡೆಸಿದ. ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪನಿಯಲ್ಲಿ 5% ಪಾಲುದಾರನೂ ಆದ. 2004 ರಲ್ಲಿ ಶಾಸಕನಾದ ತಕ್ಷಣ ಕುಮಾರಸ್ವಾಮಿ ಸರ್ಕಾರದಲ್ಲಿ ರಾಮುಲು ಟೂರಿಸಂ, ಮೂಲಭೂತ ಸೌಕರ್ಯ ಹಾಗೂ ವಿಮಾನಯಾನ ಖಾತೆಗಳನ್ನು ಕೇಳಿ ಪಡೆದ. ಇವೆಲ್ಲಾ ಲಕ್ಷಾಂತರ ಕೋಟಿ ರೂಪಾಯಿಗಳ ವ್ಯವಹಾರ ನಡೆಯುವ ಕ್ಷೇತ್ರಗಳಾಗಿದ್ದವು. ನೂರಾರು ಕೋಟಿ ರೂ.ಗಳ ಕಿಕ್ ಬ್ಯಾಕ್, ಸಾವಿರಾರು ಕೋಟಿ ರೂ ಬಂಡವಾಳ ಹೂಡಿಕೆಯ ಈ ಕ್ಷೇತ್ರಗಳು ರೆಡ್ಡಿಗಳು ತಮ್ಮ ದಂಧೆ ವಿಸ್ತರಿಸುವ ಸಾಧ್ಯತೆಗಳನ್ನು ತೋರಿಸಿದ್ದವು.

ಇವೆಲ್ಲಾ ಘಟಿಸಿ ಕೇವಲ 6 ವರ್ಷಗಳಾಗಿವೆ ಮಾತ್ರ. ಕರ್ನಾಟಕದ ನಿಸರ್ಗ ಸಂಪತ್ತನ್ನೆಲ್ಲಾ ಲೂಟಿ ಹೊಡೆದ ಜನಾರ್ದನ ರೆಡ್ಡಿ ಈಗ ದಿನಕ್ಕೆ 600 ಗ್ರಾಂ ಅನ್ನ ತಿನ್ನುವ ಹೀನಸ್ಥಿತಿಗೆ ಬಂದಿದ್ದಾನೆ. ರಾಮುಲುಗೂ ಆ ಸ್ಥಿತಿ ಬರುವ ದಿನ ದೂರವಿಲ್ಲ.

ಇನ್ಸೂರೆನ್ಸ್ ಮೊತ್ತವೇ 15 ಕೋಟಿ!

ಊರು ತುಂಬಾ ಪುಂಡರ ಪಟಾಲಂ, ಮೈಸುತ್ತಾ ಬಾಡಿಗಾರ್ಡ್‌ಗಳನ್ನಿರಿಸಿಕೊಂಡಿದ್ದರೂ ರಾಮುಲುಗೆ ಜೀವಭಯ. ಕರ್ನಾಟಕದ ರಾಜಕಾರಣಿಗಳ ಪೈಕಿ ಸಶಸ್ತ್ರ ಖಾಸಗಿ ಬಾಡಿಗಾರ್ಡ್‌ಗಳನ್ನು ನೇಮಿಸಿಕೊಂಡ ಮೊದಲ ಕ್ರಿಮಿನಲ್ ನಾಯಕರೆಂದರೆ ಬಳ್ಳಾರಿಯ ರೆಡ್ಡಿ ಬ್ರದರ್ಸ್ ಹಾಗೂ ರಾಮುಲು.

ತಮ್ಮ ಸುರಕ್ಷತೆಗೆ ಇಷ್ಟೆಲ್ಲಾ ವ್ಯವಸ್ಥೆ ಮಾಡಿಕೊಂಡ ಮೇಲೂ ಇವರು ಏನಾದರೂ ಹೆಚ್ಚು ಕಡಿಮೆಯಾದರೆ ಇರಲೆಂದು ಕೋಟಿ, ಕೋಟಿ ರೂಪಾಯಿಗಳಿಗೆ ಇನ್ಸುರೆನ್ಸ್ ಮಾಡಿಸಿಕೊಂಡಿದ್ದಾರೆ.



ಇದರಲ್ಲಿ ರಾಮುಲು ಮತ್ತವನ ಫ್ಯಾಮಿಲಿಯ ವಿವರಗಳು ಹೀಗಿವೆ.

ಕಂಪನಿ	ರಾಮುಲುವಿನ ಪಾಲಿಸಿ ಸಂಖ್ಯೆ	ಮೊತ್ತ
1. ಕೋಟಕ್ ಲೈಫ್ ಇನ್ಸೂರೆನ್ಸ್	00517272	1.25 ಕೋಟಿ
2. ಎಲ್‌ಐಸಿ	663462570	25 ಲಕ್ಷ
3. ಮೆಟಲೈಫ್	1200800526368	8.00 ಕೋಟಿ

ಈ ಒಂಬತ್ತೂವರೆ ಕೋಟಿ ರೂಪಾಯಿಗಳ ಇನ್ಸೂರೆನ್ಸ್ ಮೊತ್ತ ರಾಮುಲುವಿನದು. ಅವನ ಮಕ್ಕಳಿಗೂ ಕೋಟ್ಯಾಂತರ ರೂಗಳ ಇನ್ಸೂರೆನ್ಸ್ ಮಾಡಿಸಿದ್ದಾನೆ.


ಹೆಸರು	ಪಾಲಿಸಿ	ಮೊತ್ತ
1. ಧನುಶ್	ಐಎನ್‌ಜಿ 01049224	1.50 ಕೋಟಿ
2. ರಕ್ಷಿತ	ಐಎನ್‌ಜಿ 01049282	1.25 ಕೋಟಿ
3. ಅಂಕಿತ	ಐಎನ್‌ಜಿ 01049272	1.25 ಕೋಟಿ
4. ದೀಕ್ಷಿತಾ	ಐಎನ್‌ಜಿ 01049305	1.25 ಕೋಟಿ

ರಾಮುಲು ಮಕ್ಕಳ ಪಾಲಿಸಿ ಮೊತ್ತವೇ ಐದು ಮುಕ್ಕಾಲು ಕೋಟಿಯಷ್ಟಿದೆ. ಇನ್ನು ಇದರ ಪ್ರೀಮಿಯಂ ಮೊತ್ತ ತಿಂಗಳಿಗೆ ಎಷ್ಟು ಲಕ್ಷಗಳಾಗಬಹುದು ಲೆಕ್ಕ ಹಾಕಿ.

ಮೈಸೂರಿನ ಮಹಾರಾಜರ ಕುಟುಂಬದವರೂ ಈ ಮೊತ್ತದ ಪಾಲಿಸಿ ಮಾಡಿಸಿಕೊಂಡಿಲ್ಲ ಎಂಬುದು ಬಳ್ಳಾರಿಗರ ಅಂಬೋಣ.

6.5 ಕೇಜಿ ಚಿನ್ನ! 9.5 ಕೇಜಿ ಬೆಳ್ಳಿ!!

ಜನಾರ್ದನರೆಡ್ಡಿ ಮನೆಯಲ್ಲಿ 60 ಕೋಟಿಗೂ ಹೆಚ್ಚಿನ ಚಿನ್ನ ಸಿಕ್ಕರೆ ರಾಮುಲು ಹತ್ತಿರ ಆರೂವರೆ ಕೋಟಿ ಚಿನ್ನ ಹಾಗೂ ಒಂಬತ್ತೂವರೆ ಕೇಜಿ ಬೆಳ್ಳಿ ಇದೆ. ಇವೆಲ್ಲಾ ಒಡವೆಗಳು ಮನೆ ಬಳಕೆ ವಸ್ತುಗಳ ಹಾಗೂ ಬಿಸ್ಕತ್‌ಗಳ ರೂಪದಲ್ಲಿವೆ.



ಇವತ್ತಿನ ಮಾರುಕಟ್ಟೆ ರೇಟಿನಲ್ಲಿ ಇದರ ಬೆಲೆ ಮೂರು ಕೋಟಿ ರೂಪಾಯಿಗೂ ಜಾಸ್ತಿಯಿದೆ. ಇದು ಲೆಕ್ಕಕ್ಕೆ ಸಿಗುವ, ರಾಮುಲು ಮನೆಯಲ್ಲಿ ಓಡಾಡಿ ಕಣ್ಣಾರೆ ಕಂಡವರ ಲೆಕ್ಕಾಚಾರ ಇದನ್ನು ಹೊರತುಪಡಿಸಿ ಲೆಕ್ಕಕ್ಕೆ ಸಿಗದ ಚಿನ್ನ - ಬೆಳ್ಳಿಯ ಸಂಗ್ರಹ ಇನ್ನೂ ಹಲವು ಕೋಟಿ ರೂಪಾಯಿಗಳಿರಬಹುದು.

ಕಣ್ಣಾರೆ ಕಂಡವರ ಪ್ರಕಾರ ರಾಮುಲು ಊಟ ಮಾಡುವುದು ಚಿನ್ನದ ತಟ್ಟೆಯಲ್ಲಿ!

ಮನೆಯಲ್ಲಿ ಓಡಾಡುವಾಗ, ಅತಿಥಿಗಳೆದುರು ಚಿನ್ನದ ಎಳೆಗಳಿರುವ ಚಪ್ಪಲಿ ಹಾಕಿಕೊಳ್ಳುತ್ತಾನಂತೆ ರಾಮುಲು!

ಮನೆ- ಸೈಟು - ಜಮೀನಿಗೆ ಬೆಲೆ ಕಟ್ಟುವುದು ಹೇಗೆ

ರಾಮುಲುಗೆ ಬಳ್ಳಾರಿ, ಗದಗ, ಬೆಂಗಳೂರಿನಲ್ಲಿ ಭರ್ಜರಿ ಬಂಗಲೆಗಳಿವೆ. ರಾಜ್ಯದ ಹತ್ತಾರು ... ನೂರಾರು ಕೋಟಿ ಬೆಲೆಬಾಳುವ ಜಮೀನು ಖರೀದಿಸಿಟ್ಟುಕೊಂಡಿರುವುದು ಪತ್ತೆಯಾಗಿದೆ.

ಬೆಂಗಳೂರಿನ ಪ್ಯಾಲೇಸ್ ರಸ್ತೆ ಹತ್ತಿರವಿರುವ ನಂ 45/1 ಸಂಖ್ಯೆಯ ರಾಮುಲುವಿನ ಮನೆಯೊಂ... ಇವತ್ತು ಮೂರು ಕೋಟಿ ರೂ. ಬಾಳುತ್ತದೆ. 2007 ರಲ್ಲಿ ಇದನ್ನು ಖರೀದಿಸಿದ್ದಾನೆ. ಇವ... ಗದಗದಲ್ಲೊಂದು ಹಾಗೂ ಬಳ್ಳಾರಿಯಲ್ಲೊಂದು ಕೋಟಿ ಬೆಲೆಯ ಮನೆಗಳಿವೆ. ಇದಲ್ಲದೆ ಗದಗ... (R.S No. 4313) 25 ಲಕ್ಷ ರೂ ಬೆಲೆಯ 10 ಗುಂಟೆ ಭೂಮಿ ಹಾಗೂ ಎರಡು ಕೋಟಿ ... ಬಾಳುವ 8 ಸಾವಿರ ಚದರಡಿಯ ಜಾಗವಿದೆ. (ಗದಗ ಸರ್ವೆನಂ 3813/ಅ) ದೇವನಹಳ್ಳಿ ಏರ್‌ಪೋರ್ಟ್ ಹತ್ತಿರದ ಸಾದಹಳ್ಳಿಯಲ್ಲಿ ಸರ್ವೆ ನಂ 240,239, 267 ರಲ್ಲಿ ನಾಲ್ಕು ಕೋಟಿ ರೂ ಬೆಲೆಯ ... ಸಾವಿರ ಚದರಡಿಯ ಜಾಗವೂ ಇದೆ. ಬಳ್ಳಾರಿಯ ಸಿರಗುಪ್ಪ ರಸ್ತೆಯ ಗಣೇಶ್ ನಗರದಲ್ಲಿ 36 ... ಬೆಲೆ ನೀಡಿ 1.40 ಎಕರೆ ಭೂಮಿ ನುಂಗಿದ್ದಾನೆ.

ಬಳ್ಳಾರಿಯ ಹಂದಿಗೂಡಾ ಸರ್ವೆನಂ 67 ರಲ್ಲಿ ಎಂಟೆಕರೆ ಹಾಗೂ ಸರ್ವೆನಂ 87ರಲ್ಲಿ 8 ಎ... ಇದೆ. ಬಳ್ಳಾರಿ ಸರ್ವೆ ನಂ 59713/A 3 - ಅ ನಲ್ಲಿ ಒಟ್ಟು 24 ಎಕರೆ ಜಾಗ ಖರೀದಿಸಿದ...

ಹಂದಿಗೂಡಾದಲ್ಲಿ ಪ್ಲಾಟ್ ನಂ 56, 49, 54, 55, 56, 50, 48, 64, 47, 61, ... 96, 59, 10, 49, 50, 8, 7, 9, 7, 51, 57, ... 47, 45...... ಲೆಕ್ಕ ಇಡಲು ಕಷ್ಟವಾಗುವಷ್ಟು ವಿಸ್ತೀರ್ಣ... ಜಮೀನು ಕೊಂಡಿದ್ದಾನೆ. ತಾನೇನು ಕಡಿಮೆ ಎನ್ನುವ... ರಾಮುಲುವಿನ ಹೆಂಡತಿ ಭಾಗ್ಯಲಕ್ಷ್ಮಿ ಕೂಡ ಬಳ್ಳಾರಿ ಸ... ನಂ 597/132/A 3 ನಲ್ಲಿ 20.71 ಎಕರೆ ಜಮೀನ... 2000 ಇಸವಿಯಲ್ಲೇ 25 ಲಕ್ಷಕ್ಕೆ ಖರೀದಿಸಿದ್ದಾಳೆ.



ರಾಮುಲು ಬಳ್ಳಾರಿಯ ಪಾರ್ವತಿ ನಗರದ ಕೆಹೆಚ... ಕಾಲೋನಿಯೊಂದರಲ್ಲೇ ನಾಲ್ಕು ಕಟ್ಟಡ ಹೊಂದಿದ್ದಾನೆ.

ಇವೆಲ್ಲವೂ ಅಕ್ರಮ ಗಣಿಗಾರಿಕೆಯ ದುಡ್ಡೆಂಬುದರಲ್ಲಿ ಅನುಮಾನವೇ ಇಲ್ಲ.

ರಾಮುಲುವಿನ ಬ್ಯಾಂಕ್ ಅಕೌಂಟುಗಳು ಮತ್ತದರಲ್ಲಿರುವ ಕೋಟ್ಯಾಂತರ ದುಡ್ಡು

ನೆಟ್ಟಗೆ ಪಿಯುಸಿ ಓದಿ ಮುಗಿಸಲಾಗದಿದ್ದರೂ ರಾಮುಲುಗೆ ತಾನು ಸಂಪಾದಿಸಿದ ಹಡಬೆ ದುಡ್ಡನ್ನು ಎಲ್ಲೆಲ್ಲಿ ಇಡಬೇಕು, ಯಾವುದರ ಮೇಲೆ ಬಂಡವಾಳ ಹಾಕಬೇಕೆಂಬುದು ಗೊತ್ತಿದೆ.

ಇವನು ಮುಂಬೈನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಓರಿಯೆಂಟಲ್‌ನ ಫಂಡ್‌ನಲ್ಲಿ ಅನಾಮತ್ತು ನಾಲ್ಕು ಕೋಟಿ ರೂಪಾಯಿ ಇರಿಸಿದ್ದಾನೆ. ಎಷ್ಟು ದುಡ್ಡು ಹೇಗೆ ಬಂತೆಂದು ಕೇಳಿದ ಬ್ಯಾಂಕಿನವರಿಗೆ ಕಷ್ಟಪಟ್ಟು ದುಡಿದದ್ದು, ಸ್ವಂತ ಉಳಿತಾಯದ್ದು ಎಂದಿದ್ದಾನೆ.

ಇದಲ್ಲದೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬ್ರಾಂಚ್ ಒಂದರಲ್ಲಿ 2 ಕೋಟಿ 64 ಲಕ್ಷ 86 ಸಾವಿರ ರೂಗಳನ್ನು ಹಾಕಿದ್ದಾನೆ. ಇದನ್ನು ಹೊರತು ಪಡಿಸಿ ರಾಮುಲು ಯಾವ ಯಾವ ಬ್ಯಾಂಕಿನಲ್ಲಿ ಎಷ್ಟೆಷ್ಟು ಹಣ ಇರಿಸಿದ್ದಾನೆಂಬ ವಿವರಗಳು ಇಲ್ಲಿವೆ.

ಬ್ಯಾಂಕ್	ಅಕೌಂಟ್ ನಂಬರ್	ಮೊತ್ತ
1. ಆಕ್ಸಿಸ್ ಬ್ಯಾಂಕ್ ಬಳ್ಳಾರಿ	267010400024462	11.10 ಲಕ್ಷ
2. ಆಕ್ಸಿಸ್ ಬ್ಯಾಂಕ್ ಬಳ್ಳಾರಿ	267010400025638	25.16 ಲಕ್ಷ
4. ಆಕ್ಸಿಸ್ ಬ್ಯಾಂಕ್ ಬಳ್ಳಾರಿ	267010200004190	3.25 ಲಕ್ಷ
5. ಆಕ್ಸಿಸ್ ಬ್ಯಾಂಕ್ ಬೆಂಗಳೂರು	009010100912280	1.86 ಲಕ್ಷ
6. ಆಕ್ಸಿಸ್ ಬ್ಯಾಂಕ್ ಗದಗ	413010100023700	30.32 ಲಕ್ಷ
7. ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಬೆಂಗಳೂರು	CA 570	17.63 ಲಕ್ಷ
8. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಬಳ್ಳಾರಿ	S L F 3085355793	4.44 ಕೋಟಿ
9. M D F C ಬಳ್ಳಾರಿ	17601000007887	10 ಲಕ್ಷ



ಹೀಗೆ ರಾಮುಲುನ ಬ್ಯಾಂಕ್ ಅಕೌಂಟುಗಳಲ್ಲೇ ಹತ್ತಿರಹತ್ತಿರ ಆರು ಕೋಟಿ ರೂಪಾಯಿಗಳಿವೆ. ಇದಕ್ಕಿಂತ ಇಂಟರೆಸ್ಟಿಂಗಾದ ವಿಚಾರ ಏನೆಂದರೆ ಈ ಅಕೌಂಟ್‌ಗಳಿಂದ ರಾಮುಲು ಮುಂಬೈನ್ ತ್ರೀಡಿ ಎಂಟರ್‌ಪ್ರೈಸಸ್, ಲಕ್ಷ್ಮೀ ಮೈನ್ಸ್ ಅಂಡ್ ಮಿನರಲ್ಸ್, ರಾಘವೇಂದ್ರ ಕನ್‌ಸ್ಟ್ರಕ್ಷನ್ಸ್ ಕಂಪನಿಗಳೊಂದಿಗೆ ಹಣದ ವ್ಯವಹಾರ ನಡೆಸಿದ್ದಾನೆ. ರಾಮುಲುವಿನ ಹೆಂಡತಿ ಭಾಗ್ಯಲಕ್ಷ್ಮಿಯು ಲಕ್ಷ್ಮೀ ಮೈನ್ಸ್ ಅಂಡ್ ಮಿನರಲ್‌ಗೆ ಹಣ ಹಾಕಿದ್ದಾಳೆ.

ಪಂಕಜ್ ಶಾ-ರೆಡ್ಡಿ ಲಿಂಕ್‌ಗಳು

ಇವನೊಬ್ಬ ಗುಜರಾತಿ.

ಇವತ್ತು ಪಂಕಜ್ ಶಾ ಎಂದರೆ ಇಂಡಿಯಾ, ಚೀನಾ, ರಷಿಯಾ, ಇಂಡೋನೇಷಿಯಾ, ಕೊರಿಯಾ, ನೈಜರ್ ದೇಶಗಳ ಗಣಿಗಾರಿಕೆ ಪ್ರಪಂಚಕ್ಕೇ ಗೊತ್ತಿರುವ ಹೆಸರು.

ಕೇವಲ 3 ವರ್ಷಗಳ ಹಿಂದೆ ಅಂದರೆ 2008ರಲ್ಲಿ Eartustone ಎನ್ನುವ ಕಂಪೆನಿ ಶುರುಮಾಡಿದ ಪಂಕಜ್ ಶಾ ಈ ದಿನ ಲಕ್ಷಾಂತರ ಕೋಟಿ ರೂ.ಗಳ ಗಣಿಗಾರಿಕೆ ದಂಧೆ ನಡೆಸುತ್ತಿದ್ದಾನೆ.

ಕಬ್ಬಿಣದ ಅದಿರು, ಮ್ಯಾಂಗನೀಸ್, ರಸ್ತೆ, ಸೇತುವೆ ಮಾತ್ರವಲ್ಲದೆ ಪಂಕಜ್ ಶಾನ ಇನ್ನೊಂದು ಭಯಾನಕ ದಂಧೆಯೂ ಇದೆ. ಅದು ಯುರೇನಿಯಂ ಗಣಿಗಾರಿಕೆ! ಇಂತಹ ಪಂಕಜ್ ಶಾ ಜೊತೆಗೆ ಗಾಲಿ ಜನಾರ್ದನ ರೆಡ್ಡಿಗೆ ಬ್ಯುಸಿನೆಸ್ ಲಿಂಕ್‌ಗಳಿವೆ.



ಈ ಪಂಕಜ್ ಶಾಗೆ ಇಂಡೋನೇಷಿಯಾದಲ್ಲಿ **Nalo baru mines** ಎಂಬುದಿತ್ತು. ರೆಡ್ಡಿ ಪಿ.**T.Earth Stone** ಕಂಪೆನಿಗೆ ಸೇರಿದ್ದ ಈ ಗಣಿ ಕಂಪೆನಿಯ 50% ಷೇರು ಖರೀದಿಸಿದ. 338 ಎಕರೆ ವಿಸ್ತೀರ್ಣವಿದ್ದ ಅಂದಾಜು 100 ಮೆಟ್ರಿಕ್ ಟನ್ 64+ ಗ್ರೇಡಿನ ಕಬ್ಬಿಣದ ಅದಿರಿನ ನಿಕ್ಷೇಪವಿರುವ ಈ ಕಂಪೆನಿಯ ಅರ್ಧಭಾಗದ ಮಾಲೀಕತ್ವವೆಂದರೆ... 22 ಸಾವಿರ ಕೋಟಿ ರೂ.ಬೆಲೆ!

ಆದರೆ ರೆಡ್ಡಿ ಈ ಕಂಪೆನಿಯ ಅರ್ಧ ಮಾಲೀಕನಾದಾಗ ಕೊಟ್ಟದ್ದು ಜುಜುಬಿ 135 ಕೋಟಿ ರೂ. ಮಾತ್ರ! ಉಳಿದ ಹಣ ಹವಾಲಾ ಮೂಲಕ ಕೈ ಬದಲಾಗಿರುವುದು ಈಗ ಸಿಬಿಐಗೆ ಗೊತ್ತಾಗಿದೆ.

ಆಗ ರೆಡ್ಡಿ ಸಿಂಗಪೂರ್‌ನಲ್ಲಿ ಜಿಜೆಆರ್ ಹೋಲ್ಡಿಂಗ್ಸ್ ಎಂಬ ಕಂಪೆನಿ ಮಾಡಿದ್ದ. 2007ರಲ್ಲಿ ರೆಡ್ಡಿ ಸಿಂಗಪೂರ್‌ನಲ್ಲೇ ಪಿಎಲ್‌ಎ ಟ್ರೇಡಿಂಗ್ ಇಂಟರ್‌ನ್ಯಾಷನಲ್ ಎನ್ನುವ ಇನ್ನೊಂದು ಕಂಪೆನಿ ತೇಲಿಬಿಟ್ಟ. ಕರ್ನಾಟಕದ ಅದಿರನ್ನು ಕಡಿಮೆ ಬೆಲೆಗೆ ಅಲ್ಲಿಗೆ ಸಾಗಿಸಿ, ಅಲ್ಲಿಂದ ಅದಿರನ್ನು ಡಬಲ್ ರೇಟಿಗೆ ಮತ್ಯಾರಿಗೋ ಮಾರಿಕೊಂಡ. ಇದೆಲ್ಲ ಈಗ ಗೊತ್ತಿರುವ ಸಂಗತಿ. ಆದರೆ ಇಂಟರ್‌ನ್ಯಾಷನಲ್ ವಂಚಕ ಪಂಕಜ್ ಶಾನೊಂದಿಗಿನ ರೆಡ್ಡಿಯ ವ್ಯವಹಾರಗಳೇ ಈಗ ರೆಡ್ಡಿಗೆ ಮುಳುವಾಗಿವೆ.

ಇಂಡೋನೇಷಿಯಾದ ರಾಜಧಾನಿ ಜಕಾರ್ತದ ಮೆನಾರಾ ಪ್ರಿಮಾ ಎಂಬಲ್ಲಿರುವ ಪಂಕಜ್ ಶಾಗೆ **Venture capitalist stretegic Invetor** ಎಂಬ ಕುಖ್ಯಾತಿಯಿದೆ.

ಬ್ಲಾಕ್ ಮನಿಯನ್ನು ವೈಟ್ ಮಾಡುವುದು. ಹವಾಲಾ ಮೂಲಕ ಸಾವಿರಾರು ಕೋಟಿ ರೂ.ಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸುವ ಕೆಲಸದಲ್ಲಿ ಪಳಗಿರುವ ಪಂಕಜ್ ಶಾನೇ ರೆಡ್ಡಿಗೆ ಬ್ರಿಟಿಷ್ ವರ್ಜಿನ್ ಐಲ್ಯಾಂಡ್. **Ishe of Man** ಎನ್ನುವ ತೆರಿಗೆ ವಂಚಕ ದ್ವೀಪಗಳನ್ನು ಪರಿಚಯಿಸಿದವನು.

ಈ ಪಂಕಜ್ ಶಾಗೆ ಆಫ್ರಿಕಾದ ನೈಜರ್ ದೇಶದಲ್ಲಿ 2 ಸಾವಿರ ಚದರ ಕಿ.ಮೀ. ವಿಸ್ತೀರ್ಣದ ಯುರೇನಿಯಂ ಗಣಿ ಪ್ರದೇಶವಿದೆ. ಈ ದಿನ ಕಬ್ಬಿಣದ ಅದಿರು ಟನ್‌ಗೆ 10 ಸಾವಿರ ಸಿಕ್ಕರೆ ಯುರೇನಿಯಂ ಟನ್‌ನ ಬೆಲೆ 2 ಕೋಟಿ ರೂಪಾಯಿ ಇದೆ.

ಪಂಕಜ್ ಶಾನ ಈ ಬೃಹತ್ ಬ್ರಹ್ಮಾಂಡದಂತಹ ಯುರೇನಿಯಂ ದಂಧೆ ನೋಡಿ ಥ್ರಿಲ್ ಆದ ರೆಡ್ಡಿ ಕರ್ನಾಟಕದಲ್ಲಿ ಯುರೇನಿಯಂ ಗಣಿಗಾರಿಕೆಗೆ ಸಾಧ್ಯತೆಗಳನ್ನು ಹುಡುಕಿದ. ಆಗಲೇ ಗುಲ್ಬರ್ಗಾದ ಶಹಾಪುರದ ಬಳಿಯ ಗೋಗಿ, ಸೈದಾಪುರ ಉಮರದೊಡ್ಡಿ ಗ್ರಾಮಗಳಲ್ಲಿ ಯುರೇನಿಯಂ ನಿಕ್ಷೇಪವಿರುವ ಸುದ್ದಿ ಗೊತ್ತಾಯಿತು. ಈ ರೆಡ್ಡಿ ಆಗ ಸಿಎಂ ಆಗಿದ್ದ ಯಡ್ಡಿ ಮೇಲೆ ಒತ್ತಡ ತಂದು ಹೈಪವರ್ ಕಮಿಟಿ ಮೀಟಿಂಗ್‌ನಲ್ಲಿ ಯುರೇನಿಯಂ ಗಣಿಗಾರಿಕೆಗೆ ಭೂಮಿ ನೋಟಿಫೈ ಮಾಡಲು ಒಪ್ಪಿಸಿಬಿಟ್ಟ. ಅದಕ್ಕೆ ಪರಿಸರ ಇಲಾಖೆಯ ಒಪ್ಪಿಗೆ ಆಗ ಇನ್ನೂ ಸಿಕ್ಕಿರಲೇ ಇಲ್ಲ.

ಗೋಗಿ ಗ್ರಾಮದಲ್ಲಿ ವರ್ಷಕ್ಕೆ 200 ಟನ್ ಯುರೇನಿಯಂ ಉತ್ಪಾದಿಸುವ ಸಾಧ್ಯತೆ ಇದೆ. ಅಂದರೆ ಇವತ್ತಿನ ಮಾರ್ಕೆಟ್ ರೇಟ್‌ನಲ್ಲೇ 500 ಕೋಟಿ ರೂ. ಆಯಿತು.

ಭಾರತದಲ್ಲೀಗ ಯುರೇನಿಯಂ, ಅನಿಲ, ತೈಲ ನಿಕ್ಷೇಪಗಳಲ್ಲೂ ಖಾಸಗಿ ವಲಯ ಪ್ರವೇಶಿಸಿರುವುದರಿಂದ ಈ ರೆಡ್ಡಿ ತಾನೂ ಪಂಕಜ್ ಶಾ ತರ ಆಗಲು ಬಯಸಿದ್ದ. ಆದರೀಗ ಜೈಲು ಪಾಲು.

30 ಕೋಟಿ ರೂ ವ್ಯವಹಾರ

ಯಾರಿವರು ಲಕ್ಷ್ಮೀ ಮಿನರಲ್ಸ್ ರಾಘವೇಂದ್ರ ಕನ್‌ಸ್ಟ್ರಕ್ಷನ್ಸ್?

ರಾಮುಲುವಿನ ಚಿನ್ನ - ಬೆಳ್ಳಿ, ಕಾರುಗಳು ಬ್ಯಾಂಕ್ ಡಿಪಾಸಿಟ್‌ಗಳ ನಂತರದ ಪ್ರಮುಖ ದಂಧೆ ಏನೆಂದು ನೋಡಿದರೆ ನಮಗೆ ಕಾಣಸಿಗುವುದೇ ಈ ಲಕ್ಷ್ಮೀ ಮೈನ್ಸ್ ಅಂಡ್ ಮಿನರಲ್ಸ್ ಹಾಗೂ ರಾಘವೇಂದ್ರ ಕನ್‌ಸ್ಟ್ರಕ್ಷನ್ ಕಂಪನಿಗಳ ವ್ಯವಹಾರ.

ಹಾಗೆ ನೋಡಿದರೆ ರಾಮುಲುಗೆ ಓಬಳಾಪುರಂ ಮೈನಿಂಗ್ ಕಂಪನಿಯಲ್ಲಿರುವುದು ಶೇ. 5 ರಷ್ಟು ಪಾಲುದಾರಿಕೆ ಮಾತ್ರ. ಉಳಿದಂತೆ ಈ ಖದೀಮ ಬಹುಶಃ ತನ್ನದೇ ಒಂದು ಸ್ವಂತದ ಗಣಿ ವ್ಯವಹಾರವಿರಲಿ ಎಂದು ಯೋಚಿಸಿದನೇನೋ ಹಾಗಾಗಿ ಲಕ್ಷ್ಮೀ ಮಿನರಲ್ಸ್‌ನಲ್ಲಿ ನಾಲ್ಕು ಕೋಟಿ ರೂಪಾಯಿತನಕ ಬಂಡವಾಳ ಹಾಕಿದ್ದಾನೆ.

ಈ ಕಂಪನಿಯೊಂದಿಗಿನ ರಾಮುಲು ವ್ಯವಹಾರಗಳು ಹದಿನೈದು ಕೋಟಿಗೂ ಜಾಸ್ತಿಯಿದೆ. ಜೊತೆಗೆ ಹೈದರಾಬಾದ್ ಮೂಲದ ಶ್ರೀ ರಾಘವೇಂದ್ರ ಕನ್‌ಸ್ಟ್ರಕ್ಷನ್ ಕಂಪನಿಯಲ್ಲೂ ರಾಮುಲು 10 ಕೋಟಿ ರೂಪಾಯಿಗೂ ಹೆಚ್ಚಿನ ಕೊಡುಕೊಳ್ಳುವ ವ್ಯವಹಾರ ನಡೆಸಿದ್ದಾನೆ.

ಇವೆಲ್ಲ ತನಗೆ ಹರಿದು ಬರುತ್ತಿದ್ದ ಅಕ್ರಮ ಗಣಿಗಾರಿಕೆಯ ಹಣವನ್ನು ಬೇರೆ ಬೇರೆ ಉದ್ಯಮಗಳಲ್ಲಿ ಹಾಕಲು ರಾಮುಲು ಕಂಡುಕೊಂಡಿರುವ ದಾರಿ. ರಾಮುಲು ಹೆಂಡತಿ ಭಾಗ್ಯಲಕ್ಷ್ಮಿ ಕೂಡ ಈ ಲಕ್ಷ್ಮೀ ಮಿನರಲ್ಸ್ ಜೊತೆ ವ್ಯವಹಾರ ನಡೆಸಿರುವುದಕ್ಕೆ ದಾಖಲೆಗಳಿವೆ.



9 ಕೋಟಿ ಸಾಲ ಕೊಟ್ಟಿದ್ದಿನಿ ಅಂತಾನೆ

ಹಡಬೆ ದುಡ್ಡು ಒಂದು ಸಾರಿ ಹರಿದುಬರಲು ಶುರುವಾದರೆ ದಗಾಕೋರರಿಗೆ ಅದನ್ನು ಮೈಂಟೇನ್ ಮಾಡುವುದೇ ದೊಡ್ಡ ಕೆಲಸವಾಗಿಬಿಡುತ್ತದೆ.

ಇದಕ್ಕೆ ರಾಮುಲು ಕೂಡಾ ಹೊರತಲ್ಲ. ಮುಂಬೈನ ತ್ರೀಡಿ ಎಂಟರ್‌ಪ್ರೈಸಸ್ ಎಂಬ ಕಂಪೆನಿಗೆ ರಾಮುಲು ೯ ಕೋಟಿ ರೂ. ಕೊಟ್ಟಿದ್ದಾನೆ. ಮುಂಬೈನ ಪೂರ್ವ ಮಾಲಂದ್‌ನಲ್ಲಿರುವ ಕಂಪನಿಯು ಆರ್ಕಿಟೆಕ್ ಬ್ಯುಸಿನೆಸ್ ನಡೆಸುತ್ತಿದೆ. ಬಳ್ಳಾರಿಯ ಶ್ರೀನಗರ ಕಾಲೋನಿಯಲ್ಲಿರುವ ಬಿ.ವಿ.ಶ್ರೀನಿವಾಸ ರೆಡ್ಡಿ ಎಂಬುವನಿಗೆ ರಾಮುಲು ಎರಡು ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾನೆ. ಇದಲ್ಲದೆ ಬಳ್ಳಾರಿಯ ಕ್ಲಬ್ ರೋಡಿನ ಡಿ. ರಾಜಶೇಖರ್‌ಗೆ ನಾಲ್ಕೂವರೆ ಲಕ್ಷ, ಜಿಲ್ಲಾ ಪಂಚಾಯ್ತಿಯ ಗುರುಲಿಂಗನ ಗೌಡನಿಗೆ 30 ಲಕ್ಷ, ರಾಮಪ್ಪ ಶೆಟ್ಟಿಗೆ 10 ಲಕ್ಷ, ರುದ್ರಪ್ಪ ಎಂಬಾತನಿಗೆ 3 ಲಕ್ಷ ರೂ ಕೊಟ್ಟಿದ್ದಾನೆ.

ಇದೆಲ್ಲ ಯಾವುದರ ಬಾಬ್ತು, ರಾಮುಲು ಯಾಕೆ ಇಷ್ಟು ಹಣ ಕೊಟ್ಟ ಎಂಬುದು ಗೊತ್ತಾಗಬೇಕಾದರೆ ತನಿಖೆ ಆಗಬೇಕಷ್ಟೆ. ಇದಲ್ಲದೆ ಎನೋಬೆಲ್ ಗ್ರೂಪ್‌ನ 17 ಲಕ್ಷ ರೂ ಹಾಗೂ ಬಳ್ಳಾರಿಯ ಡೆನ್ ಬಳ್ಳಾರಿ ಸಿಟಿ ಕೇಬಲ್‌ನಲ್ಲೂ ರಾಮುಲುವಿನ ಲಕ್ಷಾಂತರ ರೂಪಾಯಿ ಹಣ ಇದೆ ಎನ್ನಲಾಗಿದೆ.

ದುಷ್ಟ ವೋಲ್ವೋ ಕಂಪನಿ

ಹೊಸಕೋಟೆ ವೋಲ್ವೊ ಬಸ್ ತಯಾರಿಕಾ ಘಟಕದ ಕಾರ್ಮಿಕರ ಪ್ರತಿಭಟನೆಯ ಕೂಗನ್ನು ಕೇಳಿಸಿಕೊಳ್ಳುತ್ತಾ ಹೋದರೆ ದೊಡ್ಡವರ ಸಣ್ಣತನದ ಬಗ್ಗೆ ಹಾಗೂ ಆಳುವವರ ಅಸಹ್ಯ ಅಸಡ್ಡೆ ಬಗ್ಗೆ ಸಭ್ಯ ಮನಸ್ಸು ಸಣ್ಣಗೆ ಕ್ಯಾಕರಿಸಿ ಬಿಡುತ್ತೆ.

ಕೆಂಬಣ್ಣದ ವೋಲ್ವೊ ಬಸ್ ರಸ್ತೆ ಮೇಲೆ ಓಡುತ್ತಿದ್ದರೆ ಅದೆಂತ ಚೆಂದವಪ್ಪಾ ಈ ಬಸ್‌ನ ಪ್ರಯಾಣ ಎಂದೆನಿಸದಿರದು ಅದರ ಐಷಾರಾಮಿ ಅನುಕೂಲಗಳೇ ಅಂತವು. ಈ ಪರಿ ಐಷಾರಾಮಿ ಬಸ್‌ನ ಅಸ್ತಿತ್ವಕ್ಕೆ ಕಾರಣರಾದ ಕಾರ್ಮಿಕರ ಗೋಳು ಮಾತ್ರ ಅಷ್ಟೇ ಕರಾಳ. ಈ ವೋಲ್ವೊ ಕಂಪನಿಯೇ ಮೂಲತಃ ಯುರೋಪ್ ಮೂಲದ್ದು. ನಮ್ಮ ಭಾರತದಲ್ಲೇ ಈ ಕಂಪನಿಯ 4000 ಬಸ್‌ಗಳು ಹರಿದಾಡುತ್ತಿವೆ. ವಿದೇಶಿ ಹೂಡಿಕೆಯೆಂಬ ಪರೋಕ್ಷ ದಾಸ್ಯದ ಮಂತ್ರವನ್ನು ಇಲ್ಲಿನ ರಾಜಕಾರಣಿಗಳು ಪಠಿಸುವ ಕಾಲದಲ್ಲಿ ಇದೂ ತನ್ನ ತಯಾರಿಕಾ ಘಟಕಗಳನ್ನು ನಮ್ಮಲ್ಲಿ ಸ್ಥಾಪಿಸಿತು. ಅಂಥವುಗಳಲ್ಲಿ ಬೆಂಗಳೂರಿನ ಸಮೀಪದ ಹೊಸಕೋಟೆಯಲ್ಲಿರುವ ವೋಲ್ವೊ ಬಸ್ ತಯಾರಿಕಾ ಘಟಕವೂ ಒಂದು. ಅಂದಾಜು ಈಗ್ಗೆ 10 ವರ್ಷಗಳ ಹಿಂದೆ ಶುರುವಾದ ಈ ಘಟಕ ಸದ್ಯ ಐನೂರಕ್ಕೂ ಹೆಚ್ಚು ಕಾರ್ಮಿಕರನ್ನು ಒಳಗೊಂಡಿದ್ದು ಬಿಎಂಟಿಸಿ ಯಂತಹ ಸರ್ಕಾರಿ ಸಂಸ್ಥೆಗೆ ಬಸ್ ಪೂರೈಕೆ ಮಾಡುವಷ್ಟು ಬೆಳೆದು ನಿಂತಿದೆ. ಅಸಲಿಗೆ ಈ ವೋಲ್ವೊ ಬಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬಿಳಲನ್ನು ಭಾರತದಲ್ಲಿ ಇಳಿಬಿಡುವ ಉಸ್ತುವಾರಿ ವಹಿಸಿಕೊಂಡಿರುವುದು ಆಕಾಶ್ ಪಾತಿ ಎಂಬ ಪಕ್ಕಾ ಬಿಜಿನೆಸ್‌ಮ್ಯಾನ್. ಆತನ ಚಾಣಾಕ್ಷತನ ಬರೀ ವ್ಯವಹಾರಕ್ಕೆ ಮಾತ್ರ ಸೀಮಿತವಾದುದರ ಪರಿಣಾಮವಾಗಿಯೇ ಎಲ್ಲ ನಾನೂರು ಶ್ರಮಿಕರು ಬರೋಬ್ಬರಿ 53 ದಿನದಿಂದ ಇವತ್ತಿಗೂ ಕೊನೆಯಾಗದ ಪ್ರತಿಭಟನೆಯ ಮೊರೆ ಹೋಗಬೇಕಾಗಿ ಬಂದಿದೆ.

ಕ್ಲಾರೆನ್ಸ್ ಡಿಸೋಜ ಎಂಬ ಪರಿ ಕ್ಯಾಲ್ಕುಲೇಟೆಡ್ ವ್ಯಕ್ತಿ ಇದಕ್ಕೆ ವೈಸ್ ಪ್ರೆಸಿಡೆಂಟ್ ಕಮ್ ಹೆಚ್.ಆರ್. ಮುಖ್ಯಸ್ಥ. ಕೆಲಸಕ್ಕೆ ಬೇಕಾದ ಜನರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ಇಂತಿಷ್ಟು ವರ್ಷವಾದ ಮೇಲೆ ಪರ್ಮನೆಂಟ್ ಲೆಟರ್ ಕೊಡ್ತೀವಿ ಅಂತ ಪುಸಲಾಯಿಸಿಕೊಂಡೇ ಬರುತ್ತಿದ್ದರು. ಸಿಗಬೇಕಾದ ವೇತನವಾಗಲಿ, ಇತರೆ ಸೌಲಭ್ಯಗಳಾಗಲಿ ಒಂದೂ ಸಿಕ್ಕಿರಲಿಲ್ಲ, ಆಸೆಗಣ್ಣಲ್ಲಿ ದುಡಿದ ಮಂದಿಗೆ ಇನ್ಸೆಂಟಿವ್ಸ್ ಅಂತ ನೀಡಿದ್ದು ಕೇವಲ 650 ರೂಪಾಯಿಗಳನ್ನು ಮಾತ್ರ, ಅದೂ 3 ವರ್ಷಗಳ ನಂತರದಲ್ಲಿ. ಕಾದದ್ದು ಅವರಿಗೂ ಸಾಕೆನಿಸಿರಬೇಕು, ತಮ್ಮನ್ನು ಕಾಯಂ ಮಾಡಿಕೊಂಡು ಜಾಸ್ತಿ ಸಂಬಳ ನೀಡಬೇಕೆಂದು ದುಂಬಾಲು ಬಿದ್ದಿದ್ದಾರೆ. ಇದ್ಯಾವುದನ್ನೂ ಕಿವಿಗೆ ಹಾಕಿಕೊಳ್ಳದ ಆಡಳಿತ ಮಂಡಳಿ ಕಾರ್ಮಿಕರ ತಾಳ್ಮೆಯನ್ನು ಪರೀಕ್ಷಿಸಿಕೊಂಡೇ ಬಂದಿದೆ. ಅವರ ಇಂತ ನಿರ್ಲಕ್ಷ್ಯಕ್ಕೆ ನಮ್ಮಲ್ಲಿ ಒಗ್ಗಟ್ಟಿಲ್ಲದಿರುವುದೇ ಕಾರಣ ಅನ್ನೊ ಸೂಕ್ಷ್ಮವನ್ನು ಅರಿತ ಕಾರ್ಮಿಕರು 2009 ಅಕ್ಟೋಬರ್‌ನಲ್ಲಿ ವೋಲ್ವೋ ಬಸ್ ವರ್ಕರ್ಸ್ ಯೂನಿಯನ್ ಸಂಘಟನೆಯನ್ನು ಕಟ್ಟಿಕೊಂಡು ವ್ಯವಸ್ಥಿತ ಹೋರಾಟಕ್ಕಿಳಿದಿದ್ದರು. ಆಡಳಿತ ವರ್ಗದವರನ್ನು ಅತಿಯಾಗಿ ಕೆರಳಿಸಿದ್ದೇ ಆ ಸಂಘಟನೆಯ ಸ್ಥಾಪನೆ. ಯಾಕೆಂದರೆ ದೇಶಾಂತರ ಸುತ್ತಿ ಬಂದ ಮಂದಿ ಅವರು, ಸಂಘ ಅಂತ ಹುಟ್ಟಿಕೊಂಡ ಮೇಲೆ ತಮ್ಮ ನಯವಂಚಕತನದ ಕೆಲಸಗಳಿನ್ನು ನಡೆಯುವುದಿಲ್ಲ ಎಂಬುದರ ಅರಿವಾದದ್ದೇ ತಡ ಶತಾಯಗತಾಯ ಸಂಘಟನೆಯನ್ನು ಹೊಡೆದು ಇಬ್ಭಾಗ, ಮುಬ್ಭಾಗ ಮಾಡಬೇಕೆನ್ನುವ ಜಿದ್ದಿಗೆ ಬಿದ್ದಿದ್ದಾರೆ. ಮೊದಮೊದಲು ಅವರು ಕೇಳಿದಂತೆ ವೇತನವನ್ನು ಜಾಸ್ತಿ ಮಾಡಿ, ಪ್ರೊಬೆಷನರಿಯಲ್ಲಿದ್ದ ಕೆಲವರಿಗೆ ಪರ್ಮನೆಂಟ್ ಲೆಟರನ್ನೂ ಕೊಟ್ಟಂತೆ ಮಾಡಿದ್ದಾರಾದರೂ, ಯೂನಿಯನ್‌ನಲ್ಲಿದ್ದ ಕೆಲವರಿಗೆ ಹಣ ಮತ್ತು ಅಧಿಕಾರದ ಆಮಿಷವನ್ನು ತೋರಿಸುವ ಕುಯುಕ್ತಿಗೂ ಮುಂದಾಗಿದ್ದಾರೆ, ಅದು ಯಾವಾಗ ಫಲಿಸಲಿಲ್ಲವೋ ಆಡಳಿತ ಮಂಡಳಿಯ ದೃಷ್ಟಿ ನೆಟ್ಟದ್ದು ಯೂನಿಯನ್‌ನ ಅಧ್ಯಕ್ಷ ಸಂತೋಷ್ ಬಿ.ಎಸ್ ಹಾಗೂ ಕಾರ್ಯದರ್ಶಿ ಡಿ.ದಯಾನಂದರ ಮೇಲೆ. ಪ್ರಮುಖರನ್ನು ಕಿತ್ತೆಸೆದು ಸಂಘಟನೆಯ ಬಲವನ್ನು ಕುಗ್ಗಿಸಿದರೆ ಎಲ್ಲಾ ಸಲೀಸಾಗಿಬಿಡುತ್ತೆ ಎಂಬ ಆಡಳಿತ ವರ್ಗದ ಪ್ಲಾನು ತುಂಬಾ ನೀಟಾಗಿ ಯೋಜಿತವಾಗಿತ್ತು.

ಅಲ್ಲಿಯ ತೀರಾ ಸಾಮಾನ್ಯ ಸಮಸ್ಯೆಗಳಾಗಿದ್ದ ಮ್ಯಾನೇಜರ್ ಹಾಗೂ ಇಂಜಿನಿಯರ್‌ಗಳು ನೀಡುತ್ತಿದ್ದ ದೈಹಿಕ ಹಿಂಸೆ ಮತ್ತು ಪ್ರೊಬೆಷನರಿಗಳ ಕಾಯಮಾತಿಯ ಕುರಿತು ಚರ್ಚಿಸಲು ಯೂನಿಯನ್ 2010 ರ ಏಪ್ರಿಲ್‌ನ ಆದೊಂದು ದಿನ ಕೆಲಸವೆಲ್ಲ ಮುಗಿದ ಮೇಲೆ ಸಭೆ ನಡೆಸಲು ತೀರ್ಮಾನಿಸಿದೆ. ಇದರ ಸುಳಿವು ಸಿಕ್ಕ ಆಡಳಿತ ವರ್ಗ 5.40ಕ್ಕೆ ಹೊರಡಬೇಕಿದ್ದ ಕಾರ್ಮಿಕರ ಬಸ್ ಅನ್ನು 5.30ಕ್ಕೆ ತಂದು ನಿಲ್ಲಿಸಿ ಕೆಲಸ ಮುಗಿಯುವುದಕ್ಕೂ ಮುನ್ನವೇ ಹೊರಡುವಂತೆ ಅವಸರಿಸಿದ್ದಾರೆ. ಶಿವರ್ ಹೆಲ್ಮತ್, ನೋಯಲ್ ಮತ್ತು ರಘುರಾಮ್ ಎಂಬ ಮ್ಯಾನೇಜರ್ ದರ್ಜೆಯ ಅಧಿಕಾರಿಗಳು ತುಸು ಖಾರವಾಗಿಯೇ ಜಾಗ ಖಾಲಿ ಮಾಡುವಂತೆ ಆದೇಶ ಹೊರಡಿಸಲು ಮುಂದಾದಾಗ ನಾನೂರಕ್ಕೂ ಹೆಚ್ಚಿದ್ದ ಕಾರ್ಮಿಕರ ಸಮೂಹ ಸೂಕ್ತ ಕಾರಣ ಕೇಳಲು ಮುಂದಾಗಿದೆ. ಸಹಜವಾಗಿಯೆ ಅಲ್ಲೊಂದಷ್ಟು ನೂಕುನುಗ್ಗಲು ನಿರ್ಮಾಣವಾಗಿದೆ. ಎಲ್ಲವನ್ನೂ ಯೋಜಿಸಿಕೊಂಡಂತಿದ್ದ ಆಡಳಿತ ವರ್ಗ ಅದನ್ನೇ ಭಾರಿ ಪ್ರಮಾಣದ ಗಲಾಟೆಯಂತೆ ಬಿಂಬಿಸಿ ಆಡಳಿತ ವರ್ಗದವರ ಮೇಲೆ ಯೂನಿಯನ್‌ನವರ ಹಲ್ಲೆ ಅನ್ನುವ ಕಂಪ್ಲೇಂಟನ್ನು ಗೀಚಿ, ಅದರಲ್ಲಿ ಸಂಘಟನೆಯ ಮುಂಚೂಣಿಯಲ್ಲಿದ್ದ ಸಂತೋಷ್, ದಯಾನಂದ್ ಹಾಗೂ ಇನ್ನಿಬ್ಬರು ಪದಾಧಿಕಾರಿಗಳನ್ನು ಪ್ರಮುಖರನ್ನಾಗಿಸಿ, ಅವರ ಮೇಲೆ ಆರೋಪವನ್ನು ಹೊರಿಸಿದೆ. ಅದೇ ನೆಪವನ್ನು ನೀಡಿ ಆ ನಾಲ್ಕು ಜನರನ್ನು ಸಸ್ಪೆಂಡ್ ಮಾಡಿ ತಾನಂದುಕೊಂಡಿದ್ದ ಕಾರ್ಯವನ್ನು ನೀಟಾಗಿ ಸಾಧಿಸಿಕೊಂಡಿದೆ.

ಯೂನಿಯನ್‌ಗೆ ಇನ್ನು ಜೀವವಿಲ್ಲ ಎಂಬ ನಂಬಿಕೆಯಲ್ಲಿ ಕೆಲಸಗಾರರನ್ನು ಹೊಡೆಯುವುದು, ಸಣ್ಣಪುಟ್ಟದಕ್ಕೆಲ್ಲ ನೋಟಿಸ್ ನೀಡುವುದು, ಕಾರಣವಿಲ್ಲದೆ ಪೊಲೀಸ್ ಕಂಪ್ಲೇಂಟ್ ಕೊಟ್ಟು ಬೆದರಿಸುವುದು ಹೀಗೆ ನೆಲಕ್ಕೆ ಬಿದ್ದ ಸಂಘಟನೆ ಮತ್ತೆ ಮೇಲಕ್ಕೆ ಏಳಲೇಬಾರದೆಂಬಂತೆ ತುಳಿಯುವ ಕಸರತ್ತುಗಳನ್ನು ಮೇಲಿಂದ ಮೇಲೆ ಮಾಡಿಕೊಂಡೆ ಬಂದಿದೆ. ರೋಸಿಹೋದ ಕಾರ್ಮಿಕರು ತಮ್ಮದೇ ಸಂಘಟನೆಯ ಮೂಲಕ ಆಗಸ್ಟ್ 8 ರಂದು ಸಾಮೂಹಿಕವಾಗಿ ಮುಷ್ಕರಕ್ಕೆ ಕುಳಿತಿದ್ದಾರೆ. ಆಗ ಸ್ವಲ್ಪ ವಿಚಲಿತರಾದಂತೆ ನಟಿಸಿದ ಆಡಳಿತದವರು ನಿಮ್ಮ ಎಲ್ಲ ಬೇಡಿಕೆಗಳನ್ನೂ ಆದ್ಯತೆ ಮೇಲೆ ಈಡೇರಿಸುತ್ತೇವೆ, ಆದರೆ ಆ ನಾಲ್ಕು ಜನರ ಅಮಾನತ್ತೊಂದನ್ನು ಬಿಟ್ಟು ಎಂಬ ರಾಜಿ ಸೂತ್ರವನ್ನು ಮುಂದಿರಿಸಿತ್ತು. ಆ ಪರಿಹಾರದ ನಾಟಕದಲ್ಲೂ ಸಹ ಇತರರಿಗೆ ಈಡೇರಿಕೆಯ ಆಸೆ ತೋರಿಸಿ ಸಂಘಟನೆಯನ್ನು ಸಂಪೂರ್ಣವಾಗಿ ಸೋಲಿಸುವ ಅವರ ಇರಾದೆ ಎದ್ದು ಕಾಣುತ್ತದೆ. ಹಾಗಾಗಿ ಅವರ್‍ಯಾರೂ ಅದಕ್ಕೆ ಸೊಪ್ಪು ಹಾಕಿಲ್ಲ, ಇನ್ಮುಂದೆ ಅದೇ ನಮ್ಮ ಪ್ರಮುಖ




ಬೇಡಿಕೆ ಎಂಬ ಗಟ್ಟಿ ನಿರ್ಧಾರಕ್ಕೆ ಬಂದಿದ್ದಾರೆ. ಈ ದೌರ್ಜನ್ಯ ಕೊನೇ ಪಕ್ಷ ಸರ್ಕಾರದ ಗಮನಕ್ಕಾದರೂ ಬರುವಂತಾದರೆ ತಮ್ಮ ಕಷ್ಟದ ಬಗ್ಗೆ ಹರಿಯಬಹುದೆಂಬ ಅವರ ವಿಶ್ವಾಸಕ್ಕೆ ಇದೀಗ 50 ದಿನ ತುಂಬಿದರೂ, ಸರ್ಕಾರ ಮತ್ತು ಸಚಿವರ ಅಸಡ್ಡೆಯೇ ಉತ್ತರವಾಗಿ ಕೂತಿದೆ.

ಸೆ. 16 ರಂದು ಮುಖ್ಯಮಂತ್ರಿ ಮನೆ ಚಲೋ ಎಂಬ ಜಾಥಾ ಮೂಲಕ ಖುದ್ದು ಸಿ.ಎಂ ಮುಂದೆಯೇ ಅಷ್ಟು ಜನ ಒಟ್ಟಾಗಿ ತಮ್ಮ ಅಳಲನ್ನು ತೋಡಿಕೊಂಡು ಬಿಡೋಣ ಅಂತ ನಿರ್ಧರಿಸಿದ್ದರು. ಆದರೆ ಪೊಲೀಸ್ ಅನುಮತಿಯ ಮೇರೆಗೆ ಕೇವಲ ಮುಖಂಡರು ಮಾತ್ರ ಸಿ.ಎಂ ಭೇಟಿಮಾಡಲು ಅವಕಾಶ ಕಲ್ಪಿಸಲಾಗಿತ್ತು, ಇವರು ಬರೆದುಕೊಂಡು ಹೋದ ಅರ್ಜಿ ಮಾನ್ಯ ಮುಖ್ಯಮಂತ್ರಿಗಳ ಫೈಲು ಸೇರಿದರೆ, ಕಾರ್ಮಿಕ ಸಚಿವ ಹಾಗೂ ಕಾರ್ಯದರ್ಶಿಯೊಡನೆ ಸಮಾಲೋಚಿಸಿ ನಿಮಗೆ ಒಳ್ಳೇದನ್ನೆ ಮಾಡ್ತೀನಿ ಅನ್ನೊ ಭರವಸೆ ಮಾತ್ರ ಇವರಿಗೆ ಸಿಕ್ಕಿತು. ಆಡಳಿತ ಮಂಡಳಿ ಕಾನೂನು ಬಾಹಿರವಾಗಿ ಹೊಸ 900 ಗುತ್ತಿಗೆ ಆಧಾರದ ನೌಕರರನ್ನು ನೇಮಿಸಿಕೊಂಡು ಮತ್ತೊಂದು ಸುತ್ತಿನ ದೌರ್ಜನ್ಯಕ್ಕೆ ಮುಂದಾಗಿದೆ. ಸರ್ಕಾರವೊಂದು ಅಸ್ತಿತ್ವದಲ್ಲಿರುವ ನಾಡಲ್ಲಿ ನಡೆಯುವ ಕೃತ್ಯವಿದಲ್ಲ, ಆದರೂ ಇವರ ಪಾಲಿಗೆ ಸರ್ಕಾರ ಇರುವುದೇ ಸಂಶಯಾಸ್ಪದವಾಗಿದೆ.

ದೌರ್ಜನ್ಯದ ವಿರುದ್ಧದ ಕೂಗಿಗೆ 50 ದಿನಗಳ ಆಯಸ್ಸು ಪೂರೈಸಿದರೂ ನ್ಯಾಯ ಸಿಕ್ಕಿಲ್ಲವೆಂದರೆ ಸರ್ಕಾರಗಳು ಅದೆಷ್ಟು ಕರ್ತವ್ಯಭ್ರಷ್ಟವಾಗಿ ಕುಳಿತಿವೆ ಎಂಬುದು ಸ್ಪಷ್ಟವಾಗುತ್ತದೆ. ಎಂ.ಎನ್.ಸಿ ಕಂಪನಿಗಳ ಮೈಮೇಲೆ ಬಿದ್ದು ಸ್ವಾಗತಿಸುವ ,ರೈತರ ಒಕ್ಕಲೆಬ್ಬಿಸಿ ಭೂಧಾರೆ ಎರೆಯುವ ಸರ್ಕಾರಗಳಿಗೆ ಇಂತಹ ಸಮಯದಲ್ಲಿ ಶೋಷಿತರ ಪರ ನಿಲ್ಲಬೇಕೆಂಬ ಕನಿಷ್ಠ ಮಟ್ಟದ ಪಾಠವನ್ನು ಹೇಳಬೇಕಾಗಿರುವುದು ವಿಪರ್ಯಾಸವೇ ಸರಿ!

• ಗಿರೀಶ್ ತಾಳಿಕಟ್ಟೆ




ಜೇಮ್ಸ್

ಯೂನಿ ಪೇ ಬ್ಲೇಡು ಕಂಪೆನಿ ಮುಂಡಾಯಿಸಿದ್ದು ಇನ್ನೂರೈವತ್ತು ಕೋಟಿ

ಬ್ಲೇಡ್ ಕಂಪೆನಿಗಳ ಅಬ್ಬರಾಟ ಎಣೆಯಿಲ್ಲದೆ ವಿಜೃಂಭಿಸುತ್ತಿದೆ. ವಿಪರ್ಯಾಸವೆಂದರೆ, ಹಠಾತ್ತನೆ ಕೋಟ್ಯಾಧೀಶರಾಗುವ ತೆವಲಿಗೆ ಬಿದ್ದ ಜನ ಬರ್ಬಾದಾದ ಉದಾಹರಣೆ ಕಣ್ಣೆದುರಿಟ್ಟುಕೊಂಡೇ ಹೊಸ ಬ್ಲೇಡಿಗೆ ಕುತ್ತಿಗೆ ಒಪ್ಪಿಸುತ್ತಿದ್ದಾರೆ. ಇಂಥಾದ್ದೇ ಜಾಯಮಾನದ ಇನ್ನೊಂದು ಕಂಪೆನಿಯ ಭಯಾನಕ ವಂಚನೆ ಮತ್ತು ಅದಕ್ಕೆ ತುತ್ತಾದವರ ಅತಂತ್ರ ಬದುಕುಗಳ ಚಿತ್ರಣ ಇದೀಗ ಹೊಸದಾಗಿ ಹೊರಬಿದ್ದಿದೆ.

ಸದ್ಯ ಇಡೀ ಭಾರತದಾದ್ಯಂತ ಅಸಂಖ್ಯ ಜನರನ್ನು ಮುಂಡಾಯಿಸಿ ಸುದ್ದಿಯಲ್ಲಿರುವ ಬ್ಲೇಡ್ ಕಂಪೆನಿ ಯೂನಿ ಪೇ. ಸದರಿ ಕಂಪೆನಿ ಬೆಂಗಳೂರೊಂದರಲ್ಲೇ ಇನ್ನೂರೈವತ್ತು ಕೋಟಿಯಷ್ಟು ಹಣವನ್ನು ದೋಚಿಕೊಂಡಿದೆ. ಇದೀಗ ರಂಗುರಂಗಿನ ಕಥೆ ಕಟ್ಟಿ ಸಾವಿರಾರು ಮಂದಿಯನ್ನು ಖೆಡ್ಡಾಕ್ಕೆ ಕೆಡವಿಕೊಂಡಿದ್ದವರು ನಾಪತ್ತೆಯಾಗಿದ್ದಾರೆ. ಬಣ್ಣದ ಮಾತು ನಂಬಿ ಸಾಲ ಮಾಡಿ ಲಕ್ಷಾಂತರ ರೂಪಾಯಿಗಳಷ್ಟು ಹೂಡಿಕೆ ನಡೆಸಿದವರು, ಪರಿಚಿತರಿಂದಲೂ ಹಣ ಹೂಡಿಸಿದವರೆಲ್ಲಾ ಅಕ್ಷರಶಃ ಕಂಗಾಲಾಗಿದ್ದಾರೆ. ಯೂನಿ ಪೇ ಕಂಪೆನಿ ನಡೆಸಿರುವ ಅನಾಹುತಗಳು ಅದಕ್ಕೆ ಪೂರಕವಾಗಿವೆ.

ಯೂನಿ ಪೇ ಎಂಬ ವಂಚಕ ಕಂಪೆನಿಯ ವಿರುದ್ಧ ಕರ್ನಾಟಕದ ನಾನಾ ಕಡೆ ಮತ್ತು ಬೆಂಗಳೂರಿನಲ್ಲಿ ಜನ ದೂರು ನೀಡಿದ್ದರು. ಪೊಲೀಸರು ಇದು ಹತ್ತರಲ್ಲಿ ಹನ್ನೊಂದನೆಯದ್ದೆಂದು ತೆಪ್ಪಗಾದ ಪರಿಣಾಮವಾಗಿ ವಂಚನೆಯ ಪುರಾಣ ಹೊರಬಂದಿರಲಿಲ್ಲ, ಆದರೆ ದೊಡ್ಡಮಟ್ಟದಲ್ಲಿ ಮುಂಡಾಯಿಸಿಕೊಂಡಿದ್ದ ಒಂದಷ್ಟು ಮಂದಿ ಬೆಂಗಳೂರಿನ ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲೊಂದು ದೂರು ದಾಖಲಿಸಿದರು. ಆ ದೂರಿನಲ್ಲಿ ಪ್ರಮುಖವಾಗಿ ದಾಖಲಾಗಿದ್ದದ್ದು ಎಸ್.ವಿ.ಮೋಹನ್ ಕುಮಾರ್ ಹಾಗೂ ಬಿ.ಎಂ. ರವಿರಾಜ್ ಎಂಬ ಎರಡು ಹೆಸರು. ಇವರಿಬ್ಬರನ್ನು ಎಳೆತಂದು ಜೈಲಿಗೆ ಗದುಮಿದ ಇನ್ಸ್‌ಪೆಕ್ಟರ್ ಪೂವಯ್ಯ ಯೂನಿ ಪೇ ಕಂಪೆನಿಯ ಅಗಾಧ ವಂಚನೆಯ ವಿವರ ಕಂಡು ಸ್ವತಃ ಕಂಗಾಲಾಗಿದರು.

ಯೂನಿ ಪೇ ಕಂಪೆನಿ ಬೆಂಗಳೂರಿನಲ್ಲಿ ಆರಂಭವಾದದ್ದು 2009ರಲ್ಲಿ, ಇದರ ಮುಖ್ಯಸ್ಥ ಜೇಮ್ಸ್ ಮುಕುಂದ್. ತಮಿಳುನಾಡು ಮೂಲದವನಾದ ಜೇಮ್ಸ್ ಮಲೇಷಿಯಾ ಸೇರಿಕೊಂಡು ತುಂಬಾ ವರ್ಷಗಳಾಗಿವೆ. ಆತನಿಗೆ ಬೇರೆಬೇರೆ ವಲಯಗಳಲ್ಲಿ ದೊಡ್ಡ ಮಟ್ಟದ ಕಾಂಟ್ರ್ಯಾಕ್ಟುಗಳೂ ಇವೆ. ಇದರ ಬಲದಿಂದಲೇ ಭಾರತವನ್ನು ಗುರಿಯಾಗಿಸಿಕೊಂಡು ಯೂನಿ ಪೇ ಹೆಸರಿನ ಬ್ಲೇಡ್ ಕಂಪೆನಿ ಸ್ಥಾಪಿಸಿದ್ದ. ಹಂತಹಂತವಾಗಿ ವಿವಿಧ ರಾಜ್ಯಗಳಲ್ಲಿ ಕಂಪೆನಿ ಸ್ಥಾಪಿಸಿ ಅಕ್ಷರಶಃ ದರೋಡೆ ನಡೆಸಿದ. ತನ್ನ ಹೈಲೆವೆಲ್ ಸಂಪರ್ಕ, ಕೇಂದ್ರ ಮಟ್ಟದ ರಾಜಕೀಯ ಪುಢಾರಿಗಳ ಸಾಹಚರ್ಯ ಎಲ್ಲದರಿಂದಲೂ ಬಚಾವಾಗುತ್ತಾ ಬಂದ.

ಹಾಗೆಯೇ ಕರ್ನಾಟಕಕ್ಕೆ ಕಾಲಿರಿಸಿದ ಜೇಮ್ಸ್ ಮುಕುಂದನ ಸಂಪರ್ಕಕ್ಕೆ ಬಂದವನು ಬೆಂಗಳೂರಿನ ಮಾರತಹಳ್ಳಿ ನಿವಾಸಿ ಹಾಗೂ ಎಚ್‌ಎಎಲ್ ಇಂಜಿನಿಯರ್ ಮೋಹನ್. ಎಚ್‌ಎಎಲ್‌ನ ಲೈಟ್‌ವೆಯಿಟ್ ಹೆಲಿಕಾಪ್ಟರ್ ತಯಾರಿಕಾ ವಿಭಾಗದಲ್ಲಿ ಕಸುಬು ನಡೆಸುವ ಮೋಹನ್‌ಗೆ ಹಣಕಾಸಿಗೆ ಯಾವುದೇ ರೀತಿಯ ತೊಂದರೆಯಿರಲಿಲ್ಲ, ಆದರೆ ಅತಿಯಾಸೆಗೆ ಕಟ್ಟು ಬಿದ್ದ ಆತ ಕರ್ನಾಟಕದ ಜನರನ್ನು ವಂಚಿಸುವ ಕೆಲಸವನ್ನು ವಹಿಸಿಕೊಂಡ. ಮೊದಲಿಗೆ ಮೋಹನ್‌ನ ಪ್ರಮುಖ ಟಾರ್ಗೆಟ್ ಆಗಿದ್ದದ್ದು ಬೆಂಗಳೂರು!

'ನೀವು ಹೂಡಿದ ದುಡ್ಡನ್ನ ಮಲೇಷ್ಯಾದ ಫೇಮಸ್ ಕಂಪೆನಿಗಳಲ್ಲಿ ತೊಡಗಿಸುತ್ತೇನೆ. ಅದರಿಂದಲೇ ವರ್ಷದೊಪ್ಪತ್ತಲ್ಲಿ ನಿಮ್ಮ ಹಣ. ದುಪ್ಪಟ್ಟಾಗಿ ವಾಪಸಾಗುವಂತೆ ಮಾಡುತ್ತೇನೆ'- ಇಂತಹುದೊಂದು ವಂಚನಾ ಮಂತ್ರದೊಂದಿಗೆ ಜೇಮ್ಸ್ ಮುಕುಂದ್ ಬೆಂಗಳೂರಿಗೆ ಅಡಿಯಿರಿಸಿದ. ಮೋಹನ್ ಅದನ್ನೇ ಎಲ್ಲೆಡೆ ಪಸರಿಸಿಕೊಂಡು ಓಡಾಡಲಾರಂಭಿಸಿದ. ಇದನ್ನ ದುರಂತವೆನ್ನಬೇಕೋ, ವಿಪರ್ಯಾಸವೆನ್ನಬೇಕೋ.... ಮೋಹನ್‌ನ ವಂಚನೆಗೆ ಮೊದಲು ತಲೆಕೊಟ್ಟದ್ದು ಆತ ಕೆಲಸ ಮಾಡುವ ಎಚ್‌ಎಎಲ್‌ನ ವಿದ್ಯಾವಂತ ನೌಕರರು. ಎಚ್‌ಎಎಲ್‌ನ ಅಖಂಡ 680 ಮಂದಿ ಯೂನಿ ಪೇ ಕಂಪೆನಿಗೆ ಹಣ ಹೂಡಿ ದುಪ್ಪಟ್ಟಾಗಿ ವಾಪಸಾಗುವುದನ್ನೇ ಎದುರುನೋಡತೊಡಗಿದರು. ಇವರೆಲ್ಲ ತೊಡಗಿಸಿದ ಒಟ್ಟು ಹಣದ ಮೊತ್ತವೇ ಎರಡುಕೋಟಿ ಎಂಬತ್ತೈದು ಲಕ್ಷ!

ಒಂದೇ ಏಟಿಗೆ ಭಾರೀ ಮೊತ್ತದ ಹಣ ಹೂಡಿಸಿದ ಮೋಹನ್ ಜೇಮ್ಸ್‌ಗೆ ಹತ್ತಿರದವನಾದ. ಜೊತೆಗೆ ತಿಂಗತಿಂಗಳು ಲಕ್ಷಾಂತರ ರೂಪಾಯಿ ಕಮಿಷನ್ ಪಡೆದು ದುಂಡಗಾಗತೊಡಗಿದ. ಹತ್ತು ತಿಂಗಳಲ್ಲಿ ಹಾಕಿದ ಹಣ ವಾಪಸಾಗುತ್ತೆ ಆಮೇಲೆ ಡಬ್ಬಲ್ಲಾಗಿ ಕೈ ಸೇರುತ್ತೆ?' ಅನ್ನುತ್ತಲೇ ಮೋಹನ್ ಬೆಂಗಳೂರು ತುಂಬಾ ನೂರಾರು ಮಂದಿಯಿಂದ ಹಣ ಹೂಡಿಸಿದ್ದ. ಇಷ್ಟೊತ್ತಿಗಾಗಲೇ ಮೋಹನನ ಜೊತೆಗೆ ಎಂ.ಎಸ್.ಪಾಳ್ಯದ ಸಿಂಗಾಪುರ ಬಡಾವಣೆಯ ರವಿರಾಜ್ ಹಾಗೂ ಸುದರ್ಶನ್, ಎಂ.ಎಂ.ರೆಡ್ಡಿಗಳು ಸೇರಿಕೊಂಡಿದ್ದರು. ಇವರೆಲ್ಲ ವಂಚಕರು ಸೇರಿಕೊಂಡು ಮಾಡಿದ್ದು ಮಹಾವಂಚನೆಯನ್ನು.

ಆರಂಭಿಕ ಹೂಡಿಕೆದಾರರಿಗೆಲ್ಲಾ ಪ್ರತಿತಿಂಗಳು ಸರಿಯಾಗಿ ಕಮೀಷನ್ ಕೊಟ್ಟು ನಂಬಿಕೆ ಹುಟ್ಟಿಸಿದ ಮೋಹನನ ವಂಚಕ ಗ್ಯಾಂಗು ಇನ್ನಷ್ಟು ಜನರನ್ನು ಬಲಿಬೀಳಿಸಲು ಹೊಸದೊಂದು ಸ್ಕೀಮು ರೆಡಿಮಾಡಿತು. ಅದರನ್ವಯ ಪ್ರತಿತಿಂಗಳು ಹೈಟೆಕ್ ಹೋಟೆಲ್‌ಗಳಲ್ಲಿ ಯೂನಿ ಪೇ ಕಂಪೆನಿಯ ಸಭೆಗಳು ನಡೆಯತೊಡಗಿದವು. ಜೇಮ್ಸ್ ಮುಕುಂದ್ ಬೇರೆ ಬೇರೆ ರಾಜ್ಯ ದೇಶಗಳ ಹೂಡಿಕೆದಾರರೆಂದು ಯಾರ್ಯಾರನ್ನೋ ಕರೆತಂದು ಪೋಸು ಕೊಡಲಾರಂಭಿಸಿದ. ಅವರೆಲ್ಲ ಕಂಪೆನಿಯ ಬಗ್ಗೆ ಹೀನಾಮಾನ ನಂಬಿಕೆ ಹುಟ್ಟಿಸುವಂತೆ ಮಾತಾಡಿ ತಿಂದ ಎಂಜಲ ಋಣ ತೀರಿಸಿದರೆ, ಜನ ಸಾಲುಸಾಲಾಗಿ ಹಣ ಹೂಡಲಾರಂಭಿಸಿದರು.

ಆ ಬಳಿಕ ಆರಂಭವಾದದ್ದು ಮಹಾ ವಂಚನೆಯ ಅಸಲೀ ಅಧ್ಯಾಯ. ಮೋಹನ್ ಯೂನಿ ಪೇ ವಂಚನಾ ಸಾಮ್ರಾಜ್ಯವನ್ನು ಬೆಂಗಳೂರಿನಿಂದ ಕರ್ನಾಟಕದಾದ್ಯಂತ ಹರಡಿಸಲು ಕಂಕಣ ತೊಟ್ಟ. ಆತನ ಹಿಂದಿದ್ದ ವಂಚಕರೂ ಅದಕ್ಕೆ ಸಾಥ್ ನೀಡಿದರು. ಯಾಕೆಂದರೆ ಅವರಿಗಾಗಲೇ ಪ್ರತೀ ತಿಂಗಳು ಇಪ್ಪತ್ತು ಲಕ್ಷಕ್ಕೂ ಅಧಿಕ ಪರ್ಸೆಂಟೇಜು ಬರತೊಡಗಿತ್ತು, ಇದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ದುರಾಸೆಯಿಂದ ಕರ್ನಾಟಕ ಟೂರು ಹೊಡೆದು ಪ್ರಮುಖ ಏರಿಯಾಗಳಲ್ಲಿ ಏಜೆಂಟರುಗಳನ್ನು ತಯಾರು ಮಾಡಿದರು.

ಇಂಥ ಏಜೆಂಟರು ಯಾವ ರೀತಿ ಯಾಮಾರಿದರೆಂದರೆ, ತಾವು ಹಣ ಹೂಡಿದ್ದಲ್ಲದೆ ಸಂಬಂಧಿಕರು, ಪರಿಚಯಸ್ಥರು ಹೀಗೆ ಎಲ್ಲರಿಂದಲೂ ಹಣ ಎತ್ತಿ ಮೋಹನನ ವಂಚಕರ ಗ್ಯಾಂಗ್‌ನ ಕೈಗೆ ಕೊಟ್ಟರು. ಅಂದಹಾಗೆ ಈ ಹೂಡಿಕೆಯ ಮೀಟರ್ ಲಕ್ಷದಿಂದ ಆರಂಭವಾಗಿ ಕೋಟಿಗೂ ಮುಟ್ಟಿಕೊಂಡಿತ್ತು!

ನೋಡನೋಡುತ್ತಲೇ ಊರು ತುಂಬಾ ಯೂನಿ ಪೇ ಹೂಡಿಕೆದಾರರು ಹುಟ್ಟಿಕೊಂಡರು. ಮೋಹನನ ಪಟಾಲಂ ಆರಂಭದ ಒಂದಷ್ಟು ತಿಂಗಳು ಅವರಿಗೆಲ್ಲ ಸರಿಯಾಗಿ ಕಮೀಷನ್ ತಲುಪುವಂತೆ ನೋಡಿಕೊಂಡಿದ್ದೇ ಅತಿಯಾಸೆಗೆ ಬಿದ್ದು ಬುದ್ಧಿಭ್ರಮಣೆಗೊಂಡಂತಾದ ಹೂಡಿಕೆದಾರರು ಮತ್ತೊಂದಷ್ಟು ಮಂದಿಯನ್ನು ಸೇರಿಸಲಾರಂಭಿಸಿದರು. ಹೀಗೆ ಬೇರೆಯವರನ್ನು ಸೇರಿಸಿಕೊಂಡ ಹೂಡಿಕೆದಾರರಿಗೆ ಏಜೆಂಟ್ ಆಗಿ ಬಡ್ತಿ ನೀಡಿ ಮತ್ತಷ್ಟು ಹೂಡಿಕೆಗೆ ಪ್ರೋತ್ಸಾಹಿಸುವ ಸ್ಕೀಮು ಕೂಡಾ ವಂಚಕರ ಕಡೆಯಿಂದ ರೆಡಿಯಾಯಿತು.


ಮೋಹನ್

ಇದರಲ್ಲಿ ಯಾರ್ಯಾರು ಹಣ ಹೂಡಿದ್ದಾರೆಂದು ನೋಡಹೋದರೆ ಆಶ್ಚರ್ಯವಾಗುತ್ತದೆ. ಗಾಬರಿಯೂ ಆಗುತ್ತದೆ. ಹೆಚ್ಚು ಹಣ ಹೂಡಿದವರು ಭಯಂಕರ ವಿದ್ಯಾವಂತರು. ಬ್ಯಾಂಕ್ ಕೆಲಸಗಾರರು, ವಕೀಲರು-ಹೀಗೆ ಬುದ್ಧಿವಂತರೆಂದು ಕರೆಸಿಕೊಳ್ಳುವ ಮಂದಿಯೇ ಮೊದಲು ಬಲಿಬಿದ್ದಿದ್ದಾರೆ. ಇಂಥವರಲ್ಲೇ ಕೆಲವರು ಏಜೆಂಟಾಗಿ ಬಡ್ತಿ ಹೊಂದಿ ಬಡಬಗ್ಗರನ್ನು ಬಲಿ ಬೀಳಿಸಿದ್ದಾರೆ. ಸೈಟು ಅಡ ಇಟ್ಟು ಸಾಲ ಪಡೆದವರು, ಚಿನ್ನಾಭರಣ ಗಿರವಿಯಿಟ್ಟವರು, ಮಾಂಗಲ್ಯವನ್ನೂ ಧಾರಾಳವಾಗಿ ತೆಗೆದುಕೊಟ್ಟು ಭಾರೀ ಹಣದ ಕನಸು ಕಂಡವರೆಲ್ಲಾ ಇದೀಗ ಯೂನಿ ಪೇ ಕಂಪೆನಿಯ ಮಹಾ ಮೋಸಕ್ಕೆ ಸಿಕ್ಕು ಆತ್ಮಹತ್ಯೆಯೊಂದೇ ಉಳಿದಿರುವ ಏಕೈಕ ಹಾದಿಯೆಂಬಂಥ ದಯನೀಯ ಸ್ಥಿತಿ ತಲುಪಿದ್ದಾರೆ.

ವಾಸ್ತವವೆಂದರೆ ಜನರು ಮುಗಿಬಿದ್ದು ಯೂನಿ ಪೇಯಲ್ಲಿ ಹಣ ಹೂಡಲಾರಂಭಿಸುವ ಹೊತ್ತಿಗಾಗಲೇ ಮೋಹನನ ಪಟಾಲಂ ಕಂಪೆನಿಯ ಮುಖ್ಯಸ್ಥ ಜೇಮ್ಸ್‌ನನ್ನೇ ಯಾಮಾರಿಸಲು ಶುರುವಿಟ್ಟಿತ್ತು. ಹೂಡಿಕೆಯ ಹಣವನ್ನು ಕಂಪೆನಿಯ ಅಕೌಂಟಿಗೆ ಜಮಾ ಮಾಡಬೇಕು. ಆದರೆ ಈ ವಂಚಕರು ಲಕ್ಷಾಂತರ ರೂಪಾಯಿ ಹಣವನ್ನು ಬೇರೆ ಬೇರೆ ಸಬೂಬು ಹೇಳಿ ತಂತಮ್ಮ ಖಾಸಗಿ ಖಾತೆಗೆ ವರ್ಗಾಯಿಸಿಕೊಂಡಿದ್ದರು. ಕೆಲ ಏಜೆಂಟರುಗಳನ್ನು ಐಷಾರಾಮಿ ಹೋಟೆಲ್‌ಗೆ ಕರೆಸಿಕೊಂಡು ಲಕ್ಷಗಟ್ಟಲೇ ಕ್ಯಾಶ್ ಹಣವನ್ನು ಇಸಿದುಕೊಳ್ಳಲಾರಂಭಿಸಿದರು.


ಸುದರ್ಶನ್

ಮೋಹನ್ ಅಂಡ್ ಗ್ಯಾಂಗ್‌ನ ಕೈಯಲ್ಲಿ ಈ ರೀತಿ ವಂಚಿಸಿದ ಹಣವೇ ಕೋಟಿಗಳಾಗಿ ಕುಣಿದಾಡಲಾರಂಭಿಸಿತು. ಬೆಂಗಳೂರೊಂದರಲ್ಲೇ ಜನರು ಹೂಡಿದ ಹಣ ಮೊತ್ತ ಇನ್ನೂರೈವತ್ತು ಕೋಟಿ ದಾಟಿ ಹೋಗಿತ್ತು, ಈ ಹೊತ್ತಿಗಾಗಲೇ ಹೂಡಿಕೆದಾರರಿಗೆ ತಿಂಗತಿಂಗಳು ಬರುತ್ತಿದ್ದ ಪರ್ಸೆಂಟೇಜ್, ಬಡ್ಡಿ ಕಾಸು ಏಕಾಏಕಿ ಗೋತಾ ಹೊಡೆಯಲಾರಂಭಿಸಿತು. ಹಿಂದೆಮುಂದೆ ನೋಡದೆ ಹಣ ಹೂಡಿದವರಿಗೆ ವಂಚನೆಯ ವಾಸನೆ ಮೊದಲ ಬಾರಿಗೆ ಹೊಡೆಯಲಾರಂಭಿಸಿದ್ದು ಆಗಲೇ. ಇದಾದ ಬಳಿಕ ಏಜೆಂಟರು, ಹೂಡಿಕೆದಾರರು ಮೋಹನನ ಗ್ಯಾಂಗನ್ನು ಸಂಪರ್ಕಿಸಲಾರಂಭಿಸಿದರು. ಆ ವಂಚಕ ಪಡೆ 'ಕಂಪೆನಿಯ ಹೆಡ್ಡಾಫೀಸಿನಿಂದ ಡಾಲರು ಬಂದಿಲ್ಲ' ಅಂತ ಸಮಜಾಯಿಷಿ ನೀಡಲಾರಂಭಿದರು. ಇದಾಗಿ ಕೆಲವೇ ಕೆಲದಿನಗಳಲ್ಲಿ ಪ್ಯಾಲೇಸ್ ರೋಡ್‌ನಲ್ಲಿದ್ದ ಕಂಪೆನಿಯ ಕಚೇರಿಗೆ ಶಾಶ್ವತವಾಗಿ ಬೀಗಬಿತ್ತು, ಅದರ ಬೆನ್ನಿಗೇ ವಂಚಕರೆಲ್ಲ ಮೊಬೈಲಿಗೂ ಸಿಗದ ಮಾಯಾವಾದರು!

ಹಣ ದುಪ್ಪಟ್ಟಾಗುವ ಆಸೆ ಹೊಂದಿದ್ದವರೆಲ್ಲ ಅಕ್ಷರ ಕಂಗಾಲಾಗಿ ಯಾರ ಬಳಿ ಅಂಗಲಾಚಬೇಕೆಂಬು ಗೊತ್ತಾಗದೇ ಪರದಾಡಿದರು. ಕೆಲಮಂದಿ ಹೂಡಿಕೆದಾರ ಕಂ ಏಜೆಂಟುಗಳು ಮಲೇಷ್ಯಾಕ್ಕೆ ಹೋಗಿ ಯೂನಿ ಪೇ ವಂಚಕ ಮುಖ್ಯಸ್ಥ ಜೇಮ್ಸ್ ಮುಕುಂದನನ್ನು ಭೇಟಿಯಾದ ಆ ದುಷ್ಟ ಮೋಹನ್‌ನ ತಂಡ ಕಂಪೆನಿಗೆ ಯಾವ ಹಣವ ಕಟ್ಟಲಿಲ್ಲ ಅಂತ ಕೈಚೆಲ್ಲಿದ. ಜೇಮ್ಸ್ ಎಂಥಾ ವಂಚಕನೆಂದ ಎದುರಿಗಿದ್ದ ವಂಚಿತರ ಮುಂದೆ ತಾನೇ ವಂಚನೆಗೊಳಗಾ ಅಮಾಯಕನಂತೆ ತೋರಿಸಿಕೊಂಡ. ಏನೋ ಮೋಹನನ ದುಷ್ಟರಿಂದ ಅನ್ಯಾಯವಾಗಿದೆ. ಆದರೆ ನಾನೇ ಅದ ತುಂಬಿಕೊಡುತ್ತೇನೆ ಅಂದ. ಇನ್ನೇನು ಹಾಕಿದ ಲಕ್ಷಾಂತ ರೂಪಾಯಿಯ ಕಥೆ ಮುಗಿದೇಹೋಯ್ತು ಅಂತಿದ್ದವರ ಜೇಮ್ಸ್ ಮುಕುಂದ್ ಆಪತ್ಬಾಂಧವನಂತೆ ಕಂಡಿದ್ದಾನೆ. ತಕ್ಷ ವೀಸಾರೇವ್ ಅಂತೊಂದು ಬುಕ್‌ಲೆಟ್ ಎದುರು ಹಿಡಿ ಜೇಮ್ಸ್ ಇದಕ್ಕೆ ಹಣ ಹೂಡಿದರೆ, ಆದ ನಷ್ಟ ಭರಿಸುತ್ತೆ ಎಂಬರ್ಥದಲ್ಲಿ ತಲೆ ತೀಡಲು ನೋಡಿದ. ಹಣ ಸಿ ತ್ತದೆಂದು ಮಲೇಶ್ಯಾದವರೆಗೆ ಹೋಗಿದ್ದ ಮಂದಿ ನಿಜಕ ಶಾಕು ಹೊಡೆಸಿಕೊಂಡವರಂತಾಗಿ ಸ್ವದೇಶಕ್ಕೆ ವಾಪಸಾದರ

ಹೀಗೆ ಕಷ್ಟಪಟ್ಟು ಹಣ ಹೂಡಿದ ಮಂ ಸಾಯುವಂಥಾ ತಲ್ಲಣಕ್ಕೊಳಗಾಗಿದ್ದರೆ, ವಂಚಕರಾ ಮೋಹನ್, ರವಿರಾಜ್, ಸುದರ್ಶನ್ ಮತ್ತು ಎಂ.ಎ ರೆಡ್ಡಿ ಮುಂಡಾಯಿಸಿದ ದುಡ್ಡಲ್ಲಿ ಪ್ರಾಪರ್ಟಿ ಖರೀದಿ ದುಂಡಗಾಗತೊಡಗಿದ್ದರು. ಮೋಹನ್ ಯಲಹಂ ಎಚ್‌ಎಎಲ್; ಮಾರತಹಳ್ಳಿಯಲ್ಲೆಲ್ಲಾ ಕೋಟ್ಯಂತ ರೂಪಾಯಿಯ ಭೂಮಿ ಖರೀದಿಸಿದ್ದ. ಮೈಸೂ ಹತ್ತಿರದಲ್ಲಿ ಮೂರು ಎಕರೆ ಜಮೀ ಖರೀದಿಸಿ ಅದರಲ್ಲಿ ಅಖಂಡ 4 ಕೋಟಿ ಬಂಗಲೆ ಎಬ್ಬಿಸಿದ್ದ. ಇನ್ನುಳಿದಂತೆ ಸುದರ್ಶ ಹಾಗೂ ಎಂ.ಎಂ. ರೆಡ್ಡಿಗಳೂ ಮೋಹ ನೊಂದಿಗೆ ಸ್ಪರ್ಧೆಗೆ ಬಿದ್ದವರಂತೆ ಕದ್ದ ಕಾಸಿನ ಆಸ್ತಿ ಖರೀದಿಸಲಾರಂಭಿಸಿದರು. ಮೂವರು ಖದೀಮರು ಖರೀದಿಸಿ ಆಸ್ತಿಯ ಮೌಲ್ಯವೇ ಒಂದೂವರೆ ಕೋಟಿ ಪ್ಪಾಗಿತ್ತು. ಅಂದರೆ ಯೂನಿ ಪೇ ಬೆಂಗಳೂರು ನಗರವೊಂದರಲ್ಲೇ ಹೂಡಲ್ಪ ಮುಕ್ಕಾಲು ಭಾಗ ಹಣವನ್ನು ಈ ವಂಚಕ ನುಂಗಿಕೊಂಡಿದ್ದರು!

ಇದೀಗ ಯೂನಿ ಪೇನ ಬಗ್ಗದ ಮತ್ತಷ್ಟು ಹೊರಬರುತ್ತಿದೆ. ಮೋಹನನ ವಂಚಕರ ತಂಡ ಪ್ರಮುಖನಾದ ರವಿರಾಜ್ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತ ಹೊಂದಿದವನು. ಈತ ಸದಾಶಿವ ನಗರದ ಚರ್ಚ್ ಭಕ್ತರಲ್ಲಿ ಸಾವಿರಾರು ಮಂದಿಯಿಂದ ಯೂನಿ ಪೇಗೆ ಹ ಹಾಕಿಸಿದ್ದ. ಆತನೀಗ ಚರ್ಚ್ ತಡೆ ಮುಖ ಹಾಕ ತಪ್ಪಿಸಿಕೊಂಡು ಓಡಾಡುತ್ತಿದ್ದಾನೆ.


ಇದಲ್ಲದೆ ನಂದಿನಿ ಲೇಔಟ್‌ನ ಜವರೇಗೌಡ, ಅರವಿಂ ಸಿಂಗ್ ಮುಂತಾದವರು ಪ್ರಮೋಟರ್‌ಗಳಾಗಿ ಲಕ್ಷಾಂತ ರೂಪಾಯಿ ಹೂಡಿಕೆ ಮಾಡಿಸಿದ್ದಾರೆ. ಈಗ ಅವರ ಪತ್ತೆಯ ಇಲ್ಲ. ಇನ್ನು ಬೆಂಗಳೂರು ಹೊರತಾಗಿ ಯೂನಿ ಪೇನಿಂ ಮಹಾ ವಂಚನೆ ನಡೆದದ್ದು ಮಂಗಳೂರಿನಲ್ಲಿ. ರೋಪ ರಾಬರ್ಟ್ ಎಂಬಾತ 'ಬುದ್ಧಿವಂತ'ರ ತಲೆ ತೀಡಿ ಅಖಂ 100 ಕೋಟಿಯಷ್ಟು ಹಣ ಕಲೆ ಹಾಕಿದ್ದ. ಕೇವಲ ಆಫೀ ಅನ್ನೇ ಅರವತ್ತು ಲಕ್ಷದಷ್ಟು ಖರ್ಚಿನಲ್ಲಿ ನಿರ್ಮಿಸಿಕೊಂಡಿ ಆತನೂ ತಲೆ ತಪ್ಪಿಸಿಕೊಂಡಿದ್ದಾನೆ.

ದೇಶಮಟ್ಟದಲ್ಲಿ ಕುಮಾರ್ ಹಾಗೂ ವಿಶಾಲ್ ಎಂಬುವರು ಯೂನಿ ಪೇ ಮುಖ್ಯಸ್ಥರಾಗಿದ್ದರು. ಅವರೂ ಕೂಡಾ ಇದೀಗ ಅಕ್ಷರಶಃ ಭೂಗತರಾಗಿದ್ದಾರೆ. ಅಂದಹಾಗೆ ಯೂ ಪೇ ಕಂಪೆನಿ ಇಡೀ ಭಾರತದಲ್ಲಿ ಮುಂಡಾಯಿಸಿರುವ ಹಣದ ಮೊತ್ತದ 3400 ಕೋಟಿಯಷ್ಟಿದೆ!

ಇದೀಗ ಕರ್ನಾಟಕದ ವಂಚಕರಾ ಮೋಹನ್ ಅಂಡ್ ಗ್ಯಾಂಗ್ ಜೈಲಿಗೆ ಗದುಮಿಸಿಕೊಂಡು ವರ್ಕೌತ್ತಿಸಿಕೊಂಡು ಅದು ಹೇಗೋ ಬೇಲ್ ಪಡೆದು ಹೊರ ಬಂದಿದೆ. ಮೊದಲು 'ಏನೇ ಆದರೂ ನಾವಿದ್ದೀವಿ' ಅಂತ ಭರವಸೆ ಹುಟ್ಟಿಸಿ ಹಣ ಹಾಕಿಸಿದ್ದ ಈ ದುಷ್ಟ ಕೂಟವೀಗ ಹಣ ಹೂಡಿದವರು ಫೋನಾಯಿಸಿದರೆ 'ನಾವು ಕೊಡಲ್ಲ ಏನ್ ಮಾಡ್ತೀರೋ ಮಾಡ್ಕೊಳ್ಳಿ' ಅನ್ನುವಷ್ಟು ಸೊಕ್ಕಿನಿಂದ ಮೆರೆದಾಡುತ್ತಿದೆ.

ಇವರನ್ನು ಆದಷ್ಟು ಬೇಗ ಬಂಧಿಸಿ ವಿಚಾರ ಗೊಳಪಡಿಸಿ ಬೇನಾಮಿ ಹೆಸರಲ್ಲಿ ಖರೀದಿಸಿರುವ ಆಸ್ತಿಯ ಮುಟ್ಟುಗೋಲು ಹಾಕಿಕೊಂಡು ಸಂಕಷ್ಟದಲ್ಲಿರುವವ ನೆರವಾಗುವ ಜವಾಬ್ದಾರಿ ಪೊಲೀಸರ ಮೇಲಿದೆ.

ಯೂನಿ ಪೇನ ವಂಚನೆ ಜನರಿಗೆಲ್ಲಾ ಪಾಠವಾಗ ಹೋದರೆ ಖಂಡಿತಾ ಮುಂದಾಗುವ ಅನಾಹುತಗ ಅವರೇ ಹೊಣೆಗಾರರಾಗಬೇಕಾಗುತ್ತದೆ.



ನರಹಂತಕ ತುಳಸಿರಾಮನ ಹತ್ಯೆ

ಶಿವಮೊಗ್ಗದ ರೌಡಿಯ ಕೊಲೆಯಲ್ಲಿ ಬಿಜೆಪಿ ನಾಯಕ?



ಶಿವಮೊಗ್ಗದ ಮಾಜಿ ಬಿಜೆಪಿ ಶಾಸಕ ಎಂ. ಆನಂದ ಪುತ್ರ ಹಾಗೂ ಶಿವಮೊಗ್ಗ ನಗರಸಭೆಯ ಮಾಜಿ ಎಂ. ಶಂಕರ್ ಹೆಸರು ರೌಡಿ ತುಳಸಿರಾಮನ ಕೊಲೆ ಎಫ್ಐಆರ್‌ನಲ್ಲಿ 8ನೇ ಆರೋಪಿಯಾಗಿ ದಾಖಲಾ ತಡ, ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಎಸ್. ಈಶ್ವರಪ್ಪ ...ಪಟ್ಟೆ ಕೂಗಾಡಿಬಿಟ್ಟರಂತೆ!

...ನ್ನ ಜೊತೆ ಬಿಜೆಪಿಯಲ್ಲಿರೋ ಮಾನವಂತರನ್ನೆಲ್ಲ ...ಗೆ ಕರೆದೊಯ್ದು ಖುಷಿ ಪಡುವಂಥ ಕೆಟ್ಟ ಬುದ್ಧಿ ...ಲ್ಲದೆ ಇನ್ನಾರಿಗೆ ಬರಲು ಸಾಧ್ಯ.....?'


...ಹಾಗಂತ ಮಾಜಿ ಸಿಎಂ ಯಡ್ಡಿ ವಿರುದ್ಧ ರಾಜ್ಯ ಬಿಜೆಪಿ ಈಶ್ವರಪ್ಪ ಕಿಡಿಕಾರುತ್ತಿದ್ದರೆ ಇತ್ತ ಶಿವಮೊಗ್ಗದಲ್ಲಿ ಬಣಕ್ಕೂ ಈಶ್ವರಪ್ಪ ಗ್ಯಾಂಗಿಗೂ ಜಂಗಿ ಕುಸ್ತಿಯೇ ...ಬಿಟ್ಟಿದೆ. ಮೊದಲು ಈಶ್ವರಪ್ಪನ ಖಾಸಾ ಅಣ್ಣ ಮತ್ತು ಶಿವಮೊಗ್ಗ ನಗರಸಭಾಧ್ಯಕ್ಷ ಕೆ.ಎಸ್. ಗಂಗಾಧರಪ್ಪನ ...ತ್ತು ಇಸ್ಪೀಟ್ ಕ್ಲಬ್ಬಿನ ಮೇಲೆ ಯಡ್ಡಿ ಗ್ಯಾಂಗ್ ...ಲೀಸರನ್ನು ಛೂಬಿಟ್ಟಿತು. ಈಗ ಈಶ್ವರಪ್ಪನ ಕಟ್ಟಾ ...ಲಿಗ ಮತ್ತು ಮಾಜಿ ಶಿವಮೊಗ್ಗ ನಗರಸಭಾಧ್ಯಕ್ಷ ...ರನ್ನೇ ಕೊಲೆ ಕೇಸಿಗೆ ಸಿಲುಕಿಸಲಾಗಿದೆ!

...ಹೀಗೂ ತನ್ನ ಮಾನ ಹರಾಜಾಗಿ ಜೈಲಿಗೆ ಹೋಗುವುದು ...ಗ್ಯಾರಂಟಿ. ಇನ್ನು ತನ್ನ ಎದುರಾಳಿ ಈಶ್ವರಪ್ಪನ ...ಕ್ಕೆ ಕೊಳ್ಳಿ ಇಡದಿದ್ದರೆ ಹೇಗೆ? ಶಿವಮೊಗ್ಗದ ಮಟ್ಟಿಗೆ ಮುಳುಗುವುದಷ್ಟೇ ಅಲ್ಲ, ತನ್ನ ಜೊತೆ ಈಶ್ವರಪ್ಪ ...ಬಗಲೆಂದೇ ಮಾಜಿ ಸಿಎಂ ಯಡ್ಡಿ ನಾನಾತಂತ್ರ, ...ತ್ರಕ್ಕೆ ಕೈಯಿಟ್ಟಿದ್ದಾರೆಂಬ ಗುಮಾನಿ ಶಿವಮೊಗ್ಗದ ...ಳನ್ನು ಅದರಲ್ಲೂ ಈಶ್ವರಪ್ಪ ನಿಷ್ಠರನ್ನು ಕಾಡುತ್ತಿರು...ಕ್ಕೂ ಕಾರಣವಿದೆ.

ಹಳೇ ಕ್ರಿಮಿನಲ್ ತುಳಸಿರಾಮ್


...ಇದು ಶಿವಮೊಗ್ಗದ ಹಳೇ ಕ್ರಿಮಿನಲ್ ತುಳಸಿರಾಮನ ...!

2011 ರ ಸೆಪ್ಟೆಂಬರ್ 16 ರಾತ್ರಿ ಶಿವಮೊಗ್ಗದ ...ಪೇಟೆ ಪೊಲೀಸ್ ಠಾಣೆಗೆ ಕೂಗಳತೆಯಲ್ಲೇ ...ರಾಮನ ಹೆಣ ಬಿದ್ದಿತ್ತು. ದೊಡ್ಡಪೇಟೆ ಪೊಲೀಸ್ ...ಯ ಎಸ್.ಐ. ಮಂಜುನಾಥ್ ಎಷ್ಟು ದಕ್ಷರೋ ...ಷ್ಟು ನಿಷ್ಠರೋ ಅಷ್ಟೇ ಯಡ್ಡಿ ಅಂತರಂಗದ ಖಾಸಾ ...ಎಂಬುದು ಗುಟ್ಟೇನಲ್ಲ. ಹಾಗೇ ದೊಡ್ಡಪೇಟೆಯ ...ಲ್ ಇನ್ಸ್‌ಪೆಕ್ಟರ್ ಸಿದ್ಧಲಿಂಗಪ್ಪ ಕೂಡ ಯಡ್ಡಿಗೆ ...ನಿಷ್ಠರೆಂಬುದರಲ್ಲಿ ಎರಡು ಮಾತಿಲ್ಲ. ಜೊತೆಗೆ ಸದ್ಯ ...ಮೊಗ್ಗದ ಎಸ್ಪಿಯಾಗಿರುವ ದಕ್ಷ ಐಪಿ... ರಮಣಗುಪ್ತ ಕೂಡ ಯಡ್ಡಿಗೆ ...ಂಬುದನ್ನ ಯಾರೂ ಅಲ್ಲಗಳೆಯು...ಲ್ಲ. ಹೇಳಿಕೇಳಿ ಯಡ್ಡಿಗೆ ಪಕ್ಕಾ ...ಸಿಗಳಂತಿರುವ ಶಿವಮೊಗ್ಗದ ಈ ...ಲೀಸ್ ಕೂಟವನ್ನು ಬಳಸಿಕೊಂಡೇ ...ಮಗ ರಾಘವೇಂದ್ರ ಶಿವಮೊಗ್ಗದ ...ನಾಯಕ ಮತ್ತು ಈಶ್ವರಪ್ಪನವರ ಬೆಂಬಲಿಗ ಶಂಕರ್‌ರನ್ನು ರೌಡಿ ...ರಾಮನ ಕೊಲೆ ಕೇಸಿಗೆ ಸಿಲುಕಿಸಿ...ರೆ?



ಮೆಂಟಲ್ ಸೀನ

...ಷ್ಟಕ್ಕೂ ತುಳಸಿರಾಮನ ಕೊಲೆಗೂ ಮಾಜಿ ನಗರ ...ಧ್ಯಕ್ಷ ಶಂಕರ್‌ಗೂ ಸೂತ್ರ ಸಂಬಂಧವಿಲ್ಲ. ಶಿವಮೊಗ್ಗ ...ಬತರ್‌ನಾಕ್ ಪಾತಕಿಗಳ ಪಟ್ಟಿಯಲ್ಲಿ ತುಳಸಿರಾಮನದ್ದು ...ಸರೇನಲ್ಲ. ತೀರ ಸಣ್ಣ ವಯಸ್ಸಿಗೇ ಪಾತಕಕ್ಕಿಳಿದವನು ...ರಾಮ. ಅಸಲಿಗಾತ ರೌಡಿಯಲ್ಲ, ಆತ ಹಳೇಕಳ್ಳ ...ಕುಖ್ಯಾತ ದರೋಡೆಕೋರ. ಶಿವಮೊಗ್ಗ ಶಿವಪ್ಪನಾಯಕ ...ಟ್ಟಿನಲ್ಲಿ ಹೂವಿನ ವ್ಯಾಪಾರ ಮಾಡಿಕೊಂಡಿದ್ದ ...ನಾರಾಯಣ ಎಂಬಾತನ ಇಬ್ಬರು ಗಂಡು ಮಕ್ಕಳ ...ಮೊದಲಿಗನೇ ತುಳಸಿರಾಮ. ಈತನ ತಮ್ಮ ಲೋಕೇಶ್ ...ರನಾ್ ಲೋಕಿ ಕೂಡ ಮತ್ತೊಬ್ಬ ಕ್ರಿಮಿನಲ್. ಮೊನ್ನೆ ...ರ ಸೆಪ್ಟೆಂಬರ್ 17 ರ ತನಕ ಜೈಲಿನಲ್ಲಿದ್ದು ಅಣ್ಣನ ಹತ್ಯೆ ನಡೆದ ಆರನೇ ದಿನವೇ ಜೈಲಿಂದ ಹೊರಬಿದ್ದ ತಮ್ಮ ಲೋಕಿಯದ್ದೂ ಅಣ್ಣನಷ್ಟೇ ಭಯಾನಕ ಇತಿಹಾಸ!

ಶುರುವಿನಲ್ಲಿ ರಾಬರಿ, ಕಳ್ಳತನ ಮಾಡಿಕೊಂಡಿದ್ದ ತುಳಸಿರಾಮ ಮೊದಲ ಬಾರಿಗೆ ಶಿವಮೊಗ್ಗವನ್ನು ಬೆಚ್ಚಿ ಬೀಳಿಸಿದ್ದು 1998 ರಲ್ಲಿ. ಮತ್ತೂರು ಗ್ರಾಮದ ವೆಂಕಟರಾವ್ ಮತ್ತವರ ಪತ್ನಿ ಸೇರಿಕೊಂಡು ಬೈಪಾಸ್ ರಸ್ತೆಯ ತುಂಗಾ ಸೇತುವೆ ಬಳಿ ನಡೆದು ಬರುತ್ತಿದ್ದರೆ ಅವರ ಮೇಲೆ ದಾಳಿಯಿಟ್ಟ ತುಳಸಿರಾಮ್ ಗಂಡ ಹೆಂಡಿರಿಬ್ಬರನ್ನೂ ಕಟ್ಟಿ ಹಾಕಿ ಅವರ ಮೈಮೇಲಿದ್ದ ಅಷ್ಟೂ ಚಿನ್ನಾಭರಣಗಳನ್ನು ದೋಚಿದ್ದ. ತುಳಸಿರಾಮ್ ಎಂಥಾ ಪೈಶಾಚಿಕ ಮನಸ್ಥಿತಿಯವನೆಂದರೆ; ಹಾಗೇ ದೋಚಿದ್ದ ವೆಂಕಟರಾವ್ ದಂಪತಿಗಳೇನಾದರೂ ಬದುಕಿಳಿದರೆಂದರೆ ಎಲ್ಲಿ ಪೊಲೀಸರಿಗೆ ತನ್ನನ್ನು ಪತ್ತೆಹಚ್ಚಿ ಹಿಡಿದು ಕೊಟ್ಟಾರೋ ಎಂದು ಪತಿಪತ್ನಿ ಇಬ್ಬರನ್ನೂ ಬರ್ಬರವಾಗಿ ಕತ್ತರಿಸಿ ಹಾಕಿದ್ದ. ಮುಗ್ಧ ವೆಂಕಟರಾಮ್ ಸ್ಥಳದಲ್ಲೇ ಹೆಣವಾದರೆ ಅವರ ಪತ್ನಿ ತಿಂಗಳಾನುಗಟ್ಟಲೇ ಸಾವುಬದುಕಿನ ಜೊತೆ ಸೆಣಸಾಡಿ ಅದೃಷ್ಟವಶಾತ್ ಬದುಕುಳಿದರು.



ಯಡ್ಡಿ V/s ಈಶ್ವರಪ್ಪ ಬಣಗಳ ಬೀದಿ ಕಾಳಗದ ಆರಂಭ



ಹಂದಿ ಅಣ್ಣಿಯ ಹಂತಕ ಪಡೆ

ಈ ಒಂದೇ ಘಟನೆ ಇಡೀ ವೆಂಕಟ ರಾವ್ ಕುಟುಂಬವನ್ನೇ ದಿಕ್ಕಾಪಾಲಾಗಿ ಮಾಡಿಬಿಟ್ಟಿತು. ಅಲ್ಲಿಗೆ ತುಳಸಿರಾಮ ಮಾಮೂಲಿಯ ಪಾತಕಿಯಲ್ಲವೆಂಬುದು ಇಡೀ ಶಿವಮೊಗ್ಗಕ್ಕೇ ಅರ್ಥವಾಗಿತ್ತು. ಆವತ್ತು ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ನೂರುಲ್ಲಾ ಷರೀಫ್, ಪೇದೆಗಳಾದ ಮಲ್ಲಿಕಾರ್ಜುನ ಮತ್ತು ರೆಹಮಾನ್ ತಂಡ ತಿಪಟೂರಿನಲ್ಲಿ ತಲೆಮರೆಸಿಕೊಂಡಿದ್ದ ತುಳಸಿರಾಮನನ್ನು ಹಿಡಿ ತಂದು ಜೈಲಿಗಟ್ಟಬೇಕೆಂದರೆ ಪ್ರಾಣಬೆದರಿಕೆ ಹಂಗು ತೊರೆದು ಪರದಾಡಬೇಕಾಯ್ತು. ಜೈಲಿಂದ ಹೊರಬಂದವನೇ ಗುಲ್ಬರ್ಗಾ-ಹುಬ್ಬಳ್ಳಿ ಭಾಗದಲ್ಲಿ ಓಡಾಡಿಕೊಂಡಿದ್ದು ರಾಬರಿಗಿಳಿದವನು ಸದ್ದಿಲ್ಲದೇ ಶಿವಮೊಗ್ಗಕ್ಕೆ ಬಂದು ಆಗ ಪೌರಕಾರ್ಮಿಕರ ಸಂಘದ ಮುಖಂಡರಾಗಿದ್ದ ಬಿಲ್ ಕಲೆಕ್ಟರ್ ಡಿಸೋಜ ರನ್ನು ಕತ್ತರಿಸಿಬಿಟ್ಟ. ತನ್ನದೇ ವಸತಿಗೃಹದ ಬಳಿ ತುಳಸಿರಾಮನಿಂದ ಮಚ್ಚೇಟು ತಿಂದ ಪೌರ ಕಾರ್ಮಿಕರ ಮುಖಂಡ ಡಿಸೋಜ ಮಾಡಿದ ತಪ್ಪೆಂದರೆ ಆತ ಕೇಳಿದಷ್ಟು ಹಣ ಕೊಡದೇ ಹೋಗಿದ್ದು!

ಪುಣ್ಯವಶಾತ್ ಡಿಸೋಜ ಬದುಕುಳಿದ ರಾದರೂ ಕತ್ತರಿಸಿದ ಏಟಿಗೆ ಅವರ ದೇಹ ಇಬ್ಭಾಗವಾಗಿ ಹೋಯಿತು. ಆನಂತರ ಎನ್.ಟಿ. ರಸ್ತೆಯ ಆಶ್ರಯ ಬಾರ್‌ನ ಕ್ಯಾಷಿಯರ್ ಅನಿಲನ ಕುತ್ತಿಗೆಗೆ ಮಚ್ಚಿಟ್ಟು ಆತನ ಚಿನ್ನದಸರ ಕಿತ್ಕೊಂಡ್ಯು. ಪಟಾಕಿ ವ್ಯಾಪಾರಿಯೊಬ್ಬನನ್ನು ಅಪಹರಿಸಿ ದುಡ್ಡು ಕಿತ್ತ ಹೀಗೆ ಅನೇಕಾನೇಕ ರಾಬರಿ-ಡಕಾಯಿತಿಗಳಲ್ಲಿ ಶಿವಮೊಗ್ಗ ಪೊಲೀಸರ ನಿದ್ದೆಗೆಡಿಸಿದ ತುಳಸಿರಾಮ ಕ್ರಮೇಣ ಶಿವಮೊಗ್ಗದ ಕುಖ್ಯಾತ ಪಾತಕಿ ಹಂದಿ ಅಣ್ಣಿಯ ಗ್ಯಾಂಗ್ ಸೇರಿಕೊಂಡ. ಈ ಹಂದಿ ಅಣ್ಣಿ ಬೇರೆ ಯಾರೂ ಅಲ್ಲ; ಇಲ್ಲಿಗೆ ವರ್ಷದ ಹಿಂದಷ್ಟೇ ಶಿವಮೊಗ್ಗದ ನಟೋರಿಯಸ್ ಸಹೋದರರಾದ ಲವ-ಕುಶರನ್ನು ನಡುರಸ್ತೆಯಲ್ಲೇ ಕತ್ತರಿಸಿ ಹಾಕಿದ ರಣಪಾತಕಿ!

ಸದ್ಯ ಶಿವಮೊಗ್ಗದ ಪಾಪಕೂಪದಲ್ಲಿ ಹಂದಿ ಅಣ್ಣಿ ಮತ್ತು ಸ್ಪಾಟ್ ನಾಗರದ್ದೇ ಒಂದು ಕೂಟವಾದರೆ ಇವರನ್ನು ಮುಗಿಸಲು ಹೊಂಚಿ ಕೂತಿರುವುದು ನವುಲೆ ಮೋಹನ ಮತ್ತು ಮೆಂಟಲ್ ಸೀನರ ಪಡೆ. ತಮಿಳುಕುಮಾರನ ಎನ್‌ಕೌಂಟರ್ ನಂತರ ಊರುಬಿಟ್ಟಿದ್ದ ಶಿವಮೊಗ್ಗದ ಹುಡಿಪುಡಿ ರೌಡಿಗಳೆಲ್ಲ ಈಗ ಸದ್ದಿಲ್ಲದೇ ಬೀದಿಗಿಳಿದಿದ್ದಾರೆ. ಈ ಪೈಕಿ ಪಾತಕ ಪಾಳೆಯಪಟ್ಟಿನ ಆಧಿಪತ್ಯ ಸ್ಥಾಪಿಸಲು ಹಂದಿ ಅಣ್ಣಿ, ನವುಲೆ ಮೋಹನ, ಮೆಂಟಲ್ ಸೀನ ಮತ್ತು ಸ್ಪಾಟ್ ನಾಗರ ಪಡೆಗಳ ಮಧ್ಯೆ ಹೊಡೆದಾಟ, ಹೊಂಚಾಟ ನಡೆಯುತ್ತಲೇ ಇದೆ. ಸ್ಪಾಟ್ ನಾಗನ ಜೊತೆ ಕೊಳಪೆ ಗೋಪಿ, ಪ್ರಕಾಶ ಮತ್ತು ತುಳಸಿರಾಮನಂಥ ಕಿರಾತಕರಿದ್ದರೆ ಇವರ ದುಷ್ಮನ್ ನವುಲೆ ಮೋಹನನ ಜೊತೆ ಪುನೀತ, ಕುಳ್ಳರಾಜ ಮತ್ತು ಶರವಣರಂಥ ಪಕ್ಕಾ ಕ್ರಿಮಿನಲ್‌ಗಳ ಹಿಂಡಿದೆ.

ಅಟ್ಯಾಕ್....!

ಕಳೆದ ಜೂನ್‌ನಲ್ಲಿ ಮೆಂಟಲ್ ಸೀನನನ್ನು ಮುಗಿಸಿಬಿಡಲು ಹಾಡು ಹಗಲೇ ಹಂದಿ ಅಣ್ಣಿಯ ಗ್ಯಾಂಗ್ ಅಟ್ಯಾಕ್ ಮಾಡಿತ್ತು. ಆವತ್ತು ಎದ್ದೂಬಿದ್ದೂ ಬಚಾವಾದ ಮೆಂಟಲ್ ಸೀನ ಕೆಲವೇ ಗಂಟೆಗಳಲ್ಲಿ ತನ್ನ ಅಳಿದುಳಿದ ಬಂಟರನ್ನೆಲ್ಲಾ ಕಲೆ ಹಾಕಿದ್ದೇ ಸಾಗರ ರಸ್ತೆಯಲ್ಲಿ ಅಣ್ಣಿಯ ತಮ್ಮ ಹಂದಿಗಿರಿ ನಡೆಸುತ್ತಿದ್ದ ಮಿಲಿಟರಿ ಹೋಟೆಲ್ ಮೇಲೆ ಭೀಕರವಾಗಿ ದಾಳಿ ನಡೆಸಿ ಸೇಡು ತೀರಿಸಿಕೊಂಡಿತು. ನಡೆದ ಅಟ್ಯಾಕ್‌ನಲ್ಲಿ ಯಾವೊಬ್ಬ ರೌಡಿಯೂ ನಿಕಾಲಿಯಾಗಲಿಲ್ಲ, ಆದರೆ ದಾಳಿಗೆ ಸಿಲುಕಿದ ಅಜ್ಜಿಯೊಬ್ಬಳ ಕೈ ಕತ್ತರಿಸಿಹೋಗಿತ್ತು. ಮೆಂಟಲ್ ಸೀನನ ವಿರುದ್ಧದ ಹಂದಿ ಅಣ್ಣಿ ಗ್ಯಾಂಗಿನ ದಾಳಿಯ ನೇತೃತ್ವ ವಹಿಸಿದ್ದೇ ತುಳಸಿರಾಮ್!

ಇಲ್ಲಿಗೆ ಎರಡು ತಿಂಗಳ ಹಿಂದೆ ದೊಡ್ಡಪೇಟೆ ಎಸ್.ಐ. ಮಂಜುನಾಥ್ ಮತ್ತು ಕೋಟೆ ಸರ್ಕಲ್ ಇನ್ಸ್‌ಪೆಕ್ಟರ್ ವಸಂತ್‌ಕುಮಾರ್ ಸೇರಿಕೊಂಡು ಎರಡೂ ಗ್ಯಾಂಗಿನ ರೌಡಿಗಳನ್ನು ಹಿಡಿದು ಗೋಪಿ ಸರ್ಕಲ್ಲಿನಲ್ಲಿ ಮೆರವಣಿಗೆ ನಡೆಸಿದರು. ಸಿಕ್ಕ ಸಿಕ್ಕವರನ್ನೆಲ್ಲ ಹಿಡಿದು ಜೈಲಿಗೆ ದಬ್ಬಿದರು. ಜೈಲಿಂದ ಬಂದಿದ್ದೇ ಮತ್ತೆ ಎರಡೂ ಗ್ಯಾಂಗುಗಳು ಕಾದಾಟಕ್ಕಿಳಿದವು. ಹೀಗೆ ಶುರುವಾದ ಬೀದಿಕಾಳಗದ ಒಂದು ಅಧ್ಯಾಯವೇ ತುಳಸಿರಾಮನ ಹತ್ಯೆ. ಮೊನ್ನೆ ಸೆಪ್ಟೆಂಬರ್ 17 ಕ್ಕೆ ತುಳಸಿರಾಮನ ತಮ್ಮ ಲೋಕಿ ಜೈಲಿಂದ ಹೊರಬೀಳಬೇಕಿತ್ತು.


ನವುಲೆ ಮೋಹನ

.....9

ಈಶ್ವರಪ್ಪ ಅಣ್ಣನ ಇಸ್ಪೀಟು ಅಡ್ಡೆಯ ಹೆಸರೇ

ಪಾಕಿಸ್ತಾನ್ ಕ್ಲಬ್

ತನ್ನ ಬಣವನ್ನು ಮಟ್ಟಹಾಕಲು ಸಿಕ್ಕ ಯಾವ ಅವಕಾಶವನ್ನೂ ಯಡ್ಡಿ ಗ್ಯಾಂಗ್ ಬಳಸಿಕೊಳ್ಳದೇ ಇರುವುದಿಲ್ಲ ಎಂದು ಈಶ್ವರಪ್ಪ ಕಿಡಿ ಕಾರುವುದಕ್ಕೂ ಕಾರಣವಿದೆ. ಅದು ಈಶ್ವರಪ್ಪನ ಅಣ್ಣ ಕೆ.ಎಸ್. ಗಂಗಾಧರಪ್ಪ ಬಿ.ಎಚ್. ರಸ್ತೆಯ ಮಾಡ್ರನ್ ಥೇಟರ್ ಪಕ್ಕ ನಡೆಸುತ್ತಿದ್ದ ಹೈಟೆಕ್ ಇಸ್ಪೀಟ್ ಕ್ಲಬ್ಬಿನ ಮೇಲೆ ನಡೆದ ಪೊಲೀಸ್ ದಾಳಿ!

ಶಿವಮೊಗ್ಗ ನಗರಸಭೆಗೆ ಸದ್ಯ ಈ ಗಂಗಾಧರಪ್ಪನೇ ಅಧ್ಯಕ್ಷ. ನೆಪಕ್ಕಷ್ಟೇ ಆರ್‌ಎಂಸಿ ಯಾರ್ಡಿನಲ್ಲೊಂದು ಅಡಿಕೆ ಮಂಡಿ ನಡೆಸುತ್ತಾನೆ. ಮಿಕ್ಕಂತೆ ಗಂಗಾಧರಪ್ಪನದು ಫುಲ್‌ಟೈಮ್ ರಿಯಲ್ ಎಸ್ಟೇಟ್ ದಂಧೆ. ಸಿಕ್ಕಸಿಕ್ಕ ಸೈಟಗೆ ಬೇಲಿ ಹಾಕುವುದು, ಗಂಡ ಸತ್ತ, ದಿಕ್ಕಿಲ್ಲದ ನಿರ್ಗತಿಕ ವಿಧವೆಯರನ್ನೇ ಹೊಂಚುಹಾಕಿ ಅಂಥವರ ಆಸ್ತಿಗೆ ವಕ್ಕರಿಸುವುದು ಗಂಗಾಧರಪ್ಪನ ಹೀನ ಚಾಳಿ ತಮ್ಮ ಈಶ್ವರಪ್ಪ, ರಾಜ್ಯ ಬಿಜೆಪಿಯ ಅಧ್ಯಕ್ಷಗಾದಿಗೇರಿ ರಾಮರಾಜ್ಯದ ಭಾಷಣ ಬಿಗಿಯುತ್ತಿರುವಾಗಲೇ ಅಣ್ಣ ಗಂಗಾಧರಪ್ಪ ಮಾಡ್ರನ್ ಥೇಟರ್ ಸಂದಿಯಲ್ಲೊಂದು ಹೈಟೆಕ್ ಇಸ್ಪೀಟ್ ಅಡ್ಡೆ ಆರಂಭಿಸಿದ. ಅದಕ್ಕೆ ತಕ್ಕಂತೆ ಭದ್ರಾವತಿ ಶಾಸಕ ಸಂಗಮೇಶ್ ತಮ್ಮ ಮೋಹನ್ ಕೂಡ ವಿನಾಯಕ ಥೇಟರ್ ಮಗ್ಗುಲಿಗೇ ಮತ್ತೊಂದು ಇಸ್ಪೀಟ್ ಅಡ್ಡೆ ಶುರು ಹಚ್ಚಿಕೊಂಡ.


ಕೆ.ಎಸ್. ಗಂಗಾಧರಪ್ಪ

ಬರುಬರುತ್ತ ಗಂಗಾಧರಪ್ಪನ ಇಸ್ಪೀಟ್ ಕ್ಲಬ್ಬಿನ ಕುಖ್ಯಾತಿ ಯಾವ ವೇಗದಲ್ಲಿ ಹಬ್ಬಿತೆಂದರೆ ದೂರದ ಮುಂಬಯಿ ಯಿಂದಲೂ ಜೂಜುಕೋರರ ದಂಡು ಶಿವಮೊಗ್ಗಕ್ಕೆ ಬಂದು ಗಂಗಾಧರಪ್ಪನ ಕ್ಲಬ್ಬಿನ ಎಲೆ ತಟ್ಟಲಾರಂಭಿಸಿತು. ಮುಂಬಯಿಯಿಂದ ಬರುತ್ತಿದ್ದ ಜೂಜುಕೋರರ ಪೈಕಿ ಬಹುತೇಕರು ಮುಸ್ಲಿಮರಾಗಿರುತ್ತಿದ್ದರಿಂದ ಲೋಕಲ್ ಜನ ಅದನ್ನು ಪಾಕಿಸ್ತಾನ್ ಕ್ಲಬ್ ಎಂದೇ ಕರೆಯುತ್ತಿದ್ದರು. ಇಂಥ ಜುಗಾರಿಗಳನ್ನು ಸಂಭಾಳಿಸಲೆಂದೇ ಗಂಗಾಧರಪ್ಪ ಶಿವಮೊಗ್ಗದ ಕೆಲ ರೌಡಿಗಳಿಗೆ ಹಫ್ತಾ ನಿಗದಿಪಡಿಸಿದ್ದ. ಯಾವತ್ತು ರಮಣಗುಪ್ತಾ ಎಸ್ಪಿಯಾಗಿ ಶಿವಮೊಗ್ಗಕ್ಕೆ ಕಾಲಿಟ್ಟರೋ ಅವರ ಸೂಕ್ಷ್ಮ ಬುದ್ಧಿಗೆ ಸಿಲುಕಿದ ಒಂದು ಸಂಗತಿಯೆಂದರೆ, ಅಲ್ಲಿನ ಕುಖ್ಯಾತ ಮಟ್ಕಾ ಮತ್ತು ಇಸ್ಪೀಟ್ ಅಡ್ಡೆಗಳಿಗೂ ಪರಸ್ಪರ ಕಚ್ಚಾಡುವ ರೌಡಿಗಳ ಗ್ಯಾಂಗ್‌ವಾರ್‌ಗೂ ಇದ್ದ ದುಡ್ಡೂ ಕಾಸಿನ ಸಂಬಂಧ.

ಶಿವಮೊಗ್ಗದ ರೌಡಿಗಳ ಪಾಲಿಗೆ ಮಟ್ಕಾ ಇಸ್ಪೀಟ್ ಕ್ಲಬ್ಬುಗಳೇ ಆದಾಯ ಮೂಲಗಳಾಗಿದ್ದವು. ಬಂದ ಒಂದೇ ತಿಂಗಳಿಗೆ ಪೊಲೀಸರನ್ನು ಛೂಬಿಟ್ಟಿದ್ದೇ ಶಾಸಕ ಸಂಗಮೇಶ್ ಮತ್ತು ಗಂಗಾಧರಪ್ಪ ನಡೆಸುತ್ತಿದ್ದ ಕ್ಲಬ್ಬುಗಳನ್ನು ಮುಚ್ಚಿಸಿಬಿಟ್ಟರು. ಅಣ್ಣನ ಕ್ಲಬ್ಬನ್ನು ಮುಚ್ಚಿಸಿದ ಎಸ್ಪಿ ವಿರುದ್ಧ ಈಶ್ವರಪ್ಪ ಕೆರಳಿದ ಸರ್ಪದಂತೆ ಬುಸುಗುಟ್ಟಿದರಾದರೂ ಪೊಲೀಸರ ಬೆನ್ನಿಗೆ ಯಡ್ಡಿ ನಿಂತಿದ್ದರಲ್ಲ. ತನ್ನನ್ನು ಹಣಿಯಲೆಂದೇ ಯಡ್ಡಿ ಅಣ್ಣನ ಇಸ್ಪೀಟ್ ಕ್ಲಬ್ ಮುಚ್ಚಿಸಿ ದರೆಂದು ಇವತ್ತಿಗೂ ಈಶ್ವರಪ್ಪ ಹಿಡಿಶಾಪ ಹಾಕುತ್ತಿದ್ದಾರೆ.




ಮೂಡಿಗೆರೆ ಸರಕಾರಿ ಆಸ್ಪತ್ರೆ ದುಷ್ಟತನಕ್ಕೆ ಬಲಿಯಾಯ್ತು ಎರಡು ಜೀವ


ವೈದ್ಯರನ್ನು ಜನರು ದೈವಸಂಭೂತರಂತೆ ಕಾಣುತ್ತಾರೆ ಮತ್ತು ಆರಾಧಿಸುತ್ತಾರೆ. ಆದರೆ ಮೂಡಿಗೆರೆ ತಾಲ್ಲೂಕಿನ ಸರಕಾರಿ ಆಸ್ಪತ್ರೆಯ ಕೆಲವು ವೈದ್ಯರು ರೋಗಿಗಳ ಪಾಲಿಗೆ ಭೂತಗಳಾಗಿದ್ದಾರೆ. ಇಲ್ಲಿನ ಅವಿವೇಕಿ ವೈದ್ಯರಿಂದ ಬಡ ರೋಗಿಗಳ ಪ್ರಾಣಹರಣವಾಗುತ್ತಿದೆ. ಇಂಥಾ ಹಲಾಲುಕೋರ ವೈದ್ಯರ ಹಿಂಡು ಮೂಡಿಗೆರೆಯ ಸರಕಾರಿ ಆಸ್ಪತ್ರೆಯಲ್ಲಿ ಠಳಾಯಿಸುತ್ತಿದೆ. ಇತ್ತೀಚೆಗಷ್ಟೆ ಬಣಕಲ್ ಎಂಬಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಸ್ಲಾಕ್ ಎಂಬ ವೈದ್ಯನ ಅನುಪಸ್ಥಿತಿಯಲ್ಲಿ ದಾದಿಯರು ದರ್ಬಾರು ನಡೆಸಿದ್ದರಿಂದ ದಲಿತ ಮಹಿಳೆಯೊಂದಿಗೆ ಆಕೆಯ ಮಗು ಬಲಿಯಾದ ದಾರುಣ ಪ್ರಕರಣವೊಂದು ನಡೆದಿದೆ.


ಲತಾ

ಕಳೆದ ವರ್ಷವಷ್ಟೆ ಲತಾ ಎಂಬಾಕೆಗೆ ಬಣಕಲ್ ಹೋಬಳಿಯ ಬಿನ್ನಡಿ ಎಂಬಲ್ಲಿನ ದಲಿತ ಕಾಲೋನಿಯ ಲಕ್ಷ್ಮಣ್ ಜೊತೆ ಮದುವೆಯಾಗಿತ್ತು. ಲತಾಳಿಗೆ ಎಂಟನೆ ತಿಂಗಳಲ್ಲಿ ಹೆರಿಗೆ ನೋವು ಕಾಣಿಸಿಕೊಂಡಿದ್ದರಿಂದ ತಾಯಿ ದೇವಕಿ ಕೂಗಳತೆ ದೂರದ ಬಣಕಲ್ ಆಸ್ಪತ್ರೆಗೆ ಕರೆತಂದಿದ್ದರು. ಯಮದೂತರಂತಿದ್ದ ವೈದ್ಯರ ಅನುಪಸ್ಥಿತಿಯಲ್ಲಿ ಆ ಸ್ಥಾನ ತುಂಬಿದ ನರ್ಸ್‌ಗಳಾದ ಮೀನಾ ಕುಮಾರಿ, ನೇತ್ರಾವತಿ ಸಹಜ ಹೆರಿಗೆಯಾಗುತ್ತದೆ ಅಂದಿದ್ದರು.

ಈ ಎಡವಟ್ಟು ಭರವಸೆಯೇ ಎರಡು ಮುಗ್ಧ ಜೀವಗಳನ್ನು ಬಲಿ ಬೇಳಿಸಿದ್ದು ಮಾತ್ರ ಅತ್ಯಂತ ಅಮಾನವೀಯ ವೃತ್ತಾಂತ. ಹೀಗೆ ಆಸ್ಪತ್ರೆಗೆ ದಾಖಲಾದ ಕೆಲ ಹೊತ್ತಿಗೆ ಲತಾ ಗಂಡು ಮಗುವಿಗೆ ಜನ್ಮ ನೀಡಿದಳು. ಆದರೆ ಅವಿವೇಕಿ ನರ್ಸ್‌ಗಳ ಅನನುಭವದಿಂದಾಗಿ ಮಗುವಿನ ಹೊಕ್ಕಳ ಬಳ್ಳಿ ತುಂಡಾಗಿ ತೀವ್ರ ರಕ್ತಸ್ರಾವವಾಗುತ್ತಿತ್ತು. ಕೆಲವೇ ನಿಮಿಷಗಳ ಹೊತ್ತಿಗೆ ಹಾಲುಗಲ್ಲದ ಹಸುಗೂಸು ಕಣ್ಣುಮುಚ್ಚಿತು. ಇದನ್ನು ಕಂಡು ಹೆದರಿದ ನರ್ಸ್‌ಗಳಿಬ್ಬರೂ ತಕ್ಷಣ ಲತಾಳನ್ನು ಮೂಡಿಗೆರೆ ಎಂಜಿಎಂ ಆಸ್ಪತ್ರೆಗೆ ಸಾಗಿಸಲು ತರಾತುರಿ ನಡೆಸಿದರು. ಒಂದು ಗಂಟೆ ತಡವಾಗಿ ಬಂದ 108 ಆಂಬುಲೆನ್ಸ್ ಮೂಡಿಗೆರೆಗೆ ತಲುಪಲು ಮತ್ತರ್ಧ ಗಂಟೆ ತೆಗೆದುಕೊಂಡಿತು. ಎಂಜಿಎಂ ಆಸ್ಪತ್ರೆಯ ವೈದ್ಯೆ ವಿದ್ಯಾವತಿ ಕೂಡ ಒಂದು ಗಂಟೆ ವಿಳಂಬಿಸಿ ಬರುವ ಹೊತ್ತಿಗೆ ಲತಾ ಮೃತಪಟ್ಟಿದ್ದಳು. ಲತಾ ಸಾವಿನಿಂದ ಜನರು ಕೆರಳುವ ಅಪಾಯಕಾರಿ ಸನ್ನಿವೇಶದ ಅರಿವು ವೈದ್ಯರಿಗಿತ್ತು, ಆದುದರಿಂದಲೇ ಶವವನ್ನು ರಾತ್ರೋರಾತ್ರಿ ಮನೆಗೆ ಸಾಗಹಾಕಿ ಕೈ ತೊಳೆದುಕೊಂಡರು.


ಗಿರೀಶ್


ಕುಮಾರ್

ಅದಾದಬಳಿಕ ಕೊಲೆಗಡುಕ ವೈದ್ಯರ ದಂಡು ಲತಾ ಸಾವನ್ನು ಹಳ್ಳ ಹಿಡಿಸುವ ವ್ಯವಸ್ಥಿತ ಷಡ್ಯಂತ್ರ ನಡೆಸಿದೆ. ಎಂಜಿಎಂ ಆಸ್ಪತ್ರೆಯ ಅವಿವೇಕಿ ವೈದ್ಯ ಗಿರೀಶ ಎಂಬಾತ ಒಕ್ಕಲಿಗನಾಗಿದ್ದು ಜಾತಿ ಹೆಸರಿನಲ್ಲಿ ರಾಜಕೀಯ ನಡೆಸುತ್ತಿದ್ದಾನೆ. ಪ್ರಸೂತಿ ತಜ್ಞ ಕುಮಾರ್ ಹೆಂಗಳೆಯರ ಕರುಳು ಕೊಯ್ದು ಜೇಬು ತುಂಬಿಸಿಕೊಳ್ಳುತ್ತಿದ್ದಾನೆ. ಪ್ರತಿ ಹೆರಿಗೆಗೆ ಮೂರು ಸಾವಿರ ನಿಗದಿ ಮಾಡಿಟ್ಟಿದ್ದಾರೆ.

ಆದರೆ ಕೆಲ ಗಂಟೆಗಳಲ್ಲೇ ಎಲ್ಲವೂ ಬಯಲಾಗಿದೆ. ಲತಾ ಸಾವಿನಿಂದ ಕಂಗೆಟ್ಟ ಸ್ಥಳೀಯರ ಆಕ್ರೋಶ ಮುಗಿಲು ಮುಟ್ಟಿದೆ. ದಲಿತ ಮಹಿಳೆ ಮತ್ತು ಮಗುವಿನ ಸಾವಿಗೆ ವೈದ್ಯರ ಬೇಜವಾಬ್ದಾರಿ ಮತ್ತು ಕರ್ತವ್ಯಲೋಪ ಕಾರಣ. ಅಲ್ಲದೆ ವಿವಾಹಿತ ಮಹಿಳೆ ಆಸ್ಪತ್ರೆಯಲ್ಲಿ ಮೃತಪಟ್ಟ ನಂತರ ಪ್ರಕರಣವನ್ನು ಮುಚ್ಚಿ ಹಾಕಲು, ಸಾಕ್ಷ್ಯ ನಾಶಪಡಿಸಲು ಪ್ರಯತ್ನಿಸಿದ್ದಾರೆ. ಲತಾಳ ಪತಿ ಲಕ್ಷ್ಮಣ್ ಬಣಕಲ್ ಪೊಲೀಸರಿಗೆ ದೂರು ನೀಡಿದರೆ ಅಲ್ಲಿದ್ದ ಎಎಸ್‌ಐ ಜಗನ್ನಾಥ್ ಕಸದ ಬುಟ್ಟಿಗೆಸೆದಿದ್ದಾನೆ. ಮರುದಿನ ದಲಿತ ಮುಖಂಡರು ಬೀದಿಗಿಳಿಯುವ ಸೂಚನೆ ಸಿಕ್ಕ ಬಳಿಕ ಶವದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಇದಾದ ಬಳಿಕ ಮೂಡಿಗೆರೆಯ ಪ್ರಗತಿಪರರು ಬೀದಿಗಿಳಿದು ನೊಂದ ಕುಟುಂಬಕ್ಕೆ ಐದು ಲಕ್ಷ ಪರಿಹಾರ ನೀಡಬೇಕು. ಉಂಡಾಡಿ ಗುಂಡ ವೈದ್ಯರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಆ ಬಳಿಕ ಡಾ.ಇಸ್ಲಾಕ್ ವಿರುದ್ಧ 304 ಐಪಿಸಿ ಅಡಿ ಪ್ರಕರಣ ದಾಖಲಿಸಲಾಗಿದೆ. ಆದರೆ ಮೂಡಿಗೆರೆ ಎಂಜಿಎಂ ವೈದ್ಯರ ವಿರುದ್ಧ ಕ್ರಮ ಜರುಗಿಸಿಲ್ಲ, ಇದರ ಹಿಂದೆ ವ್ಯವಸ್ಥಿತ ರಾಜಕೀಯ ಷಡ್ಯಂತ್ರ ಅಡಗಿದೆ. ಡಿಎಚ್‌ಓ ಈಶ್ವರಪ್ಪ ಎಲ್ಲರಿಗೂ ನೋಟಿಸ್ ಜಾರಿಗೊಳಿಸಿದ್ದಾರಾದರೂ ಕ್ರಮ ಜರುಗಿಸುವ ಭರವಸೆಯಿಲ್ಲ.

ಜನರ ತೆರಿಗೆ ಹಣದಲ್ಲಿ ಕೋಟ್ಯಂತರ ರೂಗಳನ್ನು ವ್ಯಯಿಸಿ ವೇತನ, ಭತ್ಯೆ ಇನ್ನಿತರ ಸೌಕರ್ಯಗಳನ್ನು ವೈದ್ಯರಿಗೆ ಸರಕಾರ ಒದಗಿಸುತ್ತಿದೆ. ಈ ಬಕಾಸುರಗಳ ಬೇಜವಾಬ್ದಾರಿತನಕ್ಕೆ ಮುಗ್ಧ ಜೀವಗಳು ಬಲಿಯಾಗುತ್ತಿವೆ. ಇಲ್ಲಿನ ಎಷ್ಟೋ ವೈದ್ಯರು ಸಂಬಳದ ಜೊತೆ ಗಿಂಬಳವನ್ನೂ ಪೀಕುತ್ತಿದ್ದಾರೆ. ಜೊತೆಗೆ ಕ್ಲಿನಿಕ್ ನಡೆಸುತ್ತಿದ್ದಾರೆ. ಅಂತಹವರಲ್ಲಿ ಡಾ. ವಿಷ್ಣುಮೂರ್ತಿ, ಡಾ. ಗಿರೀಶ್, ಡಾ. ವಿಜಯ್ ಮೊದಲಿಗರು. ಇವರ ಸೇವೆ ಮಾತ್ರ ಶೂನ್ಯ. ಮೂಡಿಗೆರೆ ಎಂಜಿಎಂ ಆಸ್ಪತ್ರೆ ಮೇಲ್ದರ್ಜೆಗೇರಿದ್ದರೂ ಕೊರತೆಗಳ ಸಂತೆಯಂತಿದೆ. ಇಲ್ಲಿ ನೂರು ಹಾಸಿಗೆಗಳಿವೆ. ಆದರೆ ಸೌಲಭ್ಯ, ಸೌಕರ್ಯಗಳಿಲ್ಲ, ಮಲೆನಾಡು ಸೀಮೆಗೆ ಅಗತ್ಯವಾಗಿ ಬೇಕಾದ ಔಷಧಿಗಳಿಲ್ಲ, ಎಲವೂ ಈ ನುಂಗುಬಾಕರ ಸರ್ವೀಸ್‌ನಲ್ಲಿ ಮಂಗಮಾಯವಾಗುತ್ತಿದೆ. ಆಡಳಿತ ವೈದ್ಯಾಧಿಕಾರಿ ಡಾ. ಎಸ್.ಕುಮಾರ್ ಹೆಸರಿಗಷ್ಟೇ ಕೆಲಸದಲ್ಲಿದ್ದಾನೆ. ಆಸ್ಪತ್ರೆಯೊಳಗೆ ನಡೆಯುವುದೆಲ್ಲ ಹೊರಗಿನ ಪ್ರಪಂಚಕ್ಕೆ ತಿಳಿಯುತ್ತಿಲ್ಲ.

ನಾಯಿ ಕಚ್ಚಿದ್ದಕ್ಕೆ, ಹಾವು ಕಡಿತಕ್ಕೆ, ಅಪಘಾತ, ಮೂಳೆ ಮುರಿತ, ಮಕ್ಕಳ ರೋಗ, ಸಿಜೇರಿನ್‌ಗೆ ಚಿಕ್ಕಮಗಳೂರು, ಮಂಗಳೂರು, ಹಾಸನ, ಬೆಂಗಳೂರು, ಶಿವಮೊಗ್ಗ ಆಸ್ಪತ್ರೆಗಳಿಗೆ ಪ್ರಯಾಣಿಸಬೇಕು. ಇಲ್ಲಿ ರಕ್ತ ನಿಧಿ ಘಟಕದ ವ್ಯವಸ್ಥೆಯಿಲ್ಲ, ಅರೆವಳಿಕೆ ವೈದ್ಯರಿಲ್ಲ, ಮಕ್ಕಳ ಡಾಕ್ಟರಿಲ್ಲ, ಉಚಿತ ಔಷಧಿಗಳಿಲ್ಲ, ಡ್ರಿಪ್ಸ್‌ಗಳನ್ನೂ ಹೊರಗಿನಿಂದ ತರಬೇಕು. ಸೂಜಿ, ಸಿರಿಂಜುಗಳು ದೊರೆಯುತ್ತಿಲ್ಲ, ಮಾತ್ರೆ, ಗುಳಿಗೆ, ಔಷಧಿಗಳನ್ನು ಮೆಡಿಕಲ್ ಶಾಪ್‌ಗಳಿಂದ ದುಡ್ಡು ಕೊಟ್ಟು ಖರೀದಿಸಬೇಕು. ಇಲ್ಲಿ ಹದಿನೆಂಟು ವೈದ್ಯರ ಹುದ್ದೆಗಳಿವೆಯಾದರೂ ಹತ್ತು ಮಂದಿ ಮಾತ್ರ ಎಣಿಕೆಯಲ್ಲಿದ್ದಾರೆ. ದಿನೇಶ ಮತ್ತು ರವಿ ಎಂಬಿಬ್ಬರು ಲ್ಯಾಬ್‌ನಲ್ಲಿ ಗುಂಜಿಕೊಂಡು ರಾದ್ಧಾಂತ ಮಾಡಿಕೊಂಡಿದ್ದಾರೆ. ಕಳೆದೊಂದು ವರ್ಷದ ಲೆಕ್ಕಪತ್ರಗಳು ತಾಳೆಯಾಗುತ್ತಿಲ್ಲ, ಹೇಳದೆಕೇಳದೆ ಆಸ್ಪತ್ರೆ ಎದುರಿನ ಕಬ್ಬಿಣದ ಗೇಟು ಮಾರಿ ತಿಂದಿದ್ದಾರೆ. ಸ್ಕ್ಯಾನಿಂಗ್ ಉಪಕರಣವಿದ್ದರೂ ಪ್ರಯೋಜನವಾಗುತ್ತಿಲ್ಲ, ಎಲ್ಲದಕ್ಕೂ ಖಾಸಗಿ ಆಸ್ಪತ್ರೆಯನ್ನು ಅವಲಂಬಿಸಬೇಕಾದ ದುರಾದೃಷ್ಟ ತಾಲ್ಲೂಕಿನ ಜನರಿಗೆ ಬಂದೊದಗಿದೆ. ಅಂದಮೇಲೆ ಇದನ್ನು ಸರಕಾರಿ ಆಸ್ಪತ್ರೆ ಅನ್ನುವುದಾದರೂ ಹೇಗೆ?

ಇಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳು ಚಿಕಿತ್ಸೆಗಾಗಿ ಕಾದರೂ ವೈದ್ಯರಿರುವುದಿಲ್ಲ, ಎಲ್ಲಿದ್ದಾರೆ ಅಂತ ಕೇಳಿದರೆ ಸಾಕು ಇದ್ದಬದ್ದ ವೈದ್ಯರು, ಸಿಬ್ಬಂದಿಗಳು ಗೂಂಡಾಗಳಂತೆ ಎಗರೆಗರಿ ಮೇಲೆ ಬೀಳುತ್ತಾರೆ. ಬೆಳಗಿನ ಹನ್ನೊಂದು ಗಂಟೆ ಹತ್ತಿಗೇ ಬಾಗಿಲಿಗೆ ಬೀಗ ಜಡಿದು ಹೋಗುವ ವೈದ್ಯರೂ ಇಲ್ಲಿದ್ದಾರೆ. ಆಸ್ಪತ್ರೆಗೆ ಬರುವ ರೋಗಿಗಳು ತಮ್ಮ ಖಾಸಗಿ ಕ್ಲಿನಿಕ್‌ಗೆ ಬರುವಂತೆ ಸೂಚಿಸುವವರಿದ್ದಾರೆ. ಆಸ್ಪತ್ರೆಯಲ್ಲಿ ಔಷಧಿಗಳಿದ್ದರೂ ಮೆಡಿಕಲ್‌ಗಳಿಗೆ ಚೀಟಿ ಬರೆದು ಕೊಡುವ ಚಾಳಿ ಬಿಟ್ಟಿಲ್ಲ, ಪ್ರತಿ ವರ್ಷ 10 ಲಕ್ಷ ರೂ.ಗಳ ಔಷಧಿಗಳು ಸರಕಾರದಿಂದ ಖರೀದಿಯಾಗುತ್ತಿದೆ. ಆದರೆ ಅಗ್ಗದ ಔಷಧಿಗಳು ಮೆಡಿಕಲ್ ಶಾಪ್‌ಗಳಲ್ಲಿ ಎಗ್ಗಿಲ್ಲದೇ ಮಾರಾಟವಾಗುತ್ತಿವೆ. ಬಳಕೆದಾರರ ಶುಲ್ಕ ದುರ್ಬಳಕೆಯಾಗುತ್ತಿದೆ. ನೀರು, ನಲ್ಲಿ, ಕಸ, ಕಡ್ಡಿ, ವೈದ್ಯರ ಸಂಬಳದ ನೆಪದಡಿ ಬಳಸಿರುವ ಅನೇಕ ದಾಖಲೆಗಳಿವೆ. ನಿಜಕ್ಕೂ ನಿಷ್ಪಕ್ಷಪಾತ ತನಿಖೆ ನಡೆದರೆ ಬಹುತೇಕರು ಜೈಲು ಪಾಲಾಗುವುದು ಶತಸ್ಸಿದ್ಧ.

• ಅಜೀಜ್ ಕಿರುಗುಂದ


ನಾನೆಷ್ಟು ಒಳ್ಳೆಯವನು ಅಂತ ಮುಂದೆ ದೇಶದ ಜನಕ್ಕೆ ಗೊತ್ತಾಗುತ್ತೆ!

ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಕೂಡಲೇ ಹಲವಾರು ಸಾಹಿತಿಗಳು ಈ ಪ್ರಶಸ್ತಿ ಬೇ ಯಾರ್ಯಾರಿಗೆ ಬರಬೇಕಿತ್ತು ಎಂದು ಪಟ್ಟಿಯನ್ನೇ ಕೊಡತೊಡಗಿದ್ದಾರಂತಲ್ಲಾ, ಈ ಪೈಕಿ ಹಲವು ದಿನಗಳಿಂದ ಹಾಸಿಗೆಯಲ್ಲಿ ಅಂಗಾತ ಮಲಗಿಕೊಂಡೇ ಸತ್ತ ರಾಜಕಾರಣ ಮಾಡುತ್ತಿರುವ ಪಾಟೀಲ ಪುಟ್ಟಪ್ಪನವರು "ಜಗದೀಶ ಶೆಟ್ಟರ್ ಈ ಕೂಡಲೇ ಮುಖ್ಯಮಂತ್ರಿಯಾಗಬೇಕು. ಉತ್ತರ ಕರ್ನಾಟಕದ ಎಮ್ಮೆಲ್ಲೆಗಳು ಧಾರವಾಡದ ಎಮ್ಮೆಗಳ ಹಾಲುಕೊಡುವಷ್ಟೇ ನಿಷ್ಠೆಯಿಂದ ಶೆಟ್ಟರ್ ಕೊಟ್ಟಿಗೆಗೆ ಬಂದು ಬೆಂಬಲ ಕೊಡಬೇಕು" ಎಂದು ಅಜ್ಞಾಪಿಸಿದ್ದರು ಅದನ್ಯಾರು ಕೇಳಿಸಿಕೊಳ್ಳದೆ "ಈ ಪುಟ್ಟಪ್ಪನ ಪಿಟೀಲಿನ ರೋದನ ಇದ್ದದ್ದೆ" ಎಂದು ಸದಾನಂದನ ಹಿಂದ ಹೋದರಂತಲ್ಲಾ!

ಈಗ ಸಾಹಿತ್ಯ ವಲಯದ ಕಡೆ ತಿರುಗಿರುವ ಪಾಪು "ಜ್ಞಾನಪೀಠ ಪ್ರಶಸ್ತಿ ಭೈರಪ್ಪನಂತವರಿಗೆ ಮಾ ಇರುವಂತದ್ದು, ಅದನ್ನು ಕಂಬಾರನಂತಹವರಿಗೆ ಕೊಟ್ಟರೆ ನನ್ನಂತವನಿಗೆ ಸಹಿಸಲು ಸಾಧ್ಯವಿಲ್ಲ, ಆದ್ದರಿಂದ ಈ ಕೂಡಲೇ ಅದನ್ನು ಕಿತ್ತುಕೊಂಡು ಭೈರಪ್ಪನಿಗೆ ಕೊಡುವುದು ವಾಸಿ" ಎಂಬಂತೆ ಮಾತನಾಡಿದರಂತಲ್ಲಾ! ಇದನ ಕೇಳಿಸಿಕೊಂಡ ಚಂಪಾ "ಈಗ ನಮ್ಮ ಪಾಪು ಆತ್ಮಕ್ಕೆ ಶಾಂತಿ ಕೋರಲು ಇದು ಸೂಕ್ತ ಸಮಯ" ಎಂದರಂತಲ್ಲಾ ಥೂತ್ತೇರಿ!

****

ಇನ್ನು ಕಂಬಾರರಿಗೆ ಜ್ಞಾನಪೀಠ ಬಂದ ಬಗ್ಗೆ ಹಲವರನ್ನು ಹುಡುಕಿ ಕೇಳಲಾಗಿ, ಈ ಪೈಕಿ ಒಕ್ಕಲಿಗ ಸಂಘದ ಸಾಹಿತಿಯನ್ನು ಕೇಳಿದರೆ, ತುಂಬಾ ದನಿದ ದನಿಯಲ್ಲಿ "ಅಲ್ರೀ ಈ ಪ್ರಶಸ್ತಿಗೆ ಸದ್ಯಕ್ಕೆ ಯೋಗ್ಯವಾದ ವ್ಯಕ್ತಿ ದೇಜಗೌ ಅವರ ಸಾಹಿತ್ಯಕ್ಕಿಂತ ಸಾಮಾಜಿಕವಾಗಿ ಕೈಗೊಂಡ ಕೆಲಸಗಳು ಸಾಮಾನ್ಯವೆ. ಕುವೆಂಪುಗೆ ಜ್ಞಾನಪೀಠ ಕೊಟ್ಟ ಜ ಅವರ ಶಿಷ್ಯನನ್ನು ಪರಿಗಣಿಸಬೇಕಿತ್ತು, ಅವರ ನಂತರ ಸಿ.ಪಿ.ಕೆ.ಗೆ ಕೊಡಬೇಕಾಗಿತ್ತು, ಕಂಬಾರನ ಜಾನಪದ ನಾನ ಕಾಣದ್ದೇನು ಅಲ್ಲಾ, ಇದೇ ಈಗ ಹಳ್ಳಿ ಕಡೆ ಹೋದರೆ ಒಂದು ಹೊರೆ ಜಾನಪದ ಹೊತ್ತು ತಂದೇನು ಎಂದರಲ್ಲಾ, ಇನ್ನು ಕುರುಬರ ಪೈಕಿಯವನನ್ನು ಜ್ಞಾನಪೀಠದ ಬಗ್ಗೆ ಕೇಳಲಾಗಿ "ನೋಡಿ ಸಾ, ಆ ಜ್ಞಾನಪೀಠ ನಮ ಲಕ್ಕಪ್ಪಗೌಡ್ರಿಗೆ ಬರಬೇಕಾಗಿತ್ತು, ಅವ್ರುರು ರಾಮಾಯಣ ದರ್ಶನಂ ಕಾವ್ಯದ ಮ್ಯಾಲೆ ಬರದಿರೊ ಪುಸ್ತಗ ನೋಡಿದಿರಾ? ರಾಮಾಯಣ ದರ್ಶನಂಗಿಂತ್ಲೂ ದಪ್ಪಾಗ್ಯದೆ. ಆದ್ರಿಂದ ಗೌಡರ ಜವರಣ್ಣನಿಗಿಂತ ಕುರುಬರ ಲಕ್ಕಣ್ಣನಿಗೇ ಜ್ಞಾನಪೀಠ ಬರಬೇಕಾಗಿತ್ತು, ಅದು ಬುಟ್ಟು ಆ ಕುಂಬಾರನಿಗೆ ಕೊಟ್ಟವ್ರುರಲ್ಲಾ, ಮುಂದೆ ಗ್ಯಾರಂಟಿ ನಲ್ಲೂರು ಪ್ರಸಾದನೂ ಫ್ರಿಜ್ ಮಡಿಯಕ್ಕೆ ಟ್ರೈ ಮಾಡ್ತನೆ" ಎಂದನಲ್ಲಾ, ಥೂತ್ತೇರಿ!



****

ಬೇಲ್ ನಿರಾಕರಿಸಲ್ಪಟ್ಟು ಮತ್ತೆ ಸಿಬಿಐ ಪಾಲಾದ ಜನಾರ್ದನ್ ರೆಡ್ಡಿಯು ಆರೋಗ್ಯವಂತರಾಗಿರುವುದು ತುಂಬ ಒಳ್ಳೆಯದು ಎಂದು ಅನಂತಮೂರ್ತಿಗಳು ಆಶೀರ್ವಾದ ಮಾಡಿದ್ದಾರಲ್ಲಾ, ತನ್ನ ಶತ್ರುಗಳ ಆರೋಗ್ಯವನ್ನು ವಿಚಾರಿಸಿಕೊಳ್ಳುತ್ತಿದ್ದ ಜಗತ್ತಿನ ಮಹಾತ್ಮರ ಮೇಲ್ಪಂಕ್ತಿ ನೆನೆಸಿಕೊಂಡ ಅನಂತಮೂರ್ತಿಗಳು ಹಾರೈಸಿರುವಂತೆ ತುಂಬ ಆರೋಗ್ಯದಿಂದಿರುವ ಗಾಲಿ ರೆಡ್ಡಿಯ ಗಾಂಚಲಿಯೆಲ್ಲಾ ಕಡಿಮೆಯಾಗಿ ಯಾರಾದರೂ ಫೋನ್ ಮಾಡಿದರೆ ಸಾಕೆಂದು ಕಾಯುತ್ತಿದ್ದಾನಂತಲ್ಲಾ, ಆದಕ್ಕಾಗಿಯೇ ನಾವು ಫೋನ್ ಮಾಡಲ ರಿಂಗಾಯ್ತು.

ರಿಂಗ್ ಟೋನ್: "ಏನಿದೀ ಗೃಹಚಾರಮೂ, ಏನಿದೀ ವನವಾಸಮು, ಏನು ಚೇಸಿಂದಾನು ಅರಿಟಾ...."

"ಹಲೋ ಯಾರೂ?"

"ನಾನು ರೆಡ್ಡಿ, ಯಾಹು ಅಂತ ಪತ್ರಕರ್ತ."

"ಯಾವ ಪತ್ರಿಕೆಯಿಂದ ಏನೂ ಪ್ರಯೋಜನ ಇಲ್ಲ."

"ನಾವು ನಿಮ್ಮಿಂದ ಯಾವ ಪ್ರಯೋಜನ ಪಡಕೊಂಡೋರು ಅಲ್ಲ, ಅದನ್ನ ನಿರೀಕ್ಷೆ ಮಾಡೋರು ಅ ಸಾರ್."

"ನನ್ನ ವಿಷಯ ಏನು ಅಂತ ಗೊತ್ತಿದ್ದೂ ನೀವು ಸತ್ಯ ಸಂಗತಿಗಳನ್ನೇ ಬಚ್ಚಿಟ್ಟು ಬೇರೆ ಏನೇನೊ ಬರೀತಾಯಿದ್ದಿರಿ."

"ನಿಮ್ಮ ವಿಷಯದ ಸತ್ಯ ಸಂಗತಿ ಯಾವುದು ಸಾರ್?"

"ನಾನು ಯಾವ ತಪ್ಪನ್ನೂ ಮಾಡಿಲ್ಲ."

"ಇದು ತುಂಬ ಅನ್ಯಾಯ ಸಾರ್. ಯಾವ ತಪ್ಪನ್ನೂ ಮಾಡದೆಯಿರೋ ವ್ಯಕ್ತಿನ ಸಿಬಿಐ ಬಂಧಿಸಿ ವಿಚಾರಣೆ ಗುರಿಪಡಿಸಿರೋದು ಖಂಡನೀಯ."

"ನಿಮಗೊಂದು ವಿಷಯ ಹೇಳ್ತಿನಿ ಯಾಹೂ ಅವರೆ. ಈ ಸಿಬಿಐನಷ್ಟು ಕ್ರೂರಿಗಳನ್ನು ನಾನು ನೋಡಿ ಇರಲಿಲ್ಲ, ನಾನು ಬಳ್ಳಾರಿಯಲ್ಲಿ ನನ್ನ ಮನೆಯಲ್ಲಿ ಇದ್ದಾಗ ಎಸ್ಪಿ, ಡಿಸಿಗಳು ಜವಾನ್ರ ತರ ಬಂದು ನಿಂತುಗೊಳ್ತಿದ್ರು, ಹೇಳಿದ ಕೆಲಸ ಮಾಡ್ತಿದ್ರು. ಎಲ್ಲಾ ಅಧಿಕಾರಿಗಳೂ ಹಂಗೇ ಇರುತಾರೆ ಅಂತ ತಿಳಕೊಂಡಿದ್ದೆ ಆದ್ರೆ ಈ ಸಿಬಿಐನವರು ನನಗೊಂದಿಷ್ಟೂ ಕೇರ್ ಕೂಡ ಮಾಡ್ತಯಿಲ್ಲ, ಆದಕ್ಕೆ ನಾನು ನನಗೇನೂ ಗೊತ್ತಿಲ್ಲ, ತಪ್ಪು ಮಾಡಿಲ್ಲ ಅಂತ ಹಟ ಹಿಡಿದಿದ್ದಿನಿ."

"ಬೆಸ್ಟೆಂದ್ರೆ ನೀವು ನಾನು ಜನಾರ್ದನ ರೆಡ್ಡಿನೆ ಅಲ್ಲ ಅಂತ ಹೇಳಬೇಕು."

"ಈ ಟೈಮಲ್ಲಿ ಹಾಗೆ ಹೇಳಕ್ಕೆ ಬರಲ್ಲ, ಆದ್ರು ಸತ್ಯಕ್ಕೆ ಜಯ ಸಿಕ್ಕೇ ಸಿಗುತ್ತೆ, ಒಂದಲ್ಲ ಒಂದು ದಿನ ಈ ರೆಡ್ಡಿ ಏನು ಅಂತ ಕರ್ನಾಟಕದ ಜನ ಮಾತ್ರ ಅಲ್ಲ, ಇಡೀ ದೇಶಕ್ಕೆ ಗೊತ್ತಾಗುತ್ತೆ, ಹಾಗಂತ ಆ ದೇವರಲ್ಲಿ ಪ್ರಾರ್ಥನೆ ಮಾಡ್ತಿನಿ."


"ನೀವೇನು ಅಂತ ಈಗಾಗ್ಲೆ ಜನಕ್ಕೆ ಗೊತ್ತಾಗಿದೆ ಸಾರ್."

"ಏನಂತಾಯಿದಾರೆ ಜನ?"

"ತಿರುಪತಿ ದೇವರ ಭಕ್ತರೆಲ್ಲಾ ಅಂತಹ ಭಕ್ತನಿಗೆ ಹೀಗಾಗಬಾರದಿತ್ತು ಅಂತಾಯಿದಾರೆ. ಇನ್ನು ಬಳ್ಳಾರಿ ಜಿಲ್ಲೆ ಅಧಿಕಾರಿಗಳು ನೀವಿಲ್ದೆ ಇರೋದ್ರಿಂದ ಬೇಸರಗೊಂಡು ವರ್ಗ ಮಾಡಿಸಿಕೊಳ್ತಾಯಿದಾರೆ. ಯಡ್ಡಿ ಮತ್ತು ಸದಾನಂದ ಕೊಪ್ಪಳದ ಚುನಾವಣೆಲಿ ಸಾವಿರ ರೂ. ನೋಟು ಕೊಡಕ್ಕಾಗಲ್ಲ, ನೂರೊ ನೂರೈವತ್ತೋ ಕೊಡೋಣ ಅಂತಾಯಿದಾರೆ. ಅಂತೂ ನಿಮ್ಮಂತಹ ಅದೂ ಚಿನ್ನದಂತಹ ವ್ಯಕ್ತಿಗೆ ಹೀಗಾಗಬಾರದಿತ್ತು ಅಂತಾಯಿದಾರೆ. ಅದಿರ್ಲಿ ರೆಡ್ಡಿಯವರೆ ಹದಿನಾಲ್ಕು ಚಿನ್ನದ ಕೊಡ ಏಕೆ ಸಂಗ್ರಹಿಸಿದ್ರಿ?"

"ನೋಡಿ, ನಾವು ತುಂಬಾ ಬಡವರಾಗಿದ್ವಿ. ದಿಢೀರನೆ ಶ್ರೀಮಂತರಾದೊ. ಮತ್ತೆ ಬಡವರಾದಾಗ ಒಂದೊಂದು ಚಿನ್ನದ ಕೊಡವನ್ನು ಮಾರಿ ಜೀವನ ಮಾಡಬೇಕು ಅಂತ ಸಂಗ್ರಹಿಸಿದ್ದೆ. ಸಿಬಿಐನ ರಾಕ್ಷಸರು ನ ಕೊಡಗಳನ್ನೂ ಬಿಡದೆ ತಗೊಂಡಿದಾರೆ. ಇದು ಸರಿನ? ನೀವೇ ಹೇಳಿ ಯಾಹೂ."

"ಥೂತ್ತೇರಿ!!!"



ನ್ಯಾಯಾಂಗ ನೌಕರರ ಅಕ್ರಮ ಲೇಔಟ್ ನ್ಯಾಯಾಧೀಶರೂ ಫಲಾನುಭವಿಗಳೇ!

ಕರ್ನಾಟಕ ಲೋಕಾಯುಕ್ತರಾಗಿದ್ದ ನ್ಯಾ. ಶಿವರಾಜ್ ಪಾಟೀಲರು ತಮ್ಮ ...ಯ ಹೆಸರಿನಲ್ಲಿ ನಿಯಮಬಾಹಿರವಾಗಿ ಪಡೆದಿದ್ದ ನಿವೇಶನವೊಂದಕ್ಕೆ ...ಬಂಧಿಸಿದಂತೆ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟಿದ್ದಾರೆ. ಸಾರ್ವಜನಿಕ ಜೀವನದಲ್ಲಿ ನೈತಿಕತೆ, ಕಾಯ್ದೆ ಕಾನೂನುಗಳ ಮೌಲ್ಯಗಳನ್ನು ...ಹಿಡಿಯಲು ಅವರು ರಾಜೀನಾಮೆ ನೀಡಿರುವುದು ಶ್ಲಾಘನೀಯವೇ.


ಆದರೆ ತೆರವಾಗಿರುವ ಲೋಕಾಯುಕ್ತರ ಸ್ಥಾನಕ್ಕೆ ಸುಪ್ರೀಂಕೋರ್ಟ್‌ನ ...ಯಮೂರ್ತಿ ಶ್ರೀ ಆರ್.ವಿ. ...ೀಂದ್ರನ್ ಅಥವಾ ನಿವೃತ್ತ ...ಕೋರ್ಟ್ ಮುಖ್ಯ ನ್ಯಾಯಾಧೀಶ ...ೆ.ಕೆ.ಸೋಧಿ ಅಥವಾ ನ್ಯಾ.ಎಸ್.ಆರ್. ...ನ್ನೂರ್‌ಮಠ್‌ರವರ ಹೆಸರುಗಳು ...ಶೀಲನೆಯಲ್ಲಿವೆ ಎನ್ನಲಾಗಿದೆ.

ಲೋಕಾಯುಕ್ತರಂತಹ ಮಹತ್ತರ ...ದ್ದೆಯನ್ನು ದೀರ್ಘಕಾಲ ಖಾಲಿ ...ಸುವುದು ಒಳ್ಳೆಯದಲ್ಲ. ಆ ಸ್ಥಾನಕ್ಕೆ ...ಕ್ತರಾದವರು ಬಂದು ಕಾರ್ಯ ...ರ್ವಹಿಸುವುದು ಈ ಸಂದರ್ಭದಲ್ಲಿ ...ಮುಖ್ಯವಾಗಿದೆ.


ಆದರೆ ಲೋಕಾಯುಕ್ತರ ಹುದ್ದೆಗೆ ...ರುವವರು ಯಾವುದೇ ವಿವಾದಕ್ಕೆಡೆ ...ಡಿಕೊಡದಂತಿರಬೇಕಿದೆ. ನ್ಯಾ. ಶಿವರಾಜ್ ...ಟೀಲರು ಯಾವ ಕಾರಣಕ್ಕಾಗಿ ರಾಜೀನಾಮೆ ನೀಡಿದ್ದಾರೆಯೋ ಅದೇ ...ನದಂಡಗಳನ್ನು ನೂತನ ಲೋಕಾಯುಕ್ತರಾಗುವವರು ಪಾಲಿಸಬೇಕಿದೆ.

ಈ ಹಿನ್ನೆಲೆಯಲ್ಲಿ ನೋಡಿದರೆ ನ್ಯಾ. ರವೀಂದ್ರನ್ ಹಾಗೂ ನ್ಯಾ. ಬನ್ನೂರ್ ...ಠ್‌ರವರೂ ಸಹ ನಿವೇಶನ ವಿವಾದಕ್ಕೆ ಸಂಬಂಧಿಸಿದವರೇ ಆಗಿರುವುದು ...ಡುಬರುತ್ತದೆ. ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖಾ ನೌಕರರ ಗೃಹ ...ರ್ಮಾಣ ಸಹಕಾರ ಸಂಘಕ್ಕೆ ಸಂಬಂಧಿಸಿರುವ ವಿವಾದ ಇದು.

ಭೂಸ್ವಾಧೀನ ಕಾಯ್ದೆ, ಬಿಡಿಎಯ ನಿಯಮಗಳನ್ನೆಲ್ಲ ಲೆಕ್ಕಿಸದೆ ಅಸ್ತಿತ್ವಕ್ಕೆ ...ದಿರುವ ನ್ಯಾಯಾಂಗ ನೌಕರರ ಬಡಾವಣೆಯ ವಿವರಗಳನ್ನು ...ಲನಿಸಿದರೆ ಆಘಾತವೆನಿಸುತ್ತದೆ. ಏಕೆಂದರೆ ಈಗ ಕರ್ನಾಟಕ ರಾಜ್ಯದಲ್ಲಿ ...ಕೋರ್ಟ್ ನ್ಯಾಯಾಧೀಶರಾಗಿ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ...ಯಾಧೀಶರಾಗಿರುವ ಅನೇಕರು ಈ ಅರೆ ಸಕ್ರಮ ಹಾಗೂ ಅರೆ ...ಕ್ರಮ ಲೇಔಟ್‌ನಲ್ಲಿ ದೊಡ್ಡದೊಡ್ಡ ಸೈಟುಗಳನ್ನು ...ಪಡೆದುಕೊಂಡಿರುವುದು ಕಂಡುಬರುತ್ತಿದೆ.



ಬನ್ನೂರ್‌ಮಠ್



ಆರ್.ವಿ. ರವೀಂದ್ರನ್

ಜುಡಿಷಿಯರಿ ಲೇಔಟ್‌ನ ಅಕ್ರಮಗಳು

1983 ರಲ್ಲಿ ಅಸ್ತಿತ್ವಕ್ಕೆ ಬಂದ ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗಾಗಿ ಸರ್ಕಾರವು 1992 ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಅಳ್ಳಾಳಸಂದ್ರ, ಚಿಕ್ಕಬೊಮ್ಮಸಂದ್ರ ಹಾಗೂ ಜಕ್ಕೂರು ಚಿಕ್ಕ ಪ್ಲಾಂಟೇಷನ್ ವ್ಯಾಪ್ತಿಯ ಒಟ್ಟು 156 ಎಕರೆ 26 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು 13.11.92 ಸಂಘದ ಸುಪರ್ದಿಗೆ ನೀಡಿತ್ತು. ಆದರೆ ಸಂಘವು ಇದಲ್ಲದೆ ಸುಮಾರು 36 ಎಕರೆಯಷ್ಟು ಅಕ್ಕಪಕ್ಕದ ಭೂಮಿಯನ್ನು ರೈತರೊಂದಿಗೆ ನೇರ ವ್ಯವಹಾರ ನಡೆಸಿ ತನ್ನ ವಶಕ್ಕೆ ಪಡೆಯಲು ಯತ್ನಿಸಿತು. ಈ ಸಂಬಂಧ ಯಾವುದೇ ಭೂ ಪರಿವರ್ತನೆ ಆಗಿರದಿದ್ದರೂ ಆ ಭೂಮಿಯಲ್ಲಿ ಅಕ್ರಮ ಲೇಔಟ್ ನಿರ್ಮಿಸಿ ತನ್ನ ಸದಸ್ಯರಿಗೆ ಹಂಚಿತು. ಇದು ಕರ್ನಾಟಕ ಭೂಸುಧಾರಣೆ ಕಾಯ್ದೆ 1.2.1974 ರ ಸೆಕ್ಷನ್ 79 ಎ, 79 ಬಿ ಯ ನೇರ ಉಲ್ಲಂಘನೆಯಾಗಿದೆ. ಇದನ್ನು ಶಾಸಕ ಎ.ಟಿ. ರಾಮಸ್ವಾಮಿ ನೇತೃತ್ವದ 'ಬೆಂಗಳೂರು ನಗರ ಮತ್ತು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಸಮಗ್ರ ತನಿಖಾ' ಜಂಟಿ ಸದನ ಸಮಿತಿಯು ತನ್ನ ವರದಿಯಲ್ಲಿ ದೃಢಪಡಿಸಿದೆ.

ಅಷ್ಟೇ ಅಲ್ಲದೆ ಸಂಘವು ಹೀಗೆ ಕಾನೂನುಬಾಹಿರವಾಗಿ ಒತ್ತುವರಿ ಮಾಡಿಕೊಂಡಿರುವ ಹೆಚ್ಚುವರಿ ಭೂಮಿಯನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ಶಿಫಾರಸ್ಸು ಮಾಡಿದೆ.

ವಿಪರ್ಯಾಸವೆಂದರೆ ಶಿವರಾಜ್ ಪಾಟೀಲ್ ಸೇರಿದಂತೆ ಹಾಲಿ ಹೈಕೋರ್ಟಿನ ಅನೇಕ ನ್ಯಾಯಮೂರ್ತಿಗಳು ಇದೇ ಅರೆ ಅಕ್ರಮ ಲೇಔಟ್‌ನಲ್ಲಿಯೇ ಸೈಟುಗಳನ್ನು ಪಡೆದಿದ್ದಾರೆ.

ಇನ್ನು ಆಶ್ಚರ್ಯದ ಸಂಗತಿ ಏನೆಂದರೆ ಈ ಬಡಾವಣೆಗೆ ಕಾವೇರಿ ನೀರು ಸರಬರಾಜು ಮಾಡಲು ಪ್ರತಿ ಎಕರೆಗೆ 2 ಲಕ್ಷ ರೂ.ನಂತೆ ತೆರಿಗೆ ಪಾವತಿಸುವಂತೆ ಬಿಡಿಎ ಕೇಳಿದಾಗ ಸಂಘವು ನಿರಾಕರಿಸಿದೆ. ಅಲ್ಲದೆ ಲೇಔಟ್‌ನ ವ್ಯಾಪ್ತಿಗೆ ಬರದಿದ್ದರೂ ಯಲಹಂಕ ಪುರಸಭೆಯ ಮೂಲಕ ಚದರ ಅಡಿಗೆ ಕೇವಲ 9 ರೂ.ನಂತೆ ಫೀಜ್ ಕಟ್ಟಿ ಬಡಾವಣೆಗೆ ಅಕ್ರಮವಾಗಿ ಅನುಮತಿ ಪಡೆದಿದೆ.

ಎ.ಟಿ. ರಾಮಸ್ವಾಮಿ ಆಯೋಗವು ನ್ಯಾಯಾಂಗ ಬಡಾವಣೆಯ ಅವ್ಯವಹಾರಗಳ ಬಗ್ಗೆ ಹೀಗೆ ದಾಖಲಿಸಿದೆ:

"ನ್ಯಾಯಾಂಗ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಒಟ್ಟು 3399 ಸದಸ್ಯರನ್ನು ಹಾಗೂ 1353 ಅಸೋಸಿಯೇಟೆಡ್ ಮೆಂಬರ್‌ಗಳನ್ನು ಹೊಂದಿದ್ದು ಒಟ್ಟು 2268 ಸೈಟುಗಳನ್ನು ಹಂಚಿದೆ. ಆದರೆ ಇಲ್ಲಿ ನಿವೇಶನ ಪಡೆದಿರುವವರಲ್ಲಿ ರಾಜಕಾರಣಿಗಳು, ಕಂಟ್ರಾಕ್ಟರುಗಳು ಹಾಗೂ ಪೊಲೀಸ್ ಅಧಿಕಾರಿಗಳು ಇರುವುದು ಕಂಡುಬಂದಿದೆ. ಕೆಲವು ನ್ಯಾಯಾಧೀಶರ ಮಕ್ಕಳೂ ಇಲ್ಲಿ ಸೈಟ್ ಪಡೆದಿದ್ದಾರೆ. ಇವರೆಲ್ಲಾ ಸಂಘದ ಪ್ರಾಥಮಿಕ ಸದಸ್ಯರಾಗಲು ಅರ್ಹರಲ್ಲ."

ಇನ್ನು ಮುಂದುವರೆದು ರಾಮಸ್ವಾಮಿಯವರು ನ್ಯಾಯಾಂಗ ಬಡಾವಣೆಯ ಅಕ್ರಮಗಳನ್ನು ಹೀಗೆ ದಾಖಲಿಸಿದ್ದಾರೆ:

"ನಗರ ಯೋಜನಾ ಪ್ರಾಧಿಕಾರದ ನಿಯಮಾನುಸಾರ ಒಂದು ಬಡಾವಣೆಯ ಒಟ್ಟು ವಿಸ್ತೀರ್ಣದ ಶೇ. 52 ರಷ್ಟನ್ನು ಸೈಟುಗಳಾಗಿಯೂ, 25% ಸ್ಥಳವನ್ನು ಸಿವಿಕ್ ಅಮ್ಯೂನಿಟೀಸ್‌ಗಾಗಿಯೂ ಉಳಿದ ಶೇ. 23 ರಷ್ಟನ್ನು ರಸ್ತೆಗಳಿಗಾಗಿಯೂ ಮೀಸಲಿರಿಸಬೇಕೆಂದು ಹೇಳುತ್ತದೆ. ಆದರೆ ನ್ಯಾಯಾಂಗ ಬಡವಾಣೆಯಲ್ಲಿ ಶೇ. 65 ರಷ್ಟನ್ನು ಸೈಟುಗಳಿಗೂ ಶೇ. 5 ಮಾತ್ರ ಸಿಎ ಜಾಗವೆಂದು ಮಾರ್ಪಾಡಿಸಿಕೊಂಡಿದ್ದಾರೆ."

ಈ ವಿಚಾರದ ಬಗ್ಗೆ ಜ್ಯುಡಿಷಿಯಲ್ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್ ಸಹ ಕೋರ್ಟ್‌ನಲ್ಲಿ ದಾವೆ ಹೂಡಿದೆ.

ಸರ್ಕಾರದ ಕ್ರಮ

ನ್ಯಾಯಾಂಗ ಬಡಾವಣೆಯಲ್ಲಿನ ಅಕ್ರಮ ಸೈಟುಗಳ ಬಗ್ಗೆ ಸೂಕ್ತ ಕಾನೂನು ಕ್ರಮ ವಹಿಸಲು ಬಿಡಿಎ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ನಿಬಂಧಕರು ನಾನಾ ಹಂತಗಳಲ್ಲಿ ಈಗ ಕಾನೂನು ಕ್ರಮಕ್ಕೆ ಚಾಲನೆ ನೀಡಿದ್ದಾರೆ. ಕೆಲವು ವಿಚಾರಗಳಿಗೆ ಸಂಬಂಧಿಸಿದಂತೆ ಕೋರ್ಟ್‌ಗಳಲ್ಲಿಯೂ ಪ್ರಕರಣಗಳಿವೆ.

ಆದರೆ ಮೂಲಭೂತ ಪ್ರಶ್ನೆ ಏನೆಂದರೆ ಜಕ್ಕೂರಿನ ಬಳಿ ರಚನೆಯಾಗಿರುವ ನ್ಯಾಯಾಂಗ ಬಡವಾಣೆಯು ಅನೇಕ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿದೆ. ಸರ್ಕಾರದಿಂದ ಅನುಮತಿ ಪಡೆಯದೆ ಕೃಷಿ ಭೂಮಿಯಲ್ಲೇ ಪಾರ್ಕ್‌ಗೆ ಮೀಸಲಿಡಬೇಕಿದ್ದ ಸ್ಥಳವನ್ನೆಲ್ಲಾ 404 ಸೈಟುಗಳಾಗಿ ವಿಂಗಡಿಸಿ ಅಕ್ರಮವಾಗಿ ಮಾರಾಟ ಮಾಡಿದೆ. ಸಂಘದ ಸದಸ್ಯರಾಗಲು ಅರ್ಹತೆ ಇರದವರಿಗೂ ಸೈಟ್ ನೀಡಿದೆ. ಇಂತಹ ಅಗಾಧ ಅವ್ಯವಹಾರ ಕಾನೂನು ಉಲ್ಲಂಘನೆ ಆಗಿರುವುದು ನ್ಯಾಯಾಂಗ ನೌಕರರ ಗೃಹ ನಿರ್ಮಾಣ ಸಂಘದಲ್ಲಿ, ಇಂತಹ ಲೇಔಟ್ ನಲ್ಲೇ 84 ಮಂದಿ ನ್ಯಾಯಾಧೀಶರು ಸೈಟುಗಳನ್ನು ಪಡೆದಿರುವುದು ಎಷ್ಟರ ಮಟ್ಟಿಗೆ ಸಮರ್ಥನೀಯ?

ಇದೇ ಬಡಾವಣೆಯಲ್ಲಿ ನ್ಯಾ. ಶಿವರಾಜ್ ಪಾಟೀಲ್ 80x120 ಅಳತೆಯ ನಿವೇಶನ ಸಂಖ್ಯೆ 1399 ನ್ನು ಪಡೆದಿದ್ದಾರೆ. ನ್ಯಾ. ರವೀಂದ್ರನ್ ಸೈಟ್ ನಂಬರ್ 1392 ರಲ್ಲಿ 80x120 ಅಳತೆಯ ಸೈಟ್ ಹೊಂದಿದ್ದಾರೆ. ನ್ಯಾ. ಬನ್ನೂರ್‌ಮಠ್ ಎಸ್.ಆರ್. ಕೂಡಾ ಸೈಟ್ ನಂಬರ್ 2118/ಎ ನಲ್ಲಿ 60x 90 ಅಡಿ ಅಳತೆಯ ನಿವೇಶನ ಪಡೆದಿದ್ದಾರೆ.

ಕಾನೂನಿನ ಮುಂದೆ ಎಲ್ಲರೂ ಸಮಾನರೆಂದಾದರೆ ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅವ್ಯವಹಾರಗಳೂ ಕಾನೂನಿನ ಉಲ್ಲಂಘನೆಯೇ ಆಗುತ್ತದೆ.

• ಪಾರ್ವತೀಶ್

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
...ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು ...ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸದನ ಸಮಿತಿ ಕಚೇರಿ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ಸಂಖ್ಯೆ: ಕವಿಸ:ಅಸಪು/ಜಂಸಸ/ಸಜಒ./ 111/2006

ದಿನಾಂಕ 06.06.2007

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560 001.

ಮಾನ್ಯರೆ,

ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಬೆಂಗಳೂರು ಉತ್ತರ ತಾಲ್ಲೂಕಿನ ಅಲ್ಲಾಳಸಂದ್ರ, ಚಿಕ್ಕಬೊಮ್ಮಸಂದ್ರ ಮತ್ತು ಜಕ್ಕೂರು ಪ್ಲಾಂಟೇಷನ್‌ನಲ್ಲಿ ಸುಮಾರು 36 ಎಕರೆ ಕೃಷಿ ಭೂಮಿಯನ್ನು ಭೂ ಮಾಲೀಕರಿಂದ ಗೃಹ ನಿರ್ಮಾಣಕ್ಕೆ ನೇರವಾಗಿ ಖರೀದಿಸಿ, ಬಡಾವಣೆ ನಿರ್ಮಾಣ ಮಾಡಿರುವುದು ಭೂ ಸುಧಾರಣಾ ಕಾಯಿದೆ 79(ಬಿ)ಯ ಸಂಪೂರ್ಣ ಉಲ್ಲಂಘನೆಯಾಗಿರುತ್ತದೆ.

ಆದುದರಿಂದ ಸದರಿ ಭೂ ಸುಧಾರಣಾ ಕಾಯಿದೆ ಉಲ್ಲಂಘನೆ ಬಗ್ಗೆ ಪರಿಶೀಲಿಸಿ ಕಾನೂನು ರೀತ್ಯ ಕ್ರಮಕ್ಕೆಗೊಳ್ಳಬೇಕಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

ಎ.ಟಿ.ರಾಮಸ್ವಾಮಿ ಸರ್ಕಾರಕ್ಕೆ ಬರೆದ ಪತ್ರ

ಜಡ್ಜ್ ಮಗಳ ಸೈಟು ಹಗರಣ



ಜಡ್ಜ್ ಕೆ.ಎಲ್. ಮಂಜುನಾಥ್


ಸೈಟು ಹಗರಣದ ಆರೋಪ ಹೊತ್ತಿರುವ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಲೋಕಾಯುಕ್ತ ಕುರ್ಚಿಯಲ್ಲಿ ಸ್ಥಾನ ಗಟ್ಟಿಯಾಗುವ ಮುನ್ನವೆ ರಾಜೀನಾಮೆ ಕೊಟ್ಟು ಹೋದ ಪ್ರಕರಣವಿನ್ನೂ ಹಸಿಯಾಗಿರುವಾಗಲೆ ಹೈಕೋರ್ಟ್ ಜಡ್ಜ್ ಒಬ್ಬರು ತಮ್ಮ ಮಗಳ ಸೈಟು ಖರೀದಿಯಲ್ಲಿ ಅಕ್ರಮವೆಸಗಿರುವ ಗುಸುಗುಸು ಶುರುವಾಗಿದೆ. ಆಕೆಯ ಹೆಸರು ಚೈತ್ರ ಕೆ.ಎಂ. ಹೈಕೋರ್ಟ್‌ನ ಜಡ್ಜ್ ಕೆ.ಎಲ್. ಮಂಜುನಾಥ್‌ರ ಮಗಳು. ಆಕೆಗೆ ವಯಸ್ಸಿನ್ನು 20 ವರ್ಷ ಇರುವಾಗಲೇ ಅಂದರೆ 2004ರಲ್ಲಿ ವೈಯ್ಯಾಲಿಕಾವಲ್ ಹೌಸಿಂಗ್ ಬೋರ್ಡ್ ಕೋ ಆಪರೇಟಿವ್ ಸೊಸೈಟಿಯಿಂದ 5460 ಚದರಡಿಯ ಸೈಟೊಂದನ್ನು ಖರೀದಿ ಮಾಡಿದ್ದಾಳೆ. ಈ ಕೋ-ಆಪ್ ಸೊಸೈಟಿ ಉಗಮವಾಗಿದ್ದೆ 1984ರಲ್ಲಿ ಅಂದರೆ ಚೈತ್ರ ಹುಟ್ಟಿದ ವರ್ಷದಲ್ಲಿ, ಸೊಸೈಟಿಯ ಉಗಮದ ವರ್ಷದಲ್ಲೆ ಸೈಟಿಗೆ ಅರ್ಜಿ ಗುಜರಾಯಿಸಿ ಫೀಜು ತುಂಬಿರುವವರೆ ಇನ್ನೂ ಮೇರಾ ನಂಬರ್ ಕಬ್ ಆಯೇಗ ಅಂತ ಕಾಯುತ್ತಿರುವಾಗ ಈಕೆಗೆ ಸೈಟು ಸಿಕ್ಕಿರುವುದು ಹಲವಾರು ಗೊಂದಲಗಳಿಗೆ ಕಾರಣವಾಗಿದೆ.

2004 ರಲ್ಲಿ ಇಪ್ಪತ್ತು ವರ್ಷದ ಚೈತ್ರಾ 6,82,500 ರೂಪಾಯಿ ಕೊಟ್ಟು ನಿವೇಶನ ಸಂಖ್ಯೆ 402 ಅನ್ನು ಖರೀದಿ ಮಾಡ್ತಾಳೆ, ಅಚ್ಚರಿ ಅಂದ್ರೆ ಮಗಳ ಈ ಸೈಟು ಖರೀದಿ ವಿಷಯ ಆಕೆಯ ತಂದೆಗೇ ಗೊತ್ತಿರಲಿಲ್ಲವಂತೆ. ಹಾಗಂತ ಮಂಜುನಾಥ್ ಹಗರಣ ಬಯಲಾದ ನಂತರ ಪ್ರತಿಕ್ರಿಯಿಸಿದ್ದಾರೆ. ಹಾಗಾದರೆ ಆ ಇಪ್ಪತ್ತು ವರ್ಷದ ಹುಡುಗಿಗೆ ಅಷ್ಟು ದುಡ್ಡು ಎಲ್ಲಿಂದ ಬಂತು? ಅಪ್ಪನಿಗೇ ಗೊತ್ತಾಗದಷ್ಟು ವ್ಯವಹಾರ ಮಾಡುವ ವಯಸ್ಸೇ ಅದು? ಇವಿಷ್ಟು ಪ್ರಶ್ನೆಗಳಿಗೆ ಉತ್ತರ ಗೊತ್ತಿಲ್ಲ, ಮತ್ತೊಂದು ಇಂಟರೆಸ್ಟಿಂಗ್ ಸಂಗತಿ ಅಂದರೆ, ಸೊಸೈಟಿಯು 2004ರ ಫೆಬ್ರವರಿಯಲ್ಲಿ ಸೈಟನ್ನು ಚೈತ್ರಾ ಹೆಸರಿಗೆ ನೋಂದಾಯಿಸುತ್ತೆ ಅದೇ ವರ್ಷ ಮಾರ್ಚ್‌ನಲ್ಲಿ ಬಿಡಿಎ ಆಕೆಗೆ ಖಾತೆ ನೀಡುತ್ತೆ ಮತ್ತು ಅದೇ ವರ್ಷ ಇದೇ ಜಡ್ಜ್‌ಗಳು ಸೇಮ್ ಸೊಸೈಟಿಯ ಮೇಲಿನ ಕೇಸ್ ಒಂದರ ವಿಚಾರಣೆಯ ಜವಾಬ್ದಾರಿ ವಹಿಸಿಕೊಂಡಿರ್ತಾರೆ, ನಂತರದ ವರ್ಷವೆ ಅದಕ್ಕೆ ತೀರ್ಪನ್ನೂ ಬರೆದಿರ್ತಾರೆ. ಪಾಪ! ಎಷ್ಟು ಕಾಕತಾಳೀಯ ಅಲ್ವಾ?

...7.....

...ತಮ್ಮ ಲೋಕಿಯೇನಾದರೂ ಜೈಲಿಂದ ಹೊರಬಿದ್ದನೆಂದರೆ ...ತುಳಸಿರಾಮನ ತಾಕತ್ತು ಇಮ್ಮಡಿಗೊಳ್ಳುತ್ತವೆ. ಅಷ್ಟರಲ್ಲೇ ...ಆತನಿಗೊಂದು ಗತಿ ಕಾಣಿಸುವ ಲೆಕ್ಕ ಹಾಕಿದ ...ಮೆಂಟಲ್ ಸೀನ ರಾಜಿ ಮಾಡಿಕೊಳ್ಳುವ ನಾಟಕ ...ಮಾಡಿ ಸೆಪ್ಟೆಂಬರ್ 16 ರಾತ್ರಿ ಕಾಮಾಕ್ಷಿ ...ಬೀದಿಯ ದೊಡ್ಡಮ್ಮ ದೇವಸ್ಥಾನದ ಬಳಿ ...ತುಳಸಿರಾಮನನ್ನು ಬರ ಹೇಳಿದ್ದಾನೆ. ನಂಬಿದ ...ತುಳಸಿರಾಮ ಅನಾಯಾಸವಾಗಿ ಸೀನನ ಗ್ಯಾಂಗಿಗೆ ...ಬಲಿಯಾಗಿದ್ದಾನೆ.

ಅಲ್ಲಿಗೆ ಶಿವಮೊಗ್ಗ ಪಾತಕ ಲೋಕದ ...ಒಂದು ತಲೆ ಉರುಳಿದಂತಾಗಿದೆ. ಆದರಿದು ...ಅಷ್ಟಕ್ಕೇ ನಿಲ್ಲುವುದಿಲ್ಲ, ಸೆಪ್ಟೆಂಬರ್ 17 ಕ್ಕೆ ...ಜೈಲಿಂದ ಹೊರಬೀಳಬೇಕಿದ್ದ ತುಳಸಿರಾಮನ ತಮ್ಮ ಲೋಕಿ; ...ಅದೇನಾಯಿತೋ ಇನ್ನೂ ಜೈಲಲ್ಲೇ ಇದ್ದಾನೆ. ಕೊಲೆ ...ನಡೆದ 24 ಗಂಟೆಗಳೊಳಗಾಗಿ ದೊಡ್ಡಪೇಟೆ ಎಸ್.ಐ. ...ಮಂಜುನಾಥ್ ಹಂತಕ ಮೆಂಟಲ್ ಸೀನನನ್ನು ಹಿಡಿದು ...ಹಾಕಿದ್ದಾರೆ. ಅದು ಸರೆಂಡರ್ ನಾಟಕವೋ, ಮೊದಲೇ ...ನಿರ್ಧಾರಿತ ಕಾರ್ಯಾಚರಣೆಯೋ ಗೊತ್ತಿಲ್ಲ, ಒಂದು ಮೂಲದ ಪ್ರಕಾರ ಹಂತಕ ಮೆಂಟಲ್ ಸೀನ ಎಸ್.ಐ. ಮಂಜನಾಥ್‌ರ ನಂಬಿಕಸ್ತ ಇನ್‌ಫಾರ್ಮೆಂಟ್ ಆಗಿದ್ದ. ತುಳಸಿರಾಮ ಇದೇ ಎಸ್.ಐ. ಮಂಜುನಾಥ್ ತನಗೆ ಕಿರುಕುಳ ನೀಡುತ್ತಾರೆಂದೂ ಲಂಚ ಕೇಳುತ್ತಿದ್ದಾರೆಂದೂ ಮೇಲಧಿಕಾರಿಗಳಿಗೆ ದೂರು ಕೊಟ್ಟಿದ್ದ!




ರಮಣಗುಪ್ತ

ಎಫ್‌ಐಆರ್‌ನಲ್ಲಿ ಬಿಜೆಪಿ ನಾಯಕ

ಬಹುಶಃ ಇದೇ ಸಿಟ್ಟಿಗೆ ಬಿದ್ದು ತುಳಸಿರಾಮನ ತಂದೆ ಲಕ್ಷ್ಮಿನಾರಾಯಣ ತನ್ನ ಮಗನ ಹತ್ಯೆಯ ಹಿಂದೆ ಎಸ್.ಐ. ಮಂಜುನಾಥ್ ಕೈವಾಡವಿದೆಯೆಂದು ದೂರು ಕೊಟ್ಟಿದ್ದಾನೆ. ತಂದೆ ಲಕ್ಷ್ಮಿ ನಾರಾಯಣ ಈ ರೀತಿ ಮಗನ ಹತ್ಯೆಯ ಪಿತೂರಿದಾರರೆಂದು ಕೊಟ್ಟ ದೂರಿನಲ್ಲಿದ್ದ ಮತ್ತೊಂದು ಹೆಸರೇ ಮಾಜಿ ನಗರಸಭಾಧ್ಯಕ್ಷ ಎಂ. ಶಂಕರ್!

ಶಂಕರ್ ಶಿವಮೊಗ್ಗದ ಮಾಜಿ ಬಿಜೆಪಿ ಶಾಸಕ ಎಂ. ಆನಂದರಾವ್‌ರ ಪುತ್ರ. ಹುಟ್ಟಾ ಆರೆಸ್ಸೆಸ್ ಮತ್ತು ಪಕ್ಕಾ ಯಡಿಯೂರಪ್ಪನವರ ವಿರೋಧಿ. ಆ ಕಾರಣಕ್ಕೇ ಈಶ್ವರಪ್ಪಗೆ ಪರಮಾಪ್ತ. ಕೆಲ ತಿಂಗಳುಗಳ ಹಿಂದಷ್ಟೇ ನಗರಸಭಾಧ್ಯಕ್ಷನಾಗಿದ್ದ ಶಂಕರ್ ನಗರಸಭೆಯ ವತಿಯಿಂದ ಹೊಸ ಮಾರುಕಟ್ಟೆಯ ಮಳಿಗೆಯ ಮಂಜೂರಾತಿಗೆ ಸಂಬಂಧ ಪಟ್ಟಂತೆ ತುಳಸಿರಾಮನ ಆಕ್ರೋಶಕ್ಕೆ ತುತ್ತಾದ. ಹಿಂದಿದ್ದ ಮಾರುಕಟ್ಟೆಯನ್ನು ತೆರವುಗೊಳಿಸಿ ಅಲ್ಲಿದ್ದವರಿಗೆ ಹೊಸ ಮಾರುಕಟ್ಟೆಯಲ್ಲಿ ಸ್ಥಳಾವಕಾಶ ಕಲ್ಪಿಸಬೇಕಿತ್ತಲ್ಲ; ಈ ಪೈಕಿ ತುಳಸಿರಾಮನ ಸಂಬಂಧಿಯೊಬ್ಬರ ಹೆಸರೇ ನಾಪತ್ತೆಯಾಗಿತ್ತು, ಉದ್ದೇಶಪೂರ್ವಕವಾಗಿ ತನ್ನ ಸಂಬಂಧಿಗೆ ಮಳಿಗೆ ತಪ್ಪಿಸಿ ದ್ದಾರೆಂದೇ ತುಳಸಿರಾಮ್ ಶಂಕರ್ ವಿರುದ್ಧ ಕಿಡಿಕಾರುತ್ತಿದ್ದ.


ಯಾವತ್ತು ಮಗನ ಕೊಲೆಯಾಯಿತೋ ತಂದೆ ಲಕ್ಷ್ಮಿನಾರಾಯಣ ಎಸ್.ಐ. ಮಂಜುನಾಥ್ ಜೊತೆ ಬಿಜೆಪಿ ನಾಯಕ ಶಂಕರ್ ಹೆಸರನ್ನೂ ಸೇರಿಸಿ ದೂರುಕೊಟ್ಟ. ಹಾಗೆ ನೋಡಿದರೆ ಶಂಕರ್‌ಗೆ ಕೊಲೆ ಮಾಡಿಸುವುದಿರಲಿ ನಾಯಿ ಓಡಿಸುವಷ್ಟೂ ಧೈರ್ಯವಂತಿಕೆ ಇಲ್ಲದ ಪುಕ್ಕಲ. ಈತನ ತಂದೆ ಆನಂದರಾವ್ ಎಮ್ಮೆಲ್ಲೇಯಾಗಿದ್ದಾಗ ಕೊತ್ವಾಲ್ ವಿರುದ್ಧ ವಿಧಾನಸಭೆಯಲ್ಲಿ ಬೊಬ್ಬೆ ಹಾಕಿದ್ದಕ್ಕೆ ಆವತ್ತು ಕೊತ್ವಾಲ್ ಶಿಷ್ಯನಾಗಿದ್ದ ಬಾಂಬ್ ಕೃಷ್ಣಮೂರ್ತಿ ಆನಂದ್ ರಾವ್ ಮನೆಗೇ ಬಾಂಬು ಎಸೆದಿದ್ದ. ಸಣ್ಣ ಬೀದಿ ಜಗಳ ಕಂಡರೂ ಎದ್ದೂಬಿದ್ದು ಓಡುವ ಶಂಕರ್ ಹೆಸರನ್ನು ತುಳಸಿರಾಮನ ಕೊಲೆ ಕೇಸಿನಲ್ಲಿ ಪೊಲೀಸರು ಎಫ್‌ಐಆರ್‌ಗೆ ದಾಖಲಿಸುತ್ತಾರೆಂದರೆ ಅದರಲ್ಲೇನೋ ಹಕೀಕತ್ತಿರಲೇ ಬೇಕಲ್ಲವೆ? ಎಸ್ಪಿ ರಮಣಗುಪ್ತ ಸರ್ಕಲ್ ಇನ್ಸ್‌ಪೆಕ್ಟರ್ ಸಿದ್ಧಲಿಂಗಪ್ಪ ಮತ್ತು ಎಸ್.ಐ. ಮಂಜುನಾಥ್ ಎಷ್ಟೆಂದರೂ ಯಡ್ಡಿಯ ಹಿತೈಷಿಗಳೇ ತಾನೇ? ಈಶ್ವರಪ್ಪನವರ ವರ್ಚಸ್ಸಿಗೆ ಮಸಿ ಬಳಿಯ ಬೇಕೆಂದರೆ ಅವರ ಪಕ್ಕಾ ಬೆಂಬಲಿಗ ಶಂಕರ್‌ರನ್ನು ಕೊಲೆ ಕೇಸಿಗೆ ಸಿಲುಕಿಸಲೇಬೇಕಲ್ಲವೇ?



ಶಂಕರ್

ಹಾಗೆಂದು ಶಿವಮೊಗ್ಗದ ಬಿಜೆಪಿಯ ಈಶ್ವರಪ್ಪ ಪಟಾಲಂ ಮೈ ಪರಚಿಕೊಳ್ಳುತ್ತಿದೆ. ರೌಡಿಯೊಬ್ಬನ ಹತ್ಯೆ ಈ ಸಂಬಂಧದ ಗ್ಯಾಂಗ್ ವಾರ್, ಬಿಜೆಪಿಯ ಅಂತಃಕಲಹ ಮತ್ತು ಯಡ್ಡಿ–ಈಶ್ವರಪ್ಪ ಬಣಗಳ ಜಿದ್ದಾಜಿದ್ದಿ ಕೊನೆಕೊನೆಗೆ ಯಾವ ಮಟ್ಟ ಮುಟ್ಟುತ್ತೋ, ಏನೆಲ್ಲಾ ಅನಾಹುತಗಳಾಗುತ್ತೋ ಬಲ್ಲವರ್ಯಾರು? ಪೊಲೀಸರ ಯಥಾವತ್ ಕ್ರಮಗಳು ಕೂಡ ಹೇಗೆ ರಾಜಕೀಯದ ಬಣ್ಣಕ್ಕೆ ತಿರುಗುತ್ತಿದೆಯಲ್ಲವೇ?

• ರಾ. ಸೋಮನಾಥ್



ಸಾಂಸ್ಕೃತಿಕ ಚಿಕ್ಕಟ್ಟುಗಳನ್ನು ಕಾಣಿಸಿದ ಕವಿ

ಘೋಡಗೇರಿಯ ಒಬ್ಬ ಹುಡುಗ ತನ್ನ ಲಾವಣಿಗಳಿಂದ ಜಿನುಗಿದ್ದನ್ನು ಸಂಗ್ರಹಿಸುತ್ತ ಅಷ್ಟು ಎತ್ತರಕ್ಕೆ ಏರಿದ್ದು, ಕನ್ನಡ ಭಾಷೆಯನ್ನೂ ಒಯ್ದದ್ದು, ಕನ್ನಡ ಪ್ರಜ್ಞೆಯ ಒಂದು ಮಾದರಿಗೆ ಮನ್ನಣೆ ದೊರಕಿಸಿದ್ದು ಹೆಮ್ಮೆಯ ಸಂಗತಿ.

ಪ್ರಸಿದ್ಧ ಕವಿ ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಇದು ಸಹಜವಾಗಿಯೇ ನನ್ನೊಳಗೆ ಖುಶಿ ಮತ್ತು ಪುಳಕ ಉಕ್ಕಿಸಿದೆ. ಘೋಡಗೇರಿಯ ಒಬ್ಬ ಹುಡುಗ ತನ್ನ ಲಾವಣಿಗಳಿಂದ ಜಿನುಗಿದ್ದನ್ನು ಸಂಗ್ರಹಿಸುತ್ತ ಅಷ್ಟು ಎತ್ತರಕ್ಕೆ ಏರಿದ್ದು, ಕನ್ನಡ ಭಾಷೆಯನ್ನೂ ಒಯ್ದದ್ದು, ಕನ್ನಡ ಪ್ರಜ್ಞೆಯ ಒಂದು ಮಾದರಿಗೆ ಮನ್ನಣೆ ದೊರಕಿಸಿದ್ದು ಹೆಮ್ಮೆಯ ಸಂಗತಿ.

1958ರಲ್ಲಿ ಕಂಬಾರರ ಮೊದಲ ಕವನ ಸಂಕಲನ 'ಮುಗುಳು' ಪ್ರಕಟವಾಯಿತು. ಸುಮ್ಮನೆ ಅಂದಿನ ಕ್ಷಣಗಳನ್ನು ನೆನಪಿಸಿಕೊಳ್ಳಿ. ಕುವೆಂಪು, ದ.ರಾ.ಬೇಂದ್ರೆ ಮತ್ತು ಗೋಪಾಲ ಕೃಷ್ಣ ಅಡಿಗರು ತೀವ್ರವಾಗಿ ಬರವಣಿಗೆಯಲ್ಲಿ ತೊಡಗಿಕೊಂಡ ಕಾಲವದು. ನವೋದಯ ಲೇಖಕರು ಪಕ್ವಗೊಂಡಿದ್ದ ಮತ್ತು ಪ್ರಗತಿಶೀಲರು ಸಾಮಾಜಿಕ ಚಲನಶೀಲತೆಯನ್ನು ಆಶಿಸುತಿದ್ದ ಹಾಗು ನವ್ಯರು ವ್ಯಕ್ತಿ ಮತ್ತು ಸಮಾಜದ ದ್ವಂದ್ವಗಳಲ್ಲಿ ಆಸಕ್ತರಾಗಿದ್ದ ಕಾಲವದು. ಇಂಥ ತಿರುವುಗಳಲ್ಲಿ ನಿಂತುಕೊಂಡ ಕಂಬಾರರು 1964ರಲ್ಲಿ 'ಹೇಳತೇನ ಕೇಳ' ಬರೆದರು. ದಿಟ್ಟವಾಗಿ ತನ್ನ ಧಾತು ಹಾಗು ದಾರಿಯನ್ನು ಕಾಣಿಸಿದರು. ಅಲ್ಲಿಂದ ಈ ಕವಿ ಹಿಂತಿರುಗಿ ನೋಡುತ್ತಲೇ ಬಹು ಮುಂದಕ್ಕೆ ಹೋದದ್ದು ಕನ್ನಡದ ಅಚ್ಚರಿ. ಕೆಲವೇ ವರ್ಷಗಳಲ್ಲಿ ತನ್ನ ಬರವಣಿಗೆಯ ಮೂಲಕ ತನ್ನದೇ ಹೆದ್ದಾರಿಯನ್ನು ಕಂಡು ಕೊಂಡದ್ದು ಕನ್ನಡ ಸಾಹಿತ್ಯದಲ್ಲಿ ಚಾರಿತ್ರಿಕ ಮಹತ್ವದ ಸಂಗತಿ.

ಹಲಸಂಗಿ ಗೆಳೆಯರು ಮತ್ತು ಬೇಂದ್ರೆಯವರು ಈಗಾಗಲೇ ರೂಪಿಸಿದ ಜಾನಪದದ ಮಾದರಿಯೊಂದಿತ್ತು, ಈ ತ್ರಿಪದಿಗಳ ಹಾಗು ಲಾವಣಿಗಳಿಂದ ಕಲಿತೂ ಕಂಬಾರರ ಬರವಣಿಗೆ ಮುಂದಕ್ಕೆ ಚಲಿಸಿತು. ಬಯಲಾಟ, ಶ್ರೀಕೃಷ್ಣ ಪಾರಿಜಾತಗಳ ಬರವಣಿಗೆಯ ಕ್ರಮವನ್ನು ತನ್ನಲ್ಲಿ ಕರಗಿಸಿ ಕೊಂಡಿತು. ಕಂಬಾರರು ಬೇಂದ್ರೆಯವರಿಂದ ಪ್ರಭಾವಿತಗೊಂಡಿದ್ದಾರೆಯೆ? ಹಾಗೇನೂ ಇಲ್ಲ, ಇಬ್ಬರೂ ದೇಸಿ ಜಗತ್ತಿನಿಂದ ತಮ್ಮ ಕಾವ್ಯಕ್ಕೆ ಸತ್ವ ಸ್ವೀಕರಿಸಿದರು ಎಂಬುದಷ್ಟೆ ನಿಜ. ಆದರೆ ಈ ಸ್ವೀಕಾರದ ಕ್ರಮ ಮಾತ್ರ ಭಿನ್ನವಾಗಿದೆ. ಬೇಂದ್ರೆಯವರ 'ಕುಣಿಯೋಣು ಬಾರ' ಎಂಬ ಪದ್ಯ ಮತ್ತು ಕಂಬಾರರ 'ಋಷ್ಯಶೃಂಗದ ಒಂದನೇ ಹಾಡು' ಗಮನಿಸಿರಿ. ಮೊದಲಿನದರಲ್ಲಿ ಜೋಡಿ ಕುಣಿತಕ್ಕಾಗಿ ಹಂಬಲಿಸುವ ಒಂದು ಉದಾತ್ತ ಪ್ರೇಮವಿದ್ದರೆ, ಎರಡನೆಯದರಲ್ಲಿ ಜೋಡಿ ಕುಣಿತಕ್ಕೆ ಆಹ್ವಾನವಿದ್ದರೂ ದೇಹದ ಹಂಬಲಗಳು ವಿಚಿತ್ರ ಮಾಂತ್ರಿಕತೆಯಲ್ಲಿ ಮೈಪಡಿದಿವೆ. ಇದು ಹೀಗೇ ಬೆಳೆದು ಊರಿಗೂ ಕಾಡಿಗೂ ಹಬ್ಬಿಕೊಂಡಿದೆ. ಇಲ್ಲಿಯ ಬರವಣಿಗೆಯ ಒಳ ಉರಿಗೆ ಸಾಮುದಾಯಿಕ ನೆನಪುಗಳಿವೆ. ಹುಲಿಯ ರೂಪದಲ್ಲಿ ಸಮುದಾಯದ ಕನಸುಗಳಿಗೆ ಬೆಂಕಿಯಿಡುವ ಸಂಗತಿಗಳು, ಸಮುದಾಯದ ಬದುಕಿನ ರೂಪಕವಾಗಿ ತೆರೆದುಕೊಳ್ಳುವ ಗಂಗಾಮಾಯಿ, ಇಲ್ಲಿಯ ಬೇರುಗಳನ್ನು ಕಿತ್ತುಹಾಕುವ ಗುಡುಗುಡುಗುಮ್ಮ, ಜನಪದ ರಾಕ್ಷಸನ ಅಸಹಾಯಕತೆಗಳು ಚಾಚಿಕೊಂಡಿವೆ. 'ಬೆಳಗು' ಬೇಂದ್ರೆಯವರಿಗೆ 'ಮೂಡಲ ಮನೆಯಾ ಮುತ್ತಿನ ನೀರಿನ ಎರಕವಾ ಹೊಯ್ದಾ' ಎಂಬಂತೆ ಕಂಡರೆ ಕಂಬಾರರಿಗೆ 'ಮೂಡಣದ ಮುದಿಕುರು ಒಡೆದು ನೆತ್ತರು ಕೀವು ಸೋರಿತೊ' ಎಂಬಂತೆ ಕಾಣುತ್ತದೆ. ಈ ಪ್ರತಿಮೆಗೂ ನವ್ಯ ಮನೋಧರ್ಮಕ್ಕೂ ಇರುವ ಸಂಬಂಧವನ್ನು ಮರೆಯುವ ಹಾಗಿಲ್ಲ, ನಂತರದಲ್ಲಿ ನವ್ಯ ಮನೋಧರ್ಮವನ್ನೂ ಅವರ ಬರವಣಿಗೆ ಮೀರಿತು. ಆದರೆ ಬರವಣಿಗೆಯ ಮೊದಲ ಹಂತದಲ್ಲಿ ನವ್ಯ ಮನೋಧರ್ಮಕ್ಕೆ ಒಡ್ಡಿಕೊಳ್ಳುವ ಗಂಭೀರ ಪ್ರಯತ್ನವನ್ನೂ ಮಾಡಿತು. ಆದರೆ ಕಂಬಾರರ ಬರವಣಿಗೆಯ ಮಹತ್ವವಿರುವುದು ನವ್ಯಕ್ಕೆ ಒಡ್ಡಿಕೊಂಡಿದ್ದರಲ್ಲಿ ಅಲ್ಲ, ನವ್ಯದಿಂದ ಬಿಡುಗಡೆಗೊಳ್ಳಲು ಮಾಡಿದ ಪ್ರಯತ್ನಗಳಲ್ಲಿ.


ಇದೇನೇ ಇರಲಿ ಅವರ 'ಹೇಳತೇನ ಕೇಳ' ಬಂದಾಗ ಅದಾಗಲೇ ನವ್ಯ ಬೇರುಬಿಟ್ಟಿತ್ತು. ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಗಿರೀಶ್ ಕಾರ್ನಾಡ, ಚಂದ್ರಶೇಖರ ಪಾಟೀಲರ ಬರವಣಿಗೆಗಳು ನಿಧಾನವಾಗಿ ಕನ್ನಡಿಗರನ್ನು ಆವರಿಸಿಕೊಳ್ಳತೊಡಗಿದ್ದವು. ಇಂಥ ವಲಯದಲ್ಲಿ ಇದ್ದ ಕಂಬಾರರು ಶಿಷ್ಟ-ಜಾನಪದವೆಂಬ ಭೇದವಿಲ್ಲದೆ ಕನ್ನಡ ಕಾವ್ಯದ ಹಲವು ಮೂಲಗಳಿಂದ ಪ್ರಭಾವಿತರಾಗತೊಡಗಿದ್ದರು. ನಿಸ್ಸಂಕೋಚ, ಮುಗ್ಧತೆಗಳನ್ನು ಕಾಣಿಸಿ ಜನಪದ ಕವಿಯಂತೆ, ಅಸಹಾಯಕತೆ, ಹಪಾಹಪಿ ತೋರಿಸುತ್ತ ಹೊಸಕಾಲದ ಕವಿಯಂತೆ ಕಾಣತೊಡಗಿದರು.

ಆರಂಭದಲ್ಲಿ ಕಾವ್ಯವೆಂದರೆ ಅನುಭವದ ಉತ್ಕಟ ನಿರೂಪಣೆ ಎನ್ನುವ ಹಾಗೆ ಅವರ ಅಭಿವ್ಯಕ್ತಿ ಸಿದ್ಧಗೊಳ್ಳತೊಡಗಿತ್ತು. ಅವರ ಬರವಣಿಗೆಯ ಅದೃಷ್ಟವೆಂದರೆ ತನ್ನೆಲ್ಲ ಇಕ್ಕಟ್ಟುಗಳ ನಡುವೆಯೇ ಅದು ರೂಪಿಸಿಕೊಂಡ ದೇಸಿ ದೃಷ್ಟಿಕೋನ. ಭಾಷೆ ಮತ್ತು ದೃಷ್ಟಿಕೋನವನ್ನು ಗಟ್ಟಿಗೊಳಿಸಿಕೊಳ್ಳುತ್ತಲೇ ಅದು 'ಶಿಖರಸೂರ್ಯ', 'ಶಿವರಾತ್ರಿ'ಯವರೆಗೆ ಬಂದು ನಿಂತಿತು.

ನವ್ಯಕಾವ್ಯದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯಾಧ್ಯಯನದ ಹಿನ್ನೆಲೆಯಿಂದ ಬಂದವರಲ್ಲಿ ಒಂದು ಅಂತರ ನಿರ್ಮಾಣವಾಗಿತ್ತು ಎನಿಸುತ್ತದೆ. ಸಂವೇದನೆಯ ಮಟ್ಟದಲ್ಲಿ ಭಿನ್ನತೆ ಕಾಣಿಸಿಕೊಂಡದ್ದೆ ಇಂಥ ಅಂತರಕ್ಕೆ ಕಾರಣ. ಈ ಹೊತ್ತಿನಲ್ಲಿ ಕನ್ನಡ ಹಿನ್ನೆಲೆಯಿಂದ ಬಂದ ಕವಿಗಳು ಒದ್ದಾಡಿದ್ದೆ ಹೆಚ್ಚು. ಆದರೆ ದೇಸಿಪ್ರಜ್ಞೆಯಿಂದಾಗಿ ಕಂಬಾರರಿಗೆ ಪರ್ಯಾಯವಾದ ಒಳಮಾದರಿಯನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ನವ್ಯದ ಅನೇಕ ಭಾರಗಳಿಂದ ಬಿಡುಗಡೆಗೊಳ್ಳಲು ಅನುಕೂಲವಾಯಿತು. ಒಂದರ್ಥದಲ್ಲಿ ಕಂಬಾರರು ನವ್ಯಸಾಹಿತ್ಯದೊಳಗೇನೆ ತಾತ್ವಿಕ ಬಂಡಾಯ ಹೂಡಿದ ಕವಿ. ವಾಸ್ತವವಾಗಿ ಗೋಪಾಲಕೃಷ್ಣ ಅಡಿಗರು 'ಮಣ್ಣಿನ ವಾಸನೆ'ಯ ಮಾತನಾಡಿದರೂ ಅದು ನಿಜವಾಗಿ ಸಾಧಿತವಾದದ್ದು ಚಂದ್ರಶೇಖರ ಕಂಬಾರರ ಬರವಣಿಗೆಯಲ್ಲಿ.

ಅವರ ಬರಹ ಹಳ್ಳಿಯ ಪುರಾಣಗಳು, ಊರ ದೈವಗಳನ್ನು ಆಶ್ರಯಿಸಿ ಸಮುದಾಯದ ಮುಗ್ಧ ನಂಬಿಕೆಗಳನ್ನು ಬಣ್ಣಗೊಳಿಸಿ ಕಣ್ಣೆದುರು ದಾಪುಗಾಲು ಹಾಕುತಿದ್ದ ಹೊಸ ಜಗತ್ತಿನೊಂದಿಗೂ ಸಂವಾದ ಹೂಡಿತು. ಅದು ಬೇರೆ ಬೇರೆ ದಿಕ್ಕಿನ ಕಡೆಗೆ ಚಾಚಿಕೊಂಡ ಕ್ರಮನೋಡಿ: ಗ್ರಾಮೀಣ ಜಗತ್ತಿನಿಂದ ನಗರ ಜಗತ್ತಿನವರೆಗೆ, ಪುರಾಣ ಕಲ್ಪನೆಗಳಿಂದ ಕಟುವಾಸ್ತವದವರೆಗೆ, ಲೌಕಿಕ ಸೆಳೆತದಿಂದ ಅಲೌಕಿಕ ಪ್ರತ್ಯೇಕಿಸಿ ನೋಡಲಾಗದಂಥ ವಿಶಿಷ್ಟ ಅನನ್ಯತೆಯನ್ನು ಸ್ಥಾಪಿಸಿಕೊಂಡಿರುವ ಕಂಬಾರರ ಕಾವ್ಯ ಜೀವನಕ್ಕೆ ಈಗ ಮೂವತ್ತು ವರ್ಷ.

ಚಂದ್ರಶೇಖರ ಕಂಬಾರರಿಗೆ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಲಭಿಸಿರುವ ಈ ಸಂದರ್ಭದಲ್ಲಿ ಅವರ ಸಾಹಿತ್ಯ ಕೃಷಿಯನ್ನು ಕುರಿತಂತೆ ಮಲ್ಲೇಪುರಂ ಜಿ.ವೆಂಕಟೇಶ್ ಅವರು 1994ರಲ್ಲಿ ನಡೆಸಿದ ಸಂದರ್ಶನವನ್ನು ಇಲ್ಲಿ ಮರುಪ್ರಕಟಿಸಲಾಗಿದೆ. ಈ ಸಂದರ್ಶನವು 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟವಾಗಿತ್ತು.



ರುದ್ರವಿಲಾಸದ ಕವಿ ಕಂಬಾರ

"ನವಿಲೇ ನವಿಲೇ ಚೆಂದೊಳ್ಳಿ ನವಿಲೇ
ನಾದಗಳು ನುಡಿಯಾಗಲೇ
ಹಾಡಾದ ನುಡಿಯೊಳಗೆ ಬೆಳಕಾದಿ ಹಾಡಿನ
ಆಚೆ ಸೀಮೆಯ ತೋರಲೇ"

ಡಾ. ಚಂದ್ರಶೇಖರ ಕಂಬಾರರು ಬೆಳಗಾವಿ ಜಿಲ್ಲೆಯ ಘೋಡಗೇರಿ ಗ್ರಾಮದಲ್ಲಿ 1937 ಜನವರಿ 2ರಂದು ಹುಟ್ಟಿದರು. ಕಾವ್ಯ, ನಾಟಕ, ಕಾದಂಬರಿ ಪ್ರಕಾರಗಳಲ್ಲಿ ಕಂಬಾರರು ಪಡೆದ ಯಶಸ್ಸು ಎಣೆಯಿಲ್ಲದ್ದು. ಸಿನಿಮಾ, ರಂಗಭೂಮಿ, ಸಂಗೀತ ಕ್ಷೇತ್ರಗಳಲ್ಲಿ ಪಡೆದ ಅನುಭವಗಳು ಅವರ ಸಾಹಿತ್ಯ ಪರಿಣತಿಗೆ ಬೇರೆ ರೂಪವನ್ನು ತಂದುಕೊಟ್ಟಿವೆ. ಕವಿ ಕಂಬಾರರು ದೇಶೀ ನುಡಿಗಟ್ಟಿನಲ್ಲಿ ಆಧುನಿಕ ಕನ್ನಡ ಕಾವ್ಯದ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯವನ್ನು ತೆರೆದಿದ್ದಾರೆ. ತಮ್ಮ ಮಹತ್ವಪೂರ್ಣ ರಚನೆಗಳಿಂದ ವೈಯಕ್ತಿಕ 'ಕಾವ್ಯ ಮೀಮಾಂಸೆ'ಯನ್ನು ಉನ್ನತಸ್ಥಾನಕ್ಕೆ ಒಯ್ದಿದ್ದಾರೆ.

ಡಾ. ಕಂಬಾರರ ಎರಡನೇ ಕವನ ಸಂಕಲನ 'ಹೇಳತೇನ ಕೇಳ' ಪ್ರಕಟವಾದದ್ದು 1964ರಲ್ಲಿ, ಅಲ್ಲಿಂದ ಈವರೆಗೆ, ಕಳೆದ ಮೂವತ್ತು ವರ್ಷಗಳಲ್ಲಿ ಆಧುನಿಕ ಕನ್ನಡ ಕಾವ್ಯ ಜಗತ್ತಿನಲ್ಲಿ ಒಬ್ಬ ಮಹತ್ವದ ಕವಿಯಾಗಿ ಬೆಳೆದಿದ್ದಾರೆ. ಮುಗುಳು (1958), ಹೇಳತೇನ ಕೇಳ (1964), ತಕರಾರಿನವರು (1970), ಸಾವಿರದ ನೆರಳು (1979), ಬೆಳ್ಳಿಮೀನು (1984), ಈ ವರ್ಷ ಸಮಗ್ರ ಕಾವ್ಯ ಸಂಕಲನವಾದ 'ಈವರೆಗಿನ ಹೇಳತೇನ ಕೇಳ'(1994) ಪ್ರಕಟವಾಗಿದೆ.

ಇದರ ಜತೆಗೆ ಕಂಬಾರರು ನಾಟಕ ಮತ್ತು ಜಾನಪದ ತತ್ವಮೀಮಾಂಸೆಯಲ್ಲಿ ಹೊಸ ನೆಲೆಗಳನ್ನು ಶೋಧಿಸಿದ್ದಾರೆ. ಜಾನಪದ ರಂಗಭೂಮಿ ಮತ್ತು ಸಂಸ್ಕೃತ ರಂಗಭೂಮಿಗಳನ್ನು ಐಕ್ಯಗೊಳಿಸಿ ತಮ್ಮದೇ ಆದ 'ರಂಗಭೂಮಿ'ಯನ್ನು ನಿರ್ಮಿಸಿದ್ದಾರೆ. ಪ್ರಕಟಿತ ನಾಟಕಗಳು ಹದಿನೆಂಟು: ಅವುಗಳಲ್ಲಿ ಜೈಸಿದ ನಾಯ್ಕಾ (1975), ಹರಕೆಯ ಕುರಿ (1983), ಸಿರಿಸಂಪಿಗೆ (1989), ಹುಲಿಯ ನೆರಳು (1990) ಕೆಲವು ಪ್ರಕಟಿತ ಮಹತ್ವದ ನಾಟಕಗಳು.

ಮನುಷ್ಯನ ಬದುಕನ್ನೂ, ಸತ್ಯವನ್ನೂ ಶೋಧಿಸುವ ಕರಿಮಾಯಿ, ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ ಮತ್ತು ಸಿಂಗಾರವ್ವ ಮತ್ತು ಅರಮನೆ ಕಾದಂಬರಿಗಳು ಕಾದಂಬರಿ ಕ್ಷೇತ್ರದ ನೆಲೆಯನ್ನು ವಿಸ್ತರಿಸಿವೆ. ಇವುಗಳೊಡನೆ ಹತ್ತು ಜಾನಪದ ಕೃತಿಗಳೂ ಪ್ರಕಟವಾಗಿವೆ.

ಜನಸಾಮಾನ್ಯರ ಬದುಕಿನ ವಾಸ್ತವವಾದ ಪುರಾಣ, ಕಥೆ, ಆಚರಣೆ ಹಾಗೂ ಅವೈದಿಕ, ಸಾಂಸ್ಕೃತಿಕ ನೆಲೆಗಳಿಂದ ತಮ್ಮ ಕಾವ್ಯಜೀವನದ ಶಕ್ತಿಯನ್ನು ಪಡೆದುಕೊಂಡಿರುವ ಕಂಬಾರರು ಪಡೆದ ಪ್ರಶಸ್ತಿಗಳು ಹಲವು. ಕಾವ್ಯ ಮತ್ತು ನಾಟಕ ಪ್ರಕಾರಗಳಿಂದ

*** ನೀವು ಮೊದಲ ಕವಿತೆ ಬರೆದದ್ದು ಯಾವಾಗ? ಸಂದರ್ಭದ ಹಿನ್ನೆಲೆ ವಿವರಿಸ್ತೀರಾ ಸರ್?**

ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಬಡತನಕ್ಕೆ ಹೆದರಿ ಬಯಲಾಟದ ಬಣ್ಣಗಳಲ್ಲಿ ಅಡಗಲು ಪ್ರಯತ್ನಿಸುತ್ತಿದ್ದೆ. ಬಯಲಾಟಗಳಲ್ಲಿ ಅಭಿನಯಿಸುತ್ತಿದ್ದೆ. ಹಾಡು ಬರೆಯುತ್ತಿದ್ದೆ. ಹೈಸ್ಕೂಲಿಗೆ ಹೋದ ಮೇಲೆ ಕೃಷ್ಣಮೂರ್ತಿ ಪುರಾಣಿಕರು ಗುರುಗಳಾಗಿ ಸಿಕ್ಕರು. ನನ್ನ ಮೊದಲ ಪದ್ಯವನ್ನು ಆ ಸುಮಾರಿನಲ್ಲಿಯೇ ಬರೆದೆ. ಆ ಪದ್ಯ ಆಗ ಬೆಂಗಳೂರಿನಿಂದ ಬರುತ್ತಿದ್ದ 'ಕಥಾವಳಿ' ಎಂಬ ಮಾಸಿಕದಲ್ಲಿ ಅಚ್ಚಾಗಿ ಸರಿಕ ಸ್ನೇಹಿತರು ನನ್ನನ್ನು ಪ್ರೀತಿ ಮತ್ತು ಅಸೂಯೆಯಿಂದ ಕಾಣುವ ಹಾಗೆ ಮಾಡಿತು. ಆ ಪದ್ಯವೇ ನಾನು ಕವಿಯಾಗುವ ಕನಸು ಕಾಣುವ ಹಾಗೆ ಮಾಡಿತು. ಸಂದರ್ಭ ವಿವರಿಸೋದಕ್ಕೆ ಏನಿದೆ. ಪದ್ಯದ ಹೆಸರೇ 'ಬಡವ ಬಲ್ಲಿದ'. ನಾವು ಬಡವರು. ದಿನಾ ಕಾಲ್ನಡಿಗೆಯಲ್ಲಿ ಘೋಡಗೇರಿಯಿಂದ ಗೋಕಾಕಕ್ಕೆ ಬರುತ್ತಿದ್ದೆ. ಅದನ್ನು ಕಂಡು ಸಾವಳಗಿ ಮಠದ ಸಿದ್ಧರಾಮೇಶ್ವರ ಸ್ವಾಮಿಗಳು ತಮ್ಮ ಮಠದಲ್ಲಿ ಇಟ್ಟುಕೊಂಡು ಓದಿಸಿದರು.

* 'ಮುಗುಳು' ನಿಮ್ಮ ಮೊದಲ ಕವನ ಸಂಕಲನ. ಅದನ್ನು ಬರೆಯುವಾಗ ನಿಮ್ಮ ಕಾವ್ಯ ಗ್ರಹಿಕೆಯ ಸ್ವರೂಪಗಳು ಅಥವಾ ಒಟ್ಟು ವಾತಾವರಣ ಹೇಗಿತ್ತು?

ಅಂದಂದಿನ ಸಣ್ಣಪುಟ್ಟ ನೋವುಗಳಿಗೆ ಅಭಿವ್ಯಕ್ತಿ ಕೊಡುತ್ತಿದ್ದೆ. ಕುವೆಂಪು, ಬೇಂದ್ರೆ, ಕೈಲಾಸಂ, ಕಟ್ಟೀಮನಿ ಮುಂತಾದವರನ್ನು ಓದುತ್ತಿದ್ದೆ. ಈ ಓದು ಲೋಕದ ಬಾಗಿಲು ತೆರೆದರೆ, ಸಾವಳಗಿ ಸ್ವಾಮಿಗಳು ಊಟಕ್ಕೆ ಮುನ್ನ ಹೇಳುತ್ತಿದ್ದ ವಚನಗಳು, ನನ್ನ ತಂದೆಯಿಂದ ಬಳುವಳಿಯಾಗಿ ಬಂದ ಭಕ್ತಿ ಇವು ಅಲ್ಲಮಪ್ರಭುವಿನ ಗುಹೆಯ ಬಾಗಿಲು ತೆರೆದವು. ನನ್ನ ತಾಯಿ, ದೊಡ್ಡಮ್ಮ ಮತ್ತು ಜಾನಪದ ಕಲಾವಿದರಿಂದ ಜಾನಪದ ಲೋಕದ ಬಾಗಿಲು ತೆರೆಯಿತು.

*** 'ಹೇಳತೇನ ಕೇಳ' ಸಂಕಲನದ ಹೊತ್ತಿಗೆ ನಿಮ್ಮ ಸಂವೇದನೆಯಲ್ಲಿ ಬದಲಾವಣೆ ಆಯಿತು. ನಿರ್ಣಾಯಕವಾಗಿ ಹಾಗೆ ಬದಲಾಗಲು ಕಾರಣ?**

ನಮ್ಮ ಹಿರಿಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದಾಗ ಹೋರಾಡಿ ಬೆಳೆದ ನಮಗೆ ಬ್ರಿಟಿಷರ ಬಗೆಗೆ ಭಯ

...ಯುವರೆಗೆ, ವೈಯಕ್ತಿಕ ...ವ್ಮಾನಗಳಿಂದ ಸಾಂಸ್ಕೃತಿಕ ತಲ್ಲಣಗಳವರೆಗೆ ...ಗಳನ್ನು ವಿಸ್ತರಿಸಿಕೊಂಡಿತು. ಕನ್ನಡದಲ್ಲಿ ಐದು ...ಕಾಲ ತನ್ನ ಶಿವಾಪುರದ ಕನಸನ್ನು ಕಾವ್ಯ ...ಕಾದಂಬರಿ ಯಲ್ಲಿ ಒಂದೇ ಸಮನಾಗಿ ...ತ್ತಿ ಬಂದರವರು. ಅವರ ಶಿವಾಪುರದ ...ಗೆ, ಸಾಂಸ್ಕೃತಿಕ ಲೋಕಕ್ಕೆ ದೇಸಿದೃಷ್ಟಿಯ ...ಕ್ಕೆ ಸಿಕ್ಕ ಪುರಸ್ಕಾರವಿದು.


...ಾರರು ಹಳೆಯದನ್ನೆ ಸ್ವಲ್ಪ ಚಮತ್ಕಾರಿಕವಾಗಿ ...ರೆಯೇ? ಅದೇ ಹಳೆಯ ರಾಕ್ಷಸ, ಗೌಡ್ತಿ, ಹುಲಿ, ...ನವಿಲು ಇತ್ಯಾದಿ... ಆದರೆ ಅದು ಹಾಗಲ್ಲ. ...ಡೆದುಕೊಳ್ಳುತ್ತಿರುವ ಅರ್ಥದ ವಿಸ್ತಾರ ಮಾತ್ರ ...ಯಿಕವಾದುದಲ್ಲ, ಜೊತೆಗೆ ನವ್ಯದ ಚಲನೆಗೆ ...ಘಾತ ಕೂಡ. ಆಧುನಿಕತೆಯನ್ನೂ ಇವು ...ವ ಬಗೆ ನೋಡಿದರೆ ಇದು ಸ್ಪಷ್ಟಗೊಳ್ಳುತ್ತದೆ. ...ನು' ಸಂಕಲನದಲ್ಲಂತೂ ಆಧುನಿಕತೆಯ ಹಿಂಸೆಯ ...ಮ ದಟ್ಟವಾಗಿ ಹರಡಿಕೊಂಡಿವೆ. ದಿಲ್ಲಿಯೆಂಬ



...ವತಿ ಕ್ಯಾಬರಿಯಾಗಿ ಪರಿವರ್ತನೆಗೊಂಡಿದ್ದ ...ಯಿಂದಾಗಿ. ಬೆಲೆಯುಳ್ಳ ನಕಲಿನಗೆಯನ್ನು ...ಈಕೆ ವಿದೇಶೀ ವಿನಿಮಯದ ಸರಬರಾಜಿನಲ್ಲಿ ...ರುವ ಸ್ಲಮ್ಮಿಗರಿಗೂ ಇತ್ತ ಬಿರ್ಲಾಗಳಿಗೂ ...ಇಕ್ಕಟ್ಟಿಗೆ ಸಿಲುಕಿದ್ದಾಳೆ. ಆತ್ಮದ ಮಾರುಕಟ್ಟೆ ...ಪಟ್ಟಣದಲ್ಲಿ ಸೃಷ್ಟಿಯಾಗಿದೆ. ಇಂಥದರ ...ಕಾಡಿನ ಕರೆ, ಹಸಿರಿನ ಕರೆ ಕೈಮಾಡಿ ಕರೆದಿದೆ. ...ವಿದ್ದಾರೆ ಆ ಕಾಡಿನಲ್ಲಿ? ಶಿವಾಪುರದಲ್ಲಿ? ಪಾರಂಬಿ ...ಡ್ಡದ ನಿರವಾಣಿ, ಕರಿಮಾಯಿ, ಜಕ್ಕಲದೇವರು, ...ಮರದವ್ವ, ಬೀರಪ್ಪ, ಗಂಗಾಮಾಯಿಗಳ ...ು. ಅವೈದಿಕ ಪುರಾಣಗಳ ಜೀವಂತಿಕೆಯನ್ನು ...ಕಾವ್ಯ ತುಂಬು ಉತ್ಸಾಹದಿಂದ ಕಟ್ಟಿದೆ. ...ಮವ ಎಲ್ಲ ತರಹದ ವ್ಯಕ್ತಿ ಆಲೋಚನೆ, ಹಾಡು,

ಆಚರಣೆ, ಜೀವನಕ್ರಮಗಳ ಬಗೆಗೆ ಈ ಬರವಣಿಗೆಗೆ ಗಾಢಶ್ರದ್ಧೆಯಿದೆ. ಪುತಿನ ಕೃಷ್ಣನ ಲೋಕದಿಂದ ಪುರಾಣಗಳನ್ನಾಯ್ದಿದ್ದರು. ಕುವೆಂಪು ಪುರಾಣ ಕಥನಗಳ ಮೂಲಕ ಸಾಮಾನ್ಯ ವ್ಯಕ್ತಿಯಲ್ಲೂ ಇರಬಹುದಾದ ಬೆಳವಣಿಗೆ ಮಾದರಿಗಳನ್ನು ತೋರಿಸಿದರು. ಅಡಿಗರು ರಾಮ, ಸೀತೆ, ಹನುಮಂತ, ಭೀಷ್ಮ, ಕುಂತಿ, ಮಿಥಿಲೆ ಮೂಲಕ ಬದುಕಿನ ಇಕ್ಕಟ್ಟುಗಳನ್ನು ಧ್ಯಾನಿಸತೊಡಗಿದ್ದರು, ರಾಮಚಂದ್ರ ಶರ್ಮರಲ್ಲಿ ಗ್ರೀಕ್ ಪುರಾಣಗಳು ಅರಳಿಕೊಳ್ಳತೊಡಗಿದ್ದವು. ಕಂಬಾರರ ರಚನೆಗಳು ಅವೈದಿಕ ಪುರಾಣಗಳ ಮೂಲಕ ಸಾಂಸ್ಕೃತಿಕ ಶೋಧಕ್ಕೆ ತೊಡಗಿತ್ತು, ಇಡೀ ಗ್ರಾಮದ ತಲ್ಲಣಗಳೇ ಎದ್ದುಬೀಳುವ ಪ್ರಪಾತಕ್ಕೆ ಜಾರುತ್ತಿರುವ ವಿಕ್ಷಿಪ್ತ ಲೋಕವೊಂದು ತೆರೆದುಕೊಳ್ಳ ತೊಡಗಿತ್ತು. ತಾನು ಬಂದು ನಿಂತದ್ದು ಎಲ್ಲಿ? ಎಂಬುದನ್ನು ಹೇಳುತ್ತ ಕವಿತೆ ಹಾಲಿನ ಹೊಳೆಗೆ ರಗುತ ಬೆರೆತದ್ದು, ಎಳೆ ಮೀನಿಗೂ ಕುತ್ತು ಬಂದದ್ದು, ಫಲವತ್ತಾದ ಹೊಲದಲ್ಲಿ ಎಲುವಿನ ರಾಶಿ ಬಿದ್ದಿದ್ದು, ಹರಿಯುವ ಹೊಳೆಯಲ್ಲಿ ವಿಷ ಕಲೆತಿದ್ದನ್ನು ವಿಷಾದದಿಂದ ಕಾಣಿಸುತ್ತಿದೆ. ಈ ಜಡತ್ವದ ಸನ್ನಿವೇಶದಲ್ಲಿ ಅವೈದಿಕ ಪುರಾಣಗಳು ಏನಾದರೂ ಮಾಡಬಲ್ಲವೆ? ಎಂಬ ಕನಸು ಆಸೆ ಇಲ್ಲಿದೆ. ವಾಸ್ತವದ ತರ್ಕಗಳು ಭಯ ಹುಟ್ಟಿಸಿದಾಗ ಕಾವ್ಯ ಪುರಾಣದ ಕದ ತಟ್ಟಿದೆ. ತರ್ಕದ ನೆಲೆಗಿಂತ ಈ ಶೋಧನೆ ಹೆಚ್ಚು ಅರ್ಥಪೂರ್ಣವೆನಿಸಿದೆ. ತಮ್ಮ ಗುರುಗಳಾದ ಸಂ.ಶಿ. ಭೂಸನೂರಮಠರ ಬಗ್ಗೆ ಬರೆದಾಗಲೂ ಅವರ ಪುರಾಣ ಕಲ್ಪನೆ ಕೆಲಸ ಮಾಡುವ ಬಗೆ ಗಮನಿಸಬೇಕು.

ಸಮುದಾಯದ ಈ ಚಡಪಡಿಕೆಗಳನ್ನು ಹೀಗೆ ಸಾಂಸ್ಕೃತಿಕವಾಗಿ ದಾಖಲಿಸಿದ ಬರವಣಿಗೆ ಅಂದು ಇರಲಿಲ್ಲ, ಹಳೆಯದನ್ನು ಉಳಿಸಿಕೊಳ್ಳಲು ಒದ್ದಾಡುವ, ಇದು ಸಾಧ್ಯವಾಗದೆ ಬದಲಾವಣೆಗೆ ಹೊಂದಿಕೊಳ್ಳುವ, ಈ ಹೊಂದಿಕೆಗೆ ತಾಳ ಸಿಗದೆ ಮತ್ತೆ ಕಂಗಾಲಾಗುವ, ಕೊನೆಗೆ ಹಳೆಯದರ ನೆನಪಿನಲ್ಲಿ ಮೈಮರೆಯುವ ಸಮುದಾಯ ಇಲ್ಲಿದೆ. ಇಂಥ ಸ್ಥಿತಿಯೇ ಇದನ್ನು ನಿರಂತರ ಚಡಪಡಿಕೆಯಲ್ಲಿಟ್ಟಿವೆ. ಅತಂತ್ರವೇ ಸಮುದಾಯದ ಸ್ಥಿತಿಯಾಗಿದೆ. ತನ್ನ ಆದರ್ಶ ಸಮಾಜವನ್ನು ಕಟ್ಟಿಕೊಳ್ಳಲು ಸಾಧ್ಯವಾಗದೆ ಇರುವುದು ತನ್ನ ದುರಂತವೆಂದು ಅದು ಭಾವಿಸಿದೆ. ಇದು ಎರಡೂ ನೆಲೆಗಳಿಂದ ತಲ್ಲಣಕ್ಕೆ ಒಳಗಾಗಿದೆ. ಒಂದು: ಇಲ್ಲಿನ ಫ್ಯೂಡಲ್ ವ್ಯವಸ್ಥೆ ಇನ್ನೊಂದು; ಅನ್ಯದ ಪ್ರವೇಶ. ಫ್ಯೂಡಲ್ ವ್ಯವಸ್ಥೆಯಲ್ಲಿ ಎಲ್ಲವೂ ಚೆನ್ನಾಗಿತ್ತೆಂದು 'ಹೇಳತೇನ ಕೇಳ'ದಂಥ ಕವಿತೆಗಳು ಸಾರಿವೆ. ಇಲ್ಲಿಯ ಕೆಡುಕಿಗೆ ಅನ್ಯದ ಮೇಲೆ ಬೊಟ್ಟುಮಾಡಿವೆ. ಆದರೆ ಉಳಿದ ಅನೇಕ ಕವಿತೆಗಳನ್ನು ಗಮನಿಸಿದರೆ ಫ್ಯೂಡಲ್ ವ್ಯವಸ್ಥೆಯಲ್ಲೂ ಸಮುದಾಯ ನಿಟ್ಟುಸಿರು ಬಿಟ್ಟಿದ್ದಕ್ಕೆ ಸಾಕ್ಷಿ ದೊರೆಯುತ್ತದೆ. ಒಟ್ಟಿನಲ್ಲಿ ಸಮುದಾಯ 'ಶಿವಾಪುರ'ದಲ್ಲೂ 'ಸಿಟಿ'ಯಲ್ಲೂ ಮುಮ್ಮಲ ಮರುಗಿದೆ. ಕಂಬಾರರ ಈ ಕಾಣ್ಕೆ ಕನ್ನಡ ಕಾವ್ಯದಲ್ಲಿ ವಿಶೇಷ ಆಕಾರ ಪಡೆದುಕೊಂಡಿದೆ.



ಇಂಥ ಬಿಕ್ಕಟ್ಟುಗಳ ನಡು ವೆಯೂ ಕೊರತೆಯಿಲ್ಲದ 'ಶಿವಾ ಪುರ'ವನ್ನು ಕಟ್ಟುವ ಕನಸು ಕಂಬಾರರದು. ಹಸಿರಿನ ತವರೂರು, ಸಮೃದ್ಧ ಲಾವಣಿಗಳಿಂದ ಕೂಡಿರುವ, ಕನಸು ಕೊಡುವ, ಯೌವ್ವನವನ್ನು ಸದಾ ಕಾಪಾಡುವ, ಜಾಣ ಮುದುಕರಿರುವ, ನಲಿದಾಡುವ ಎಳೆಯರಿರುವ, ಭರಪೂರು ಫಸಲು ಬೆಳೆಯುವ ಊರಿದು. ಶಿವಾಪುರ ಕಂಬಾರರಿಗೆ ಕಳೆದುಹೋಗುತ್ತಿರುವ ಜಗತ್ತೂ ಹೌದು, ಮತ್ತೆ ಕಟ್ಟಿಕೊಳ್ಳಲು ಬಯಸುವ ಜಗತ್ತೂ ಹೌದು. ನವೋದಯದ ಹೆಚ್ಚಿನ ಕವಿಗಳಿಗೆ 'ಗ್ರಾಮ' ಆದರ್ಶದ ಪ್ರತೀಕವಾಗಿತ್ತು. ನವ್ಯದ ಸಂದರ್ಭದಲ್ಲಿದು ಜಡಗಟ್ಟಿದ ವ್ಯವಸ್ಥೆಯ ರೂಪಕವಾಯಿತು, ದಲಿತ-ಬಂಡಾಯದವರಿಗೆ ಗ್ರಾಮವು ಶೋಷಣೆಯ ಕೇಂದ್ರವಾಗಿ ಕಾಣಿಸಿದ್ದೆ ಹೆಚ್ಚು. ಕಂಬಾರರ ಕಾವ್ಯದಲ್ಲಿ ಗ್ರಾಮ ಸಂಕ್ರಮಣ ಸ್ಥಿತಿಯಲ್ಲಿದೆ. 'ಹೇಳತೇನ ಕೇಳ'ದಲ್ಲಿ ರಾಮಗೊಂಡ ಕಾಡಿಗೆ ಹೋಗಿ ನಿಂತ ಸ್ಥಿತಿಯನ್ನು 'ಕತ್ತಲೆಯ ಗವಿಯೊಳಗೆ ಕೇಂದ್ರ ತಪ್ಪಿದ ಭ್ರಾಂತಿ' ಎಂದು ವರ್ಣಿಸಲಾಗಿದೆ. ಒಂದರ್ಥದಲ್ಲಿ ಇಡೀ ಶಿವಾಪುರವೇ ಕೇಂದ್ರ ತಪ್ಪಿದ ಭ್ರಾಂತಿಯಿಂದ ನರಳುತ್ತಿದೆ. ಇದರ ಬಿಡುಗಡೆಯೇ ಕಂಬಾರರ ಕಾವ್ಯದ ಆಶಯ.

ಚಂದ್ರಶೇಖರ ಕಂಬಾರರ ಕಾವ್ಯದಲ್ಲಿ ಬರುವ ಹೆಣ್ಣುಮಕ್ಕಳು ಓದುಗರನ್ನು ಕ್ಷಣ ವಿಚಲಿತಗೊಳಿಸುತ್ತಾರೆ. ತಮ್ಮನ್ನು ಸಂಪೂರ್ಣವಾಗಿ ಗಂಡಸಿಗೆ ಒಪ್ಪಿಸಿಕೊಳ್ಳುವ ಮತ್ತು ಹೀಗೆ ಒಪ್ಪಿಸಿಕೊಳ್ಳುವುದರಲ್ಲೆ ತಮ್ಮ ಬದುಕಿನ ಸಾರ್ಥಕತೆಯನ್ನು ಕಾಣುವ ಹೆಂಗಸರು ದಟ್ಟವಾಗಿ ಹರಡಿಕೊಂಡಿದ್ದಾರೆ. ಮೈಯ ಹಂಗನ್ನು ಮೀರದ ಹೆಂಗಸರು ಬಹುತೇಕ ಕವಿತೆಗಳ ಭಾವಕೋಶವನ್ನು ನಿರ್ಮಿಸಿದ್ದಾರೆ. ಆಕೆ ತೀವ್ರ ಕಾಮುಕಳೂ,



ಚಂಚಲೆಯೂ, ಅಸಹಾಯಕಳೂ ಆಗಿದ್ದಾಳೆ. ಅವಳ ವಿರೋಧಕ್ಕೆ ಅವಕಾಶ ಕೊಡದಷ್ಟು ಪುರುಷ ಜಗತ್ತು ಇಲ್ಲಿ ಕಠೋರವಾಗಿದೆ. ಇಂಥದರ ನಡುವೆಯೇ ಕರಿಮಾಯಿ ಪುರುಷ ಜಗತ್ತಿನ ಮೌಲ್ಯಗಳನ್ನು ಮೀರಿ ನಿಂತಿದ್ದಾಳೆ. 'ನವಿಲೇ ನವಿಲೇ' ಕಾವ್ಯದ ಮಾದೇವಿ ಮೌನವಾಗಿ ಕಾಡಿಗೆ ಹೊರಡುವಲ್ಲಿ ಪ್ರತಿಭಟನೆಯ ಹಂಬಲವೇ ಇದೆ ಎನಿಸುತ್ತದೆ. ಗಂಡನ ಸಾಮೀಪ್ಯ ಹೆಂಡತಿಗೆ ತೃಪ್ತಿ ಕೊಟ್ಟಿಲ್ಲ, ಆಕೆಯ ಮೈ ಮನಸ್ಸುಗಳು ಪರಿತಪಿಸಿವೆ. ಆಕೆ ಬಯಸುವ ಸುಖ ಇನ್ನೆಲ್ಲೊ ಸಿಕ್ಕಿದೆ. ಗಂಡ ಅಂಥ ಸಾಧ್ಯತೆಯನ್ನೂ ನಾಶ ಮಾಡಿದ್ದಾನೆ. ಪುನಃ ತನ್ನ ಅಧೀನದಲ್ಲೆ ಇಟ್ಟುಕೊಳ್ಳಲು ಬಯಸಿದ್ದಾನೆ. ಆದರೆ ಮಾದೇವಿ ಎಲ್ಲವನ್ನೂ ತೊರೆದು ಕಾಡಿಗೆ ಹೊರಡುವಲ್ಲಿ ಪುರುಷನ ಅಧೀನತೆಯನ್ನು ತಿರಸ್ಕರಿಸುವ ಭಾವವೇ ಇದೆ ಎನಿಸುತ್ತದೆ. ಕಂಬಾರರ ಒಟ್ಟು ಬರವಣಿಗೆಯಲ್ಲಿ ಇಂಥ ಪಾತ್ರಗಳು ಕಡಿಮೆಯೆಂದೇ ಹೇಳಬೇಕು. ಆದರೆ ಹೆಣ್ಣು ಹೊಸ ನೋಟಕ್ಕೆ ದಕ್ಕುವುದು ಅವರ 'ಚಕೋರಿ'ಯಲ್ಲಿ ಯಕ್ಷಿಯಾಗಿ. 'ಚಕೋರಿ' ಮಹಾಕಾವ್ಯ ಹೌದೊ? ಅಲ್ಲವೊ? ಅನ್ನುವುದು ಅಷ್ಟು ಮುಖ್ಯವಲ್ಲ. ಆದರೆ ಈ ಮಾದರಿಯ ಬರವಣಿಗೆಯ ಮೂಲಕ ಕಂಬಾರರ ಸೃಜನಶೀಲತೆ ಇನ್ನೊಂದು ಪಾಜಲನ್ನು ಮುಟ್ಟಿತು. ಕಲೆಯ ಅನುಭೂತಿಯಲ್ಲಿ ಐಕ್ಯವಾದ ಚಂದಮುತ್ತನ ಹುಡುಕಾಟ ಸೃಜನಶೀಲತೆಯ ಸೂಕ್ಷ್ಮ ತಂತುಗಳನ್ನು ಆಳದಲ್ಲಿ ಅರಿಯಲು ಯತ್ನಿಸಿತು. ಇದೇ ಮಾರ್ಗವನ್ನು ಮುಂದುವರಿಸುತ್ತ 'ಶಿಖರ ಸೂರ್ಯ' ಅಧಿಕಾರ ಮತ್ತು ಅಹಮ್ಮಿನ ಆಳಕ್ಕೆ ಲಗ್ಗೆಯಿಟ್ಟಿತು. ಈಗ ಬಂದ 'ಶಿವರಾತ್ರಿ' ವಚನ ಚಳವಳಿಯ ವಿವೇಕವು ಯಾರಲ್ಲಿ ನೆಲೆಗೊಂಡಿದೆ ಎಂಬುದನ್ನು ತೋರಿಸಿದೆ.

ಅವರ ಕವಿತೆಯ ಈ ಸಾಲುಗಳನ್ನು ನೋಡಿರಿ:

ಕ್ಷಿತಿಜದ ಕಣ್ಣಲ್ಲಿ ಬೆಳಕು ಹೊಳೆಯೊ ಹಾಂಗ
ಹಾಡಬೇಕೊ ತಮ್ಮಾ ಹಾಡಬೇಕು
ಕಲ್ಲಿನ ಎದೆಯಲ್ಲಿ ಜೀವಜಲ ಚಿಲ್ಲೆಂದು
ಚಿಮ್ಮುವಂಥಾ ಹಾಡ ಹಾಡಬೇಕು
ಆಕಾಶದಂಗಳ ಬೆಳದಿಂಗಳೂ ಕೂಡಾ
ಕಂಗಾಲಾಗುವ ಹಾಡು ಹಾಡಬೇಕೊ

ಕವಿಯಾದವರು ತಾವು ಕನಸಿದಂತೆ ಹಾಡುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಕಂಬಾರರಿಗೆ ಅದು ಸಾಧ್ಯವಾಗಿದೆ.

ಅದು ಕನ್ನಡ ಭಾಷೆ ಮತ್ತು ಸಂವೇದನೆಯ ಅದೃಷ್ಟ.

• ವಿಕ್ರಮ ವಿಸಾಜಿ

...ಸಹಜವಾಗಿತ್ತು; ದೇಶದ ಎಲ್ಲ ಪಾಪಗಳಿಗೆ ಇವರೇ ಕಾರಣರೆಂಬ ...ವಣೆ ನನಗೆ ಪ್ರಿಯವಾಗಿತ್ತು, ಬಯಲಾಟದ ನಿರಕ್ಷರರ ಮಧ್ಯೆ ...ದ್ದರಿಂದ ನನ್ನಲ್ಲಿ ಈ ಅನುಭವ ಒಂದು ಮುಖ್ಯ ನೆಲೆಯನ್ನು ...ಂದು ಕಾಣುತ್ತದೆ. ಚಿಕ್ಕಂದಿನಲ್ಲಿ ಸಂಗ್ಯಾಬಾಳ್ಯ ಆಟವನ್ನು ಆಡುತ್ತಿದ್ದೆವು. ...ರದ ಅಪ್ಪಣೆ ಬೇಕಾಗಿತ್ತು, ಆದರೆ ಅದು ಸುಲಭವಾಗಿ ಸಿಕ್ಕುತ್ತಿರಲಿಲ್ಲ ...ಸಾಮಾನ್ಯವಾಗಿ ಆ ಆಟವನ್ನು ಕದ್ದು ಆಡಬೇಕಾಗಿತ್ತು, ಆಟದ ದಿನ ...ಯಾರಾದರೂ ಗೈರುಹಾಜರಾದರೆ ಅವರು ಚಾಡಿ ಹೇಳಲು ಬೆಳಗಾವಿಗೆ ...ರೆಂದು ಅನುಮಾನಿಸುತ್ತಿದ್ದೆವು. ಹೀಗೆ ನಮ್ಮವರನ್ನು ನಾವೇ ...ಎಂಬಂತೆ ಅನುಮಾನದಿಂದ ನೋಡುತ್ತಿದ್ದ ಕಾಲ. ಅದು ...ದ ನಮಗೆ ಭಯಾನಕವಾದ ಅನುಭವವಾಗಿತ್ತು, ಮುಂದೆ ಹೈಸ್ಕೂಲಿಗೆ ...ಇಲ್ಲಿ ವಾರ್ಷಿಕೋತ್ಸವದ ಕಾಲಕ್ಕೆ ಸಂಗ್ಯಾಬಾಳ್ಯ ಆಡುತ್ತಿದ್ದೆವು. ...ಳ್ಳೋ ಹಡದಪ್ಪ ಮಾತ' ಎಂಬ ಹಾಡು ಹೇಳಿ, ಕೇಳಿ ಅಳುತ್ತಿದ್ದ ...ಗ ಆ ಹಾಡನ್ನು ಇಂಗ್ಲಿಷ್ ಶಾಲೆಯಲ್ಲಿ ಆಡಿ ನಗುತ್ತಿದ್ದೆವು. ...ನಮ್ಮನ್ನು ನಾವೇ ನೋಡಿ ನಗುವಷ್ಟರಮಟ್ಟಿಗೆ ಅವರು ನಮ್ಮನ್ನು ... ಈ ಒಡೆಯುವ ಪ್ರಕ್ರಿಯೆಯೇ 'ಹೇಳತೇನ ಕೇಳ'.

...ಮ್ಮ ಕಾದಂಬರಿಗಳಲ್ಲಿ ಮಹಾಶಮಶಾಹಿ ನಂತರದ ಭಾರತದ ...ತಲ್ಲಣಗಳನ್ನು ಹುಡುಕುತ್ತಿದ್ದೀರೋ? ಅಥವಾ ಮನುಷ್ಯ ಸಮಾಜದ ...ಶೋಧಿಸುತ್ತಿದ್ದೀರೋ?

...ಡೂ ಬೇರೆ ಬೇರೆಯಲ್ಲ, ವಿಘಟನೆಯನ್ನು – ಅದು ವ್ಯಕ್ತಿತ್ವದ ...ಗಲೀ, ಸಾಮಾಜಿಕ ನೆಲೆಯಲ್ಲಾಗಲೀ – ನಿರಾಕರಿಸುತ್ತ ವಿರೋಧಿಸುತ್ತ ...ದುನ್ನು ಹಂಬಲಿಸುವ ನನಗೆ ಇವುಗಳನ್ನು ಬೇರ್ಪಡಿಸಿ ನೋಡುವುದು ...ಇಲ್ಲ.

...ಮ್ಮ ನಾಟಕ, ಕಾದಂಬರಿಗಳಲ್ಲಿ ನಿಮ್ಮ ಶಕ್ತಿಯನ್ನೆಲ್ಲ ಧಾರೆ ಎರೆದು ...ಅಂತ ಅನಿಸುವ ಪಾತ್ರಗಳು ಯಾವುವು?

...ಸೃಷ್ಟಿಸಿದ ಎಲ್ಲ ಪಾತ್ರಗಳೂ ನನಗೆ ಇಷ್ಟ. ಕೆಲವು ಹೆಚ್ಚು ತೃಪ್ತಿ

...ಜಾನಪದವು ನಿಮ್ಮ ಸೃಜನಶೀಲ ಕೃತಿಗಳಿಗೆ ಯಾವ ರೀತಿಯ ...ನೀಡಿದೆ? ಕನ್ನಡ ಜಾನಪದ ಕೆಲಸಗಳ ಬಗೆಗೆ ನಿಮ್ಮ ಕಾಮೆಂಟ್?

...ಪದವನ್ನು ಕೂಡ ನನ್ನಿಂದ ಬೇರ್ಪಡಿಸಿ ನಾನು ನೋಡಿಕೊಂಡಿಲ್ಲ. ...ಭಾಗವಾಗಿ ಆಲೋಚಿಸುವಂತೆ, ಸ್ಪಂದಿಸುವಂತೆ ಮಾಡಿದ್ದೇ ...ಂದು ನನ್ನ ಭಾವನೆ.

...ಜಾನಪದ ಕೆಲಸಗಳ ಬಗೆಗೆ ಬಹಳ ಅಸಮಾಧಾನವಿದೆಯೆಂದು ...ಳು. ಪಶ್ಚಿಮದವರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ನಾವು ...ನಮ್ಮ ಜಾನಪದ ಅಧ್ಯಯನ ಮಾಡಿದ್ದೇವೆಯೇ ವಿನಾ ನಮ್ಮ ...ಗಳ ಪ್ರಯೋಜನವನ್ನು ನಾವು ಪಡೆದೇ ಇಲ್ಲ, ಪಶ್ಚಿಮದ ಅಗತ್ಯಕ್ಕೆ, ...ನ ಇಪ್ಪತ್ತೈದು ವರ್ಷಗಳಲ್ಲಿ ಭಾಷಾ ಶಾಸ್ತ್ರದ ಅಧ್ಯಯನಗಳಾದಂತೆ ಈಗ ನಮ್ಮ ಜಾನಪದ ಅಧ್ಯಯನಗಳು ಕೂಡ ನಡೆಯುತ್ತಿವೆ. ನಮ್ಮ ಕ್ಷೇತ್ರ ಕಾರ್ಯಗಳಿಂದ ಪಶ್ಚಿಮದ ವಿದ್ವಾಂಸರಿಗೆ ಮಾಹಿತಿ ಒದಗಿಸಿದ್ದೇ ನಮ್ಮ ಸಾಧನೆ. ತೊಂಡಿ ಮತ್ತು ಬರಹದ ಸಂಪ್ರದಾಯಗಳು ಜೊತೆಜೊತೆಯಾಗಿ ಇರುವ ನಮ್ಮ ಸಂಸ್ಕೃತಿಯನ್ನು ತಿಳಿಯಲು ಜಾನಪದದ ಪ್ರತ್ಯೇಕ ಅಧ್ಯಯನದ ಅಗತ್ಯವಿಲ್ಲವೆಂದೇ ನನ್ನ ಭಾವನೆ.

** ನಿಮಗೆ ಎಡಪಂಥೀಯ ಐಡಿಯಾಲಜಿ ಬಗೆಗೆ ಅಸಹನೆ ಇರುವಂತಿದೆ. ಒಟ್ಟು ಭಾರತದ ಸಂದರ್ಭದಲ್ಲಿ ಎಡಪಂಥೀಯ ಸಮಾಜವಾದೀ ವಿಚಾರಧಾರೆಗಳು ಬೆಳೆಯುತ್ತಿದ್ದರೂ ನಿಮ್ಮ ಕೃತಿಗಳಲ್ಲಿ ಅವು ಬೇರೆ ಆಕೃತಿಗಳಲ್ಲಿ ನಿಲ್ಲುತ್ತವೆ. ಇದಕ್ಕೆ ಕಾರಣ?*


ನನಗೆ ಇದು ತಿಳಿದಿರಲಿಲ್ಲ. ಹೋಗಲಿ, ಎಡಪಂಥೀಯ ಐಡಿಯಾಲಜಿಯ ಬಗ್ಗೆ ಅಸಹನೆ ಇದೆ ಎಂದಾದರೆ, ಬಲಪಂಥೀಯದ ಬಗೆಗೆ ಒಲವು ಇದೆಯೆಂದು ಅರ್ಥವೋ? ಎರಡೂ ಅಲ್ಲ. ಬದುಕಿನ ಬಗ್ಗೆ ತೀವ್ರವಾಗಿ ಪ್ರೀತಿಯಿರುವ ಯಾವುದೇ ಕವಿ ಹೀಗೆ ವಿಂಗಡಿಸಲಾರ. ಬದುಕನ್ನು ಅಖಂಡವಾಗಿ ಬದುಕಬೇಕೆಂಬ, ಗ್ರಹಿಸಬೇಕೆಂದು ನಂಬಿಕೆಯಿರುವ ನನಗೆ ಇದು ಅಸಹಜ. ನನ್ನ ಕೃತಿಗಳಲ್ಲೂ ಅದು ವ್ಯಕ್ತವಾಗಿದೆಯೆಂದು ಭಾವಿಸುತ್ತೇನೆ.

** ಇದನ್ನು ಅನುಸರಿಸಿಕೊಂಡೆ ಇನ್ನೊಂದು ಪ್ರಶ್ನೆ. ನೀವು ಮಾವೋ ಬಗೆಗೆ ಪದ್ಯ ಬರೆದಿದ್ದೀರಿ. ಆದರೆ, ರೂಪಕವಾಗಿಯೋ ಪ್ರತಿಮೆಯಾಗಿಯೋ ಗಾಂಧಿ, ಲೋಹಿಯಾ, ಜೆ.ಪಿ – ನಿಮ್ಮ ಕೃತಿಗಳಲ್ಲಿ ಗೈರುಹಾಜರಿಯಾಗಿದ್ದಾರೆ?*

'ಮಾವೋತ್ಸೇತುಂಗ' ನನಗೆ ಪ್ರಿಯನಾದುದು ಕವಿಯಾಗಿ, ಆದರ್ಶವಾದಿಯಾಗಿ. ಕವಿಗಳಿಗೆ ಕನಸುಗಳಿರುತ್ತವೆ. ಅವುಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಅಧಿಕಾರವಿರುವುದಿಲ್ಲ, ರಾಜಕಾರಣಿಗಳಿಗೆ ಅಧಿಕಾರವಿರುತ್ತದೆ; ಕನಸುಗಳಿರುವುದಿಲ್ಲ, ಎರಡೂ ಆಗಿದ್ದವನು ಮಾವೋತ್ಸೇತುಂಗ. ಅಂಥವನು ವಿಫಲನಾದರೆ ದುಃಖವಾಗುತ್ತದೆ. ಅಲ್ಲದೆ ಆ ಸಂದರ್ಭದಲ್ಲಿ ಗಾಂಧೀಜಿಯ ದರ್ಶನಗಳನ್ನು ನಿರಾಕರಿಸಿ ಮಾವೋ ವಿಚಾರಧಾರೆಯನ್ನು ಚರ್ಚಿಸುವುದರ ಖಯಾಲಿ ನಮ್ಮ ಬುದ್ಧಿಜೀವಿಗಳಲ್ಲಿ ಜಾಸ್ತಿ ಇತ್ತು.

ಗಾಂಧೀಜಿ ಬಗ್ಗೆ ಕವನ ಬರೆದಿದ್ದೇನೆ. ನಿಮಗೆ ಯಾಕೆ ಸಿಕ್ಕಿಲ್ಲವೊ ಕಾಣೆ. ಸ್ವಾತಂತ್ರ್ಯ ಮತ್ತು ಸಮಾನತೆಯಂಥ ವಿಚಾರಗಳು ನಮಗೆ ರಕ್ತಗತವಾಗುವ ಹಾಗೆ ಮಾಡಿದವರೇ ಗಾಂಧೀಜಿಯವರು. ಅಂಥ ವಿಶಾಲ ಕಲ್ಪನೆಗಳಿಗೆ ಅನೇಕ ಜನ ವಿವರಗಳನ್ನು ಸೇರಿಸಿದರು. ಒಂದು ವಿಚಾರವನ್ನು ನೀವು ಬದುಕುತ್ತೀರಿ ಇಲ್ಲವೆ ಬದುಕುವುದಿಲ್ಲ ಅಷ್ಟೆ. ಹೇಳಿಕೊಳ್ಳುವುದಿಲ್ಲ.

** ಸಮಕಾಲೀನ ಕನ್ನಡ ಸಾಹಿತ್ಯ ವಲಯದಲ್ಲಿ ನೀವು ಅತ್ಯಂತ ತೀವ್ರವಾಗಿ ಪ್ರೀತಿಸುವ ತಿರಸ್ಕರಿಸುವ ಸಂಗತಿಗಳು ಯಾವುವು? ಖಚಿತವಾಗಿ ಹೇಳಿ.*



ಬದುಕಿನ ಪರವಾಗಿರುವ ಎಲ್ಲ ಸಾಹಿತ್ಯವನ್ನು ಪ್ರೀತಿಸುತ್ತೇನೆ. ಅದಕ್ಕೆ ವಿರುದ್ಧವಾಗಿರುವುದನ್ನು ತಿರಸ್ಕರಿಸುತ್ತೇನೆ.

** ಈಗ ಬರೆಯುತ್ತಿರುವ ಸಮಕಾಲೀನ ಕನ್ನಡ ಸಾಹಿತ್ಯ ಕುರಿತು ನಿಮ್ಮ ಚಿಂತನೆಗಳೇನಾದರೂ ಇವೆಯೇ?*

ಇಂದಿನ ಲೇಖಕ ಇತಿಹಾಸ ಪ್ರಜ್ಞೆಯಿಂದ ದೂರ ಉಳಿಯುವುದು ಸಾಧ್ಯವಿಲ್ಲ. ದಿನನಿತ್ಯದ ಇತಿಹಾಸ, ಪತ್ರಿಕೆಗಳ ಮೂಲಕ ಶಬ್ದಾರ್ಥಗಳಲ್ಲಿ ಒಡಮೂಡುತ್ತದೆ. ಈ ಇತಿಹಾಸಕ್ಕೆ ಅವನು ಪ್ರತಿಕ್ರಿಯೆಯನ್ನು ತನ್ನ ಕೃತಿಯಲ್ಲಿ ತೋರಿಸುತ್ತಾನೆ. ಇತಿಹಾಸ ಜೊತೆಗಿನ ಅವನ ಪ್ರತಿಕ್ರಿಯೆ ಮತ್ತು ಜಗಳಗಳೆಲ್ಲ ಅವನ ಗದ್ಯದ ಮೂಲಕ ಪ್ರಕಟವಾಗುತ್ತದೆ. ಒಂದು ಕಾದಂಬರಿಯಾಗಲಿ, ಕಥೆಯಾಗಲಿ ಇಂದು ಹುಟ್ಟುವುದೇ ಇತಿಹಾಸದಲ್ಲಿ, ಅದರ ಸಂಬಂಧ ಕೂಡ ಇತಿಹಾಸದೊಡನೆ, ಸಾಹಿತ್ಯದಲ್ಲಿ ವಾಸ್ತವವಾದವೆನ್ನುವುದು ಕೇವಲ ಒಂದು ಅಭಿವ್ಯಕ್ತಿಯ ವಿಧಾನ ಅಲ್ಲ, ಅದು ಇತಿಹಾಸವನ್ನು ನೋಡುವ ಕಣ್ಣು ಎನ್ನುವುದು ನಮ್ಮ ಅನೇಕ ಲೇಖಕರಿಗೆ ಗೊತ್ತಿಲ್ಲ. ಇತಿಹಾಸದ ಸಂಪರ್ಕದಿಂದ ಪರಿವರ್ತನೆಗೊಂಡ ಶಬ್ದಾರ್ಥಗಳ ವ್ಯವಸ್ಥೆ ಹೊಸ ಮೌಲ್ಯ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನ ಮಾಡುತ್ತದೆ. ಒಳಿತು ಕೆಡಕುಗಳ, ಸರಿತಪ್ಪುಗಳ, ವಿವೇಕ-ಅವಿವೇಕಗಳ ನಿರ್ಣಯ ಆಗುವುದು ಈ ವ್ಯವಸ್ಥೆಯಿಂದ. ಹೊಸ ಮಾನವತಾ ವಾದಕ್ಕೂ ವಾಸ್ತವವಾದಕ್ಕೂ ನಿಕಟವಾಗಿ ಸಂಬಂಧ ಇದೆಯೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಇತಿಹಾಸ ಮಾನವತಾವಾದಕ್ಕೇ ನಿಲ್ಲುವುದಿಲ್ಲ, ಅದು ಯಾವಾಗಲೂ ಗತಿಶೀಲವಾಗಿರುತ್ತದೆ. ಐತಿಹಾಸಿಕ ಸಿದ್ಧಾಂತಗಳನ್ನು ಮನುಷ್ಯನ ಇತಿಹಾಸವನ್ನೇ ಸುಳ್ಳು ಮಾಡುತ್ತದೆ. ಅದೇನಿದ್ದರೂ ಕಾವ್ಯಕ್ಕೆ ಇತಿಹಾಸವನ್ನು ಮೀರುವ ಛಲ ಇಲ್ಲದಿದ್ದರೆ ಅದು ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ. ಅಥವಾ ಗದ್ಯದ ಪ್ರಭಾವಕ್ಕೆ ಒಳಗಾಗಿ ತನ್ನ ಅನನ್ಯತೆಗೆ ಎರವಾಗುತ್ತದೆ. ಕಾವ್ಯಕ್ಕೆ ಇತಿಹಾಸವನ್ನು ಮೀರುವಂಥ ಅನನ್ಯತೆಯನ್ನು ತಂದುಕೊಡುವ ಕೆಲಸ ಈಗ ತುರ್ತಾಗಿ ಆಗ ಬೇಕಾಗಿದೆ ಎಂದು ಅನಿಸುತ್ತದೆ.

**ನಿಮಗೆ ಯಾವಾಗಲೂ ಕಾಡುವ ಲೇಖಕರು ಯಾರು?*

ಕನ್ನಡದಲ್ಲಿ ಅಲ್ಲಮಪ್ರಭು, ಇಂಗ್ಲಿಷಿನಲ್ಲಿ ಡಬ್ಲ್ಯು.ಬಿ.ಏಟ್ಸ್.

** ನೀವು ಈಚೆಗೆ ಬರೆಯುತ್ತಿರುವ 'ಯಕ್ಷಿ' ಬಗೆಗೆ ಹೇಳಿ?*

ಅದನ್ನು ಇನ್ನೂ ಬರೆಯುತ್ತಿರುವುದರಿಂದ ಅದನ್ನು ಓದಿದ ನೀವೇ ಅದರ ಸ್ವರೂಪದ ಬಗೆಗೆ ಹೇಳಿರಿ.

ಈಗ ನಾನು ಓದಿರುವಷ್ಟು ಯೋಚಿಸಿದರೆ ಇದು ಧ್ಯಾನಪೂರ್ಣ ಕಾವ್ಯ. ಲೌಕಿಕ ಮತ್ತು ಅಲೌಕಿಕ ಜಗತ್ತುಗಳನ್ನು ಒಟ್ಟಿಗೆ ಐಕ್ಯಗೊಳಿಸುವ ಕಥನರೂಪೀ ಕೃತಿ. ಆಕೃತಿಯ ದೃಷ್ಟಿಯಿಂದಲೂ ಇದು ಬೇರೆ ಬಗೆಯದೆ. ಇದರಲ್ಲಿ ಬರುವ 'ಯಕ್ಷಿ' ನಿಗೂಢಗಳನ್ನು ಶೋಧಿಸಲು ಹೊರಡುವ ಮನುಷ್ಯನ ಆಸೆಗಳಿಗೆ ಒಂದು ಬಹುರೂಪೀ ಸಂಕೇತ. ನಮಸ್ಕಾರ.


ಸಂದರ್ಶನ: ಮಲ್ಲೇಪುರಂ ಜಿ. ವೆಂಕಟೇಶ್

ಸೆಪ್ಟೆಂಬರ್ 21, 1994


ಶಿರಸಿಯಲ್ಲಿ ಅರಣ್ಯ ಲೂಟಿ ಕಾಡುಗಳ್ಳರ ಕೂಟದಲ್ಲಿ ಘಟಿಂಗ ಅರಣ್ಯಾಧಿಕಾರಿಗಳು!

ಒಂದಲ್ಲ ಎರಡಲ್ಲ ಸುಮಾರು ನಾಲ್ಕು ಸಾವಿರ ಬೆಲೆಬಾಳುವ ಬೃಹದಾಕಾರದ ಮರಗಳ ಮಾರಣ ಹೋಮ! ಹಾಡುಹಗಲೇ ಕಾಡುಗಳ್ಳರು ಗರಗಸ, ಜೆಸಿಬಿ ಯಂತ್ರದಿಂದ ದೊಡ್ಡ-ದೊಡ್ಡ ಮರಗಳನ್ನು ಧರೆಗುರುಳಿಸಿ ಲಾರಿ ಏರಿಸಿ ಸಾಗಾಟ ಮಾಡಿದ್ದಾರೆ. ಕಣ್ಣೆದುರೇ ಅರಣ್ಯ ಲೂಟಿ ಆಗುತ್ತಿದ್ದರೂ ಆರ್‌ಎಫ್‌ಓ, ಎಸಿಎಫ್‌ನಿಂದ ಗಾರ್ಡ್-ಫಾರೆಸ್ಟರ್‌ವರೆಗಿನ ಅರಣ್ಯ ಇಲಾಖೆ ಸಾಹೇಬರು ಏನೂ ಆಗಿಲ್ಲವೆಂಬಂತೆ ಹಾಯಾಗಿದ್ದು ಸಿಕ್ಕಷ್ಟು ಸ್ವಾಹಾ ಮಾಡಿದ್ದಾರೆ. ಒಂದಿಷ್ಟು ಪ್ರಸಾದ ಮೇಲಧಿಕಾರಿಗಳಿಗೂ ಹಂಚಿ ಬರೋಬ್ಬರಿ ಹತ್ತು ಎಕರೆ ಸರ್ಕಾರಿ ಅರಣ್ಯ ಬೋಳಾಗಿಸಿ ಬರ್ಬರ ಪಾತಕ ಮಾಡಿಮುಗಿಸಿದ್ದಾರೆ.

ಇದು ಉತ್ತರ ಕನ್ನಡದ ಶಿರಸಿ ತಾಲ್ಲೂಕಿನ ಬನವಾಸಿ ಅರಣ್ಯ ವಲಯದ ಸಮೃದ್ಧ ಬೆಳ್ನಕೇರಿ ಕಾಡಲ್ಲಿ ಅರಣ್ಯ ಅಧಿಕಾರಿಗಳ ಸಂಪೂರ್ಣ ಸಹಕಾರದಿಂದಾದ ದರೋಡೆ ವೃತ್ತಾಂತದ ಮುಖ್ಯಾಂಶ! ಬೆಳ್ನಕೇರಿ ಅರಣ್ಯದಲ್ಲಾದ ಕೊಳ್ಳೆ ಉತ್ತರ ಕನ್ನಡದ ದಶದಿಕ್ಕುಗಳಲ್ಲಿ ದಿನ-ದಿನವೂ ಆಗುತ್ತಿರುವ ಅರಣ್ಯ ಕಳ್ಳ ಸಾಗಾಣಿಕೆಗೆ ಸಣ್ಣ ಸ್ಯಾಂಪಲ್ ಅಷ್ಟೇ. ಒಂದು ಕಾಲದಲ್ಲಿ ಉತ್ತರ ಕನ್ನಡಕ್ಕೆ ಕಾಡಿನ ಜಿಲ್ಲೆ ಎಂಬ ಹೆಸರಿತ್ತು. ಮುಕ್ಕಾಲು ಪಾಲು ಹಚ್ಚಹಸಿರಿನ ಅರಣ್ಯ ತುಂಬಿದ್ದ ಉತ್ತರ ಕನ್ನಡ ಇವತ್ತು ಕಾಡುಗಳ್ಳರ ಜಿಲ್ಲೆ ಎಂಬ ಕುಖ್ಯಾತಿಗೆ ಒಳಗಾಗಿದೆ.



ಮಟ್ಟದ ಮರ-ಮಟ್ಟು ದರೋಡೆ ಆಗಿದೆ! ದಾಸನಕೊಪ್ಪದಿಂದ ಐತಿಹಾಸಿಕ ಬನವಾಸಿಗೆ ಹೋಗುವ ಹಾದಿಯಲ್ಲಿ ಬೆಳ್ನಕೇರಿ ಸಿಗುತ್ತದೆ. ಇಲ್ಲಿಯ ಮುಖ್ಯ ರಸ್ತೆಯಿಂದ ಕಾಡಿನೊಳಗೊಂದು 500 ಮೀಟರ್ ಹೋದರೆ ಅಲ್ಲಿ ಒಂದೂವರೆ ಕಿ.ಮೀ.



ಎಸ್.ಜಿ. ಹೆಗಡೆ, ಆರ್‌ಎಫ್‌ಓ ಕೆ.ಜಿ. ಪ್ರಕಾಶ್‌ರ ಸಹಕಾರ-ಸಹಾಯ ಪಡೆದೇ ನಾಲ್ಕೈದು ಸಾವಿರ ಮರ ಕಡಿದುರುಳಿಸಿದ್ದಾರೆ. ಸಹಾಯ ಸಂರಕ್ಷಣಾಧಿಕಾರಿ ಎಸ್.ಜಿ. ಹೆಗಡೆ

ತವರು ಶಿರಸಿಯಲ್ಲೇ ಆರಾಮಾಗಿ ದೋಣಂಬರ್ ... ಮಾಡಿಕೊಂಡಿದ್ದಾನೆ. ಇಂಥ ಬುರ್ನಾಸ್ ಇತಿಹಾಸ... ಗೋಲದ ಹೆಗಡೆ ತನ್ನ ಅಧೀನದ ರೇಂಜ್ ಫಾ... ಆಫೀಸರ್ ಕೆ.ಜಿ. ಪ್ರಕಾಶನಿಗೂ ಕಾಡು ಕದಿವ ... ಕೊಟ್ಟು ಪಳಗಿಸಿಕೊಂಡಿದ್ದಾನೆ. ಈ ಪ್ರಕಾಶ್ ಹಗಲಿರ... ಬೆಳ್ನಕೇರಿಯ ಸಾವಿರಾರು ಮರಗಳ ಮಾರಣಹೋಮ... ಜಮೀಲ್-ಯುಸೂಫ್ ಸಹೋದರರು ನಡೆಸುತ್ತಿ... ಬೇಕಂತಲೇ ಕಣ್ಣು ಮುಚ್ಚಿಕೊಂಡು ಕೂ... ಗಾರ್ಡ್-ಫಾರೆಸ್ಟರ್‌ಗಳಂತೂ ಹೆಗಡೆ-ಪ್ರಕಾಶ್ ಸಾಹೇ... ಹಾಕಿದ ಗೆರೆದಾಟದ ಸ್ವಾಮಿ ಭಕ್ತರು, ಬಿದಿ ಪಾಪ...

ಹೆಗಡೆ ಹಿಕಮತ್ತು!

ಬದನಗೋಡೆ ಸರ್ವೆ ನಂಬರ್ 190/1 ರಲ್ಲಿ ... ಸಾಬ್ ಕಾಗಾಲ್ಕರ್ ಎಂಬುವರ 9 ಎಕರೆ ಜಮೀ... ಇದೆ. ಇದಕ್ಕೆ ಹೊಂದಿಕೊಂಡೇ ಅರಣ್ಯ ಇಲಾ... ಮರ-ಗಿಡಗಳಿರುವ ಸರ್ವೆ ನಂ. 6ರ ಕಾಡಿದೆ. ಕಾಗಾ... ಕೆಲ ತಿಂಗಳ ಹಿಂದೆ ಜಮೀಲ್ ಶೇಖ್‌ಗೆ ತನ್ನ ಜಮೀ... 7 ಎಕರೆ ಮಾರಿದ್ದರು. ಕಾಗಾಲ್ಕರ್ 1986 ರಿಂದ ... ಇಟ್ಟಂಗಿ ಫ್ಯಾಕ್ಟರಿ ಒಂದನ್ನು ನಡೆಸಿಕೊಂಡು ಬಂದಿ... ಅದಕ್ಕೆ ಕಬ್ಬಾ ಮತ್ತು ಪೂರೈಸಲು ಸರ್ವೆ ನಂ. ... ಅಂಚಿನಲ್ಲಿರುವ ಅಗಳ(ಕಾಲುವೆ) ಪಕ್ಕದಲ್ಲಿ ... ಮಾಡಿಕೊಳ್ಳಲು ಅರಣ್ಯ ಇಲಾಖೆ ಕಾಗಾಲ್ಕರ್‌ಗೆ ಅನು... ಕೊಟ್ಟಿತ್ತು.

ಆದರೆ ಶೇಖ್ ಸಹೋದರರು ಕಾಗಾಲ್ಕರ್‌ನಿಂದ ... ಕೊಂಡ ಮೇಲೆ ಓಡಾಡಲು ದಾರಿಯಿಲ್ಲವೆಂದು ... ಇಲಾಖೆಯ ಸರ್ವೆ ನಂಬರ್ 6 ರಲ್ಲಿನ ಮರ... ಕಡಿಯಲಾರಂಭಿಸಿದ್ದರು. ಇದಕ್ಕೆ ಎಸಿಎಫ್ ಹೆ... ಆರ್‌ಎಫ್‌ಓ ಪ್ರಕಾಶರ ಕುಮ್ಮಕ್ಕೂ ಇತ್ತು. ... ಮಾಡಿಕೊಳ್ಳುವ ನೆಪದಲ್ಲಿ ಬುಲ್ಡೋಜರ್, ಜೆಸಿಬಿ ... ಶೇಖ್ ಸಹೋದರರು ನೋಡುನೋಡುತ್ತಿದ್ದಂತೆಯೇ ... ಎಕರೆ ಏರಿಯಾದ ಅಮೂಲ್ಯ ಸಾಗವಾನಿ, ಮತ್ತಿಯ... ಮರಗಳನ್ನೆಲ್ಲ ಕಡಿದು ಬೋಳು ಮಾಡಿಬಿಟ್ಟರು. ... ಅಲ್ಲ, ಕಾಗಾಲ್ಕರ್‌ಗೂ ಫ್ಯಾಕ್ಟರಿಗೆ ಓಡಾಡಲು ... ಇಲ್ಲದಂತೆ ಮಾಡಿದರು. ಈ ಲೂಟಿ ಬಗ್ಗೆ ಸ್ಥಳೀಯ... ಅರಣ್ಯ ಇಲಾಖೆಗೆ ದೂರಿದರೂ ಡಿಸಿಎಫ್ ಯ... ಕುಮಾರ್, ಕೆನರಾ ಸರ್ಕಲ್‌ನ ಕಾನ್ಸರ್‌ವೇಟರ್ ಸುಬ... ಮಾಳಖೇಡ್ ಕ್ಯಾರೇ ಮಾಡಲಿಲ್ಲ. ಹೊಸದಾಗಿ ಬ... ಡಿಸಿಎಫ್ ಯತೀಶ್‌ಕುಮಾರ್‌ಗೆ ಎಸಿ... ಹೆಗಡೆ ಯಶಸ್ವಿಯಾಗಿ ದಾರಿ ತ... ಹಲವು ವರ್ಷಗಳಿಂದ ಶಿರಸಿ... ಗೂಟ ಜಡಿದುಕೊಂಡು ಕೂತಿ... ಖದೀಮ ಹೆಗಡೆ ಮೇಲಧಿಕಾರಿಗಳ... ಬ್ಲ್ಯಾಕ್‌ಮೇಲ್ ಮಾಡಿ ಪಳಗಿಸಿಕೊ... ಕುಶಲಾ ಪ್ರವೀಣ. ಬೆಳ್ನಕೇರಿ ... ಲೂಟಿಯಲ್ಲಿ ಎಸಿಎಫ್ ಹೆಗ... ಹಿಕಮತ್ತು ತೆರೆಮರೆಯಲ್ಲಿ ನಡೆದಿರು... ಶಿರಸಿಯ ಸಿಎಫ್, ಐಸಿಎಫ್ ಕಚೇ... ಕಂಬಕಂಬಕ್ಕೂ ಗೊತ್ತು.

ನಾಟಾ ಎಲ್ಲಿ ಹೋಯ...

ಬೆಳ್ನಕೇರಿಯ ಕಾಡಲ್ಲಿ ಕಡಿದ ಮರ... ಕನಿಷ್ಠವೆಂದರೂ ಮೂರು ಸಾವಿರ ಬೆಲೆಬಾ...


ಕಾಲಿಟ್ಟಲ್ಲೆಲ್ಲ ದಟ್ಟ ಕಾಡಿದ್ದ ಜಿಲ್ಲೆಯಲ್ಲೀಗ ಎತ್ತ ಕಣ್ಣು ಹಾಯಿಸಿದರೂ ಬೋಳುಗುಡ್ಡಗಳಷ್ಟೇ ಕಾಣಿಸುತ್ತಿದೆ. ಅಳಿದುಳಿದ ಕಾಡನ್ನು ಜಿಲ್ಲೆಯ ಉದ್ದಗಲಕ್ಕೆ ವ್ಯಾಪಿಸಿರುವ ಅರಣ್ಯಗಳ್ಳರ ಗ್ಯಾಂಗ್ ಲೂಟಿ ಮಾಡುತ್ತಿದೆ. ಕಾಡಿನ ಇಲಾಖೆಯ ಖಾಕಿ ಕಿರಾತಕರ ಸಹಕಾರ-ಸಮ್ಮತ್ತುಗಳಿಂದಲೇ ಈ ನಾಟಾ ಕಳ್ಳ ಸಾಗಾಣಿಕೆ ನಡೆಯುತ್ತಿದೆ. ಅವ್ಯವಹಾರಿ ಅರಣ್ಯಾಧಿಕಾರಿಗಳೇ ಉತ್ತರ ಕನ್ನಡದ ಕಾಡಿಗೆ ಗಂಡಾಂತರಕಾರಿ ಆಗಿರುವುದು ವಿಚಿತ್ರವಾದರೂ ಸತ್ಯ!!



ಬೆಳ್ನಕೇರಿ ಕಾಡು ಖಾಲಿ

ಶಿರಸಿ ತಾಲ್ಲೂಕಿನ ಬದನಗೋಡು ಗ್ರಾಮ ಪಂಚಾಯತ್ ಏರಿಯಾದ ಬೆಳ್ನಕೇರಿ ಅರಣ್ಯದಲ್ಲಿ ರಮ್ಜಾನ್‌ನ- ಚೌತಿ ಹಬ್ಬದ ಗಡಿಬಿಡಿಯಲ್ಲಿ ದೊಡ್ಡ ಉದ್ದ ಮತ್ತು ಕಾಲು ಕಿಲೋಮೀಟರ್ ಅಗಲದಲ್ಲಿ ಅರಣ್ಯ ಖಾಲಿಯಾಗಿರುವುದು ಕಣ್ಣಿಗೆ ರಾಚುತ್ತದೆ. ಯುದ್ಧ-ದಾಳಿಗಳಿಂದ ಧ್ವಂಸವಾದಂತೆ ಕಾಣಿಸುವ ಈ ಹತ್ತು ಎಕರೆ ಪ್ರದೇಶದಲ್ಲಿ ಬಿದ್ದಿರುವ ಗಿಡ-ಮರಗಳ ಒಣಗಿದ ಎಲೆ-ಟೊಂಗೆ ಅಲ್ಲಲ್ಲಿ ಕಾಣಿಸುವ ಬೇರು-ಬುಡಚಿಗಳು ಕಾಡುಗಳ್ಳರ ಕೈಚಳಕ ನಿಸ್ಸಂಶಯವಾಗಿ ಸಾಬೀತುಪಡಿಸುತ್ತಿದೆ.

ಬೆಳ್ನಕೇರಿ ಅರಣ್ಯ ಸರ್ವೆ ನಂಬರ್ ಆರರಲ್ಲಿದ್ದ ಬೆಲೆಬಾಳುವ ಸಾಗವಾನಿ, ನಂದಿ, ಹೊನ್ನೆ, ಸೀಸಂ, ಬಿದಿರು... ಮುಂತಾದ ಜಾತಿಯ ದೊಡ್ಡ-ದೊಡ್ಡ ಮರಗಳನ್ನು ನಿರಂತರ ಒಂದು ವಾರ ಜೆಸಿಬಿಯಂಥ ದೈತ್ಯ ಯಂತ್ರ ಬಳಸಿ ಉರುಳಿಸಲಾಗಿದೆ. ಜಮೀಲ್, ಯುಸೂಫ್ ಮತ್ತು ನಾವೇದ್ ಎಂಬ ಕಾಡುಗಳ್ಳರು ಎಸಿಎಫ್ ಕಾಡುಗಳ್ಳತನದಲ್ಲಿ ನಿಸ್ಸೀಮ. ಈತನ ಸರ್ವೀಸ್ ಟ್ರ್ಯಾಕ್ ಕಪ್ಪುಕೆಂಪು ಚುಕ್ಕೆಗಳಿಂದ ತುಂಬಿಹೋಗಿದೆ. ತನಗೆ ಅನ್ನ ಕೊಡಿಸುವ ಅರಣ್ಯ ಇಲಾಖೆಗೆ ಅನ್ಯಾಯ, ದ್ರೋಹ ಮಾಡುತ್ತಿರುವ ಈ ಹೈಗರ ಮಾಣಿ ಮೇಲೆ ಕೆಲ ತಿಂಗಳ ಹಿಂದೆ ಲೋಕಾಯುಕ್ತರಿಂದ ರೇಡು ನಡೆದಿತ್ತು.



ಕಾಡು ಲೂಟಿ ಮಾಡಿಯೇ ಕೋಟ್ಯಾಧೀಶನಾಗಿರುವ ಈ ಎಸ್.ಜಿ. ಹೆಗಡೆ ಹೋದಲ್ಲೆಲ್ಲಾ ತನ್ನ ಸರಹದ್ದಿನಲ್ಲಿರುವ ಅರಣ್ಯಚೋರರ ದೋಸ್ತಿ ಮೊದಲು ಮಾಡಿಕೊಳ್ಳುತ್ತಾನೆ. ಈ ಮಾಣಿಗೆ ಸ್ವಜಾತಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯ ಕೃಪಾಶೀರ್ವಾದ ಬೇರೆಯಿದೆ. ಹೀಗಾಗಿ ಈತ ಲೋಕಾಯುಕ್ತರ ಕೈಲಿ ಸಿಕ್ಕಿಬಿದ್ದರೂ ಕಾಗೇರಿಯ

ಆಶೀಸರನ ಕರ್ಮ ಪಡೆ!!

ಅನಾಹುತಕಾರಿ ಚಡ್ಡಿ ಅನಂತ ಹೆಗಡೆ ಆಶೀಸರ ಗೂಟದ ಕಾರಿನ ತೆವಲು ತಣಿಸಿರುವ ಪಶ್ಚಿಮ ಘಟ್ಟ ಕಾರ್ಯ ಪಡೆಯನ್ನು 'ಆಶೀಸರನ ಕರ್ಮಪಡೆ' ಎಂದು ಗೇಲಿ ಮಾಡುವಷ್ಟು ಮಳ್ಳಾಟ ಮಾಡುತ್ತಿದೆ. ತಾನೊಬ್ಬನೇ ಪರಿಸರವಾದಿ ಎಂಬ ಗೆಟಪ್ಪಿನಲ್ಲಿ ಅಂಡಲೆಯುವ ಆಶೀಸರ ಮಾಣಿ ಪರಿಸರದ ನೆಪದಲ್ಲಿ ಮಾಡುತ್ತ ಬಂದ ಹಾರಾಟ "ಹುದ್ದೆಗಾಗಿ ಹೋರಾಟ" ಎಂಬುದೀಗ ಸಾಬೀತಾಗಿದೆ. ಜೀವನದಲ್ಲೊಮ್ಮೆ ಸ್ವಜಾತಿ ಸ್ಪರ್ಧಿ ಹಾಲಿ ಎಂಪಿ ಅನಂತ್ಮಾಣಿಗೆ ಶಾಕ್ ಕೊಟ್ಟು ಸಂಸದನಾಗಬೇಕೆಂಬ ದೂ(ದು)ರಾಲೋಚನೆ ಹಾಕಿಕೊಂಡಿರುವ ಆಶೀಸರ ಗೂಟದ ಕಾರು ಸಿಗುತ್ತಲೇ ಒಂಥರಾ ಪುಢಾರಿಯಂತಾಡುತ್ತಿದ್ದಾನೆ.



ಪರಿಸರ ಹೋರಾಟವನ್ನು ಆಶೀಸರ ಮರೆತು ಅದ್ಯಾವುದೋ ಕಾಲವಾಗಿ ಹೋಗಿದೆ. ಆತನ ಹೋರಾಟ ಜೋರಾಗಿದ್ದಾಗಲೂ ಅದೊಂದು ಸಂಘಪರಿವಾರದಲ್ಲಿ

ಪರಿಸರ ಕುರಿತು ಸೆಮಿನಾರು, ಸಭೆ, ಕಾರ್ಯಾಗಾರ, ಉದ್ಘಾಟನೆಯಲ್ಲೇ ಮುಳುಗೇಳುತ್ತ ಸರ್ಕಾರಿ ಹಣ ಪೋಲು ಮಾಡುತ್ತಿರುವ ಆಶೀಸರನ ಪ್ರಚಾರದ ತೀಟೆ ಈಗಂತೂ ಮಿತಿಮೀರಿ ಹೋಗಿದೆ. ಕಾಲುಬುಡದಲ್ಲೇ ಅರಣ್ಯ ಹತ್ಯಾಕಾಂಡವಾದರೂ ಕಣ್ಣೆತ್ತಿ ನೋಡದ ಈ ಮಾಣಿಯ 'ಪರಿಸರವಾದ' ಜನರಿಗೆಲ್ಲ ಸ್ಪಷ್ಟವಾಗಿ ಹೋಗಿದೆ. ಶಿರಸಿಯ ಬೆಳ್ನಕೇರಿ ಆಶೀಸರನ ಮನೆಯಿಂದ ಹೆಚ್ಚೆಂದರೆ ಅರ್ಧಗಂಟೆಯಲ್ಲಿ ಕ್ರಮಿಸಬಹುದಾದ ದೂರದಲ್ಲಿದೆ. ಆದರೂ ಆತ ಸ್ಥಳಕ್ಕೆ ಹೋಗಿಲ್ಲ, ಒಂದು ಚಕಾರವೂ ಈ ಅರಣ್ಯ ಲೂಟಿ ಬಗ್ಗೆ ಎತ್ತಿಲ್ಲ. ಬಹುಶಃ ಜಾತಿ ಬಂಧು ಎಸಿಎಫ್ ಎಸ್.ಜಿ. ಹೆಗಡೆ ಈ ಅರಣ್ಯ ದರೋಡೆಯ ಕಿಂಗ್‌ಪಿನ್ ಎಂಬ ಕಾರಣಕ್ಕೇ ಆಶೀಸರ ಬಾಯ್ಮುಚ್ಚಿಕೊಂಡಿದ್ದಾನೆಂದು ಆತನ ಬಣ್ಣ ಬಲ್ಲವರು ಆಕ್ರೋಶಗೊಂಡಿದ್ದಾರೆ.

ಮಿಂಚುವ ಹಿಕಮತ್ತು, ಮುಗ್ಧ ಜನರ ದಾರಿ ತಪ್ಪಿಸುವ ಪ್ರತಿಷ್ಠೆಯ ಪ್ರಹಸನವಾಗಿತ್ತಷ್ಟೇ. ಈತನೇ ತನ್ನೂರಲ್ಲಿ ಎಕರೆಗಟ್ಟಲೆ ಅರಣ್ಯನಾಶಮಾಡಿ ಕಬ್ಜಾ ಮಾಡಿಕೊಂಡಿದ್ದಾನೆ. ಈ ಅತಿಕ್ರಮಣ ಅರಣ್ಯಭೂಮಿಯಲ್ಲಿ ಭರ್ಜರಿ ಅಡಿಕೆ ತೋಟ ಎಬ್ಬಿಸಿದ್ದಾನೆ. ಹೇಳುವುದು ವೇದಾಂತ. ಇಕ್ಕುವುದು ಕೊಳಚೆಯಲ್ಲೇ ಗಾಳ. ಇದು ಆಶೀಸರನ ಪರಿಸರ ಪಾಲನೆ.

ಇನ್ನೊಬ್ಬ ಗ್ರೇಟ್ ಪರಿಸರವ್ಯಾಧಿ ಪಾಂಡುರಂಗ ಹೆಗಡೆಯ ಅದೃಷ್ಟೇ ಇಲ್ಲ, ಆಶೀಸರನಂತೆ ಈತನೂ ಅಪ್ಪಿಕೋ ಚಳವಳಿ ಧೀರ. ಈಗ ಈತ ಮಂಗನ ಹಾವಳಿಯೆಂದು ಶಿರಸಿಯ ತನ್ನ ತೋಟದ ಬಳಿಯ ಮರದ ರೆಂಬೆಟೊಂಗೆಗಳನ್ನೆಲ್ಲಾ ಕಡಿದುರುಳಿಸಿ ಪ್ರಖ್ಯಾತಿ ಬೇರೆ ಆಗಿದ್ದಾನೆ. ಹಾಗೆ ನೋಡಿದರೆ ಮಂತ್ರಿ ಕಾಗೇರಿಯೂ ಸ್ವಯಂಘೋಷಿತ ಪರಿಸರ ವ್ಯಾಧಿ, ಪರಿಸರವನ್ನು ವೋಟ್ ಬ್ಯಾಂಕ್ ರಾಜಕಾರಣಕ್ಕೆ ಸರಕಾಗಿಸಿಕೊಂಡ ಭೂ... ಈತ. ಈ ಮೂವರು ವಿಪ್ರೋತ್ತಮರು ಶಿರಸಿಯವರೇ. ಇವರಿಗೆ ತವ... ಕಣ್ಣೆದುರೇ ಹತ್ತಾರು ಎಕರೆ ಅರಣ್ಯ ಹತ್ಯಾಕಾಂಡವಾದರೂ ಕಾಣಿಸಿಲ್ಲ.

ಅರಣ್ಯ ರಕ್ಷಣೆ ಅಥವಾ ಅರಣ್ಯಾಧಿಕಾರಿಗಳು ನಿಯಂತ್ರಿಸುವ ಯಾ... ಅಧಿಕಾರವೂ ಇಲ್ಲದ ಪಶ್ಚಿಮ ಘಟ್ಟ ಕಾರ್ಯಪಡೆ ಸರ್ಕಾರಕ್ಕೆ ಸಲ... ಕೊಡಬಹುದಷ್ಟೇ. ಆದರೆ ಪ್ರಚಾರ ಹುಚ್ಚಿನ ಆಶೀಸರನ ಸಲಹೆಗಳ... ಆತನ ಬಿಜೆಪಿ ಸರ್ಕಾರ ಕಸದಬುಟ್ಟಿಗೆ ಎಸೆದಿದ್ದೇ ಹೆಚ್ಚು! ಈ ಆಶೀಸರ... ಪ್ರಚಾರ ಪಡೆ ಬೊಕ್ಕಸಕ್ಕೆ ಭಾರವಷ್ಟೇ. ಆಶೀಸರನ ಹೆಡ್‌ಕ್ವಾಟರ್ಸ್ ಶಿರ... ಹೀಗಾಗಿ ಕೆನರಾ ಫಾರೆಸ್ಟ್ ಸರ್ಕಲ್ಲಿನ ಮೂರ್‍ನಾಲ್ಕು ಫಾರೆಸ್ಟ್ ಡಿವಿಜನ್‌ಗಳ... ಆಶೀಸರ ಪ್ರಚಾರ ಪಡೆ ಪೋಷಿಸುವುದೇ ಕರ್ಮವಾಗಿ ಹೋಗಿದೆ. ... ಒಣಪ್ರತಿಷ್ಠೆಗೆ ಹಮ್ಮಿಕೊಳ್ಳುವ ಬೋಗಸ್ ಪರಿಸರ ಕಾರ್ಯಕ್ರಮಗ... ತಯಾರಿ-ಅದರ ಊಟ-ತಿಂಡಿ ತಯಾರಿಯಲ್ಲೇ ಅರಣ್ಯ ಇಲಾ... ಬಿಜಿಯಾಗಿರುತ್ತದೆ. ಆಶೀಸರನ ದೇಖರೇಖಿಯಲ್ಲಿ ಅರಣ್ಯ ಇಲಾಖೆ ಕಾಡ... ಮರೆತೇಬಿಟ್ಟಿದೆ.

ಆಶೀಸರನ ಪ್ರಚಾರ ಪಡೆಯ ಆರ್ಭಟದ ಗದ್ದಲದಲ್ಲಿ ಅರಣ್ಯ ಪ... ಸದ್ದಿಲ್ಲದೆ ಎತ್ತುವಳಿ ಹಂಗಾಮಾ ನಡೆಸಿದೆ. ಅರಣ್ಯ ಕಳ್ಳರ ಜೊತೆ ಕೈಜೋಡಿಸಿ... ಅರಣ್ಯ ಚೆಕ್‌ಪೋಸ್ಟ್‌ಗಳಂತೂ ವಸೂಲಿ ಅಡ್ಡೆಗಳಾಗಿವೆ. ಬೆಳ್ನಕೇರಿಯ... ಕತ್ತರಿಸಿದ ಲೋಡ್-ಲೋಡ್‌ಗಟ್ಟಲೆ ನಾಟಾ ಈ ಚೆಕ್‌ಪೋಸ್ಟ್‌ನಿಂ... ಸರಾಗವಾಗಿ ಹೋದರೆ ಅರಣ್ಯ ಇಲಾಖೆಯ ಎಸಿಎಫ್, ಆರ್‌ಎಫ್‌ಓ ದರ್ಜೆಯ... ಅಧಿಕಾರಿಗಳ ಸಹಕಾರ ಇಲ್ಲದೆ ಇಷ್ಟು ದೊಡ್ಡ ದರೋಡೆ ಸಾಧ್ಯವೇ ಇ... ಒಟ್ಟಿನಲ್ಲಿ ಆಶೀಸರನದು ಕರ್ಮ ಪಡೆ; ಅರಣ್ಯ ಇಲಾಖೆಯದು ಹಪಾಹ... ಪಡೆ. ಉತ್ತರ ಕನ್ನಡ ಕಾಡು ಮಾತ್ರ ಖಾಲಿ-ಖಾಲಿ! ಸೋಗಲ... ಪರಿಸರವಾದಿಗಳೇ ಪಶ್ಚಿಮಘಟ್ಟಕ್ಕೆ ಗಂಡಾಂತರಕಾರಿ!!

...ಗಳಿದ್ದವೆಂದು ಸ್ಥಳೀಯರು ಹೇಳುತ್ತಾರೆ. ಈ ನಾಟಾ ...ಹೋಯ್ತು? ಬೆಳ್ಸಕೇರಿಯಿಂದ ನಾಟಾ ಲಾರಿಗಳು ... ಹೋಗಬೇಕೆಂದಿದ್ದರೂ ಅರಣ್ಯ ಇಲಾಖೆಯ ...ಪೋಸ್ಟ್ ದಾಟಿಯೇ ಹೋಗಬೇಕು. ಒಂದು ಕಡೆ ...ವಿ ಚೆಕ್‌ಪೋಸ್ಟ್ ಇದ್ದರೆ, ಇನ್ನೊಂದೆಡೆ ದಾಸನಕೊಪ್ಪ ...ಸಾಸಗಾ ಚೌಕಿಯಿದೆ. ಹೀಗಿರುವಾಗ ಈ ನೂರಾರು ಲಾರಿಗಳು ಅರಣ್ಯ ಇಲಾಖೆಯ ಸಾಹೇಬರ ...ಗೆ ಬೀಳದೇ ಇರಲು ಸಾಧ್ಯವೇ ಇಲ್ಲ. ಎಸಿಎಫ್ ...ಯ ಶಾಮೀಲಾತಿ ಇಲ್ಲದೆ ಈ ಕಳ್ಳ ಸಾಗಾಣಿಕೆ ...ಲು ಛಾನ್ಸೇ ಇಲ್ಲ. ಇದು ಡಿಸಿಎಫ್ ಯತೀಶ್, ಮಾಳಖೇಡ್‌ಗಳಂಥ ಐಎಫ್‌ಎಸ್ ಪ್ರಭೃತಿಗಳಿಬ್ಬರಿಗೆ ಎಲ್ಲರಿಗೂ ಅರ್ಥವಾಗಿರುವ ರಹಸ್ಯ!

ನಾಟಾಗಳನ್ನು ಶೇಖ್ ಸಾಹೇಬರು ಮತ್ತು ಎಸಿಎಫ್ ...ಸೇರಿಯೇ ವ್ಯವಸ್ಥಿತವಾಗಿ ಮಾರಾಟ ಮಾಡಿದ್ದಾರೆ. ...ು ಜನರು ಪ್ರತಿಭಟನೆ ಮಾಡಿದಾಗ ಅರಣ್ಯ ಇಲಾಖೆ ...ಗೆ 7 ಸಾವಿರ ದಂಡ ಹಾಕಿ ತಿಪ್ಪೆ ಸಾರಿಸಿದೆ. ...ಗೆ ಬಂದ ಡಿಸಿಎಫ್ ಯತೀಶ್‌ಕುಮಾರ್ ಎಂಬ ...ಗಿನ ಹೊಸಬರಿಗೆ ಸ್ಥಳೀಯ ಪಳಗಿದ ಹಳಬ ...ನ್ ಹೆಗಡೆ ಸುಳ್ಳು-ಸುಳ್ಳು ಹೇಳಿ ಮರಕಡಿತದಿಂದ ...ದೂವ ಜಾಗವೇ ತಲುಪದಂತೆ ಮಾಡಿದ್ದನಂತೆ. ...ತ ಸ್ಥಳೀಯರು ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ಡಬ್ಬಲ್ ದರೋಡೆ

...ಈ ನಾಟಾ ಕಳ್ಳ ಸಾಗಾಣಿಕೆಯಲ್ಲಿ ಲಕ್ಷ-ಲಕ್ಷ ಬಾಚಿರುವ ...ನ್. ಆರ್‌ಎಫ್‌ಓ ಬೋಳಾದ ಹತ್ತು ಎಕರೆ ...ಾದಲ್ಲಿ ರಾತ್ರಿ ಬೆಳಗಾಗುವುದರಲ್ಲಿ ಅಕೇಶಿಯಾ ಗಿಡ ...ಮೋಕಳೀಕ್ ಆಗಿದ್ದಾರೆ. ಈ ಎಸಿಎಫ್ ಹೆಗಡೆ ...ಪ್ರಳಯಾಂತಕನೆಂದರೆ, ಅಕೇಶಿಯಾ ನೆಡುತೋಪು ...ವ ಹೆಸರಲ್ಲೂ ಒಂದಿಷ್ಟು ಹಣ ಇಲಾಖೆಯಿಂದ ... ಪರ್ಸೆಂಟೇಜು ಹೊಡೆದಿದ್ದಾನೆ. ಅತ್ತ ಇಲಾಖೆಗೂ ...ಮ ಹಾಕಿ ಕಾಡು ಲೂಟಿಯನ್ನು ಮರೆಮಾಚಿದ್ದಾನೆ. ...ಯಾ ನೆಡುತೋಪಿಗಾಗಿಯೇ ಬೆಳ್ಳಿನಕೇರಿಯ ಕಾಡಿನ ...ಯ ಗಿಡ-ಗಂಟೆ ಸವರಿ ಸಮತಟ್ಟಾಗಿಸಲಾಗಿದೆ ಎಂದು ...ವ ಹರಾಮಿ ಹುನ್ನಾರ ಈ ಛಾನ್ಗಡಿ ಬ್ರಾಹ್ಮಣನದು!

...ಸಿಎಫ್ ಹೆಗಡೆ ಮತ್ತವನ ಮಿತ್ರ ಕಳ್ಳ ಶೇಖ್‌ಗಳು ... ದರೋಡೆ ಮಾಡಿ ಮುಗಿಸಿದ್ದಾರೆ. ಹೆಗಡೆಯಂತೂ ...ೂ ಕೈಯಿಂದ ಎರಡೂ ಕಡೆಯಿಂದ ...ಬಾಚಿಬಾಚಿ ಮುಕ್ಕಿದ್ದಾನೆ. ಆರ್‌ಎಫ್‌ಓ ಪ್ರಕಾಶ್ ...ರ ಅಂತರಂಗದ ಆಸೆಯಂತೆ ನಡೆದುಕೊಂಡು ಭ್ರಷ್ಟನಾಗಿದ್ದಾನೆ. ಇಲ್ಲಿರುವ ಪ್ರಶ್ನೆ ಒಂದೇ. ಅರಣ್ಯ ...ಯ ಅಧಿಕಾರಿಗಳ ನೆರವಿನಿಂದಲೇ ಲಕ್ಷಾಂತರ ರೂ. ... ಮಾರಣಹೋಮವಾಗಿದ್ದರೂ ಸಿಎಫ್ ಮಾಳಖೇಡ್ ...ದ್ದೆ ಮಾಡುತ್ತಿದ್ದಾರೆ? ಪಾಪದ ಗಾರ್ಡನನ್ನು ಬಲಿ ... ಹೆಗ್ಗಣ ಹೆಗಡೆ ಆತನ ಸಹಚರ ಆರ್‌ಎಫ್‌ಓ ...ಗೇಕೆ ಸಿಎಫ್ ಸಾಹೇಬರು ಶಿಕ್ಷೆ ವಿಧಿಸಿಲ್ಲ? ಶೇಖ್ ... ಬಂಧಿಸಿ ಪ್ರಮುಖ ಆರೋಪಿ ಹೆಗಡೆ ಅಂಡ್ ...ಬಚಾಯಿಸಲು ಸಿಎಫ್‌ಗೆ ಮಂತ್ರಿ ಕಾಗೇರಿ ಡೈರೆಕ್ಷನ್ ...ದ್ದಾರಾ?

...ಆಗಿದ್ದರೆ ತನ್ನ ಊರಲ್ಲೇ ಲಕ್ಷಾಂತರ ರೂ.ಗಳ ಅರಣ್ಯ ... ಹಾಡುಹಗಲೇ ಆದರೂ ಮಂತ್ರಿ ಕಾಗೇರಿ ಯಾಕೆ ...ಮ್ ಆಗಿದ್ದಾರೆ? ಕಾಡಿನ ರಕ್ಷಣೆ-ಪರಿಸರ ಸಂರಕ್ಷಣೆ ...ಹಿಡಿದಂತೆ ಹಾರಾಡುವ 'ಹಾರವ' ಅನಂತ ಹೆಗಡೆ ...ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷನಿಗೇಕೆ ಈ ...ನಾಶ, ಮರಗಳ ಮಾರಣ ಹೋಮ-ಮಾರಾಟ ...ದೂ ಕಾಣಿಸಿಲ್ಲ. ಅನಂತ ಆಶೀಸರನಿಗೆ ಆತನ ...ಚೇಚಿಯ ಕಾಡೇ ಉಳಿಸಲಾಗದಿರುವಾಗ ಆತನಿಂದ ಪಶ್ಚಿಮ ಘಟ್ಟ ಸಂರಕ್ಷಿಸಲು ಸಾಧ್ಯವಾ?

...ಟ್ಟಿನಲ್ಲಿ ಶಿರಸಿಯ ಅರಣ್ಯ ದರೋಡೆಯಲ್ಲಿ ಅರಣ್ಯ ...ರಿಗಳು ನೇರ ಭಾಗಿಯಾದರೆ, ಮಂತ್ರಿ ಕಾಗೇರಿ, ...ಹೆಡೆ ಕಿಂಗ್ ಆಶೀಸರ ಎಂಬ ಸ್ವಯಂ ಘೋಷಿತ ...ಕ್ತ ಚಡ್ಡಿ ಚಮತ್ಕಾರಿಗಳು ನೈತಿಕವಾಗಿ ಈ ಕಳ್ಳಾಟಕ್ಕೆ ...ಾರರು! ಅರಣ್ಯ ದರೋಡೆಯ ಬೊಬ್ಬೆ ಶಿರಸಿಯಷ್ಟೇ ...ಇಡೀ ಕೆನರಾ ಸರ್ಕಲ್ಲಿನಲ್ಲೇ ಎದ್ದರೂ ಈ ...-ಆಶೀಸರ ನಿಗೂಢ ಮೌನವ್ರತಾಚರಣೆಯಲ್ಲಿರುವುದು ಸಂಶಯ ಸೃಷ್ಟಿಸಿದೆ! ಕಾಗೇರಿ-ಆಶೀಸರ, ...ದಣ-ಕಾವೀಕರಣಗೊಂಡಿರುವ "ಪರಿಸರ ಪ್ರಜ್ಞೆ"ಯ ...ಮತ್ತು ಈಗ ಜಗಜ್ಜಾಹೀರಾಗಿ ಹೋಗಿದೆ.

...ಕ್ಷಕರೇ ಅವ್ಯವಹಾರಿಗಳಾಗಿರುವ ಈ ಭ್ರಷ್ಟ ಬಿಜೆಪಿ ...ದಲ್ಲಿ ಬೆಳ್ಸಕೇರಿ ಅರಣ್ಯ ಹತ್ಯಾಕಾಂಡದ ತನಿಖೆ ...ಸುವುದೇ ವ್ಯರ್ಥ! ಹಾಗೊಮ್ಮೆ ನಿಷ್ಠುರ ತನಿಖೆ ... ಅರಣ್ಯ ಇಲಾಖೆಯ ಕೊಬ್ಬಿದ ತಿಮಿಂಗಿಲಗಳು ...ಗೆ ಬೀಳುವುದು ಗ್ಯಾರಂಟಿ. ಆ ತಾಕತ್ತು ಯಾರಿಗಿದೆ? ...ಗೆ ಇದೆಯ್ಯಾ? ಮಂತ್ರಿ ಕಾಗೇರಿಗಿದೆಯಾ? ಅರಣ್ಯ ದಗಲುಬಾಜಿ ಯೋಗೀಶ್ವರ್‌ಗೆ ಇದೆಯಾ? ...ಗೂ ಇಲ್ಲದಿದ್ದರೆ ಹಲ್ಕಾಬಿ ಸಿಎಂ ಸದಾಗಿದೆಯಾ? ...ತ ಶಿರಸಿ ಸೀಮೆಯ ಪಕ್ಕಾ ಪರಿಸರವಾದಿಗಳು ...ನ್ನಾರೆ......

• ನಹುಪ

ಹುಬ್ಬಳ್ಳಿ ಡೀಲಿಗೆ ನಿಂತ ಪೊಲೀಸರು ಕೇಸುಗಳ ತಿಪ್ಪೆ ಸಾರಿಸಲು ಸಜ್ಜಾದರು!

ಛೋಟಾ ಮುಂಬೈ ಎಂದು ಕರೆಸಿಕೊಳ್ಳುವ ಹುಬ್ಬಳ್ಳಿ ಬಹುತೇಕ ಎಲ್ಲ ನಮೂನೆಯ ಅಕ್ರಮ ದಂಧೆಗಳ ತವರೂರು. ನಕಲಿ ಎಂಬುದು ಹುಟ್ಟಿದ್ದೇ ಇಲ್ಲಿ ಎಂಬಂತೆ ಅಕ್ರಮ ಕುಳಗಳನ್ನು ಸಾಕಿ ಬೆಳೆಯಲು ಬಿಟ್ಟಿದೆ ಹುಬ್ಬಳ್ಳಿ. ವಿಪರ್ಯಾಸವೆಂದರೆ ಬೇರೆಡೆ ಖದರ್ ತೋರಿಸಿದ ಖಾಕಿ ಅಧಿಕಾರಿಗಳೆಲ್ಲಾ ಇಲ್ಲಿಗೆ ಬಂದ ಕೆಲ ದಿನಗಳಲ್ಲೇ ತಮ್ಮ ಖದರ್‌ಗೆ ಚಾದರ್ ಹೊದಿಸಿಬಿಡುತ್ತಾರೆ.

ಕೆ.ರಾಮಚಂದ್ರರಾವ್ ಹೊಸತರಲ್ಲಿ ಏನೋ ಬದಲಾವಣೆ ತರುತ್ತಾರೆ ಎಂಬ ಭರವಸೆಯನ್ನು ಅವಳಿನಗರದ ಜನತೆಯಲ್ಲಿ ಹುಟ್ಟುಹಾಕಿದ್ದರು. ಮರೆಗೆ ಸರಿದಿದ್ದ ಅಕ್ರಮ ಸಾರಾಯಿ ದಂಧೆ, ಮಟ್ಕಾ, ಜೂಜು ಅಡ್ಡೆಗಳು, ವೇಶ್ಯಾವಾಟಿಕೆ ಸೇರಿದಂತೆ ಮೀಟರ್ ಬಡ್ಡಿ ದಂಧೆಕೋರರಿಗೆ ಬಿಸಿ ಮುಟ್ಟಿಸಿದ್ದರು. ಆದರೂ ಇವರ ಕಣ್ಣು ತಪ್ಪಿಸಿ ಆಗಿನ ಡಿಸಿಪಿ ಚಾಂದಿರಾಂ ಸಿಂಗ್ ಅಕ್ರಮ ಕುಳಗಳ ಕೈ ಖಾಲಿ ಇದ್ದರೆ ತನ್ನ ಸ್ವಂತ ಮಕ್ಕಳೇ ಉಪವಾಸವಿದ್ದಂತೆ ಎಂದು ತಿಳಿದುಕೊಂಡು ಅವರಿಗೆಲ್ಲಾ ಆಶ್ರಯ ನೀಡುತ್ತಾ ಬಂದಿದ್ದ. ಆದರೆ ಈಗಿನ ಪರಿಸ್ಥಿತಿ ಬೇರೆ ಇದೆ. ಕಮಿಷನರ್ ಕೆ.ರಾಮಚಂದ್ರರಾವ್ ದರ್ಬಾರಿನಲ್ಲಿ ಬಹುತೇಕ ಎಲ್ಲ ಅಕ್ರಮ ದಂಧೆಗಳೂ ಮೆಲ್ಲನೆ ಜೀವ ಪಡೆದುಕೊಳ್ಳುತ್ತಿವೆ. ನಕಲಿ ಮದ್ಯದ ಕುಳಗಳು ಅಸಲಿ ಅಂಗಡಿಯಲ್ಲೇ ದುಬಾರಿ ಬ್ರ್ಯಾಂಡ್ ಬಾಟಲಿಯಲ್ಲಿ ತಮ್ಮ ನಕಲಿ ಮದ್ಯ ತುಂಬಿ ಗಪ್‌ಚುಪ್ ದಂಧೆಗೆ ನಿಂತಿದ್ದಾರೆ. ಊರು ಬಿಟ್ಟಿದ್ದ ಆಂಧ್ರ, ಕೇರಳ, ಮುಂಬೈ ಮೂಲದ ನಿತ್ಯ ಸುಮಂಗಲಿಯರು ಜನತಾಬಜಾರ ಹಾಗೂ ದುರ್ಗದಬೈಲ್‌ನ ಲಾಡ್ಜ್‌ಗಳ ಮೆಟ್ಟಿಲು ಹತ್ತಿದ್ದಾರೆ.



ಎರಡು ತಿಂಗಳ ಹಿಂದೆ ಎತ್ತಂಗಡಿಯಾದ ಚಾಂದಿರಾಂ ಸಿಂಗ್‌ನ ಡಿ.ಸಿ.ಪಿ ಹುದ್ದೆಗೆ ಬಂದು ಕುಳಿತಿರುವಾತ ಎಸ್. ಪ್ರತಾಪನ್. ಈತ ಬಹು ಬೇಗನೆ ಆಯುಕ್ತರಿಗೆ ಹತ್ತಿರಾಗಿ ಎಲ್ಲವನ್ನೂ ಹದಗೆಡಿಸುತ್ತಿದ್ದಾನೆ. ಇದರಿಂದಾಗಿ ದೊಡ್ಡ ಪ್ರಕರಣಗಳ ತಿಪ್ಪೆ ಸಾರಿಸುವಿಕೆ ನಿರಾತಂಕವಾಗಿ ನಡೆಯುವಂತಾಗಿದೆ. ಸ್ವತಃ ಆಯುಕ್ತ ರಾಮಚಂದ್ರರಾವ್ ರಾಜಿ ಪಂಚಾಯ್ತಿ ನಡೆಸಿ ಪ್ರಕರಣಕ್ಕೆ ಬೇರೆ ರೂಪ ಕೊಟ್ಟು ತೋರಿಕೆಗೆ ತನಿಖಾ ತಂಡ ರಚಿಸಿದ್ದಾಗಿ ಹೇಳುತ್ತಿರುವುದು ಅವಳಿನಗರದ ಜನರನ್ನು ಬೆಚ್ಚಿಬೀಳಿಸಿದೆ. ಮೂರ್ನಾಲ್ಕು ವರ್ಷಗಳ ಹಿಂದೆ ನಡೆದ ಕೊಲೆ ಕೇಸುಗಳ ಆರೋಪಿಗಳನ್ನು ಸ್ಟೇಷನ್‌ಗೆ ಕರೆಯಿಸಿ ಖುಲಾಸೆ ಮಾಡಿ ಆ ಪ್ರಕರಣಗಳನ್ನು ಮುಚ್ಚಿಹಾಕಿ ತಿಪ್ಪೆ ಸಾರಿಸುವುದರಿಂದ ತಲೆಮರೆಸಿಕೊಂಡಿದ್ದ ಕೆಲ ಖತರ್‌ನಾಕ್ ಕೊಲೆಗಡುಕರು ಇಂದು ಬಿಂದಾಸ್ ಆಗಿ ಮಾರ್ಕೆಟ್‌ನಲ್ಲಿ ಓಡಾಡುವಂತಾಗಿದೆ.

ರೇಪು ಕೇಸು ರಾಡಿ ಹಿಡೀತು

ದೂರದ ಅಹಮದಾಬಾದಿನಿಂದ ನಕಲಿ ವಸ್ತುಗಳನ್ನು ತಂದು ಇಲ್ಲಿ ಅವನ್ನು ದುಪ್ಪಟ್ಟು ರೇಟಿಗೆ ಮಾರಿ ದುಂಡಗಾಗಿರುವ ಇಲ್ಲಿಯ ಬಟ್ಟರ್ ಮಾರ್ಕೆಟ್ಟಿನ ಕೋಟ್ಯಾಧೀಶ ಮಾರವಾಡಿಗಳ ಮಕ್ಕಳು ಮಾಡುವ ದಂಧೆಗಳಿಗೆ ಮಿತಿ ಇಲ್ಲದಂತಾಗಿದೆ. ಕಾಲೇಜಿಗೆ ಹೋಗುವ ಬಡ ವಿದ್ಯಾರ್ಥಿನಿಯರನ್ನು ಟಾರ್ಗೆಟ್ ಮಾಡಿಕೊಂಡು ಬುಟ್ಟಿಗೆ ಕೆಡವಿಕೊಳ್ಳುವ, ಅವರನ್ನು ತಮ್ಮ ತೀಟೆಗೆ ಬಳಸಿಕೊಳ್ಳುವ ಮಾರವಾಡಿ ಪುಂಡರ ಹಾವಳಿ ಇಂದು ನಿನ್ನೆಯದಲ್ಲ. ಇವರ ಕಾಮದಾಟಕ್ಕೆ ಬಲಿಯಾದ ಹತ್ತಾರು ಯುವತಿಯರು ಗೋರಿ ಸೇರಿದ್ದಾರೆ. ಆದರೆ ಇಂತಹವರ ಮೇಲೆ ಒಂದು ಕೇಸನ್ನೂ ಇಲ್ಲಿಯ ಖಾಕಿಗಳು ಜಡಿದಿಲ್ಲ. ಕಳೆದ ತಿಂಗಳು ಗಣೇಶ ಹಬ್ಬದ ಅಬ್ಬರದಲ್ಲಿ ಮುಳುಗಿದ್ದ ಇಡೀ ಹುಬ್ಬಳ್ಳಿಯಲ್ಲಿ ಆರು ಜನ ಮಾರವಾಡಿ ಯುವಕರ ಗುಂಪು ಕಾಲೇಜು ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಸಿಕ್ಕಿಬಿದ್ದರು. ಆದರೂ ಅವರೆಲ್ಲ ಮರುದಿನವೇ ಬಿಂದಾಸಾಗಿ ಓಡಾಡಲು ಶುರುವಿಟ್ಟರು. ಕೇಶ್ವಾಪುರ ಏರಿಯಾದಲ್ಲಿ ತಂದೆಯಿಲ್ಲದೆ ತಾಯಿಯ ಆಶ್ರಯದಲ್ಲಿ ಒಬ್ಬಳೇ ಮಗಳಾಗಿ ಬೆಳೆದಿರುವ ಈ ಯುವತಿ ಸಿ.ಬಿ.ಟಿ. ಇಟಗಿ ಮಾರುತಿಗಲ್ಲಿಯ ಮಾರವಾಡಿ ಯುವಕನೊಬ್ಬನ ಬಣ್ಣದ ಮಾತಿಗೆ ಮರುಳಾಗಿ ಆತನೊಂದಿಗೆ ಗೆಳೆತನ ಮಾಡಿದ್ದಳು. ಇದನ್ನೆ ಉಪಯೋಗಿಸಿಕೊಂಡ ಡ್ರೈಫ್ರೂಟ್ಸ್ ವ್ಯಾಪಾರಿಗಳ ಆರು ಜನ ಪುಂಡ ಮಕ್ಕಳು ಅವಳನ್ನು ಲ್ಯಾಮಿಂಗ್‌ಟನ್ ರಸ್ತೆಯಲ್ಲಿನ ಮಂತ್ರಿ ಜಗದೀಶ ಶೆಟ್ಟರ್‌ನ ತಮ್ಮ ಪ್ರದೀಪ ಶೆಟ್ಟರ್‌ನ ಉಸ್ತುವಾರಿಯಲ್ಲಿರುವ ಅನಂತ ರೆಸಿಡೆನ್ಸಿಗೆ ಪಾರ್ಟಿ ನೆಪದಲ್ಲಿ ರೂಂಗೆ ಕರೆದೊಯ್ದು ತಮ್ಮ ಕಾಮದ ತೀಟೆ ತೀರಿಸಿಕೊಂಡರು. ಇವರ ಉಪಟಳದಿಂದ ಬೇಸತ್ತ ಕೆಲವರು ಈ ಸಂದರ್ಭವನ್ನು ಕಾಯ್ದು ಆ ಮಾರವಾಡಿ ಯುವಕರನ್ನು ಪೊಲೀಸರಿಗೆ ಹಿಡಿದು ಕೊಟ್ಟಿದ್ದರು. ಜನರ ಮುಂದೆ ಬಂಧಿಸುವ ನಾಟಕವಾಡಿದ ಖಾಕಿಗಳು ಆ ಯುವಕರನ್ನು ಠಾಣೆಗೆ ಕರೆದೊಯ್ದು ಪ್ರಕರಣಕ್ಕೆ ಹೊಸ ಸ್ಕ್ರಿಪ್ಟ್ ರೆಡಿಮಾಡಿ ಏನೂ ನಡೆದೇಯಿಲ್ಲ ಎಂದರು.




ಪ್ರದೀಪ್

ಆ ಯುವತಿಯ ತಾಯಿಗೆ ದೂರು ಕೊಡದಂತೆ ಬೆದರಿಕೆ ಹಾಕಿ ಕೇಳಿದಷ್ಟು ಹಣ ಕೊಡುವ ಆಮಿಷ ತೋರಿಸಲಾಗುತ್ತಿದೆಯಂತೆ. ತನ್ನ ರೆಸಿಡೆನ್ಸಿಯ ಮಾನ ಉಳಿಸಲು ಕೊಲೆಗಡುಕರು ಬಗಲಲ್ಲೆ ಇರ್ತಾರೆ

ಹಾಡುಹಗಲೇ ಕೊಲೆ ಮಾಡಿರುವ ಕೊಲೆಗಡುಕರು ಜೈಲಿನಲ್ಲಿ ರೊಟ್ಟಿ ಮುರಿಯುವ ಬದಲು ಬಿಂದಾಸಾಗಿ ಓಡಾಡುತ್ತಾ ಖಾಕಿಗಳ ಬಗಲಲ್ಲೆ ಕಾಣುತ್ತಾರೆ. ಇದು ಹುಬ್ಬಳ್ಳಿ ಖಾಕಿ ಸ್ಪೆಷಲ್ ಅಂತಾರೆ ಇಲ್ಲಿಯ ಜನ...

ಪಕ್ಕಾ ಜನನಿಬಿಡ ಪ್ರದೇಶವಾದ ಮ್ಯಾದರ ಓಣಿಯ ಸೊರಬದಮಠ ಗಲ್ಲಿಯ ರೂಪಾ ಅಗರವಾಲ್ ಎಂಬ ಮಹಿಳೆಯನ್ನು 25-8-2009ರಂದು ಹಾಡುಹಗಲೆ ನಾಲ್ಕು ಜನ ಹಂತಕರು ಕೊಲೆಗೈದು ಪರಾರಿಯಾಗಿದ್ದರು. ಇಂದಿಗೂ ಈ ಪ್ರಕರಣ ಹೆಸರಿಗೆ ಮಾತ್ರ ಉಳಿದಿದೆ. ಕೊಲೆಯ ನಂತರ ಹತ್ತು ಹಲವು ಕಥೆಗಳು ಇದರ ಸುತ್ತ ಗಿರಕಿ ಹೊಡೆದವು. ಕೊಲೆಯಾದ ದಿನ ರೂಪಾ ಒಬ್ಬಳೆ ಮನೆಯಲ್ಲಿದ್ದಳು. ಆಕೆಯ ಮಗು ಶಾಲೆಗೆ ಹೋಗಿತ್ತು, ಪತಿ ಓಂ ಪ್ರಕಾಶ ಅಗರವಾಲ ಉಣಕಲ್ ಕ್ರಾಸ್ ಬಳಿಯ ಜೈನ ಮಾರ್ಬಲ್ಸ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಹಂತಕರು ರೂಪಾಳನ್ನು ಬರ್ಬರವಾಗಿ ಹತ್ಯೆಗೈದು ಸುಮಾರು ಮೂರು ಬಂಗಾರದ ಬಳೆ ಸೇರಿದಂತೆ ಮನೆಯಲ್ಲಿದ್ದ ಐದು ಲಕ್ಷ ಹಣವನ್ನು ದೋಚಿ ಪರಾರಿಯಾಗಿದ್ದರು ಎಂದು ಇಲಾಖೆ ಕತೆ ಹೇಳಿತ್ತು. ಆದರೆ, ಈ ದುಷ್ಕೃತ್ಯವೆಸಗಿದ ಕೊಲೆಗಡುಕರು ಯಾರೆಂಬುದು ರೂಪಾ ಹತ್ಯೆಯಾದ ದಿನವೇ ಬಹಿರಂಗಗೊಂಡಿತ್ತು. ಆಗಿನ ಎ.ಸಿ.ಪಿ. ಶ್ರೀನಾಥ ಜೋಶಿ ಹಂತಕರನ್ನು ಒದ್ದು ಜೈಲಿಗೆ ಅಟ್ಟುವ ಬದಲು ಡೀಲ್‌ಗೆ ಸಿದ್ಧನಾಗಿದ್ದ. ಕೊಪ್ಪಿಕರ ರಸ್ತೆಯ ಮಾಶಕ್ತಿ ಜುವೆಲರಿ ಶಾಪ್‌ನ ಮಾಲೀಕ ನರೇಶರಾವಲ್ ಈ ಡೀಲಿನ ಪೂರ್ಣ ಉಸ್ತುವಾರಿ ವಹಿಸಿಕೊಂಡಿದ್ದ. ಈಗಿನ ಕಮೀಷನರ್ ರಾಮಚಂದ್ರರಾವ್ ಕಳೆದ ತಿಂಗಳು ಮಾಧ್ಯಮದವರ ಮುಂದೆ ರೂಪಾ ಅಗರವಾಲಳ ಕೊಲೆ ಹಂತಕರನ್ನು ಶೀಘ್ರ ಬಂಧಿಸುತ್ತೇವೆ ಎಂದು ಹೇಳಿ ಮುಜುಗರ ಹುಟ್ಟುವಂತೆ ಮಾಡಿದ್ದಾರೆ. ಕೊಲೆ ನಡೆದು ಸುಮಾರು ಎರಡು ವರ್ಷ ಗತಿಸಿಹೋಗಿದೆ. ಹಂತಕರು ಯಾರು ಎಂಬುದು ಗೊತ್ತಿದ್ದರೂ, ತಳ ಮುಚ್ಚಿಕೊಂಡು ಕುಳಿತಿದ್ದ ಖಾಕಿಗಳು ಈಗ ಏಕಾಏಕಿ ಪ್ರಕರಣ ಬೇಧಿಸುವ ಮಾತನಾಡುತ್ತಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಅಸಲಿಗೆ ರೂಪಾಳ ಕೊಲೆಯ ಪೂರ್ತಿ ಇತಿಹಾಸ ಬಲ್ಲ ಬಂಗಾರದ ವ್ಯಾಪಾರಿ ನರೇಶ ರಾವಲ್ ಆ ಸಂದರ್ಭದಲ್ಲಿ ಡೀಲ್ ಕುದುರಿಸಿಕೊಂಡು ಖಾಕಿಗಳಿಗೆ ಲಕ್ಷಾಂತರ ರೂಪಾಯಿ ಕೊಟ್ಟು ಮುಂದೆ ಕೇಸು ತನ್ನ ತಲೆಗೆ ಬರುತ್ತಿದೆ ಎಂದು ಅರಿತವನೇ ದುಬೈಗೆ ಹಾರಿದ್ದ. ಈಗ ಪ್ರತಾಪನ್‌ನಂತಹ ಡಿ.ಸಿ.ಪಿ. ಬಂದಿರುವುದರಿಂದ ಈತನೂ ಹುಬ್ಬಳ್ಳಿಗೆ ಹಿಂದಿರುಗಿದ್ದಾನೆ.

ಹುಬ್ಬಳ್ಳಿ ಹೊರವಲಯದ ಮಂಟೂರು ರಸ್ತೆಯ ಶೀಲಾ ಕಾಲೋನಿಯ ಮನೆಯೊಂದರಲ್ಲಿ ಮಗುವನ್ನು ಹೂತಿಟ್ಟು ಪಾಲಕರು ನಾಪತ್ತೆಯಾಗಿದ್ದಾರೆ. ಇದರ ಹಿಂದೆ ದೊಡ್ಡ ಪಿತೂರಿ ಅಡಗಿದೆ. ಈ ಪ್ರಕರಣ ಸಹ ತಿಪ್ಪೆಗೆ ಸರಿಯುತ್ತಿದೆ ಎಂಬ ಗುಮಾನಿ ಕೂಡ ಹಬ್ಬಿದೆ. ಒಟ್ಟಿನಲ್ಲಿ ಕಳೆದ ಆರು ತಿಂಗಳಿಂದ ನಡೆದ ಕೇಸುಗಳನ್ನು, ಹಿಂದೆ ಲಕ್ಷ ರೂ.ಗೋ, ಕೋಟಿಗೋ ಡೀಲಾಗಿ ಮುಚ್ಚಿಹೋಗಿದ್ದ ಪ್ರಕರಣಗಳನ್ನು ಒಂದೊಂದಾಗಿ ಹೆಕ್ಕಿ ತೆಗೆದು ಮತ್ತೆ ಹಣ ಸುಲಿಯುವ ವ್ಯವಸ್ಥಿತ ಕಾರ್ಯಕ್ರಮ



ಶ್ರೀನಾಥ್



ರಾಮಚಂದ್ರ ರಾವ್

ಅವಳಿನಗರದ ಖಾಕಿಗಳಿಂದ ನಡೆಯುತ್ತಿದೆ. ಅಕ್ರಮ ದಂಧೆಗಳು ಸೈಲೆಂಟಾಗಿ ಬಾಯ್ತೆರೆಯುತ್ತಿವೆ.


ಖಾಕಿಗಳು ಇನ್ನಾದರೂ ಆದ ತಪ್ಪುಗಳನ್ನು ಸರಿಪಡಿಸಿಕೊಳ್ಳದಿದ್ದರೆ ಅನಾಹುತಗಳಾಗುವುದು ಖಚಿತ.

• ಹುರಳಿಕುಪ್ಪಿ ವಿನಯ

ಬಡ ಹುಡುಗಿ ಮೇಲೆ ದುಷ್ಟ ವ್ಯವಸ್ಥೆಯ ಅತ್ಯಾಚಾರ

ಒಂದು ಪ್ರಭಾವಿ ಸಮುದಾಯದ ಪುರ್ಜಿ, ಹಣಕ್ಕಾಗಿ ಬಾಯ್ತೆರೆದ ಖಾಕಿಗಳ ಖದೀಮತನ ಮತ್ತು ರಾಜಕೀಯ ತೆವಲುಗಳೆಲ್ಲ ಸೇರಿಕೊಂಡು ಅತ್ಯಾಚಾರಕ್ಕೀಡಾಗಿದ್ದ ಬಡ ಹುಡುಗಿಯೊಬ್ಬಳ ಮೇಲೆ ಮತ್ತೊಂದು ಸುತ್ತಿನ ಅತ್ಯಾಚಾರವೆಸಗಿದೆ.

ಅಗರ್‌ವಾಲ್ ಸಮುದಾಯದ ದುಷ್ಟಪಿಂಡ ತರುಣ ಅಗರ್‌ವಾಲ್ ಎಂಬಾತ ಪುಂಡ ಪಟಾಲಂನೊಂದಿಗೆ ಸೇರಿ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರವೆಸಗಿದ್ದ. ಈ ಅಮಾನವೀಯ ಘಟನೆ ನಡೆದದ್ದು ಹುಬ್ಬಳ್ಳಿಯ ಅನಂತ್ ಎಕ್ಸಿಕ್ಯೂಟಿವ್ ಲಾಡ್ಜ್‌ನ ರೂ. ನಂ. 102 ಹಾಗೂ 104ರಲ್ಲಿ. ಸದರಿ ಲಾಡ್ಜ್ ಇಂಥಾ ಅಡ್ನಾಡಿತನಗಳಿಗೆ ಕುಖ್ಯಾತಿ ಪಡೆದಿದೆ. ಹಿಂದೆ ಇದಕ್ಕಿದ್ದ ಹೆಸರು ವುಡ್‌ಲ್ಯಾಂಡ್ಸ್. ಆ ಕಾಲದಲ್ಲಿ ಸಿನಿಮಾ ನಟರು, ರಾಜಕಾರಣಿಗಳು ಸೇರಿದಂತೆ ಪ್ರತಿಷ್ಠಿತರ ಪಾಲಿಗಿದು ಫೇವರಿಟ್ ಅಡ್ಡೆಯಾಗಿತ್ತು. ಆದರೆ ಅದು ದಿವಾಳಿ ಸ್ಥಿತಿ ತಲುಪಿ ವುಡ್‌ಲ್ಯಾಂಡ್ಸ್ ಒಡೆದು ಇಬ್ಭಾಗವಾಯಿತು. ಅದರ ಒಂದು ಭಾಗಕ್ಕೆ ಅನಂತ ಎಕ್ಸಿಕ್ಯೂಟಿವ್ಸ್ ಅಂತ ಹೆಸರಿಟ್ಟು ಮಾಲೀಕನಾಗಿರುವವನು ರಮೇಶ್ ಶೆಟ್ಟಿ. ಇದೇ ಲಾಡ್ಜ್‌ನಲ್ಲಿ ತರುಣ್ ಅಗರವಾಲ್ ಮತ್ತು ತಂಡ ರಾತ್ರಿ ಬಡಪಾಯಿ ಹುಡುಗಿಯ ಮೇಲೆ ಸರಣಿ ಅತ್ಯಾಚಾರವೆಸಗಿತ್ತು.



ಹುಬ್ಬಳ್ಳಿ ಧಾರವಾಡ ಸೀಮೆಯ ವ್ಯಾಪಾರಿ ಸಮುದಾಯದಲ್ಲಿ ಜೈನರ ಬಳಿಕ ಅಗರ್‌ವಾಲರಿಗೆ ಪ್ರಮುಖ ಸ್ಥಾನಮಾನಗಳಿವೆ. ಅಗರ್‌ವಾಲ್ ಸಮುದಾಯದ ಗಂಗಾರಾಮ ಅಗರ್‌ವಾಲ್ ಕೈಲಾಸ್ ಟ್ರೇಡರ್ಸ್ ಹೆಸರಿನಲ್ಲಿ ಉತ್ತರ ಕರ್ನಾಟಕಕ್ಕೆ ಡ್ರೈಫ್ರೂಟ್ಸ್ ಸರಬರಾಜು ಮಾಡುತ್ತಾರೆ. ಹುಬ್ಬಳ್ಳಿಯ ಇಟಗಿ ಮಾರುತಿಯಲ್ಲಿ ಇವರ ಒಡೆತನದಲ್ಲಿ ದೊಡ್ಡದೊಂದು ಅಂಗಡಿ ಇದೆ. ಒಟ್ಟಾರೆಯಾಗಿ ಹಣ, ಹೆಸರು, ಒಳ್ಳೆತನ ಎಲ್ಲವೂ ಈ ಫ್ಯಾಮಿಲಿಗಿದೆ. ಇದಕ್ಕೆಲ್ಲ ಕಪ್ಪುಚುಕ್ಕೆಯಂತಿರುವವನು ಗಂಗಾರಾಮರ ಮೊಮ್ಮಗ ತರುಣ್ ಅಗರ್‌ವಾಲ್! ಆದರೆ ಆ ನಂತರವೂ ಹುಡುಗಿಯರನ್ನು ಚುಡಾಯಿಸುವುದು, ವೇಶ್ಯೆಯರೊಂದಿಗೆ ಲಾಡ್ಜುಗಳಲ್ಲಿ ರಾತ್ರಿ ಕಳೆಯುವುದನ್ನೇ ಚಟವಾಗಿಸಿಕೊಂಡಿದ್ದ. ಅದರಂತೆಯೇ ಮೊನ್ನೆ ಬಡ ಹುಡುಗಿಯನ್ನು ಅನಂತ ಎಕ್ಸಿಕ್ಯೂಟಿವ್ ಲಾಡ್ಜಿಗೆ ಕರೆದುಕೊಂಡು ಹೋಗಿ ಅತ್ಯಾಚಾರವೆಸಗಿದ್ದ. ಈ ವಿಚಾರ ಡಿಸಿಪಿ ಪ್ರತಾಪನ್‌ಗೆ ತಕ್ಷಣ ತಿಳಿದು ದುಷ್ಟರನ್ನು ರೆಡ್‌ಹ್ಯಾಂಡಾಗಿ ಹಿಡಿದಿದ್ದ. ಆದರೆ ಆ ಬಳಿಕ ಪಕ್ಕಾ ಡೀಲ್ ನಡೆಸಿ ಅಂತಹುದೊಂದು ಘಟನೆ ನಡೆದೇ ಇಲ್ಲ ಎಂಬಂತೆ ತಿಪ್ಪೆ ಸಾರಿಸಿದ.

ಹೇಳಿಕೇಳಿ ರೇಪ್‌ಗೊಳಗಾದ ವಿದ್ಯಾರ್ಥಿನಿಗೆ ತಂದೆ ಇಲ್ಲ. ಆಕೆಗೆ ಬಲಾಢ್ಯ ದುಷ್ಟರ ವಿರುದ್ಧ ನಿಂತು ಸೆಣಸಾಡುವಂಥ ಶಕ್ತಿಯೂ ಇಲ್ಲ. ಇದನ್ನೇ ಬಳಸಿಕೊಂಡು ಪ್ರತಾಪನ್ ಆಕೆಯನ್ನು ತೆಪ್ಪಗಾಗಿಸಿ ಎಲ್ಲವನ್ನೂ ಥಂಡಾ ಹೊಡೆಸಿದ್ದಾನೆ. ಇದಕ್ಕಾಗಿ ಹೊಸೂರಿನ ಸಂಬಾಜಿ ದಳವಿ ಎಂಬಾತನ ಮೂಲಕ ಅಗರ್‌ವಾಲ್ ಫ್ಯಾಮಿಲಿಯಿಂದ ಕಪ್ಪ ಪಡೆದು ಕೃತಾರ್ಥನಾಗಿದ್ದಾನೆ.

ನೊಂದ ಹುಡುಗಿಯ ನೆರವಿಗೆ ಹುಬ್ಬಳ್ಳಿಯ ಒಬ್ಬನೇ ಒಬ್ಬ ಬಾರದಿರುವುದು ನಿಜಕ್ಕೂ ದುರಂತ. ಇಲ್ಲಿನ ಸಮಾಜಪರ ಸಂಘಟನೆಗಳು ಏನು ಮಾಡುತ್ತಿವೆ ಗೊತ್ತಿಲ್ಲ. ಶೆಟ್ಟರ್ ಮತ್ತವನ ತಮ್ಮ ಪ್ರದೀಪ ಈ ರೀತಿ ಮಾಡಿದ್ದಾರೆ ಎನ್ನುವುದಕ್ಕಿಂತ ಎಲೆಕ್ಷನ್‌ನಲ್ಲಿ ಕೋಟಿ ಕೋಟಿ ಹಣ ಕೊಡುವ ಮಾರವಾಡಿಗಳ ಮೇಲಿನ ಪ್ರೀತಿಯಿಂದ ಇದೆಲ್ಲ ನಡೆದಿದೆ ಎಂಬ ಮಾತು ಹುಬ್ಬಳ್ಳಿಯಲ್ಲಿ ಕೇಳಿಬರುತ್ತಿದೆ.

ಹುಬ್ಬಳ್ಳಿ ಕಿಮ್ಸ್ ಬಾಯಿ ಸತ್ತ ನಿರ್ದೇಶಕಿ ಮತ್ತು ಬಾಯ್ತೆರೆದ ಡಾಕ್ಟರ್‌ಗಳು!






ಡಾ. ವಸಂತ

ಉತ್ತರ ಕರ್ನಾಟಕದ ಕಾಮಧೇನು, ಕಲ್ಪವೃಕ್ಷ ಎಂತೆಲ್ಲಾ ಕರೆಸಿಕೊಂಡು ಕೃಷಿ ಆಧಾರಿತ ಬಡಜನರ ಬದುಕಿನ ಆಶಾಕಿರಣವಾಗಿದ್ದ ಹುಬ್ಬಳ್ಳಿಯ ಪ್ರತಿಷ್ಠಿತ ಕಿಮ್ಸ್ ಆಡಳಿತ ವ್ಯವಸ್ಥೆ ಕೆಟ್ಟು ಕೆರ ಹಿಡಿದಿದೆ. ನಿರ್ದೇಶಕ ಹುದ್ದೆಗಾಗಿ ಪೈಪೋಟಿ ನಡೆಸುವುದರಲ್ಲೇ ಕಾಲ ಕಳೆದಿರುವ ಇಲ್ಲಿಯ ಹಿರಿಯ ವೈದ್ಯರುಗಳು ಹತ್ತಾರು ವರ್ಷಗಳಿಂದ ಇಲ್ಲೇ ಠಿಕಾಣಿ ಹೂಡಿ ಪೋಸ್ಟಿಗಾಗಿ ಲಕ್ಷಗಟ್ಟಲೆ ಸುರಿದು ಸುಲಿಯುವುದನ್ನೇ ಡ್ಯೂಟಿಯಾಗಿಸಿಕೊಂಡಿದ್ದಾರೆ. ಹಾಜರಿ ಪುಸ್ತಕದಲ್ಲಿ ಸಹಿ ಮಾಡುವುದೊಂದೇ ಸರ್ಕಾರಿ ನೌಕರಿ ಎಂದುಕೊಂಡಿರುವ ಇವರುಗಳು ಕಾಲ ಕಳೆಯುವುದೆಲ್ಲಾ ಹೆಚ್ಚು ಆಮದನಿ ತರುವ ತಮ್ಮ ಖಾಸಗಿ ಆಸ್ಪತ್ರೆಗಳಲ್ಲಿ. ನರ್ಸ್‌ಗಳಿಂದ ಹಿಡಿದು ನಿರ್ದೇಶಕರವರೆಗೂ ಚೈನ್ ಸಿಸ್ಟಮ್‌ನಂತೆ ಲೂಟಿ ಮಾಡುವುದನ್ನು ಬಟವಾಡೆ ಮಾಡಿಕೊಂಡಿರುವ ಕಿಮ್ಸ್‌ನ ಆಡಳಿತ ವ್ಯವಸ್ಥೆಗೆ ಈಗ್ಗೆ ನಾಲ್ಕು ತಿಂಗಳ ಹಿಂದೆ ನಿರ್ದೇಶಕಿಯಾಗಿ ಬಂದು ಕುಳಿತಿರುವ ಡಾ. ವಸಂತ ಕಾಮತ್ ನಿರೀಕ್ಷೆಗಳನ್ನೆಲ್ಲಾ ಸುಳ್ಳಾಗಿಸಿದ್ದಾರೆ. ಈಕೆ ಆರ್‌ಎಸ್‌ಎಸ್ ಫ್ಯಾಮಿಲಿಯವಳು ಎಂಬ ಒಂದೇ ಕಾರಣಕ್ಕೆ ವೈದ್ಯಕೀಯ ಶಿಕ್ಷಣ ಮಂತ್ರಿ ಎಸ್.ಎ. ರಾಮದಾಸ್ ಆಕೆಯನ್ನು ಇಲ್ಲಿ ತಂದು ಕೂರಿಸಿದ್ದಾರೆ. ಈಕೆ ವಾರದಲ್ಲಿ ಎರಡೇ ದಿನ ಕಿಮ್ಸ್‌ನ ಛೇಂಬರಿಗೆ ಬಂದು ಹೋಗುತ್ತಾರೆ. ಇದರಿಂದಾಗಿ ಆಳೋ ಅರಸಿಲ್ಲ ಕೇಳೋ ಪ್ರಧಾನಿಯಿಲ್ಲ ಎಂಬ ಸ್ಥಿತಿಯಲ್ಲಿರುವ ಕಿಮ್ಸ್ ಆಸ್ಪತ್ರೆ ಮತ್ತಷ್ಟು ಕುಲಗೆಟ್ಟಿದೆ.

ಡಾ. ವಸಂತಗೆ ಕಾಲ್ಕೀಳೋ ಅವಸರ

ಸುವರ್ಣ ಸಂಭ್ರಮದ ಹೆಸರಲ್ಲೇ ಲಕ್ಷಾಂತರ ನುಂಗಿದ್ದ ಸ್ತ್ರೀರೋಗ ತಜ್ಞ ಹಿರೇಮಠನ ಅವಧಿ ಮುಗಿದ ನಂತರ ತೆರವಾದ ನಿರ್ದೇಶಕ ಹುದ್ದೆಗೆ ಬಂದಿರುವ ಡಾ. ವಸಂತ ಕಾಮತ್ ಈ ಪೋಸ್ಟನ್ನು ಕಾಡಿ ಬೇಡಿ ಪಡೆದವರಲ್ಲ. ಖಾಲಿಯಾಗಿದ್ದ ನಿರ್ದೇಶಕ ಹುದ್ದೆಗೆ ವೈದ್ಯಕೀಯ ಶಿಕ್ಷಣ ಇಲಾಖೆ ಸಂದರ್ಶನ ಕೂಡ ನಡೆಸಿತ್ತು, ಆಗ ಅರ್ಹತೆ ಹೊಂದಿದ್ದ ಹದಿನಾಲ್ಕು ಜನ ಹಿರಿಯ ವೈದ್ಯರು ಹಾಜರಾಗಿ ಸಂದರ್ಶನ ಕೊಟ್ಟಿದ್ದರು. ಜೊತೆಗೆ ಪೊಲಿಟಿಕಲ್ ಪವರನ್ನು, ಹಣಕ್ಕೆ ಹಚ್ಚಿದ್ದರು. ದುರಂತವೆಂದರೆ, ಆ ಎಲ್ಲಾ 14 ಜನರನ್ನು ಬಿಟ್ಟು ಸಂದರ್ಶನಕ್ಕೂ ಹಾಜರಾಗದ, ಅರ್ಜಿ ಕೂಡ ಸಲ್ಲಿಸದ ಡಾ. ವಸಂತರನ್ನು ನಿರ್ದೇಶಕಿಯನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದರಲ್ಲಿ ಮಂತ್ರಿ ರಾಮದಾಸನ ಚಿಡ್ಡಿ ಪ್ರೀತಿಯೇ ಹೆಚ್ಚಾಗಿತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಸರ್ವೀಸಿನ ಉದ್ದಕ್ಕೂ ಡಾ. ವಸಂತ ಕಾಮತ್ ಹೆಸರು ಕೆಡಿಸಿಕೊಂಡವರಲ್ಲ, ಇವರ ಪತಿ ಕೂಡ ನಿಮ್ಹಾನ್ಸ್ ಆಸ್ಪತ್ರೆಯ ನಿರ್ದೇಶಕರಾಗಿ ನಿವೃತ್ತಿ ಹೊಂದಿದವರು. ಭ್ರಷ್ಟರಲ್ಲದ ಇವರನ್ನು ಇಲ್ಲಿಗೆ ತಂದು ಕೂರಿಸಿ ಇಲ್ಲಿಯ ವ್ಯವಸ್ಥೆಯನ್ನು ಸುಧಾರಿಸಬಹುದು ಎಂದು ಮಂತ್ರಿ ರಾಮದಾಸ್ ಭಾವಿಸಿದ್ದ ಎಂಬುದು ಪಕ್ಕಾ ಸುಳ್ಳು. ಅಸಲಿಗೆ ಡಾ. ವಸಂತ ಕಾಮತ್ ಕಣ್ಣಿಟ್ಟಿದ್ದು ಬೆಂಗಳೂರು ಮೆಡಿಕಲ್ ಕಾಲೇಜ್ ನಿರ್ದೇಶಕ ಹುದ್ದೆಯ ಮೇಲೆ. ಆದರೆ ರಾಮದಾಸ ಅದನ್ನು 70 ಲಕ್ಷಕ್ಕೆ ಬೇರೊಬ್ಬರಿಗೆ ಮಾರಿಬಿಟ್ಟ. ಮೂಲತಃ ಆರ್‌ಎಸ್‌ಎಸ್ ಫ್ಯಾಮಿಲಿಯಿಂದ ಬಂದಿರುವ ಡಾ. ವಸಂತಗೆ ಹುಬ್ಬಳ್ಳಿ ಕಿಮ್ಸ್‌ಗೆ ಪೋಸ್ಟಿಂಗ್ ಮಾಡಿದ್ದಾನೆ.



ಒಲ್ಲದ ಮನಸ್ಸಿನಿಂದಲೇ ಇಲ್ಲಿಗೆ ಬಂದಿರುವ ಡಾ. ಕಾಮತ್‌ಗೆ ಈ ಭಾಗದ ಪರಿಚಯವೇ ಇಲ್ಲ, ವಾರದಲ್ಲಿ ಎರಡು ದಿನ ಕಿಮ್ಸ್‌ನಲ್ಲಿದ್ದರೂ, ತಮ್ಮ ಛೇಂಬರಿನ ನಾಲ್ಕು ಗೋಡೆ ಬಿಟ್ಟು ಬೇರೊಂದು ಕೋಣೆಯನ್ನು ನೋಡುವ ಪ್ರಯತ್ನ ಕೂಡ ಮಾಡಿಲ್ಲ, ಕಿಮ್ಸ್ ಕಾಲೇಜಿನ ಪ್ರಾಂಶುಪಾಲ ಡಾ. ಹಂಗರಗಾ ಮತ್ತು ಆಡಳಿತಾಧಿಕಾರಿ ಎಸ್.ಎಚ್.ನಾಯಕ್‌ರನ್ನು ಬಿಟ್ಟರೆ, ಕಾಲೇಜಿನ ಹತ್ತೊಂಭತ್ತು ವಿಭಾಗದ ಎಚ್.ಓ.ಡಿ.ಗಳ ಹೆಸರು ಮೇಡಂಗೆ ಗೊತ್ತಿಲ್ಲ. ಡಾ. ವಸಂತ ಇಲ್ಲಿಗೆ ಕಾಲಿಟ್ಟು ನಾಲ್ಕು ತಿಂಗಳಾದರೂ ಒಂದು ಸಭೆ ಕೂಡ ನಡೆಸದೆ, ಮೊದಲೇ ಹಳ್ಳ ಹಿಡಿದಿದ್ದ ವ್ಯವಸ್ಥೆಯನ್ನು ಮತ್ತಷ್ಟು ಕೆಟ್ಟು ಕೆರ ಹಿಡಿಯುವಂತೆ ಮಾಡಿಟ್ಟಿದ್ದಾರೆ. ಕಿಮ್ಸ್ ಇತಿಹಾಸದಲ್ಲೇ ಪ್ರಥಮ ಬಾರಿಗೆ ಹೊರಗಿನವರೊಬ್ಬರನ್ನು ತಂದು ನಿರ್ದೇಶಕರನ್ನಾಗಿ ಮಾಡಿದ್ದು ಕೇವಲ ನಾಮಕಾವಸ್ತೆ ಎಂಬಂತಾಗಿದೆ. ಹಿಂದಿದ್ದವರು ಈ ಹುದ್ದೆಯನ್ನು ಕೇವಲ ಲೂಟಿಗಾಗಿ ಬಳಸಿಕೊಂಡಿದ್ದರು. ಈಗ ಬಂದಿರುವವರು ಅದನ್ನು ಟೈಂಪಾಸ್ ಪೋಸ್ಟನ್ನಾಗಿ ಫಾರ್ವರ್ಡ್ ಮಾಡುತ್ತಿರುವುದು ಈ ಭಾಗದ ಬಡ ರೋಗಿಗಳ ದೌರ್ಭಾಗ್ಯವಲ್ಲದೆ ಮತ್ತೇನು?



ಶಿವಾನಂದ



ಮದಕಟ್ಟಿ



ಸದಾನಂದ



ಹಂಗರಗಾ



ಹಿರೇಮಠ್



ಪುಂಡಲಿಕ

ಕಿಮ್ಸ್‌ನ ಡಮ್ಮಿ ಐಟಮ್‌ಗಳು

ಕಿಮ್ಸ್ ಕಾಲೇಜಿನ ಪ್ರಾಂಶುಪಾಲರಾಗಿ ಡಾ. ಹಂಗರಗಾ ಕಡಿದು ಗುಡ್ಡೆ ಹಾಕಿದ್ದು ಏನೂ ಇಲ್ಲ. ಒಬ್ಬ ಸ್ಟೂಡೆಂಟ್‌ಗೂ ಇವರನ್ನು ಕಂಡರೆ ಭಯವಿಲ್ಲ. ಭ್ರಷ್ಟನಲ್ಲದ ಈತ ಬೇರೆಯವರು ಹೇಳಿದ್ದಕ್ಕೆಲ್ಲಾ ತಲೆ ಅಲ್ಲಾಡಿಸುವ ಕೋಲೆಬಸವ. ಇನ್ನು ಇಲ್ಲಿಯ ಸಿ.ಇ.ಓ ಸದಾನಂದ ಎಚ್.ನಾಯಕ್ ಮೂಲತಃ ಸಹಕಾರಿ ಇಲಾಖೆಯವರು. ಕೂದಲಿಗೆ ಡೈ ಮಾಡಿಕೊಂಡು ಸದಾ ಯುವಕನಂತೆ ಕಾಣುವ ಹಂಬಲವೊಂದನ್ನೇ ಮೇಂಟೇನ್ ಮಾಡಿರುವ ಇವರು ಬರುವ ಅಕ್ಟೋಬರ್ 31ಕ್ಕೆ ನಿವೃತ್ತಿಯಾಗಲಿದ್ದಾರೆ. ತಾನೂ ತಿನ್ನದ ಮತ್ತೊಬ್ಬರಿಗೂ ತಿನ್ನಲು ಅಡ್ಡಗಾಲು ಹಾಕುವ ಈ ನಾಯಕ್‌ರವರನ್ನು ಕಿಮ್ಸ್‌ನ ಹೆಗ್ಗಣಗಳೆಲ್ಲಾ ಸೇರಿ ಎತ್ತಂಗಡಿ ಮಾಡಿಸಲು ಎಲ್ಲಿಲ್ಲದ ಪ್ರಯತ್ನ ಪಟ್ಟಿದ್ದವು. ಆದರೆ ಇವರ ಒಳ್ಳೇತನದಿಂದ ಕಿಮ್ಸ್‌ಗೇನೂ ಉಪಯೋಗವಾಗಿಲ್ಲ.

ಆರು ವರ್ಷದಿಂದ ಆರ್ಥಿಕ ಸಲಹೆಗಾರನಾಗಿ ಕಿಮ್ಸ್‌ನ ಅರ್ಥವ್ಯವಸ್ಥೆಯನ್ನೇ ಬುಡಮೇಲು ಮಾಡಿರುವ ಕಿಟ್ಟ ನಾಯಕ್ ಎಂಬ ಪಕ್ಕಾ ಖದೀಮ ಅಕ್ಟೋಬರ್‌ಗೆ ಖಾಲಿಯಾಗಲಿರುವ ಸಿ.ಇ.ಓ. ಪೋಸ್ಟ್‌ಗೆ ಒಕ್ಕರಿಸಲು ಈಗಿನಿಂದಲೇ ಪ್ರಯತ್ನ ಶುರು ಹಚ್ಚಿಕೊಂಡಿದ್ದಾನೆ. ಒಂದು ವೇಳೆ ಅದು ಸಾಕಾರಗೊಂಡರೆ ಕಿಮ್ಸ್ ಮತ್ತಷ್ಟು ಎಕ್ಕುಟ್ಟುವುದು ಖಚಿತ.

ಶೂಟೌಟ್ ಶಿವಾನಂದ

ಕಿಮ್ಸ್‌ನ ಖ್ಯಾತಿಯನ್ನು ಶೂಟೌಟ್ ಪ್ರಕರಣದ ಮೂಲಕ ಕುಖ್ಯಾತಿಗೆ ತಂದು ನಿಲ್ಲಿಸಿದ್ದ ಹಿಂದಿನ ನಿರ್ದೇಶಕ ಹಾಲಿ ಪರಭಾರೆ ಸೂಪರಿಂಟೆಂಡೆಂಟ್ ಡಾ. ಶಿವಾನಂದ ದೊಡ್ಡಮನಿ ಮತ್ತೊಮ್ಮೆ ನಿರ್ದೇಶಕನಾಗುವ ಹೆಬ್ಬಯಕೆಯನ್ನು ಹೊರಗೆಡವಿದ್ದಾನೆ. ಇದಕ್ಕಾಗಿ ತನ್ನ ಪರಮಗುರು ಮಂತ್ರಿ ಉದಾಸಿಯ ಮೂಲಕ ಸದ್ದಿಲ್ಲದೇ ಪ್ರಯತ್ನ ನಡೆಸಿದ್ದಾನೆ. ಒಂದುವೇಳೆ ಈತ ನಿರ್ದೇಶಕ ಕುರ್ಚಿಗೆ ಬಂದು ಕೂತಿದ್ದೇ ಆದರೆ, ಕಿಮ್ಸ್ ಹರಾಜಿಗಿದೆ ಎಂಬ ಶೀರ್ಷಿಕೆ ಓದುವ ಕಾಲ ಸನಿಹವಾದಂತೆಯೇ.

ಇಷ್ಟೆಲ್ಲಾ ಕುಖ್ಯಾತಿ ಹೊಂದಿ ಮತ್ತೆ ನಿರ್ದೇಶಕನಾಗಲು ಹೊರಟಿರುವ ಡಾ. ಶಿವಾನಂದ ದೊಡ್ಡಮನಿ ಹಿಂದೆ ಕಿಮ್ಸ್‌ನ ಒಬ್ಬ ವೈದ್ಯರೂ ಇಲ್ಲ. ಹೀಗಾಗೇ ರಾತ್ರಿ ಹೊತ್ತು ಎಂ.ಸಿ.ಐ.ಗೆ ಸುಳ್ಳು ದಾಖಲೆ ನೀಡಿ ಬಡ್ತಿಗೆ ಯತ್ನಿಸಿದ್ದ ಬಯೋಕೆಮಿಸ್ಟ್ರಿಯ ಡಾ. ಹೇಮಾ ಸುಣಗಾರನ ಗಂಡ ಇಂಜಿನಿಯರ್ ಶಿವಕುಮಾರ ಡಂಬಳನ ಜೊತೆ ಎಣ್ಣೆ ಹಾಕುತ್ತಾ ಯಾರಿಗೇನು ಮಾಡೋದು ಎಂಬ ಸ್ಕೆಚ್ ಹಾಕುವುದರಲ್ಲಿ ಕಾಲ ಕಳೆಯುತ್ತಿದ್ದಾನೆ.

ಡಾಕ್ಟರ್ ಹೆಬ್ಬೆಟ್ಸ್!

ನಿತ್ಯ ಹಾಜರಿ ಪುಸ್ತಕದಲ್ಲಿ ಸಹಿ ಮಾಡುವ ಪದ್ಧತಿಯನ್ನು ಬದಲಿಸಿ ಈಗ ಕಿಮ್ಸ್‌ನಲ್ಲಿ ಹೆಬ್ಬೆಟ್ಟು ಒತ್ತುವ ಎಲೆಕ್ಟ್ರಾನಿಕ್ ಯಂತ್ರವನ್ನು ಸಿಬ್ಬಂದಿಗಳ ಹಾಜರಾತಿಗೆ ಅಳವಡಿಸಲಾಗಿದೆ. ಇಲ್ಲಿಯ ಐನಾತಿ ಡಾಕ್ಟರ್‌ಗಳು ಈ ಬದಲಾವಣೆಯ ಉಪಯೋಗ ಪಡೆಯುವಲ್ಲಿ ಬರಪೂರ ಯಶಸ್ಸು ಸಾಧಿಸಿದ್ದಾರೆ. ನ್ಯುರೋ ಸರ್ಜರಿಯ ಡಾ. ಕ್ರಾಂತಿಕಿರಣ, ಎಲುಬು ಕೀಲಿನ ಡಾ. ಪ್ರಶಾಂತ ಹೊಸಂಗಡಿ, ಮೂಲಿಮನಿ, ಬಂಗಾರ ಶೆಟ್ಟರು, ಮಧುಚಂದ್ರ, ಕಮ್ಮಾರ, ಸರ್ಜರಿ ವಿಭಾಗದ ಬಾರಿಗಿಡದ, ನಾರಾಯಣ ಹೆಬಸೂರ, ರಮೇಶ್ ಹೊಸಮನಿ, ರೇಡಿಯಾಲಜಿಯ ಜಿ.ಸಿ.ಪಾಟೀಲ, ಸ್ತ್ರೀರೋಗ ವಿಭಾಗದ ಡಾ. ಎಂ.ಜಿ.ಹಿರೇಮಠ, ಸೀತಾಗರಗ, ಡೋಣಿ ಹಿರೇಮಠ, ಕಾರ್ಡಿಯಾಲಜಿ ವಿಭಾಗದ ಎಂ.ಎಸ್.ಹಿರೇಮಠ, ಇ ಅಂಡ್ ಟಿ ವಿಭಾಗದ ನಾಗಲೋಟಿಮಠ, ಕಣ್ಣಿನ ಬೆಂಗೇರಿಬಾಯಿ, ಮಕ್ಕಳ ವಿಭಾಗದ ಡಾ. ರಾಜಾಶಂಕರ, ಕಿಮ್ಸ್‌ಗೆ ಬರುವ ಬಡರೋಗಿಗಳನ್ನು ಒಂದು ದಿನವೂ ಸರಿಯಾಗಿ ಪರೀಕ್ಷೆ ಮಾಡಿದ ಇತಿಹಾಸವಿಲ್ಲ, ಬದಲಿಗೆ ತಮ್ಮ ಖಾಸಗಿ ನರ್ಸಿಂಗ್ ಹೋಂಗಳಿಗೆ ರೆಫರ್ ಮಾಡುವುದನ್ನು ರೂಢಿಯನ್ನಾಗಿಸಿಕೊಂಡಿದ್ದಾರೆ. ಇನ್ನೊಂದು ವಿಚಿತ್ರವೆಂದರೆ, ಇವರುಗಳಲ್ಲಿ ಮುಕ್ಕಾಲು ಡಾಕ್ಟರ್‌ಗ ಖಾಸಗಿ ನರ್ಸಿಂಗ್ ಹೋಂ ನಡೆಸಲ್ಲ ಅಂತ ಸರ್ಕಾ ಬರೆದುಕೊಟ್ಟು, ಹೆಚ್ಚಿನ ಸಂಬಳ ಗಿಟ್ಟಿಸಿಕೊಳ್ಳುತ್ತಿದ್ದಾ

ಮಂತ್ರಿ ಹೆಸರಲ್ಲಿ ಮಂತ್ಲಿ

ಹಿಂದೆ ಒಂದು ಕಾಲದಲ್ಲಿ ನಾಲ್ಕಾರು ಮಂತ್ರಿಗ ಪಿ.ಎಸ್. ಆಗಿ ಕೆಲಸ ಮಾಡಿ ಈಗ ಕಿಮ್ಸ್‌ನ ಎಸ್ಟೇ ಅಧಿಕಾರಿಯಾಗಿರುವ ಶ್ರೀಪಾದ ಸೌಕಾರ ಖೊಟ್ಟಿ ಬಿ ತೆಗೆಯುವುದರಲ್ಲಿ ಡಾಕ್ಟರೇಟ್ ತೆಗೆದುಕೊಳ್ಳುವುದು ಬ ಉಳಿದಿದೆ. ಈತ ದಾಖಲೆಗಳಲ್ಲಿ ಕಿಮ್ಸ್‌ನ ಅನ ಕಟ್ಟಡಗಳನ್ನು ಹತ್ತು ಸಲ ಕೆಡವಿ ಮತ್ತೆ ಕಟ್ಟಿಸಿದಾ ಇಂತಹ ನಟೋರಿಯಸ್ ಹೆಗ್ಗಣ ಈಗ ಹೊಸದೊಂ ಕಾಯಕವನ್ನು ಸದ್ದಿಲ್ಲದೇ ಮಾಡುತ್ತಿದ್ದಾನೆ. ಮಂಗಳೂ ಮೂಲದ ರಾಜೇಶ್ ಎ ವ್ಯಕ್ತಿ ಪ್ರತಿ ತಿಂಗಳು ಮಂತ್ರಿ ರಾಮದಾಸನ ಹೆಸರಲ್ಲಿ ಮಾಮೂಲಿ ವಸೂಲಿಗೆ ಬಂದು ಇವ ಛೇಂಬರಿನಲ್ಲೇ ಕುಳಿತು ಕಲೆಕ್ಷನ್ ಮಾಡ್ತಾನೆ. ಮಂಗಳೂರಿನ ಉಜ್ವಲ ಅಪಾರ್ಟ್‌ಮೆಂಟ್‌ನಲ್ಲಿರು ಇ.ಆರ್.ಪಿ. ಟೆಕ್ನಾಲಜಿ ಎಂಬ ಹೆಸರಿನ ವಿಸಿಟಿಂ ಕಾರ್ಡ್ ಕೊಟ್ಟು ರಾಮದಾಸ್ ಕಡೆಯಿಂದ ಏನೇ ಕೆಲಸ ಇದ್ದರೂ ಮಾಡಿಸಿಕೊಡ್ತೇನೆ ಅಂತ ಹೇಳುತ್ತಾನೆ. ಕಿಮ್ಸ್‌ನ ವಿಭಾಗದ ಎಚ್.ಓ.ಡಿ.ಗಳೂ ಸೇರಿದಂತೆ ಡಿ ದರ್ಜೆ ನೌಕರರವರೆಗೂ ಇಂತಿಷ್ಟು ಅಂತ ಮಾಮೂ ಫಿಕ್ಸಾಗಿದೆ. ಸದಾ ಆಸ್ಪತ್ರೆಗಳಿಗೆ ಭೇಟಿ ನೀಡಿ ಹಾ ಪುಸ್ತಕ ಕಿತ್ತಾಡುವ ಕರ್ಮಗೇಡಿ ರಾಮದಾಸ್‌ಗೆ ಕಿಮ ಹಾಜರಿ ಪುಸ್ತಕ ಇನ್ನೂ ಕಣ್ಣಿಗೆ ಬಿದ್ದಿಲ್ಲವೇ? ಸ ಚಕ್ಕರ್ ಹೊಡೆಯುವ ಡಾಕ್ಟರ್‌ಗಳು, ವಾರಕ್ಕೆ ಎರ ದಿವಸ ನೌಕರಿ ಮಾಡುವ ನಿರ್ದೇಶಕಿಯಂತಹವ ಪ್ರತಿ ತಿಂಗಳು ನೀಡುವ ಪ್ರಸಾದ ಮಂತ್ರಿ ರಾಮದಾಸ ಸರಿಯಾಗಿ ಮುಟ್ಟುತ್ತಿರುವುದರಿಂದಲೇ ಕಿಮ್ಸ್‌ನ ಆಡ ವ್ಯವಸ್ಥೆ ಇನ್ನೂ ಕರ್ಮಕಾಂಡದಲ್ಲಿ ತೇಲಾಡುವಂತಾ ಯೆಂದು ನೊಂದ ಮಂದಿ ಮಾತಾಡಿಕೊಳ್ಳುತ್ತಿದ್ದಾ

• ಹುರಳಿಕುಪ್ಪಿ ವಿನ...

ಇವರನ್ನು ಓಡಿಸಬೇಕಿದೆ

ಬ್ರಹ್ಮಾಂಡ ಭ್ರಷ್ಟಾಚಾರದಿಂದ ನಲುಗಿಹೋಗಿರು ಕಿಮ್ಸ್‌ನಲ್ಲಿ ಹೆಗ್ಗಣಗಳ ಸಂಖ್ಯೆ ಮಿತಿಮೀರುತ್ತಿದೆ. ನರ್ಸ್ ವಿಭಾಗದ ಮೆಟ್ರನ್ ಪುಷ್ಪಾ ಎಸ್.ಗೊರವಿನಕೊ ಎಂಬಾಕೆ ತನ್ನ ಸಂಬಳಕ್ಕಿಂತ ಆಸ್ಪತ್ರೆಯ ಹಾಲು ಬ್ರೆಡ್ಡು, ಬೆಡ್‌ಶೀಟು, ನರ್ಸ್‌ಗಳ ಡ್ಯೂಟಿ ಫಿಟಿಂಗ್‌ನಿಂ ಬರುವ ಆಮದನಿಯ ಲೆಕ್ಕದಲ್ಲೇ ಸರ್ವೀಸ್ ಕಳೆದಿದ್ದಾ ಹಿಂದೊಮ್ಮೆ ಮಾಜಿ ನಿರ್ದೇಶಕ ಡಾ. ಮದಕಟ್ಟಿ ಈಕೆಯನ್ನು ರೆಡ್‌ಹ್ಯಾಂಡಾಗಿ ಹಿಡಿದು ಅಮಾನತು ಮಾಡಿದ್ದರು. ಮುಂದೆ ಎರಡೇ ದಿನಕ್ಕೆ ಕೆಲಸ ಹಾಜರಾಗಿ ಆಶ್ಚರ್ಯ ಮೂಡಿಸಿದ್ದ ಪುಷ್ಪ ನರ್ಸ್‌ಗ ಡಾನ್‌ನಂತೆ ಮೆರೆಯುತ್ತಿದ್ದಾಳೆ.

ಇನ್ನು ಸ್ಟೋರ್, ಮೆಡಿಕಲ್ ಸರ್ಟಿಫಿಕೇಟ್ ಸೇರಿದಂತೆ ಐದು ವಿಭಾಗಗಳನ್ನು ನೋಡಿಕೊಳ್ಳುತ್ತಿರು ರೇಣುಕಾ ತೋಟಗಿ, ಅಮ್ಮಿನಬಾಯಿ, ಪುಣೇಕರ ಸೀನಿಯರ್ ಫಾರ್ಮಾಸಿಸ್ಟ್ ಮಂಡಕ್ಕಿ, ಎಂ.ಸಿ.ಐ ಖೊಟ್ಟಿ ದಾಖಲೆ ನೀಡಿ ಪ್ರಮೋಷನ್‌ಗೆ ಸ್ಕೆಚ್ ಹಾಕಿ ಹೇಮಾ ಸುಣಗಾರ, ಸರ್ಜರಿ ವಿಭಾಗದ ಶಿಲ ಹುಬ್ಬಣ್ಣವರ, ಯಾದವ್ ಮತ್ತು ಡಾ. ಜಾನ ತೊರವಿಯಂತಹ ಭ್ರಷ್ಟರು ಇನ್ನೂ ಇಲ್ಲೇ ಬೆಚ್ಚ ಉಳಿದಿದ್ದಾರೆ. ಇವರನ್ನು ಇಲ್ಲಿಂದ ಓಡಿಸುವವರೆಗು ಕಿಮ್ಸ್‌ಗೆ ಉಳಿಗಾಲವಿಲ್ಲ

2012 ಪಠ್ಯ ಪುಸ್ತಕಗಳಲ್ಲಿ ಹಿಂದೂತ್ವ ಪ್ರಳಯ

ಭಾರತದ ಸಂಸ್ಕೃತಿಯ ಮೇಲೆ ಹಿಂದೆ ಭಾರತವನ್ನಾಳಿದ ...ಯುರಿಂದ ದಾಳಿ ನಡೆದು, ನಮ್ಮ ದೇಶಿ ಜ್ಞಾನ, ...ಗಳು ನಶಿಸಿಹೋಗಿವೆ ಎಂದು ಚಡಪಡಿಸುವ ಮೂಲಭೂತವಾದಿಗಳ ಹುರುಳಿಲ್ಲದ ವಾದಗಳು ...ಮುವುದು ವಾಸ್ತವ. ಜೊತೆಗೆ ಇಂದು ನಾವು ...ಯ ಮರೆವಿಗೆ' ಒಳಗಾಗಿದ್ದೇವೆ ಎಂದು ನಂಬಿಸುವ ...ಯಲ್ಲಿ, ಭಾರತದ ಪುರಾತನ ಇತಿಹಾಸ ಬಳಸಿ, ಬ್ರಾಹ್ಮಣ' ಶ್ರೇಣೀಕರಣ ವ್ಯವಸ್ಥೆ ಪ್ರೋಷಿಸಲಾಗುತ್ತಿದೆ. ...ಟ್ಟನಲ್ಲಿ ಮೇಲುಜಾತಿಗಳ ಜ್ಞಾನವನ್ನು ಮಾತ್ರ ...ಡೆ, ಹಿಂದೂ ಸಂಸ್ಕೃತಿಯನ್ನು ಕಟ್ಟುವ ಪ್ರಯತ್ನಗಳು ...ತ್ತಿವೆ. ಕರ್ನಾಟಕದಲ್ಲಿ ಇದಕ್ಕೆ ...ರಣ ಕೊಡುವ ಸಂಗತಿಗ... ಶಾಲೆಗಳಲ್ಲಿ ಭಗವದ್ಗೀತೆ ...ಅಭ್ಯುತ್ಥಾನ ಪರಿಷತ್ತು ಮತ್ತು ...ಸಂಘಗಳಿಂದ ವಿತರಣೆಗೊಳ್ಳುವ ...ವು ಮತ್ತು ಭಾರತ ಸಂಸ್ಕೃತಿ ...ದಿಂದ ಸುಮಾರು ಮೂವ... ತ್ತು ವರ್ಷದಿಂದ ನಡೆಸುತ್ತಿರುವ ...ಯಣ ಮತ್ತು ಮಹಾಭಾರತ ... ಇಂತಹದೇ ಹಿಂದೂ ...ನೆಗಳು 'ಪರಿಸರ ಸ್ನೇಹಿ' ... ನಿರ್ಮಿಸುವ ಸ್ಪರ್ಧೆ, ವಂದೇ ... ಸ್ಪರ್ಧೆ ನಡೆಸುವುದು ಹೀಗೆ ... ಸಂಸ್ಕೃತಿ ಅಥವಾ ಹಿಂದೂ ...ಸಂಬಂಧಿ ವಿವಿಧ ಸ್ಪರ್ಧೆಗಳ ... ಹಿಂದೂತ್ವ ಪ್ರಚಾರ ...ತ್ತಿರುವುದು.

...ರೀತಿಯಾಗಿ ಹಿಂದೂ ಮೂಲಭೂತ ಸಂಘಟನೆ ...ಲೆಗಳನ್ನೇ ಟಾರ್ಗೆಟ್ ಮಾಡಲು ಕಾರಣ ಸಂಸ್ಕೃತಿ ...ಕ್ಕೆ ಶಾಲೆಗಳಲ್ಲಿ ಆದ್ಯತೆ ಇರುವುದು ಮತ್ತು ಪ್ರತಿ...ನ್ನು ನಂಬುವ ಅಲ್ಲಿರುವ ಮುಗ್ಧ ಮಕ್ಕಳು. ಆದರೆ ಈ ರೀತಿಯ ಸಂಸ್ಕೃತಿ ಮರುನಿರ್ಮಾಣದ ಕಸರತ್ತು ...ಪಠ್ಯಕ್ರಮದಲ್ಲಿ ಅಲ್ಲಲ್ಲಿ ನುಸುಳಿದ್ದರೂ ಹೆಚ್ಚಾಗಿ ... ಚಟುವಟಿಕೆಗಳಿಗೆ ಸೀಮಿತವಾಗಿತ್ತು. ಆದರೆ ಇಂದು ...ತ ಮೌಲ್ಯಗಳನ್ನು ಪೋಷಿಸುವ ಪ್ರಜ್ಞಾವಂತ ...ದ, ಪ್ರಗತಿಪರ ಸಂಸ್ಥೆಗಳ ಮತ್ತು ಜಾತ್ಯತೀತ ...ಯ ಪಕ್ಷಗಳ ಜಾಣ ನಿದ್ರೆಯ ಕಾರಣದಿಂದಾಗಿ ...ಕದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2012 ...ಪ್ರಕಟಗೊಳ್ಳುವ ಸಮಾಜ ವಿಜ್ಞಾನ ಪಠ್ಯಗಳಲ್ಲಿ ...ದ ಕಾದಿದ್ದ ಹಿಂದೂ 'ಫ್ಯಾಸಿಸ್ಟ್ ಐಡಿಯೋ... ...ಯ ಒಂದು ಭಾಗ ರಾಜಾರೋಷವಾಗಿ ನುಸುಳಿದೆ. ...ಡೀ ಇಂಡಿಯಾ ದೇಶವೇ ಬೆಚ್ಚಿಬೀಳಿಸುವಂತ ಭ್ರಷ್ಟಾಚಾರಿ, ಕೋಮುವಾದಿ ಸರ್ಕಾರದ ಶಿಕ್ಷಣದ ಕೇಸರಿಕರಣ.

ದಿನಾಂಕ 12-09-2011 ರ ಕನ್ನಡಪ್ರಭ ವರದಿಯ ಪ್ರಕಾರ 5 ನೇ ಮತ್ತು 8 ನೇ ತರಗತಿಗಳ ಸಮಾಜ ವಿಜ್ಞಾನ ಪುಸ್ತಕಗಳು ಪ್ರಕಟಗೊಂಡರೆ ವಿಶ್ವವಿದ್ಯಾನಿಲಯಗಳಲ್ಲಿ ಬಹು ಚರ್ಚೆಯಲ್ಲಿರುವ 'National Historiography'ಯೂ ಅಲ್ಲದ 'Colonial Histotiography'ಯೂ ಅಲ್ಲದ ಆರ್‌ಎಸ್‌ಎಸ್ ಕಲ್ಪಿತ 'ಹಿಂದೂತ್ವ ಇತಿಹಾಸ'ವನ್ನು ಇನ್ನು ಸುಮಾರು 10



Times of India/Laxman

ವರ್ಷಗಳ ಕಾಲ ನಮ್ಮ ವಿದ್ಯಾರ್ಥಿಗಳು ಓದಬೇಕಾಗುತ್ತದೆ. ಈ ಪತ್ರಿಕಾ ಪ್ರಕಟಣೆಯ ಪ್ರಕಾರ, ವಿಮಾನ ತಂತ್ರಜ್ಞಾನ, ಬಾಹ್ಯಾಕಾಶದ ಬಗ್ಗೆ, ಭೂಮಿ ದುಂಡಾಗಿರುವ ಬಗ್ಗೆ, ವೈದ್ಯ ಪದ್ಧತಿ ಇತ್ಯಾದಿಗಳ ಬಗ್ಗೆ ಮೊದಲನೆಯದಾಗಿ ಭಾರತೀಯರೇ ಪರಿಚಯಿಸಿದರು ಎಂದು ಮೂಲ ತಿಳಿಸುವ ಪ್ರಯತ್ನ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಆರ್ಯಭಟ, ಕಣಾದ, ಭಾಸ್ಕರಾಚಾರ್ಯ, ಚರಕ, ಭೋಧಾಯನ ಹೀಗೆ ಹತ್ತಾರು ಮೊದಲಿಗರನ್ನು ಪಠ್ಯದಲ್ಲಿ ಪರಿಚಯಿಸಲಾಗಿದೆ ಎಂಬ ಮಾಹಿತಿ ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರಿಂದ ದೊರೆತಿರುತ್ತದೆ. ಮೇಲೆ ತಿಳಿಸಿದ ಸಾಧಕರು ಅವರವರ ಕ್ಷೇತ್ರದಲ್ಲಿ ಈ ಹಿಂದೆ ಸಾಧನೆ ಮಾಡಿರುವುದು ಶ್ಲಾಘನೀಯ. ಆದರೆ 'ನಮ್ಮತನ'ವನ್ನು ಎತ್ತಿಹಿಡಿಯುವ ನೆಪದಲ್ಲಿ ಪಠ್ಯಪುಸ್ತಕ ರಚನಾ ಸಮಿತಿಯವರು, ಸವರ್ಣೀಯ ವಿಜ್ಞಾನಿಗಳನ್ನು ಮಾತ್ರ ಪರಿಚಯಿಸಿದ್ದಲ್ಲಿ ನಮ್ಮದೇ ದೇಶದ ದಲಿತರಾದ, ಅಗಸ, ಕುಂಬಾರ, ಕಮ್ಮಾರ, ಚಮ್ಮಾರ ಮತ್ತು ಇತರ ದಲಿತ ಜಾತಿಗಳಲ್ಲಿದ್ದ ವಿಜ್ಞಾನ ಮತ್ತು ಅವರ ವಿವಿಧ ವಾದ್ಯ ಪ್ರಕಾರಗಳು, ಕಲಾಪ್ರಕಾರಗಳು ಮತ್ತು ಜನಪದ ಪ್ರಕಾರಗಳನ್ನು ಮಕ್ಕಳಿಗೆ ಪರಿಚಯಿಸಲು ಸಾಧ್ಯವಿಲ್ಲವೆ? ಅದೇ ರೀತಿ, ಅತೀ ಪುರಾತನ ದಲಿತ ಸಂಸ್ಕೃತಿ ಮಾದರಿಯಲ್ಲಿ ದೇಶವನ್ನು ಕಟ್ಟಲು ಸವರ್ಣೀಯರು ಏಕೆ ತವಕಪಡುವುದಿಲ್ಲ? ಹಾಗಾದರೆ ಈ 'ನಮ್ಮತನ' ಪಠ್ಯದ ಜ್ಞಾನ ಕೇವಲ ಮುಂದುವರೆದ ರಾಷ್ಟ್ರಗಳ ವಿಜ್ಞಾನದ ಅವಿಷ್ಕಾರಗಳಿಗೆ ಅಸೂಯೆಪಡುವವರು ಒಡ್ಡುವ, ಕೇವಲ ಲೇಖನಿಯ ಪೈಪೋಟಿಯೇ? ಅಥವಾ ಇದು ಕೇವಲ ನಮ್ಮ ಮಕ್ಕಳಿಗೆ 'Serogative pleasure' ಕೊಡುವ ತಂತ್ರವೇ?

ಮೊದಲೇ ಸಿಬಿಎಸ್‌ಸಿ, ಐಸಿಎಸ್‌ಸಿ ಮೊದಲಾದ ಕೇಂದ್ರೀಯ ವಿದ್ಯಾಸಂಸ್ಥೆಗಳು ಪೈಪೋಟಿಯಲ್ಲಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಿರುವಾಗ, ಕರ್ನಾಟಕ ರಾಜ್ಯದ ಪಠ್ಯಕ್ರಮ ಓದುವ ಮಕ್ಕಳು, ನಮ್ಮತನ ಪಠ್ಯಗಳನ್ನು ಓದಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವಾಗ, ವಿಮಾನ ಕಂಡುಹಿಡಿದವನು ಕಣಾದ ಎಂದು ಬರೆಯಲು, ಭೂಮಿಯ ಚಲನೆಯ ಬಗ್ಗೆ ಪ್ರಶ್ನೆ ಕೇಳಿದಾಗ, ಸರಿ ಉತ್ತರ-ಗೆಲಿಲಿಯೋ ಎಂದು ಇದ್ದರೆ, ಗೆಲಿಲಿಯೋಗಿಂತ ಮುಂಚೆ ಆರ್ಯಭಟ ಭೂಮಿಯ ಬಗ್ಗೆ ಹೇಳಿದ್ದಾನೆ ಎಂದು ಬರೆದು ಸೊನ್ನೆ ಸುತ್ತಿಸಿಕೊಂಡರೆ ಆಶ್ಚರ್ಯ ಪಡಬೇಕಾಗಿಲ್ಲ. ಯಾವ ವಿಶ್ವ ವಿದ್ಯಾನಿಲಯದ ಇತಿಹಾಸ ವಿಭಾಗಗಳೂ ಇತಿಹಾಸ ಪಠ್ಯಗಳಲ್ಲಿ ಈ ರೀತಿಯ 'ನಮ್ಮತನ'ವನ್ನು ತಾರದೇ ಇದ್ದಾಗ, ಕರ್ನಾಟಕ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆ ಪಠ್ಯಗಳು, ಇತಿಹಾಸವನ್ನ ಹೊಸದಾಗಿ ಬರೆಯುತ್ತಿರುವಾಗ, ವಿಶ್ವವಿದ್ಯಾಲಯಗಳು ಎಚ್ಚೆತ್ತುಕೊಳ್ಳಬೇಕಾಗಿದೆ. ಸುಮಾರು 500 ಜನ ತಜ್ಞ ಶಿಕ್ಷಕರು ಈ ರೀತಿಯ ಪಠ್ಯಗಳನ್ನು ಸಿದ್ಧಪಡಿಸುತ್ತಿದ್ದಾರಂತೆ. ಈ ತಜ್ಞ ಶಿಕ್ಷಕರು ಬಿಎ, ಬಿಎಡ್ ಅಥವಾ ಎಂಎ ಹಂತದಲ್ಲಿ ಇಂತಹ ಸಿಲಬಸ್ ಯಾವ ವಿಶ್ವವಿದ್ಯಾನಿಲಯದಲ್ಲಿ ಓದಿದ್ದಾರೆ ಎಂದು ತಿಳಿಯಬೇಕಾಗುತ್ತದೆ. ಅಂತೆಯೇ ಈ ರೀತಿಯ ಇತಿಹಾಸ ಪಠ್ಯಗಳನ್ನು ಮಕ್ಕಳಿಗೆ ಭೋದಿಸಲು ಸಾವಿರಾರು ಸಮಾಜ ವಿಜ್ಞಾನ ಶಿಕ್ಷಕರು ಯಾವ ಮಠಗಳಲ್ಲಿ ಅಥವಾ ಆರ್‌ಎಸ್‌ಎಸ್ ಕೇಂದ್ರಗಳಲ್ಲಿ ಪದವಿ ಅಥವಾ ಡಿಪ್ಲೋಮೊ ಪಡೆಯಬೇಕಾಗುತ್ತದೆ ಎಂಬ ಮಾಹಿತಿಯನ್ನೂ ಈ ತಜ್ಞ ಶಿಕ್ಷಕರೇ ನೀಡಬೇಕಾಗುತ್ತದೆ. ಈ ರೀತಿಯ ಪಠ್ಯವನ್ನು National Carriculum Framework (ಓ.ಅ.ಈ) 2005, ಮಾದರಿಯಲ್ಲಿ ರಚಿಸಲಾಗಿದೆ ಎಂದು ಹೇಳಿಕೆ ನೀಡಲಾಗಿದೆ. ಆದರೆ ವಾಸ್ತವದಲ್ಲಿ ಓ.ಅ.ಈ 2005 ಸಮಾಜ ವಿಜ್ಞಾನ ಪಠ್ಯವನ್ನು ರಚಿಸುವಾಗ ಪಾಲಿಸಲು ನೀಡಿರುವ ಸೂಚನೆಗಳನ್ನು ಈ ಪಠ್ಯ ಸಮಿತಿ ಗಾಳಿಗೆ ತೂರಿದೆ. ಓ.ಅ.ಈ 2005 ಸಮಾಜ ಪಠ್ಯ ತಯಾರಿಸುವಾಗ ಈ ಕೆಳಗಿನ ಅಂಶವನ್ನು ಪ್ರಸ್ತಾಪಿಸುತ್ತದೆ. "Interdiscplinary approaches, promoting key national concerns such as gender, justice, human rights and sensitivity to marginalized groups and minorities."

ಪ್ರಾಶಸ್ತ್ಯವನ್ನು ಲಿಂಗಸಮಾನತೆ, ನ್ಯಾಯ, ಮಾನವ ಹಕ್ಕುಗಳಿಗೆ ಕೊಡಬೇಕು ಮತ್ತು ಸೂಕ್ಷ್ಮತೆಯನ್ನು ದಮನಿತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕೊಡಬೇಕೆನ್ನುತ್ತದೆ. ಆದರೆ ಹಿಂದೂತ್ವವಾದಿಗಳು ಈ ಮೇಲಿನ ರಾಷ್ಟ್ರೀಯ ಅಗತ್ಯತೆಗಳನ್ನು ವಿರೋಧಿಸಲೆಂದೆ ವಿವಿಧ ಸಂಸ್ಥೆಗಳನ್ನು ಕಟ್ಟಿಕೊಂಡು ಕೆಲಸ ಮಾಡುತ್ತಿವೆ ಎನ್ನುವುದು ಈಗ ಮರುಸಾಬೀತಾಗುತ್ತಿದೆ. ದಲಿತರ, ಅಲ್ಪಸಂಖ್ಯಾತರ, ಮಹಿಳೆಯರ ಮತ್ತು ಇತರ ದಮನಿತರ ಮೌನ ಇವರದೇ ಮೇಲಿನ ದೌರ್ಜನ್ಯಕ್ಕೆ ಇನ್ನು ಮುಂದೆ ಈ 'ಜ್ಞಾನಶಾಖೆಗಳ' ಮೂಲಕ ಸಮರ್ಥನೆ ನೀಡಿದಂತಾಗುತ್ತದೆ.

'Knowledge is power' (ಜ್ಞಾನವೇ ಶಕ್ತಿ) ಎಂಬುದನ್ನು ಈ ದಮನಿತ ವರ್ಗಗಳು ಅರಿಯಬೇಕಾಗಿರುವುದು ಇಂದಿನ ತುರ್ತು. ಒಮ್ಮೆ ಈ ಮೇಲ್ಜಾತಿಯ ಹಿಂದೂತ್ವವಾದಿಗಳು ಶಾಲೆ ಮತ್ತು ವಿವಿಧ ಕೇಂದ್ರಗಳನ್ನು (Non-coercive institutions) ಬಳಸಿ, ಅವೈಜ್ಞಾನಿಕ, ಅಸಮಾನತೆಯ ಪುರಾತನ ಸಂಸ್ಕೃತಿಗಳನ್ನು ನಮ consensus (ಸಹಮತದ) ಮೂಲಕ ಸ್ಥಾಪಿಸಲು ಹೊರಟರೆ ಕಾಲಚಕ್ರ ವರ್ಣಾಶ್ರಮ ಪದ್ಧತಿಗೆ ಉರುಳುವುದು ಸಹಜ.

2012 ರಲ್ಲಿ ಬರುವ 5 ಮತ್ತು 8 ನೇ ತರಗತಿಗಳಿಗೆ ಹಿಂದೂತ್ವವಾದಿಗಳು ಸ್ವಯಂ ಘೋಷಿಸಿ ಭಾರತೀಯ ಪುರಾತನ ವಿಜ್ಞಾನಿಗಳು ಕಾಣಿಸಿಕೊಂಡಿದ್ದಾರೆ. ಇನ್ನು 6,7,9,10 ನೇ ತರಗತಿ ಸಮಾಜ ವಿಜ್ಞಾನ ಅಂತೆಯೇ ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಪಠ್ಯಪುಸ್ತಕಗಳು ಕೇಸರಿಕರಣಗೊಳ್ಳುವ ಮೊದಲು ಎಚ್ಚೆತ್ತುಕೊಳ್ಳಬೇಕಾಗುತ್ತದೆ. ಈಗಾಗಲೇ 2012 ರಲ್ಲಿ ಪ್ರಕಟಗೊಳ್ಳುವ ಕನ್ನಡ ಪುಸ್ತಕಗಳಲ್ಲಿ ಎಸ್.ಎಲ್.ಬೈರಪ್ಪನವರು ಕಾಣಿಸಿಕೊಳ್ಳಲಿದ್ದಾರೆ ಎಂದು ವಾರ್ತಾಪತ್ರಿಕೆಗಳು ಎಚ್ಚರಿಸಿವೆ.

ಕರ್ನಾಟಕ ರಾಜ್ಯದಲ್ಲಿ ಮುಂದಿನ 10 ವರ್ಷಗಳು ಕೇಸರೀಕರಣ ಪೀಡಿತಕ್ಕೆ ಒಳಗಾದ ಪಠ್ಯಗಳು ಮುಂದುವರಿಯುವುದರಿಂದ 'ಹಿಂದೂತ್ವ' ನಮ್ಮ ಮಕ್ಕಳು ಕಲಿಯುವುದು ಅನಿವಾರ್ಯವಾಗುತ್ತದೆ. ಕರ್ನಾಟಕದ ಲಕ್ಷಾಂತರ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕೆಂಬುವ ಕನಸು ಕಾಣುತ್ತಿರುವಾಗ, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಈ 'ನವಸಂಸ್ಕೃತಿ' ನಿರ್ಮಾಣದ ಕಸರತ್ತುಗಳು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಗೆ ಯಾವ ರೀತಿಯೂ ಪೂರಕವಾಗಿರಲು ಸಾಧ್ಯವಿಲ್ಲ.

• ಫ್ರಾನ್ಸಿಸ್ ಡಿ'ಸೋಜಾ
Research Scholar, Dept. of English,
Kuvempu Univarsity, Shankaragatta.

ಮನುಷ್ಯತ್ವದ ಹುಡುಕಾಟದಲ್ಲಿ...

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್


...ಲ್, ಆಫ್ರಿಕಾ, ದ್ರಾವಿಡಗಳಲ್ಲಿ
ಕುಲಮೂಲ
...ಬೆಸ್ಸೈನಿನ ವಿಧವೆ
...ಮೇಸಿಯಾದ ಚೆಲುವೆ
...ಕಿನ ಕೂಲಿ ಫ್ರಾನ್ಸಿನ ಜಾಡಮಾಲಿ
...ನಾದ ರೈತ, ಕ್ಯೂಬಾದ ಯೋಧ,
...ಘಾನ ಅನಾಥ
... ನನ್ನ ಸಂಬಂಧಿಗಳು

... ಕವಿ ಪೀರ್‌ಬಾಷರ 'ಈ ಅಖಂಡ ನೆಲವೇ ...ಮು' ಪದ್ಯದ ಸಾಲುಗಳು. 'ಜೀವ ಬಂತು ಹಾದಿಗೆ', ...ವೂಗಳ ನಡುವೆ' ಕವನ ಸಂಕಲನಗಳು ಪ್ರಕಟಗೊಂಡ ...ದ ನಂತರ ಪೀರ್‌ಬಾಷರ 'ದೇವರು ಮನುಷ್ಯರಾದ ... ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ' ಪ್ರಕಟ... ಬದುಕಿನ ಒಳಗುದಿ, ಹೋರಾಟದ ಭಾವತೀವ್ರತೆ ...ಕಾವ್ಯದ ಉರಿ ಎಲ್ಲವೂ ಒಂದೇ ...ತೆ ಬರೆಯುತ್ತಿರುವ ಕನ್ನಡದ ... ಕೆಲವು ಕವಿಗಳಲ್ಲಿ ಪೀರ್‌ಬಾಷ ...ರು. ಅವಮಾನ ನುಂಗಿಕೊಂಡು ...ವಾಗಿರುವ ಕ್ಷಣ, ಜಗದ ಎಲ್ಲ ...ಗಳನ್ನು ಹೆಗಲಮೇಲೇರಿಸಿಕೊಂಡು ... ಗಳಿಗೆಯುಳ್ಳಾದರೂ ಸಿಡಿದು ... ಸಿಟ್ಟು, ಸಂಕಟಗಳಿಗೆ ಜೀವ ... ಆಕ್ಟಿವಿಸ್ಟ್ ಗುಣಗಳು... ...ವ್ಯದ ...ಜಾದ ಶಕ್ತಿ, ಸೃಜನ ...ಶೀಲತೆ ಹೆಣಗಿಸಲ್ಲ, ಕೋಮು ನಂಜು ಕಾರುವವರ ನಡುವೆ ಪೀರ್ ಕಾವ್ಯವನ್ನು ನಾವೆಲ್ಲ ಮತ್ತೆಮತ್ತೆ ಕೇಳಿಸಿಕೊಳ್ಳಬೇಕಾದ ತುರ್ತಿದೆ. ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಗಳಲ್ಲಿ ಸಾಮಾಜಿಕ ಬದ್ಧತೆಯನ್ನೇ ನಿರಾಕರಿಸುವ ವಿದ್ವಾಂಸ ವಲಯಗಳು ಪೀರ್ ಕಾವ್ಯವನ್ನು ಓದಿಕೊಳ್ಳಬೇಕಾದ ಮರ್ಜಿಯಿಂದ ಯಾವತ್ತೋ ದೂರ ಉಳಿದಿವೆ. ಹೊಣೆಗಾರಿಕೆ, ಆಕ್ರೋಶ, ಉತ್ಕಟ ಕಾವ್ಯಪ್ರೇಮದ ಜೊತೆಗೆ ನೋವು-ಸಂಕಟಗಳನ್ನು ಮೀರಬಲ್ಲ ಸೆಡವು ಪೀರ್‌ಬಾಷರ ಅನೇಕ ಪದ್ಯಗಳಲ್ಲಿ ಕಾಣಿಸಿಕೊಳ್ಳುವ ಪ್ರತಿಮೆಗಳು. ಸಮಾಜದ ಆಕ್ರಮಣಕಾರಿ ಹತಾರಗಳಿಂದ ಘಾಸಿಕೊಂಡರೂ ತಾಯ್ತನಕ್ಕಾಗಿ ಹಂಬಲಿಸುವ ಪೀರ್ ಕವಿತೆಗಳು ತೆಳು ಅನ್ನಿಸುವ ಭ್ರಾಮಕ ರೂಪಕಗಳನ್ನು ಮಾತ್ರ ಸೃಷ್ಟಿಸುವುದಿಲ್ಲ.

ಅಕ್ಕ ಸೀತಾ
ನಿನ್ನಂತೆ ನಾನು ಶಂಕಿತ
ನಿನ್ನ ಪಾತಿವ್ರತ್ಯದಂತೆಯೇ ನನ್ನ ದೇಶಭಕ್ತಿ
ಸಾಬೀತು ಪಡಿಸುವುದಾದರೂ ಹೇಗೆ ಹೇಳು
'ಶೀಲ'
ಯಾವ ಸಾಕ್ಷಿಗಳನ್ನು ತರುವುದೆಲ್ಲಿಂದ
ನಮ್ಮ ಮನೆಯಲ್ಲೇ ನಾವು ನಿರಾಶ್ರಿತರು

'ಜೀವ ಕಲಕುವ ಕಾವ್ಯವನ್ನು ತನ್ನ ನೆತ್ತರಿನಿಂದಲೇ ಬರೆಯುತ್ತಿರಬಹುದೇ ಎಂದು ಬೆರಗುಗೊಳಿಸುವಂಥ ಸತ್ಯ ಮತ್ತು ಸತ್ವ ಈತನ ಕಾವ್ಯದಲ್ಲಿ ತುಂಬಿತುಳುಕುತ್ತಿದೆ. ಪೀರ್ ಕಾವ್ಯವನ್ನು ಓದುವುದೆಂದರೆ ನಮ್ಮೊಳಗೆ ಸತ್ತ ಮಾನವೀಯತೆಗೆ ಮತ್ತೆ ಜೀವ ಬಂದಂತೆ' ಎಂಬ ಎನ್.ಕೆ.ಹನುಮಂತಯ್ಯನವರ ಮಾತುಗಳು ಪೀರ್ ಕಾವ್ಯಶಕ್ತಿಗೆ ಕೊಡುತ್ತಿರುವ ಹೆಚ್ಚುಗಾರಿಕೆಯ ಮುದ್ರೆಯಂತಿವೆ. ಗ್ಲಾನಿ ಭರ್ಣವತಿ ಭಾರತ, ದೇವರು ಮನುಷ್ಯರಾದ ದಿನ, ರಾಮ ರಾಮ ನೀನೊಂದು ಮರವಾಗು, ಗರ್ಭಗುಡಿ ಯೊಳಗೆ ಕದ್ದ ಸೀರೆಗಳು, ಜೀವ ಬಂತು ಹಾದಿಗೆ, ಸುಡುವ ಆತ್ಮದ ತುಟಿಗಳು, ನಾನು ಈ ಲೋಕದ ಕಳಂಕಿತರ ಪ್ರತಿನಿಧಿ, ಅಖಂಡ ನೆಲವೇ ನನ್ನ ಮಾತೃ ಭೂಮಿ, ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ, ಸೈತಾನರೂ ಇಲ್ಲಿ ಅಜಾನ್ ಕೂಗುತ್ತಿದ್ದಾರೆ, ತಾಯಿಯೆಂದರೆ ನನಗೆ ಓದಲಾಗದ ಮಹಾ ಕಾವ್ಯ... ಇವು ಪೀರ್‌ಬಾಷರ ಜೀವಪರ ಅಂತಃಕರಣವನ್ನು ಪ್ರತಿನಿಧಿಸುವ ಪದ್ಯಗಳು.

'ಜನಪದರಷ್ಟೇ ನಿಸೂರಾಗಿ ಕಾವ್ಯ ಕಟ್ಟಬಲ್ಲ ನಿನ್ನ ಬಗ್ಗೆ ಕೊಂಚ ಅಸೂಯೆಯೂ ಇದೆಯೆನ್ನು. ಜಾಲಿಯ ನೆರಳಿನಷ್ಟೇ ಅಪರೂಪವಾಗಿರುವ ಬಳ್ಳಾರಿ ದೇಶದ ಜಾನಪದ ಭಾಷಾ ಬನಿಯನ್ನಂತೂ ನೀನು ಕುಂಬಾರನ ತಿಗರಿಯಷ್ಟೇ ಲೀಲಾವಿಲಾಸದಲ್ಲಿ ತಿರುಗಿಸಬಲ್ಲೆ. ನಿನ್ನ ನಿಜ ಶಕ್ತಿಯಿರುವುದೇ ಆ ತಿರುಗುವ ಮಾಂತ್ರಿಕತೆಯಲ್ಲಿ' ಎಂದು ಕವಿ ಲಕ್ಷ್ಮೀಪತಿ ಕೋಲಾರರು ಪೀರ್ ಕಾವ್ಯಶಕ್ತಿಯನ್ನು ಬಿಡಿಸಿಟ್ಟರೆ, ಡಾ.ಬಂಜಗೆರೆ ಜಯಪ್ರಕಾಶರು 'ಘಾಸಿಗೊಂಡ ಮನಸ್ಸು ಅನುಭವಿಸುವ ಪರಕೀಯಪ್ರಜ್ಞೆ ಅದು ಕೆಲವು ಸಲ ಅನಾಥಪ್ರಜ್ಞೆಯಾಗಿ ಕಾಡಿಸುವ ಪರಿಯನ್ನು ಪೀರ್‌ಬಾಷರ ಕವಿತೆಗಳು ಪರಿಣಾಮಕಾರಿಯಾಗಿ ಮಂಡಿಸುತ್ತಿವೆ. ಸ್ವಪ್ನ ಆಶಾವಾದಿಯಾದ ಪೀರ್‌ಬಾಷ ಮನುಷ್ಯತ್ವದ ಹುಡುಕಾಟದಲ್ಲಿದ್ದಾರೆ. ಆತನೊಳಗಿರುವ ಮನುಷ್ಯ ಮನುಷ್ಯರನ್ನು ಕಾಣಲು ಹಸಿದಿದ್ದಾನೆ' ಎಂದು ಕವಿಯ ಬೆನ್ನಿಗಿದ್ದು ಹೇಳುತ್ತಾರೆ. ಪೀರ್ ವರ್ತಮಾನದ ತಲ್ಲಣಗಳಿಗೆ ಕಣ್ಣುಕಿವಿಯಾಗಿರುವ ಮಹತ್ವದ ಕವಿ.






ದೇವರು ಮನುಷ್ಯರಾದ ದಿನ
ಪುಟಗಳು: 134, ಬೆಲೆ: ರೂ.80,
ಪ್ರಕಟಣೆ:2009

ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ
ಪುಟಗಳು: 106, ಬೆಲೆ :ರೂ.80, ಪ್ರಕಟಣೆ: 2010
—ಬಿ.ಪೀರ್‌ಬಾಷ

ಈ ಎರಡು ಪುಸ್ತಕಗಳ ಪ್ರಕಾಶಕರು: ಪಲ್ಲವ ಪ್ರಕಾಶನ, ಚನ್ನಪಟ್ಟಣ (ಅಂಚೆ), ಎಮ್ಮಿಗನೂರು, ಬಳ್ಳಾರಿ-583 113




ನಟಿ ಭಾರತಿಯವರಿಗೆ ಒಂದೆರಡು ಕಿವಿಮಾತು



• ಪಾರ್ವತೀಶ ಬಿಡಿ ಚಿತ್ರಗಳು

ಸಿನಿಮಾ ಕಲಾವಿದೆ ಭಾರತಿಯವರು ಅಣ್ಣಾ ಹಜಾರೆ ಥರ ಆಡುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಕಳೆದ ವಾರ ವಿಷ್ಣುವರ್ಧನ್‌ರ 61ನೇ ಜನ್ಮದಿನ ಹಾಗೆಯೇ ವಿಷ್ಣು ತೀರಿಕೊಂಡು ಒಂದೂ ಮುಕ್ಕಾಲು ವರ್ಷವಾಗುತ್ತಿದೆ. ಮೊನ್ನೆ ಸೆಪ್ಟೆಂಬರ್ 18ರಂದು ವಿಷ್ಣು ಜನ್ಮದಿನ ಆಚರಿಸುವಾಗ ಭಾರತಿ ಮತ್ತವರ ಬಳಗ ಹಾಗೂ ವಿಷ್ಣು ಅಭಿಮಾನಿಗಳು ನಡೆದುಕೊಂಡ ರೀತಿ ಅಸಂಬದ್ಧವಾಗಿತ್ತು.



ಇವರೆಲ್ಲ ಸೇರಿ ವಿಷ್ಣು ಹೆಸರನ್ನು ಅಜರಾಮರವನ್ನಾಗಿಸಲು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ.

ಜಯನಗರದ ವಿಷ್ಣುಮನೆ ಹತ್ತಿರದ ಪಾರ್ಕಿಗೆ ವಿಷ್ಣು ಹೆಸರಿಡುವುದು. ಸರ್ಜಾಪುರದಿಂದ ಕೆಂಗೇರಿವರೆಗಿನ 15 ಕಿ.ಮೀ. ಉದ್ದದ ಫೆರಿಫೆರಲ್ ರಿಂಗ್‌ರೋಡಿಗೆ 'ವಿಷ್ಣು ರಸ್ತೆ' ಅಂತ ನಾಮಕರಣ ಮಾಡುವುದು, ವಿಷ್ಣು ಪ್ರತಿಮೆ ಸ್ಥಾಪನೆ, ವಿಷ್ಣು ಹೆಸರಲ್ಲಿ ಟ್ರಸ್ಟ್, ಫಿಲ್ಮ್ ಮತ್ತು ಟಿವಿ ಇನ್‌ಸ್ಟಿಟ್ಯೂಟ್...ಇತ್ಯಾದಿ.

ವಿಷ್ಣು ಜನ್ಮದಿನ ಆಚರಣೆಗೆ ನಾಲ್ಕೈದು ದಿನ ಮುನ್ನ ಇದನ್ನೆಲ್ಲ ಹೇಳಿದ ಭಾರತಿಯವರು ಸೆಪ್ಟೆಂಬರ್ 18ರೊಳಗೆ ತಮ್ಮ ಬೇಡಿಕೆ(ಯೋಜನೆ)ಗಳನ್ನು ಈಡೇರಿಸಬೇಕು ಎಂದು ಸರ್ಕಾರಕ್ಕೆ ವಾರ್ನಿಂಗ್ ಕೊಟ್ಟಿದ್ದು ಎಲ್ಲರನ್ನು ಬೆರಗಾಗಿಸಿತು. ಭಾರತಿ ಅಣ್ಣಾ ಹಜಾರೆ ತರ ಆಡುತ್ತಿದ್ದಾರೆ ಎಂದದ್ದು ಇದಕ್ಕೇನೇ...

ತಮ್ಮ ಕಣ್ಣಿಗೆ ಬಿದ್ದ ಉದ್ದನೆಯ ರಸ್ತೆ ಆರಿಸಿಕೊಂಡು ಅದಕ್ಕೆ ವಿಷ್ಣು ಹೆಸರಿಡಲೇಬೇಕು ಅನ್ನುವುದು, ಬೇರೆಯವರಿಗೆ ಸೇರಿರುವ ಜಮೀನಿನಲ್ಲಿ ವಿಷ್ಣುರ ಸಮಾಧಿ ನಿರ್ಮಿಸಿ ಕೊನೆಗೆ ಅದರ ಸುತ್ತಲಿನ ಇಷ್ಟೆಕರೆ ಜಾಗ ಬಿಟ್ಟುಕೊಡಿ ಅನ್ನುವುದೆಲ್ಲಾ ಅಷ್ಟು ಸಲೀಸಾಗಿ ಆಗುವ ಕೆಲಸವೇ. ಈಗ ವಿಷ್ಣು ಸಮಾಧಿ ಇರುವ ಜಾಗ ನಟ ಬಾಲಕೃಷ್ಣರ ಮಕ್ಕಳಿಗೆ ಸೇರಿದೆ. ಅಭಿಮಾನ್ ಸ್ಟುಡಿಯೋ ಇದ್ದದ್ದೂ ಅಲ್ಲೇ. ಆ ಉಳಿದ ಜಾಗದ ಪಾಲಿನ ಬಗ್ಗೆ ಬಾಲಕೃಷ್ಣರ ಮಕ್ಕಳು ಜಗಳಾಡಿ ಕೇಸ್ ನಡೆಯುತ್ತಿದೆ. ಸರ್ಕಾರ ನೀಡಬೇಕಾದ ಪರಿಹಾರದ ಮೊತ್ತ ಎಷ್ಟೆಂಬುದೂ ಇನ್ನೂ ಆಖೈರಾಗಿಲ್ಲ, ಬಾಲಕೃಷ್ಣರವರ ಮಕ್ಕಳು ತಮ್ಮ ಪಾಲಿನ ಆಸ್ತಿ ಮಾರುವಾಗ ಈಗಿನ ಮಾರ್ಕೆಟ್ ರೇಟ್ ಕೇಳಿದರೆ ಅದರಲ್ಲಿ ತಪ್ಪೇನು? ಆಗ ಸರ್ಕಾರ ಅಂತ ಭೂಮಿ ಖರೀದಿಸುವಾಗ ನೂರೆಂಟು ಕಾನೂನು, ನಿಯಮಗಳನ್ನು ಪರಿಶೀಲಿಸಬೇಕಾಗುತ್ತದೆ. ಇದನ್ನೆಲ್ಲ ಇವರು ಅರ್ಥಮಾಡಿಕೊಳ್ಳದೆ ಹೋದರೆ ಹೇಗೆ?

ಈ ನಡುವೆ ಕೆಲವರು ವಿಷ್ಣುರ ಕಂಚಿನ ಪ್ರತಿಮೆ ರೆಡಿ ಮಾಡಿಸಿ ಫಿಲಂ ಚೇಂಬರ್ ಕಚೇರಿಗೆ ಒಯ್ದು ಅಲ್ಲಿ ಸ್ಥಾಪಿಸುವಂತೆ ಒತ್ತಡ ಹೇರಿದ್ದಾರೆ. ಆ ಎದೆಯೆತ್ತರದ ಪ್ರತಿಮೆಯನ್ನು ಆಟೋದಲ್ಲಿ ತಗೊಂಡು ಓಡಾಡಿದ್ದಾರೆ. ಫಿಲಂ ಚೇಂಬರ್‌ನಲ್ಲಿ ನಟನೊಬ್ಬನ ಪ್ರತಿಮೆ ಸ್ಥಾಪನೆಯಾಗಬೇಕೆಂದರೂ ಚೇಂಬರ್‌ನ ಸಭೆಯಲ್ಲಿ ಚರ್ಚಿಸಿ ನಿರ್ಣಯವಾಗಬೇಕು. ಆದರೆ ಭಾರತಿಯವರ ಬಳಗಕ್ಕೆ ಅಷ್ಟು ಸಹನೆ ಇದ್ದಂತಿಲ್ಲ, ಹಾಗೆ ನೋಡಿದರೆ ವಿಷ್ಣುವಿನಷ್ಟೇ ಖ್ಯಾತರಾಗಿದ್ದ ಬಾಲಕೃಷ್ಣ ಉದಯಕುಮಾರ್, ಕಲ್ಯಾಣ್‌ಕುಮಾರ್, ಪಂತಲು, ನರಸಿಂಹರಾಜು ಹೆಸರಲ್ಲಿ ಒಂದು ಸಣ್ಣ ಸ್ಮಾರಕವೂ ಕರ್ನಾಟಕದಲ್ಲಿಲ್ಲ, ಅವರೆಲ್ಲ ಈಗ ಯಾರ ನೆನಪಲ್ಲೂ ಇರದ ತಬ್ಬಲಿಗಳಂತಾಗಿದ್ದಾರೆ.

ಹಾಗೆ ಹೇಳಬೇಕೆಂದರೆ ವಿಷ್ಣು ನೆನಪಿನಲ್ಲಿ ಭಾರತಿಯವರ ಬಳಗವೇ ತಮ್ಮ ಸ್ವಂತ ಪ್ರಯತ್ನದಿಂದ ಒಂದೆರಡು ಕೆಲಸ ಮಾಡಬಹುದಿತ್ತು, ವಿಷ್ಣು ಜನ್ಮ ದಿನದಂದು ಅವರ ಅತ್ಯುತ್ತಮವೆನ್ನಬಹುದಾದ ನಾಲ್ಕಾರು ಸಿನಿಮಾಗಳ ಪ್ರದರ್ಶನ ಏರ್ಪಡಿಸಿ ವಿಚಾರಸಂಕಿರಣ ಮಾಡಬಹುದಿತ್ತು, ಸ್ವತಃ ಭಾರತಿಯವರೇ ವಿಷ್ಣುರೊಂದಿಗಿನ ತಮ್ಮ ಬದುಕನ್ನು ಬರೆದು ದಾಖಲಿಸಬಹುದಿತ್ತು, ಇದನ್ನೆಲ್ಲ ಬಿಟ್ಟು ಈ ಗುಂಪು ಕ್ರಿಕೆಟ್ ಟೂರ್ನಿ ನಡೆಸಿದ್ದಾರೆ. ಇದು ಕಲಾವಿದ ವಿಷ್ಣುರನ್ನು ಸ್ಮರಿಸುವ ರೀತಿಯೇ?

ವಿಷ್ಣು ಅಂತ್ಯ ಸಂಸ್ಕಾರದ ಸ್ಥಳ ಆರಿಸುವಾಗ ಮುಂದಿನ ಸಾಧಕ ಬಾಧಕಗಳನ್ನು ಯೋಚಿಸದೆ ಬೇರೆಯವರ ಜಾಗದಲ್ಲಿ ಸಂಸ್ಕಾರ ನಡೆಸಿ ಈಗ ಅದನ್ನು ನಮಗೇ ಬಿಟ್ಟುಕೊಡಿ ಅಂತ ಏಕಾಏಕಿ ಹಕ್ಕು ಚಲಾಯಿಸಲು ಹೊರಟರೆ ಸಮಸ್ಯೆಗಳು ಖಂಡಿತಾ ಬರುತ್ತವೆ. ಅಂಬರೀಶರ ಒರಟುತನ, ಬಾಲನಟ ಅನಿರುದ್ಧನ ಬಾಲಿಶ ವರ್ತನೆಗಳು ಈ ಸಮಸ್ಯೆಗಳನ್ನು ಬಗೆಹರಿಸಲಾರವು. ಅದೇರೀತಿ ಪ್ರತಿಮೆಯನ್ನು ಎಲ್ಲಿ ಸ್ಥಾಪಿಸಬೇಕೆಂದು ಸರ್ವಸಮ್ಮತ ನಿರ್ಧಾರ ಆಗುವ ಮೊದಲೇ ತಾವೇ ಪ್ರತಿಮೆ ನಿರ್ಮಿಸಿ, ಅದನ್ನು 'ಅಲ್ಲಿಡಿ... ಇಲ್ಲಿಡಿ...' ಎಂದು ಆಟೋದಲ್ಲಿ ಎತ್ತಿಕೊಂಡು ಓಡಾಡುವುದೂ ಸಹ ವಿಷ್ಣುರ ಘನತೆಯನ್ನು ಕುಗ್ಗಿಸಿದಂತಾಗುತ್ತದೆ.

ಭಾರತಿಯವರು ಸ್ವಲ್ಪ ಸಹನೆಯಿಂದ ಇದನ್ನೆಲ್ಲ ಯೋಚಿಸಿ ಮುಂದಿನ ಹೆಜ್ಜೆ ಇಡಲಿ.

❀

ಒಂದು ಪತ್ರ

ಹಜಾರೆಗಿರಿಯ ಬಿರುಗಾಳಿ ಎಬ್ಬಿಸಿ ಸಾಧಿಸಿದ್ದಾದರೂ ಏನು?

ಅಣ್ಣಾ ಹಜಾರೆ ಜನಲೋಕಪಾಲ ಮಸೂದೆ ಜಾರಿಗಾಗಿ ಹೋರಾಟ ನಡೆಸುವ ಮೊದಮೊದಲು ಯಾರ್‍ಯಾರು ಆ ಮಸೂದೆಯನ್ನು ಬೆಂಬಲಿಸಿದ್ದರೋ ಅವರೆಲ್ಲರೂ ಈಗ ತಣ್ಣಗೆ ಕುಳಿತಿದ್ದಾರೆ.

'ಹೋರಾಟ' ಚಿಗುತುಕೊಳ್ಳುತ್ತಿದ್ದಂತೆ ಈ ಹಜಾರೆ ಏನು ಮಹಾ ಎಂಬಂತೆ ಇದ್ದಕ್ಕಿದ್ದಂತೆ ದೈತ್ಯಾಕಾರವಾಗಿ ಎದ್ದುನಿಂತು ದೇಶದ ಕಪ್ಪುಹಣ ವಾಪಸ್ ತರಬೇಕೆಂದು ರಾಮಲೀಲಾ ಮೈದಾನದಲ್ಲಿ ಆರ್ಭಟಿಸಿದ ರಾಮದೇವ್ ಕಡೆಯಲ್ಲಿ ಕೈಲಾಗದವರಂತೆ ತಾನು ದೇಶದೆಲ್ಲೆಡೆ ಸಶಸ್ತ್ರ ಪಡೆಯ ಯುವಕರ ಗುಂಪನ್ನು ತಯಾರು ಮಾಡುತ್ತೇನೆಂದು ಹೇಳಿದರು. ಅಂತಹ ಬಾಬಾ ರಾಮದೇವ್ ಎಂಬ ಯೋಗ ಗುರು ಈ ಹೊತ್ತಿನಲ್ಲಿ ಯಾವ ಸ್ಥಳದಲ್ಲಿ ಯುವಕರಿಗೆ ತರಬೇತಿ ನೀಡುತ್ತಿದ್ದಾರೋ ತಿಳಿಯುತ್ತಿಲ್ಲ!

ಶಸ್ತ್ರಾಸ್ತ್ರ ತರಬೇತಿ ನೀಡುತ್ತೇನೆಂದು ಬಹಿರಂಗವಾಗಿ ಹೇಳಿಕೆ ನೀಡಿದ ಬಾಬಾ ರಾಮ್‌ದೇವ್‌ರನ್ನು ಸಶಸ್ತ್ರ ನಿಷೇಧ ಕಾಯ್ದೆಯಡಿಯಲ್ಲಿ ಇನ್ನೂ ಬಂಧಿಸಲು ಸಾಧ್ಯವಾಗಿಲ್ಲವೇಕೆ? ರಾಮ್‌ದೇವರ ಶಸ್ತ್ರ ಪಡೆ ತಮ್ಮ ಮೇಲೆ ದಾಳಿ ಮಾಡಬಹುದೆಂಬ ಆತಂಕದಿಂದ ಸರ್ಕಾರ ಸುಮ್ಮನಿದ್ದಿರಬಹುದೇ? ಯಾರೋ ಒಬ್ಬ ಜನಪರ ಹೋರಾಟಗಾರ ಈ ವ್ಯವಸ್ಥೆಯ ವಿರುದ್ಧ ಇಂಥದ್ದೊಂದು ಹೇಳಿಕೆ ನೀಡಿದ್ದರೆ ಸರ್ಕಾರ ಸುಮ್ಮನಿರುತ್ತಿತ್ತೇ?

'ಚಳವಳಿ'ಗಾರರ ಮೇಲೆ ಪೊಲೀಸರ ದಾಳಿಯಾಗುವಾಗ ಚಳವಳಿಗಾರರನ್ನು ಕೈಬಿಟ್ಟು ಪಲಾಯನಗೈದ ಯೋಗ ಗುರುವಿನ ಹೋ(ಹಾ)ರಾಟ ಅಂತಿಮವಾಗುತ್ತಿದ್ದಂತೆ ಮತ್ತೆ ಜಿಗಿದೆದ್ದಂತೆ ಶುರುವಾಯಿತು ಅಣ್ಣಾ ಹಜಾರೆಯ ಹೋರಾಟ!

ಈ ಹೋರಾಟದ ಕಾವು ಕಂಡ ಕೆಲವರಂತೂ ಪ್ರಚಾರದ ಭರಾಟೆಯಲ್ಲಿ ಬೇಕಾಬಿಟ್ಟಿಯಾಗಿ ತಮ್ಮ ತಮ್ಮ ಪಕ್ಷಗಳ, ಸಂಘಟನೆಗಳ ಬಾವುಟಗಳನ್ನು ಎತ್ತಿ ತೋರಿಸುತ್ತಾ ಭಾರೀ ಹೋರಾಟವೆಂಬಂತೆ ಜನತೆಯನ್ನು ನಿದ್ದೆಗೆಡಿಸಿ, ಇನ್ನು ಭ್ರಷ್ಟಾಚಾರಿಗಳಿಗೆ ಉಳಿಗಾಲವೇ ಇಲ್ಲವೇನೋ, ದೇಶದಲ್ಲೇನೋ ಮಹಾನ್ ಕ್ರಾಂತಿಯೇ ಆಗಿಹೋಗಲಿದೆಯೇನೋ ಎಂಬ ಭಾರೀ ಭ್ರಮೆ ಸೃಷ್ಟಿಮಾಡಿದರು. ಹೀಗೆ ಭ್ರಮೆ ಸೃಷ್ಟಿಯಾಗಲು ಮಾಧ್ಯಮಗಳ ಪಾತ್ರವೂ ಹೆಚ್ಚಾಗಿತ್ತು,

ಆಳದಲ್ಲಿ ಹಜಾರೆಯ ಹೋರಾಟವನ್ನು ಬೆಂಬಲಿಸಿದವರಲ್ಲಿ ಮುಂಚೂಣಿಯಲ್ಲಿದ್ದವರು ಐಟಿ-ಬಿಟಿ ಮಂದಿ. ನಿಜಕ್ಕೂ ಐಟಿ-ಬಿಟಿಗಳಿಗೆ ಈ ದೇಶದಲ್ಲಿ ಅದೆಷ್ಟು ಕೋಟಿ ಜನ ನಿರುದ್ಯೋಗಿಗಳಿದ್ದಾರೆ ಎಂಬುದಾಗಲಿ, ಬಡತನ-ಶೋಷಣೆ-ಅಸಮಾನತೆಗೆ ಸಿಲುಕಿದವರ ಸಂಖ್ಯೆ ಎಷ್ಟಿದೆ ಎಂಬುದಾಗಲಿ ಅರಿವಿದೆಯೇ?

ದೇಶದ ಖನಿಜ ಸಂಪತ್ತನ್ನು ಲೂಟಿ ಮಾಡುತ್ತಲೇ ದೊಡ್ಡ-ದೊಡ್ಡ ಕಂಪನಿಗಳನ್ನಿಟ್ಟ ಮಂದಿಗಳು ಒಂದೆಡೆಯಾದರೆ, ಇನ್ನೊಂದಡೆ ಸ್ವಾಮೀಜಿಗಳ ವೇಷದಲ್ಲಿದ್ದುಕೊಂಡು ದೇಶದೊಳಗೂ-ಹೊರಗೂ ಭಾರೀ ಆಸ್ತಿ-ಪಾಸ್ತಿ ಹೊಂದಿ ಸ್ವತಃ ತಾವೇ ಭ್ರಷ್ಟರಾಗಿದ್ದುಕೊಂಡೇ ಈ ಹೊತ್ತಿನಲ್ಲಿ ದೇಶೋದ್ಧಾರದ ಮಾತಾಡುತ್ತಿರುವುದು ನಿಜಕ್ಕೂ 'ಭೂತದ ಬಾಯಲ್ಲಿ ಭಗವದ್ಗೀತೆ'-'ಬಿಸಿಲಿನ ಬಾಯಲ್ಲಿ ಬೆಳದಿಂಗಳ ಮಾತಿ'ನಂತೆ ಕೇಳಿಸುತ್ತಿಲ್ಲವೇ?


ದೇಶ ಉದ್ಧಾರ ಮಾಡುವ ಮಾತನ್ನಾಡುವ ಇಂಥವರು ಈ ದೇಶದಲ್ಲಿ ಸ್ವದೇಶಿ ವಸ್ತುಗಳ ಬಗ್ಗೆ ಸದಾ ಜಾಗೃತಿ ಮೂಡಿಸುತ್ತಿದ್ದ ಆಜಾದಿ ಬಚಾವೋ ಆಂದೋಲನದ ನಾಯಕ ರಾಜೀವ್ ದೀಕ್ಷಿತ್ ಬೆಂಬಲಕ್ಕೆ ಮುಂದಾಗಲಿಲ್ಲವೇಕೆ? ನರ್ಮದಾ ಬಚಾವೋ ಹೋರಾಟವನ್ನು ಕೈಗೆತ್ತಿಕೊಂಡ ಮೇಧಾ ಪಾಟ್ಕರ್‌ರನ್ನು ಬೆಂಬಲಿಸಲಿಲ್ಲವೇಕೆ? ಇತ್ತೀಚೆಗೆ ಉತ್ತರಾಖಂಡದಲ್ಲಿ ಗಂಗಾನದಿಯ ಉಳಿವಿಗಾಗಿ ನಿರಂತರ ಉಪವಾಸ ಮಾಡಿ ಸಾವನ್ನಪ್ಪಿದ ನಿಗಮಾನಂದ ಸ್ವಾಮೀಜಿಯನ್ನು ಬೆಂಬಲಿಸಲಿಲ್ಲವೇಕೆ?

ಹೀಗೆ ಹಜಾರೆಗಿರಿಯ ಹೋರಾಟ ನೊಂದವರಲ್ಲದ, ಶೋಷಣೆಯ ವಿರುದ್ಧದ ಆಕ್ರಂದನವಿಲ್ಲದ, ಬಡತನವೆಂದರೇನೆಂದು ತಿಳಿಯದ, ಕೇವಲ ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದ ಜನರ ಹೋರಾಟವಾಗಿ ದೇಶದೆಲ್ಲೆಡೆ ಬಿರುಗಾಳಿಯಂತೆ ಅಪ್ಪಳಿಸಿತು. ಆದರೆ ಅದು ಸಾಧಿಸಿದ್ದಾದರೂ ಏನನ್ನು ಎಂಬ ಪ್ರಶ್ನೆ ಉಳಿದಿದೆ.

ಭ್ರಷ್ಟಾಚಾರದ ಮುಕ್ತಿಗಾಗಲೀ, ದೇಶದ ಪ್ರಗತಿಗಾಗಲೀ, ಜನಹಿತದ ಯಾವ ಪ್ರಯೋಜನಕ್ಕೂ ಬಾರದ ಅಣ್ಣಾ ಹಜಾರೆಯ ಕೆಲವೇ ಕೆಲವು ದಿನಗಳ ಹೋರಾಟವನ್ನು ಭಾರೀ ಹೋರಾಟವಾಗಿ ಕೈಗೆತ್ತಿಕೊಂಡವರು ಮಣಿಪುರದಲ್ಲಿ 10 ವರ್ಷಗಳಿಂದಲೂ ಉಪವಾಸ ಮಾಡಿ ಪ್ರತಿಭಟಿಸುತ್ತಲೇ ಸೈನ್ಯಕ್ಕೆ ಯಾರನ್ನು ಬೇಕಾದರೂ ಕೊಲ್ಲುವ ಅಧಿಕಾರ ಕೊಟ್ಟಿರುವುದನ್ನು ರದ್ದುಮಾಡಬೇಕೆಂದು ಒತ್ತಾಯಿಸಿ ಇರೋಂ ಶರ್ಮಿಳಾ ಎಂಬ ಹೆಣ್ಣುಮಗಳ ಹೋರಾಟಕ್ಕೆ ಹಜಾರೆಗಿರಿಯ ಜನ ಬೆಂಬಲಿಸಲು ಮುಂದಾಗಲಿಲ್ಲವೇಕೆ?


- ಶಿರುಗುಂದ ರಫೀಕ್, ಮೂಡಿಗೆರೆ

ಇರುಳಮುಖೀ ಹರಿವು...




ಬೆಳಕಿಗೆ ಕಾಲು ಬಿದ್ದು
ಬೇಡಿಕೊಂಡೆ:
'ಹರಿದ ಸೀರೆಯ ಮೇಲೆ
ಹರಿಹಾಯಬೇಡ...!'

ಹಗಲಲ್ಲಿ ಬಿದ್ದು ಹಲ್ಲುಮುರಿದುಕೊಂಡ
ನನ್ನ ನೋಡಿ ಲೋಕ ನಕ್ಕಿತು;
ತಬ್ಬಿಕೊಂಡ ಇರುಳು ಮಾತ್ರ
ನಗುವ ಸವರಿ ನನಗೆ,
ತಾನಷ್ಟೇ ಬಿಕ್ಕಿತು....



ಇರುಳ ಹಂಬಲಿಸಿ ಹಗಲ ಹಿಂಬಾಲಿಸಿದೆ;
ಹಗಲು ಮುನಿಸಿಕೊಂಡಿತು...
ಇರುಳಿಗೆ ಬೆಳಕಾಗಿ ನಿಂತ
ಮಿಂಚು ಹುಳುಗಳ ತಂಡ
ಆದರದಿಂದ ಬರಮಾಡಿಕೊಂಡಿತು...
ಈ ಪ್ರೀತಿಗೆ ಪ್ರತಿಯಾಗಿ ನಾ ಏನು
ಕೊಡಬಲ್ಲೆ...?
-ಸಂಕಟವಾಯಿತು...



ಹಗಲು ಸುರಿದ ಮಳೆಗೆ
ಮಾನ ಕಳಕೊಂಡೆ ಎಂಬ ಸಂಗತಿ
ಇರುಳು ಮಳೆಗೆ ಒಡ್ಡಿಕೊಂಡ ಮೇಲೆಯೇ
ಪಕ್ಕಾ ಆಯಿತು...!



ಇರುಳ ಹೆರಳ ಹಿಡಿದು ಜೀಕಿದಾಗ
ನಕ್ಷತ್ರ ತೂಗಿದವು ಎಂದರೆ
ಅವಳು ನಂಬಲೇ ಇಲ್ಲ;
ಅದು ಗೋಚರಿಸುವುದು ನನಗೆ ಮಾತ್ರ
ಎಂಬ ಸತ್ಯ ಅವಳಿಗೆ
ನಿಲುಕಲಾರದ್ದಕ್ಕೆ ನನಗಿನಿತೂ
ಬೇಸರವಿಲ್ಲ...!



• ವಿಜಯಕಾಂತ ಪಾಟೀಲ, ಹ

ಎಡೂರಪ್ಪ ಜೈಲಲ್ಲಿದ್ದೇ ರಾಜಕಾರಣ ಮಾಡ್ತನಂತೆ!

ಊರಿಗೆ ಬಂದ ಶಾಸಕನಿಗೆ ಕಲ್ಲುಬೀರಿ ಗಾಯ ಸಿದರೆಂಬ ಸುದ್ದಿಯಿಂದ ಕಾಳಮಾವನ ಮನಸ್ಸು ಯಾಗಿತ್ತು.

"ಯಾವನ್ನ ಅಂತ ಕ್ಯಲಸ ಮಾಡಿದೋನು?" ಎಂದು ಎಂದ ಕೂಗಿದ.

"ಆ ಪುಡಸಮ್ಮಿ ಹುಡುಗನಂತೆ ಕಣಮಾವ.

ಮು ಲು ಸೀ ಮೆ

ಪಟ್ಟೆಪುರಾಣ

- ಬಿ. ಚಂದ್ರೇಗೌಡ

ಲೀಸ್‌ನೋರು ತಗಂಡೋಗಿ ಹುಟ್ಟಿದ ದಿನ ಸ್ಯವುರೆ."

"ಆ ವುಡುಗ ಕುಡುದಿತ್ತಂತೆ ನಿಜವೇನ್ಲ?" ಎಂದಳು ಮ್ಮಿ.

"ಅವುನಾಗ್ಲೆ ಕುಡಿಯದ ಕಲ್ತಿದ್ದನೇ?" ಎಂದ ಸೀರ.

"ಆ ವಿಜಲ್ಲಿ ನೀನೂ ಕುಡಿತಿದ್ಯಲ್ಲೊ ಮಾವ. ಇನ್ನ ಕಾಲ್ದುಡುಗ್ರು ಕೇಳಬೇಕೆ? ಬಿಟ್ಟಿ ಸಿಕ್ಕಿದರಂತೂ ಯ್ಕುತ್ತವೆ. ಈ ಹುಡುಗನಿಗೂ ಯಾರೋ ಕುಡಿಸಿ ಮ್ಮೆಲ್ಲೆ ಬಂದಾಗ ಕೋಳಿ ಮೊಟ್ಟೆಲ್ವಡಿ ಅಂತ ಹೇಳಿ ದ್ರುಂತೆ."

"ಯಾರೇಳಿ ಕಳಿಸಿದ್ರು?"

"ಇನ್ನಾರು? ದಳದೋರು ಹೇಳಿ ಕಳಿಸಿರತರೆ ಮಾವ. ದಳದೋರಿಗೆ ಕಲ್ಲುಬಿದ್ರೆ ಕಾಂಗ್ರೆಸ್ಸಿನೋರು , ಕಾಂಗ್ರೆಸ್ಸಿನೋರಿಗೆ ಕಲ್ಲುಬಿದ್ರೆ ದಳದೋರ ಕ್ಯಲಸ ಗಾಗ್ಯದೆ."

"ಆ ಹುಡುಗ ದಳನೂ ಅಲ್ಲ, ಕಾಂಗ್ರೆಸ್ಸೂ ಅಲ್ಲ " ಎಂದಳು ಜುಮ್ಮಿ.

"ಅಂಥೋರೆ ಕಣೆ ಬಾಡಗೆ ಜನ. ನಮ್ಮೂರ ಮನೂ ಬಿಳಿಯನೂ ಸೇರಿಕಂಡು ಮಸಲತ್ತು ಮಾಡಿ ಮ್ಮೆಲ್ಲೆಗೆ ಕಲ್ಲಲ್ಲಿ ವಡಿಸಿದರಂತೆ."

"ಅಂಗರೆ ಪೊಲೀಸ್‌ನೋರು ಇವುರನ್ಯಾಕೆ ತಗಂಡೋ ?"

"ಈಗ ಅರೆಸ್ಟಾಗಿರೋನು ಬಾಯಿಬುಟ್ರೆ ಡೋಯ್ತರೆ. ಇಲ್ಲ ಅಂದ್ರೆ ಇಲ್ಲ, ಆ ಪುಡಸಾಮಿ ಡುಗ ತನಿಗಾಗದೆಯಿರೋರ ಹೆಸರನ್ಯಲ್ಲ ಹೇಳ್ತಾಯಿದ್ದ . ಅದ್ಕೆ ಎಮ್ಮೆಲ್ಲೆ ಯಾರನೂ ಅರೆಸ್ಟು ಮಾಡಬ್ಯಾಡಿ, ಸ್ನೂ ಹಾಕಬ್ಯಾಡಿ ಬುಟ್ಟುಬುಡಿ ಅಂತ ಇದ್ದನಂತೆ."

"ಬುಟ್ರೆ ಯಮ್ಮೆಲ್ಲೆಗೆ ವಡದು ಜಯಿಸಿಗಂಡೋ ಶ ಮ್ಯರಿಯದಿಲವೆ?"

"ಮ್ಯರದ್ರೆ ಊರೋರು ಹಿಡಕಂಡು ನೇಯಿಬೇಕಾ ವ."

"ಈಗ್ಲು ಊರೆಸರಾಳ ಮಾಡಿದೋರ ಸುಮ್ಮನೆ ಬುಡಂಗಿಲ್ಲ ಕಂಡ್ಯ" ಎಂದ ಕಾಳಮಾವ.

"ನಿಜಕಣ ಮಾವ. ಟಿವಿಲಿ, ಪೇಪ್ರಲ್ಯಲ್ಲ ನಮ್ಮೂರೆಸುರು ಬರಂಗಾಯ್ತು. ಆದರಲ್ಲು ಟಿವಿ ಮುಂಡೆಮಕ್ಕಳು ಯಮ್ಮೆಲ್ಲೆ ಕೊಲೆಯತ್ನ ಅಂತ ಸುದ್ದಿ ಮಾಡಿಬುಟ್ರು. ಇನ್ನ ವಳ್ಳೆ ಜನ ಊರಿಗೆ ಬರಕ್ಕೆ ಹೆದರತರೆ."

"ದ್ಯಾವಲಾಪುರದೋರಾಗ್ಲೆ ದೊಣ್ಣೆ ಮದಗೆನೆ ತಗಂಡು ವಂಟಿದ್ರುಂತೆ ಕಣೊ ನಮ್ಮೂರೋರಿಗೆ ವಡಿಯಕ್ಕೆ" ಎಂದು ಸೀರ ಬೆದರುಗಣ್ಣುಬಿಟ್ಟ.

"ಏ ತಪ್ಪು ಮಾಡಿರೋರು ಮೂರು ಜನ ಕಣೊ. ಅದ್ಯಂಗೆ ಊರಿಗೆ ಬಂದು ಯಾರಿಗೆ ಅಂತ ವಡಿತರೆ? ಅದ್ಯಲ್ಲ ನಿನ್ನಂಥೋರು ಹಬ್ಬಿಸಿರೊ ಸುಳ್ಳು ಸುದ್ದಿ."

"ಆಯ್ತು ದ್ಯಾವಲಾಪುರಕೋಗಿ ನಮ್ಮೂರೆಸರೇಳು. ನಿನಿಗೆ ಗುನಿ ಉದುರುಸಲಿಲ್ಲ ಅಂದ್ರೆ ಕೇಳ್ಳ" ಎಂದು ಸೀರ ಸವಾಲು ಹಾಕಿದ.

"ಈಗಿಡಕಂಡೋಗ್ಯವುರಲ್ಲಾ ಆ ಹುಡುಗ್ನೇನು ಮಾಡ್ತರ್ಲ?" ಎಂದಳು ಜುಮ್ಮಿ.

"ಕೇಸಾಕಿಬುಟ್ಟು ಜೈಲಿಗಾಕ್ತರೆ ಕಣೆ."

"ಆವುರ ಜೈಲಿಗಾಕಿದ್ರೆ ಬುಡಿಸಿಗಂಡು ಬರೋರ್ಯಾರ್ಲ?"

"ಆವರು ಬುಟ್ಟಾಗ ಬತ್ತರೆ. ವಬ್ಬಂತು ಜೈಲಿಗೆದರದಿಲ್ಲ. ಅಲ್ಲಿಂದ್ಲೆ ಇಲ್ಲಿರೋರ ಕೈಲಿ ಏನಾರ ಮಾಡುಸ್ತನೆ. ಅವುನೊಂತರ ಎಡೂರಪ್ಪನ ಆಕ್ರಮ ಸಂತತಿ ಇದ್ದಂಗೆ. ಊರಿಗೇ ಸಮಸ್ಯಾಗಿದ್ದ."

"ಹೆಸರು ನೋಡಿದ್ರೆ ಸಂತೋಸ. ವಳ್ಳೆ ಹೆಸರನೆ ತಂದ ಬುಡು ಊರಿಗೆ."

"ಯಮ್ಮೆಲ್ಲೆ ಕಾರಿಗೆ ಕಲ್ಲು ಬೀರಿದ ಹುಡುಗನ್ನ ಎಡೂರಪ್ಪನಿಗೋಲುಸ್ತೀಯ?"

"ಯಡೂರಪ್ಪ ಜೈಲಲ್ಲಿದ್ರು ರಾಜಕಾರಣ ಮಾಡ್ತನಂತೆ ಕಣೊ. ಅಂಗಂತ ಅವುನು ಕೊಪ್ಪಳದಲ್ಲಿ ಹೇಳ್ಯವುನೆ."

"ಅಂಗಂತ ಹೇಳಕ್ಕೆ ನಾಚಿಗಾಗದಿಲವುಲ ಅವುನಿಗೆ" ಎಂದ ಕಾಳಮಾವ.

"ಅವುನಿಗ್ಯಂತ ನಾಚಿಗೆ ಮಾವ. ಜೈಲಲ್ಲಿದ್ದೇ ರಾಜಕಾರಣ ಮಾಡ್ತೀನಿ ಅಂತ ಬಯಿರಂಗ ಸಭೆಲೆ ಹೇಳ್ತನೆ ಅಂದ್ರೆ ಜೈಲಿಗೋಗಕ್ಕೆ ತಯಾರಾಗಿದ್ದಿನಿ ಅಂತ ಅಲವೆ. ಈಗ ಜಡಿಜೆ ದೊಡ್ಡಮನಸು ಮಾಡಬೇಕು."

"ಊ ಮತ್ತೆ ಜೈಲಿಗೆ ತಯಾರಾಗಿದ್ದೋನ ಕಳುಹಿಸಲಿಲ್ಲ ಅಂದ್ರೆ ಜಡಜೆಗೇ ಅವುಮಾನ ಕಂಡ್ಯ."

"ಇಲ್ಲಿ ಮಾನ ಅವುಮಾನದ ಪ್ರಶ್ನೆ ಜಡಜಿಗ್ಯಾಕೊ ಮಾವ. ಕಾನೂನು ಅವುನನ್ನ ಜೈಲಿಗೆ ಕಳುಸ ಅಂತ ತೋರಿದ್ರೆ ಕಳುಸ್ತರೆ, ಇಲ್ಲ ಅಂದ್ರೆ ಕುಮಾರಸ್ವಾಮಿ ತರ ಬುಟ್ಟು ಕಳುಸ್ತರೆ."

"ಕುಮಾರಸ್ವಾಮಿ ಯಂಗೆ ತಪ್ಪಿಸಿಗಂಡು ಬುಟ್ಟಾ ಅಂತ?"

"ಅವರಪ್ಪನಿಂದ ತಪ್ಪಿಸಿಗಂಡ ಚಿಗಪ್ಪ" ಎಂದುಕೊಂಡು ಪಾಟಿಸ್ಸೆ ಬಂದ.

"ನೀನು ಪೋಲಿಟೇಶನ್ನಿಗೋಗಿದ್ದೇನ್ಲ?" ಎಂದಳು ಜುಮ್ಮಿ.

"ಊ ಕಣಕ್ಕ, ಪಂಚಾತಿ ಮೆಂಬ್ರಾದ ನೀನು ಮಾಡೋ ಕೆಲಸನ್ಯಲ್ಲ ನಾನು ಮಾಡಬೇಕಾಯ್ತದೆ. ಇಲ್ಲಿ ಅಂದ್ರೆ ನಿನಿಗೆ ಕೆಟ್ಟೆಸರು ಬತ್ತದೆ."

"ಕೆಟ್ಟೆಸರು ಬರೊ ಅಂತ ಕ್ಯಲಸ ನಾನೇನು ಮಾಡಿಲ್ಲ ಕಂಡ್ಯ."

"ಮಾಡಿಲ್ಲ ಸರಿ ಕಣಕ್ಕ. ಕೆಲವು ಟೈಮು ಸುಮ್ಮನಿದ್ರೂ ಕೆಟ್ಟೆಸುರು ಬತ್ತದೆ. ಪರೆಗ್‌ಜಾಂಪಲ್ ಈ ಟೈಮಲ್ಲಿ ನೀನು ಓಡಾಡಿ ಪ್ರಾಬ್ಲಮ್ಮು ಸಾಲೂ ಮಾಡಬೇಕು. ಆದ್ರೆ ಹೋಟ್ಲುತ ಬಂದು ಕೂತಿದ್ದಿ. ಅದೇ ನಾನ್ನೋಡು. ಇನಸ್‌ಪೆಕ್ಟರಿಂದ ಸರ್ಕಲ್ ಇನ್ಸ್‌ಪೆಕ್ಟರವರಿಗೂ ಕನ್‌ವಿನ್ಸ ಮಾಡಿ, ಊರಲ್ಲಿ ಯಾರ್ರೂ ಅರೆಸ್ಟ್ ಮಾಡಬ್ಯಾಡಿ, ಘಟನೆಗೆ ಸಂಬಂಧಪಟ್ಟ ಅಪರಾಧಿಗಳ್ಯಾರು ಅಂತ ಹೇಳ್ತಿನಿ ಅಂತ ಹೇಳಿಬಂದೆ."

"ಸರಿ, ನಿನ್ನನ್ಯಾಕೆ ಅರೆಸ್ಟು ಮಾಡಿಲ್ಲ?"

"ಮಾಡೋರು ಕಣಕ್ಕ. ನಾನು ಎಮ್ಮೆಲ್ಲೆ ಜೊತೆಗಿದ್ದು ಬಚಾವಾದೆ. ಇಲ್ಲಾ ಅಂದ್ರೆ ಇಷ್ಟೊತ್ತಿಗೆ ನನ್ನನ್ನ ಏರೋಪ್ಲೇನ್ ಹತ್ತಿಸಿರೋರು."

"ನಿನ್ನಂಥೋನಿಗೂ ಅಂಗೆ ಮಾಡೊರೆ?"

"ಪೊಲೀಸ್‌ನೋರು ಮೊದ್ಲು ವರುಕುಮಾಡಿ, ಆಮ್ಯಾಲೆ ಹೆಸರು ಕೇಳಿ ಸಾರಿ ಅಂತರೆ ಕಣಕ್ಕ. ಆಗ ಸಾರಿ ಕೇಳಿದ್ರೆನು ಪ್ರಯೋಜನ: ನೋಡು ಕೆಲವೇ ದಿನಗಳಿಂದೆ ಮಂತ್ರಿಯಾಗಿದ್ದ ಜನಾರ್ದನ ರೆಡ್ಡಿ ಇವತ್ತು ಅರೆಸ್ಟಾಗಿ ಸಿಬಿಐ ಕೈಗೆ ಸಿಗಾಯ್ನೊಂಡು ನಳ್ಯತ ಅವುನೆ. ಪೊಲೀಸ್‌ನೋರಿಗೆ ಅವುನು ಅಕ್ರಮ ಆಸ್ತಿ ಮಾಡಿರೊ ಅಪರಾಧಿಯಾಗಿ ಕಾಣ್ತನೆ ವರತೂ ಕರ್ನಾಟಕದ ಮಾಜಿ ಮಂತ್ರಿಯಂಗೆ ಕಾಣದಿಲ್ಲ, ಅಂಗೆ ಪೊಲೀಸರ ಸವಾಸ."

"ಅವುಂದೆಲಿಗೆ ಬತ್ಲ?" ಎಂಬ ಮಾಮೂಲಿ ಪ್ರಶ್ನೆ ಕೇಳಿದ ಕಾಳಮಾವ.

"ಅವುನಪರಾಧ ಆಗದಷ್ಟು ಸಿಗತಾ ಅದೆ ದ್ವಡಪ್ಪ. ಸಿಬಿಐನೋರು ಕೈಇಡತ್ತವ್ಯಲ್ಲ ದುಡ್ಡು, ಚಿನ್ನ ಇನ್ನು ಸಿಗತಾ ಅದೆ. ಅಂತ ದಕಾಯತನ್ನ ಬಿಜೆಪಿಗಳು ಇನ್ನು ಪಾರ್ಟಿಲಿ ಮಡಿಕಂಡವುರೆ. ಇದಕ್ಕೇನೇಳ್ತಿ?"

"ಇಸಿಸಿ, ಮಡಿಕಂಡವುರೆ ಅಂದ್ರೆ ಅಲ್ಲಿ ಇರೋರ್ಯಲ್ಲ ಅಂಥೋರೆ ಅಲವೇನ್ಲಾ?"

"ನಿಜ ದ್ವಡಪ್ಪ, ಅಂಥೋರ ಲೀಡ್ರು ಎಡೂರಪ್ಪ"

"ಇವುನೇನು ಹಿಂಗಾಡ್ತ ಅವುನಲ್ಲಾ?"

"ಯಾರೋ ಉಗ್ರೀ?"

"ಇನ್ನಾರು. ಎಡೂರಪ್ಪ ಕಣೊ. ಜೈಲಿಗೋಯ್ತಿನಿ ಅಂತನೆ, ತಿರಗ ಮುಖ್ಯಮಂತ್ರಿ ಆಯ್ತಿನಿ ಅಂತನೆ, ಮುಂದುಕೂ ನಾನೆ ಲೀಡ್ರು ಅಂತನೆ."



"ಬವುಳಿ ಬಂದದೆ ಕಣೊ ಅವುನಿಗೆ. ಇಲ್ಲಿವುನ ಕಥೆ ಆದ್ರೆ, ಅಲ್ಲಿ ಆದ್ವಾನಿ ಆಗ್ಲೆ ರಥ ತಗದು ಕಡಾಣೆಗೆ ಯಣ್ಣೆ ಹಾಕಿ, ಬಾವುಟ ಕಟ್ಟತಾ ಅವುನಂತೆ. ಅದ ನೋಡಿ ಆರೆಸೆಸ್‌ನೋರು ಈ ವಯಿಸಲ್ಲಿ ನಿನಿಗಿದ್ಯಲ್ಲ ಅಲ್ಲಾ, ಸುಮನಿರೊ ಅಂದಿದ್ದರಂತೆ. ಇದಕ್ಕೇನೇಳ್ತಿ?"

"ನೋಡು ಮತ್ತೆ, ನನಿಗೆ ಮುಪ್ಪಾದರೇನು ನನ್ನ ಆಸೆ ಇನ್ನೂ ಅಂಗೆ ಅದೆ ಅಂತ ಚೇಸ್ಟೆ ಮಾಡಕ್ಕೆ ವಂಟವುನೆ ಅದ್ವಾನಿ."

"ಇದ್ದಿದ್ರುಲ್ಲಿ ಅವುನೆ ಪರವಾಗಿಲ್ಲ ಕಂಡ್ಯ" ಎಂದ ಕಾಳಮಾವ.

"ಪರವಾಗಿಲ್ಲ ನಮ್ಮ ದ್ವಡಪ್ಪನೂ ಅನಂತಮೂರ್ತಿಗಳಂಗೆ ಅದ್ವಾನಿ ಪರ ವಕಾಲತ್ತ ವಯಿಸ್ತನೆ. ನೀನೇಳದು ನಿಜದ್ವಡಪ್ಪ, ಅದ್ವಾನಿ ಪರವಾಗಿಲ್ಲ ಅನ್ನದಾದ್ರೆ ಬಿಜೆಪಿಗೆ ಅವುನು ಬೇಕಾಗಿಲ್ಲ. ಅಂತ ಬಿಜೆಪಿ ಪಾಲಿಗೆ ಅದ್ವಾನಿ ಈಗ ಓಲ್ಡ್ ಏಜ್ ಪೆಂಚನ್ ಗಿರಾಕಿ. ಅದ್ಕೆ ನೋಡು ಆಗ್ಲೆ ಮೋದಿ ಅನ್ನೋನ ಮುಂದಕೆ ನೂಕ್ತ ಅವುರೆ. ಪೇಪರ್‌ನಲ್ಲಿರೋ ಜನಿವಾರಗಳು ರಾವುಲಗಾಂಧಿ ಎದ್ರಿಗೆ ಅವುನೆ ಸರಿ ಅಂತ ಕ್ಯರಿತ ಕುಂತವುರೆ. ಇದಿಂಗೇ ನ್ಯಡದ್ರೆ ಅರ್ಜುನೆದ್ರಿಗೆ ಬಬ್ರುವಾನ್ನ ತಂದು ನಿಲ್ಲಿಸಿದಂಗಾಯ್ತದೆ."

"ಅರ್ಜುನ್ಯಾರು? ಬಬ್ರುವಾನ್ಯಾರ್ಲ?"

"ಮೋದಿನೇ ಅರ್ಜುನ ಕಣಕ್ಕ, ರಾವುಲಗಾಂಧಿನೆ ಬಬ್ರುವಾಹನ. ಯ್ಯಂತ್ಯಂತ ಪೈಲವಾನರ್ಯಲ್ಲ ಯಾವಾಗ ಸೋಲ್ತರೇಳು? ಹೊಸ ಹುಡುಗರೆದ್ರಿಗೆ ಮಣ್ಣುಮುಕ್ತರೆ. ಅವುನ್ಯಾರೊ ಗುಜರಾತಿ ಗುಮಾಸ್ತನ ತಂದ್ರು, ರಾಜೀವ್‌ಗಾಂಧಿ ಮಗನೆದ್ರಿಗೆ ನಿಲ್ಲುಸ್ತವಂತಲ್ಲ, ರಾಷ್ಟ್ರಮಟ್ಟದ ಬಿಜೆಪಿ ಕರ್ನಾಟಕದ ಬಿಜೆಪಿ ತರನೇ ಆಗ್ಯದೆ ಅನ್ನದು ಇದರಿಂದ ಸಾಬೀತಾಯ್ತು!" ಷ

ಸೌಂದರ್ಯಕ್ಕೆ ಕನಸು, ಕನವರಿಕೆಯ ಲೇಪನ

ಈ ಪುಟ್ಟ ಟಿಪ್ಪಣಿಯನ್ನು ನೀವು ತಪ್ಪು ತಿಳಿದುಕೊಳ್ಳಬಾರದು. ತಪ್ಪು ತಿಳಿಯುವುದು ಸಾಧ್ಯ ಅನ್ನಿಸಿದ್ದರಿಂದ ಸುತ್ತಿದ್ದೇನೆ. ಒಬ್ಬ ಹೇಳಿದ, "ಏನ್ಸಾರ್ ಹೀಗೆ ಹೇಳ್ತೀರಿ! ನೀವು ಕೂಡ ಎಂ.ಎಫ್. ಹುಸೇನ್ ತರಹ ಇನ್ನೊಬ್ಬಳು ಮಾಧುರಿ ದೀಕ್ಷಿತ್‌ಗೆ ತಗುಲಿಕೊಂಡು ಮಹಾನ್ ಸಾಹಿತಿಯಾಗಿ ಮಿಂಚ್ತೀರಿ ಅಂತ ನಾನಿದ್ರೆ ನೀವು ಆಗಲೇ ವೃದ್ಧಾಪ್ಯ ಕುರಿತು ಮಾತಾಡ್ತಿರಿ!" ಅಂದ.

"ಅಲ್ಲಯ್ಯ, ನೀನು ಒಳ್ಳೆ ಕತೆಗಾರ ಅಂತ ನಾನು ತಿಳಿದಿದ್ರೆ ನೀನು ಶುದ್ಧ ತರಲೆ ತರಹ ಮಾತಾಡ್ತೀಯಲ್ಲ, ಕೆಲವರು ರುಚಿಹೀನರಿಗೆ ಉಳಿದಿರೋದೇ ಸುಧಾರಾಣಿ, ತಾರಾ, ಶಬನಾ, ಮಾಧುರಿ, ಕೊಯಿರಾಲಾ ವಗೈರೆಗಳು. ಕನಸುಮನಸಿನಲ್ಲಿ ಮಣ್ಣಿನ ಗೊಂಬೆಗಳನ್ನು ಕಟ್ಟಿಕೊಂಡು ಓಡಾಡ್ತಾ ಮಳೆಬಂದಾಗ ಅವು ಕರಗಿಹೋಗುವುದನ್ನು ನೋಡಿ ದಂಗಾಗ್ತಾರೆ. ಮಾಧುರಿ ಮಹಾ ಹೂಸುಬುರುಕಿ ಎನ್ನುವುದು ಹತ್ತಿರ ಹೋದಾಗ ಗೊತ್ತಾದಾಗ ಆಕೆ ಬೆಳಗ್ಗೆ ಎದ್ದು ತೊಲಗುವುದನ್ನೇ ಯುತೊಡಗುತ್ತಾರೆ. ನಿಜವಾದ ಆತ್ಮ ಹೊಕ್ಕ ಸೌಂದರ್ಯ ಆ ತರಹದ್ದಲ್ಲ, ಕಾಳಿದಾಸನ ಶಕುಂತಲೆಯ ರ್ಷಣೆಗೊಳಗಾದವನು ನಿಜವಾದ ಕತೆಯಲ್ಲಿ ಶಕುಂತಲೆಯ ಕಾಮ, ಪ್ರೀತಿಯನ್ನು ಕೊಡ್ತಾನೆ. ಅದನ್ನು ತಿಳಿಯಬೇಕಾದರೆ ವು ಜಪಾನಿನ ನಾಟಕ ನೋಡಬೇಕು. ಅವರು ಮಹಾ ರಸಿಕರು; ಇನ್ನೊಂದು ರೀತಿಯಲ್ಲಿ ಮೂರ್ಖರು, ಮತ್ತೊಂದು ತಿಯಲ್ಲಿ ಎರಡು ಲೋಕ ಪಡೆದವರು-ಒಂದು ಹೊರಗಿನ ಲೋಕ, ಇನ್ನೊಂದು ಮನಸ್ಸಿನ ಲೋಕ. ಇದನ್ನು ಒಮ್ಮೆ ರೆ ಸಂದರ್ಭದಲ್ಲಿ ಹೇಳಿದ್ದೇನೆ, ಮತ್ತೆ ಹೇಳ್ತೇನೆ. ಏನಾಯಿತು ಗೊತ್ತ? ಜಪಾನೀ ನಾಟಕಗಳಲ್ಲಿ ಹುಡುಗಿಯರು ಹುಡುಗಿಯರ ಪಾರ್ಟು ಹಾಕುತ್ತಿದ್ದರು. ಈ ಹುಡುಗಿಯರನ್ನು ಪ್ರೇಮಿಸಿ, ಹಣ ಕೊಟ್ಟು ಕೆಡಿಸಿ ಸೂಳೆಯರ ಮಟ್ಟಕ್ಕೆ ಇಸಿದ್ದರಿಂದ ಹೆಂಗಸರು ಪಾರ್ಟು ಹಾಕಬಾರದೆಂದು ಸರ್ಕಾರ ಕಾನೂನು ಮಾಡಿತು. ಆಗ ಗಂಡಸರು ಹೆಂಗಸರ ತ್ರ ವಹಿಸತೊಡಗಿದರು. ಆಗ ಒಂದು ಸಿದ್ಧಾಂತ ಹುಟ್ಟಿಕೊಂಡಿತು. ಅದೇನೆಂದರೆ, ಗಂಡಸರು ಮಾತ್ರ ತಮಗಿರುವ ಂಗಸರ ಆಸೆ, ಕಲ್ಪನೆ ಬಳಸಿ ಹೆಂಗಸಿನ ಪಾತ್ರ ವಹಿಸಬಲ್ಲರು, ಹೆಂಗಸರೇ ಹೆಂಗಸರ ಪಾತ್ರವನ್ನು ಸಮರ್ಪಕವಾಗಿ ಡಲು ಸಾಧ್ಯವೇ ಇಲ್ಲ.

ಈಗ ನೋಡಿ. ಎಂ.ಎಫ್. ಹುಸೇನ್ ಕಲ್ಪಿಸಿಕೊಳ್ಳುವ ಹೆಣ್ಣು, ಆತ ಹೆಣ್ಣು ಪಾತ್ರ ಹಾಕಿ ಕಾಣುವ ಹೆಣ್ಣು ಆತ ಆಗಿ ಚಿತ್ರಿಸುವ ಹೆಣ್ಣು- ಪೋಸ್ ಕೊಡುವ ಮಾಧುರಿ ಎಂಬ ಹೆಣ್ಣು, ಎಲ್ಲವೂ ರಕ್ತಮಾಂಸಕ್ಕೆ ಹತ್ತಿರ. ಕುಂತಲೆಗೆ ಹತ್ತಿರವಲ್ಲ.

ಬರೆಯುವವರ ಮಹಾನ್ ಅರ್ಥಕ್ಕಾಗಿ ಸಣ್ಣಪುಟ್ಟ ವಿಷಯಗಳಲ್ಲಿ ಹುಡುಕದಿದ್ದರೆ ಬಹಳ ಅಪಾಯವಾಗುತ್ತದೆ. ನಾನು ವಿವರಿಸುವುದಿಲ್ಲ, ಮೊನ್ನೆ ಸುಮ್ಮನೇ ಮಲಗಿದ್ದಾಗ ಡಾ. ಅನಂತಮೂರ್ತಿ ಬಂದರು. ಅವರಿಗೆ ಜನ ಕಣ್ಣು ಮತ್ತು ಅನಾರೋಗ್ಯದ ಬಗ್ಗೆ ಹೇಳಿರಬೇಕು. ಅನಂತಮೂರ್ತಿ ಮೂಲಭೂತವಾಗಿ ತುಂಬ ಒಳ್ಳೆಯ ಮನುಷ್ಯ. ಎದುರಿಗಿದ್ದಾಗ 'ನೀವೇ ಈ ಜಗತ್ತಿನಲ್ಲಿ ಬಹುಮುಖ್ಯ' ಎನ್ನುವಂತೆ ಇರುತ್ತಾರೆ. ಅವರ ಡಯಾಬಿಟಿಸ್ ನನಗಿಂತ ತೀವ್ರ. ಆದರೆ ಅದು ನನಗೆ ಕೊಟ್ಟಷ್ಟು ತೊಂದರೆ ಕೊಟ್ಟಿಲ್ಲ. ಸುಮ್ಮನೇ ಮಾತಾಡುತ್ತಾ ಕುಳಿತೆವು. ನನ್ನ ಕತೆಯ ಬಗ್ಗೆ ಒಳ್ಳೆಯ ಮಾತಾಡಿದರು. ವಿವರ ಕೇಳಬೇಕೆನ್ನಿಸಿದರೂ ಯಾಕೆಂದು ಸುಮ್ಮನಿದ್ದೆ. ಅವರು ಹೋದಮೇಲೆ ಪುತ್ತೂರಿನಿಂದ ಬಂದ ಕಿರಿಯ ಗೆಳೆಯ ಲಕ್ಷ್ಮೀಶ ತೋಳ್ಪಾಡಿಯ ಕಾಗದವನ್ನು ನೋಡುತ್ತಾ ಕೂತೆ.

ಅದು ಹೀಗಿದೆ:

ಪ್ರಿಯ ಲಂಕೇಶ್,

ಎಂಥ ಕತೆ ಬರೆದುಬಿಟ್ಟದ್ದೀರಿ!

"ಕಲ್ಲು ಕರಗುವ ಸಮಯ"ದ ನಂತರ ಇಷ್ಟು ಉತ್ಕಟ **intense** ಕತೆ ನಾನು ಓದಿಲ್ಲ. ನೀವು ಮಾತ್ರ ಬರೆಯಬಹುದಾದ ಕತೆ ಎಂದುಕೊಳ್ಳುತ್ತೇನೆ. ಕತೆಯ ಕೊನೆಯ ಭಾಗ ಓದುತ್ತಿದ್ದಂತೆ ಕಂಬನಿ ಸುಮ್ಮನೆ ಸುರಿಯುತ್ತಿತ್ತು. ಇದನ್ನು ಎಲ್ಲರಿಗೆ ಹೇಳಲು ನನಗೆ ಅಂಜಿಕೆ. ನಾನು ಬ್ರಾಹ್ಮಣನಾಗಿರುವುದರಿಂದ ನನಗೆ ಹೀಗಾಗುತ್ತಿದೆ ಎಂದೆಲ್ಲ ಹೇಳಿ ಎಲ್ಲ ಸೂಕ್ಷ್ಮತೆಯನ್ನು ಧೂಳೀಪಟ ಮಾಡುವ ಜನ.

ನಮಸ್ಕಾರ. ಅದಕ್ಕಿಂತ ಹೆಚ್ಚು ಚಿರಕೃತಜ್ಞತೆ.

'ಅನುಭವದ ಐಕ್ಯ' ಕೂಡ ಚೆನ್ನಾಗಿದೆ.

ಸ್ವಪ್ರತಿಷ್ಠೆಯ ಬಗ್ಗೆ ಬರೆದದ್ದು ಓದಿ ಅಚ್ಚರಿ ಮತ್ತು ಸಂತೋಷವಾಯಿತು. ಹೀಗೆಯೇ ಬಯಲಾಗುತ್ತ ಹೋದರೆ ಹೃದಯದ ಬಾಗಿಲು ಪೂರ್ತಿ ತೆರೆಯುವ ದಿನ ದೂರವಿಲ್ಲ ಮತ್ತು ಹೃದಯದ ಬಾಗಿಲು ತೆರೆಯುವುದೇ ಬದುಕಿನ ಸಾಫಲ್ಯ.

ವೈದಿಕರು ಹೇಳುವ ಮೋಕ್ಷ ಬೌದ್ಧರ ನಿರ್ವಾಣ ಎಲ್ಲ ಅದೇ.

ಅಲ್ಲಮನ ಬಯಲು.

ನನ್ನ ಗುರುಗಳ ಜತೆ (ಭಟ್ಟರೆಂಬ ಸಜ್ಜನರು!) ಒಮ್ಮೆ ಬರುತ್ತೇನೆ.

(ಅವರಿಗೆ ಆರೋಗ್ಯ ಅಷ್ಟು ಸರಿಯಾಗಿಲ್ಲ. ಅದೇ ಚಿಂತೆ)

ಇತಿ ನಿಮ್ಮ

ಲಕ್ಷ್ಮೀಶ ತೋಳ್ಪಾಡಿ



ಈ ಕಾಗದಕ್ಕೆ ಉತ್ತರ ಬರೆದೆ. ಆ ಉತ್ತರ ಈಗ ನನ್ನಲ್ಲಿಲ್ಲ. ಲಕ್ಷ್ಮೀಶನ ಕಾಗದ ನೋಡಿದಾಗ ಇದೆಂಥ ಕೆಟ್ಟ ಸಮಾಜ ಅನ್ನಿಸುತ್ತದೆ. ನಮ್ಮ ಕತೆ ಬರೀ ಸಾಮಾಜಿಕವಾಗಿದ್ದರೆ ಒಣಗಿದ ಕಟ್ಟುಗೆಯಾಗುತ್ತದೆ; ಬರೀ ಆಧ್ಯಾತ್ಮಿಕವಾಗಿದ್ದರೆ ದೆವ್ವಭೂತವಾಗುತ್ತದೆ. ಇಲ್ಲಿ ಬದುಕಿದಾಗ ಕಂಡ ಸ್ನೇಹ, ಪ್ರೀತಿ, ನಿಷ್ಠೆ ಧ್ಯಾನ, ನೇಮ- ಇವುಗಳು ನಮ್ಮ ಬರವಣಿಗೆಗೆ ಬರದಿದ್ದರೆ ಅದು ಕೊಳಕುತನ. ಧ್ಯಾನ ಮತ್ತು ಭಕ್ತಿ ಎಂದು ಕೆಟ್ಟುಹೋದವು?

ನಾವು ಯಾವುದೇ ಜಾತಿಯಲ್ಲಿ ಹುಟ್ಟಿದ್ದಕ್ಕೆ ಸಾಮಾಜಿಕವಾಗಿ **adjustment** ಮಾಡಿಕೊಳ್ಳಬಹುದು; ಅದಕ್ಕಾಗಿ ಪರಿತಪಿಸಬೇಕಾದ್ದಿಲ್ಲ, ನನ್ನ ಚಿಂತನೆಯೆಲ್ಲ ನನ್ನದು.

ನವೆಂಬರ್ 8, 1995

ಯಾತ್ರಾಯುಗ!

ಇದು ಯಾತ್ರೆಗಳ ಕಾಲ.

ಶ್ರೀರಾಮುಲು ಅವರ ಸ್ವಾಭಿಮಾನಕ್ಕೆ ಧಕ್ಕೆಯಾಗಿತ್ತು. ಯಾಕೆ ಆಯಿತು ಅಂದರೆ ಅಕ್ರಮ ಗಣಿಗಾರಿಕೆ ಕುರಿತ ಲೋಕಾಯುಕ್ತ ವರದಿಯಲ್ಲಿ ಅವರ ಹೆಸರು ಇದೆಯಲ್ಲ ಅದಕ್ಕೆ. ಅಲ್ಲಿ ಹೆಸರು ಬರುವಂತಹ ಕೆಲಸ ಯಾಕೆ ಮಾಡಬೇಕಿತ್ತು? ಆಗ ಸ್ವಾಭಿಮಾನ ಎಲ್ಲಿ ಹೋಗಿತ್ತು? ಇವೆಲ್ಲವಕ್ಕೆ ಉತ್ತರ ತಿಳಿದುಬಂದಿಲ್ಲ. ಆದರೂ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ ಎಂದು ಮಾನ್ಯರು ಹೇಳಿರುವುದಂತೂ ಸತ್ಯ.

ಸ್ವಾಭಿಮಾನ ಕಳೆದುಕೊಂಡ ಮನುಷ್ಯ ಮನುಷ್ಯನೇ ಅಲ್ಲ. ಅವರ ಸ್ವಾಭಿಮಾನ ಶಾಸಕಗಿರಿಯೊಂದಿಗೆ ತಳುಕು ಹಾಕಿಕೊಂಡಿದೆ ಎನ್ನುವ ಅನುಮಾನ ಒಂದಿರಬೇಕು. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಅದನ್ನು ಬೇರ್ಪಡಿಸಿ ಸ್ವಾಭಿಮಾನಿಯಾದರು!

ಸ್ಪೀಕರ್ ಕೆ.ಜಿ.ಬೋಪಯ್ಯಗೆ ಇದು ಅರ್ಥವಾಗಿಲ್ಲ ಎಂದು ತೋರುತ್ತೆ. ಸಮಯ ಸಂದರ್ಭ ನೋಡಿ ರಾಜೀನಾಮೆ ಪತ್ರ ಅಂಗೀಕರಿಸಬೇಕು ಅನ್ನುವ ಪಾಠ ಕಲಿತವರು ಇರಬೇಕು. ಪತ್ರವನ್ನು ಸ್ವೀಕರಿಸಿದರು. ಜಾರಿಗೆ ತರಲಿಲ್ಲ!

ಸ್ವಾಭಿಮಾನ ಕಳೆದುಕೊಂಡ ಶ್ರೀರಾಮುಲು ಅದನ್ನು ಪುನರ್‌ಪ್ರತಿಷ್ಠಾಪಿಸಿಕೊಳ್ಳಲು 'ಸ್ವಾಭಿಮಾನ ಯಾತ್ರೆ' ಮಾಡಲು ನಿರ್ಧರಿಸಿದರು. ಅದನ್ನು ಕಾರ್ಯರೂಪಕ್ಕೆ ಇಳಿಸುತ್ತಿದ್ದರು. ಅವರ ಮಾತು ಅಂದರೆ ತ್ರೇತಾಯುಗದ ಶ್ರೀರಾಮನ ಮಾತಿನಂತೆಯೇ. ಆದರೇನು ಮಾಡಲಾಗುತ್ತದೆ. ಯಾತ್ರೆಗೆ ಸಿದ್ಧತೆ ಮಾಡಿಕೊಳ್ಳುವಷ್ಟರಲ್ಲಿ ಅವರ ಆತ್ಮೀಯ ಗೆಳೆಯ ಜನಾರ್ದನ ರೆಡ್ಡಿಯನ್ನು ಸಿಬಿಐನವರು ಎಳೆದುಕೊಂಡು ಹೋದರು! ಶ್ರೀರಾಮುಲು ಸ್ವಾಭಿಮಾನ ಅಲ್ಲಿಯೇ ಇಂಗಿಹೋಯಿತು. ಇತ್ತೀಚೆಗೆ ಸನ್ಮಾನ್ಯರು ಯಾತ್ರೆಯ ಸುದ್ದಿಯನ್ನೇ ಎತ್ತಿದಂತಿಲ್ಲ.

ಯಾತ್ರೆ ಅಂದರೆ ಲಾಲ್‌ಕೃಷ್ಣ ಅಡ್ವಾಣಿ, ಅಡ್ವಾಣಿ ಅಂದರೆ ಯಾತ್ರೆ. ಹಿಂದೆ ರಥಯಾತ್ರೆ ಮಾಡಿದ್ದರು. ಒಂದಷ್ಟು ಸಾಬರು ಸತ್ತರು. ಆ ಧರ್ಮ ಈ ಧರ್ಮ ಅಂತ ಬಡಿದಾಡಿಕೊಂಡರು. ಕೊಂಡರು ಏನು ಬಂತು. ಬಡಿದಾಡಿಕೊಳ್ತಾನೂ ಇದ್ದಾರೆ. ಆದರೂ ಈ ಯಾತ್ರೆ ಭಾಜಪ ದೆಹಲಿ ಗದ್ದುಗೆ ಹಿಡಿಯಲು ಪೂರಕವಾಗಿ ಕೆಲಸಮಾಡಿತು ಅನ್ನುವುದಂತೂ ನಿಜ. ಈಗ 'ಭ್ರಷ್ಟಾಚಾರ ವಿರೋಧ ಯಾತ್ರೆ' ಮಾಡುತ್ತಾರಂತೆ. ಮಾಡಲಿ ಪಾಪ. ಹಾಳಾದ ಜನ ದೇಶಕ್ಕೆ ಒಳ್ಳೆಯದಾಗಲಿ ಅಂತ ಹೀಗೆ ಮಾಡುತ್ತಾ ಇದ್ದಾರೆ ಅನ್ನಬಾರದಾ, ತಲೆತಿರುಕ ಮುಂಡೇವು ಬಳ್ಳಾರಿಯಿಂದಲೇ ಯಾತ್ರೆ ಪ್ರಾರಂಭಿಸಲಿ ಅನ್ನುತಾವೆ; ಯಡ್ಯೂರಪ್ಪನೋರ್ನೆ ಸಾರಥಿ ಮಾಡಿಕೊಳ್ಳಲಿ ಅಂತ ವ್ಯಂಗ್ಯ ಚಿತ್ರ ಬರೆದು ಗೇಲಿಮಾಡ್ತಾ ಕುಂತವೆ. ಏನನ್ಯಾಯ ಅಂತೀನಿ. 'ಅಲ್ರಪಾ ಅಡ್ವಾಣಿಯವರು ಹಿರೀಕರು; ದೇಶ ನೆಟ್ಟಗಾಗಲಿ ಅಂತವ ಹಿಂಗೆಲ್ಲ ಮಾಡ್ತಾ ಅವ್ರೆ' ಅಂದರೆ, 'ಅವರ ಪಕ್ಷ ಅಧಿಕಾರದಲ್ಲಿರೋ ರಾಜ್ಯಗಳಲ್ಲಿನ ಭ್ರಷ್ಟಾಚಾರ ಕುರಿತು ಸೊಲ್ಲೇ ಎತ್ತುತ್ತಿಲ್ವ. ಇದು ಯಾವ ಸೀಮೆ ಭ್ರಷ್ಟಾಚಾರ ವಿರೋಧ ಮಾಡುವಿಕೆ' ಅಂತ ಮೂಗು ಮುರೀತವೆ. ಬೇರೆ ರಾಜ್ಯಗಳಲ್ಲಿನ ಭ್ರಷ್ಟಾಚಾರನಾದ್ರೂ ಎತ್ತಿ ಎತ್ತಿ ತೋರಿಸ್ತಿದಾರಲ್ಲ ಅದು ಸಾಲದಾ? ಅಲ್ಲೆಲ್ಲಾ ಭ್ರಷ್ಟಾಚಾರ ಅನ್ನೋದರ ಸಂಹಾರ ಆದ್ರೆ ಅವರ ಪಕ್ಷ ಅಧಿಕಾರದಲ್ಲಿರೋ ರಾಜ್ಯಗಳೂ ಅದನೋಡಿ ಕಲಿತುಕೊಳ್ತವೆ. ಆಮೇಲೆ ಎಲ್ಲಾ ಕಡೇನೂ ಸ್ವಚ್ಛ ಆಡಳಿತಾನೆ ಇರುತ್ತೆ. ಭ್ರಷ್ಟಾಚಾರ ಅನ್ನೋದೇ ಇರಲ್ಲ. ಅಲ್ಲೀವರ್ಗೂ ತಡ್ಕೊಳ್ಳಬೇಕಪ್ಪ. ಈಗ್ಲೇ ಹಿಂಗೆ ಮೂರು ತಿಂಗಳಿಗೆ ಹುಟ್ಟಿದೋರಂಗೆ ಆಡೋದು ತರವಲ್ಲ ಬಿಡಿ!

Sadhಭಾವನೆಯೋ? Sadಭಾವನೆಯೋ?

ಉಪವಾಸ ಎನ್ನುವುದು ಶ್ರೀಮಂತರಿಗೆ ಲಕ್ಷುರಿ; ಬಡವರಿಗೆ ಅನಿವಾರ್ಯತೆ. ಶ್ರೀಮಂತರ ಉಪವಾಸ ಸುದ್ದಿ ಆಗುತ್ತೆ; ಬಡವರ ಉಪವಾಸ ಕೇಳುವವರೇ ದಿಕ್ಕಿಲ್ಲ.

ಈಗ ಶ್ರೀಮಂತರ ಉಪವಾಸದ ಭರಾಟೆ.

ನರೇಂದ್ರ ಮೋದಿ ಉಪವಾಸ ಕುಳಿತಿದ್ದಾರೆ.

ಮೂರು ದಿವಸದ ಉಪವಾಸ ಅದು

ಫಾಸ್ಟ್‌ಫುಡ್ ತರಹಾನೆ ಇದು ಫಾಸ್ಟ್ ಫಾಸ್ಟ್!

'ಸದ್ಭಾವನಾ ಉಪವಾಸ' ಅಂತೆ ಇದು. ರಾಜ್ಯದಲ್ಲಿ ಶಾಂತಿ, ಕೋಮುಸಾಮರಸ್ಯ ಕಾಪಾಡಲು ಈ ಉಪವಾಸ ಅಂತೆ.

ಗುಜರಾತ್ ವಿಶ್ವವಿದ್ಯಾನಿಲಯದ ಸಭಾಭವನದಲ್ಲಿ ವಿಶೇಷವಾಗಿ ರೂಪಿಸಿರುವ ಹವಾನಿಯಂತ್ರಿತ ವೇದಿಕೆಯಲ್ಲಿ ಅವರ ಉಪವಾಸ.



ಅದಕ್ಕೆ ತಗುಲುವ ಖರ್ಚೆಷ್ಟು?

ಶಾಂತಿ, ಕೋಮುಸೌಹಾರ್ದದ ಮುಂದೆ ಇಂತಹವನ್ನೆಲ್ಲ ಲೆಕ್ಕಹಾಕಬಾರದು!

ಅವರ ವಿರೋಧಿಗಳು ಇದನ್ನ 'ಪಂಚ್‌ತಾರ ಉಪವಾಸ', 'ಸಪ್ತತಾರಾ ಉಪವಾಸ' ಎಂದೆಲ್ಲ ಗೇಲಿ ಮಾಡುತ್ತಾರೆ. ತನ್ನ ಕುಕೃತ್ಯಗಳಿಂದ ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ನಡೆಸಿರುವ 'ಗಿಮಿಕ್' ಎಂದೂ ಹೇಳುತ್ತಾರೆ.

ಮೋದಿಯ ಇಂತಹ ಅವತಾರಕ್ಕೆ ಅವಕಾಶ ನೀಡಬಾರದು ಎನ್ನುವುದು ಕಾಂಗ್ರೆಸ್ ನಾಯಕರ ಅಭಿಮತ.

ಇದಕ್ಕೇನು ಪರಿಹಾರ?

ಪ್ರತಿ ಉಪವಾಸ!

ಶಂಕರ್‌ಸಿಂಗ್ ವಘೇಲರಿಂದ ಸಬರಮತಿ ಆಶ್ರಮದ ಮುಂದೆ ಉಪವಾಸ!

ಈ ಸುದ್ದಿ ಬರುತ್ತಿದ್ದಂತೆ ಕನಲಿದರು ಭಾಜಪಾ ಪರ ವಕೀಲರು. ಗಾಂಧೀಜಿಯವರ ಆಶ್ರಮದಲ್ಲಿ ಇಂತಹವಕ್ಕೆ ಅವಕಾಶ ನೀಡಬಾರದು ಎಂಬ ದೂರು ನೀಡಿದರು ಆಶ್ರಮದವರಿಗೆ. ಇಂತಹ ಉಪವಾಸ ಪೂಜ್ಯ ಭಾಪೂಗೆ ಮಾಡಿದ ಅಪಮಾನವೇ ಸರಿ. ಹವಾನಿಯಂತ್ರಿತ ಭವನದಲ್ಲಿ ಉಪವಾಸ ಕೂರುವುದು ಆ ಮಹಾತ್ಮನಿಗೆ ಸಂದ ಗೌರವವೇ? ಬುದ್ಧಿವಂತ ವಕೀಲರು ಹಾಗೇ ಭಾವಿಸಿರಬಹುದು. ಇರಲಿ. ಆಶ್ರಮದವರು ಆಶ್ರಮದ ಮುಂದೆ ಉಪವಾಸ ಕುಳಿತರೆ ಅದನ್ನು ತಡೆಯುವ ಅಧಿಕಾರ ನಮಗಿಲ್ಲ ಅಂದರಂತೆ.

ಅಂತೂ ಎರಡೂ ಕಡೆ ಉಪವಾಸ ಕುಳಿತಿದ್ದಾರೆ.

ಉಪವಾಸ ಎಷ್ಟು ದಿವಸ?

ಮೋದಿ ಉಪವಾಸ ಮೂರು ದಿನ.

ವಘೇಲ ಉಪವಾಸ?

ಅವರಿಗಿಂತ ಮೂರುಗಂಟೆ ಹೆಚ್ಚಿರುತ್ತಂತೆ!

ಅಲ್ಲಾ ಒಂದು ವೇಳೆ ಮೋದಿ ಆಮರಣಾಂತ ಉಪವಾಸ ಕುಳಿತರೆ ಇವರೇನು ಮಾಡುತ್ತಾರೆ!

ಹಾಗೆ ಆಗುವುದಿಲ್ಲ ಎಂಬ ದೃಢವಿಶ್ವಾಸ ಇರಬೇಕು. ಮೋದಿಯದ್ದು ಭಾರೀ ಪ್ರಧಾನಿ ಹುದ್ದೆಗಾಗಿ ಉಪವಾಸ, ಇವರದು ಭಾವೀ ಮುಖ್ಯಮಂತ್ರಿಗಿರಿಗಾಗಿ ಉಪವಾಸ.

ಈಗ ಮೋದಿ ಕ್ಯಾಂಪ್, ವಘೇಲ ಕ್ಯಾಂಪ್ ಕಡೆ ದೃಷ್ಟಿ ಹರಿಸೋಣ...

ಅಲ್ಲಿ ಬಿಸಿಲಬೇಗೆಯಿಂದ ಬೆಂದವರಿಗೆ ತಂಪಾದ ನೆರಳು; ಭರ್ಜರಿ ಭೋಜನ. ಇಲ್ಲಿ ಅದಿಲ್ಲ, ಆದರೆ ತಿಂದಿ ಮಾರುವವರಿಗೆ ಭರ್ಜರಿ ವ್ಯಾಪಾರ!


ಈ ಉಪವಾಸ, ಭೋಜನ, ಮಾರಾಟಗಳ ನಡುವೆ 2002ರ ಸಂತ್ರಸ್ತರು ಏನಾದರು?

ಪ್ರತಿಭಟನೆಗೆ ಸಿದ್ಧರಾಗಿದ್ದ ಇವರನ್ನ ಪೊಲೀಸರು ಜೈಲಿಗೆ ತಳ್ಳಿದರು!

ಇದು Sadhಭಾವನೆಯೋ? Sadಭಾವನೆಯೋ?

ಗಂಡಾಂತರಕಾರಿ ಸಂವತ್ಸರ!

2011ನೇ ಇಸವಿಯೇ ಅಂತಹದ್ದಿರಬೇಕು. ರಾಜಕಾರಣಿಗಳಿಗೆ ಬಹಳ ಅಶುಭದಾಯಕ ಆಗಿದೆ. ಸ್ವಚ್ಛ ರಾಜಕಾರಣ ಮಾಡುತ್ತೇನೆ ಎಂದು ಮುಂದಾದರೆ ಮನೆ ಗುಡಿಸಿ ಗುಂಡಾಂತರ ಆಗುತ್ತದೆ. ಭ್ರಷ್ಟಾಚಾರಕ್ಕೆ ಕೈಒಡ್ಡಲೇಬೇಕು. ಹೀಗೆ ಮಾಡಿದರೆ ಅಪವಾದ ಬರುತ್ತದೆ. ಇದರಿಂದ ಅಂತಹ ಪ್ರಮಾದವೇನೂ ಆಗುವುದಿಲ್ಲ ನಿಜ. ಇದ್ದು ಭ್ರಷ್ಟನ ಮನೆ ಎಂದು ಯಾರೂ ಮನೆಗೆ ಬರುವುದನ್ನು, ತಿಂಡಿ-ಕಾಫಿ ಸೇವಿಸುವುದನ್ನು, ಭರ್ಜರಿ ಊಟ ಹೊಡೆಯುವುದನ್ನು ನಿಲ್ಲಿಸುವುದಿಲ್ಲ. ಬಹಿಷ್ಕಾರ ಏನೂ ಹಾಕುತ್ತಿರಲಿಲ್ಲ. ಮುಂದೆ ಜೀ ಹುಜೂರ್ ಅಂತಾನೆ ಹಲ್ಲು ಕಿರೀತಾರೆ. ಈ ವರ್ಷವೂ ಅಂತಹ ವರ್ತನೆಗಳಲ್ಲಿ ಬದಲಾವಣೆ ಆಗಿಲ್ಲ ಅನ್ನುವುದು ನಿಜ. ಆದರೂ ಕೆಲವರು ಯಾವ್ಯಾವುದೋ ದಾಖಲೆ ಪುರಾವೆಗಳ ಸಹಿತ ಜೈಲಿಗೆ ಕಳುಹಿಸುವ ಸಂಚು ಮಾಡುತ್ತಾ ಇದ್ದಾರೆ. ಆಗಲೇ ಸ್ವಲ್ಪ ಜನ ಜೈಲು ಆತಿಥ್ಯಾನೂ ಪಡೆಯುವಂತೆ ಮಾಡಿದ್ದಾರೆ. ಇನ್ನು ಕೆಲವರು ಇವರ ಕಾಟದಿಂದ ಸರದಿಯಲ್ಲಿ ನಿಲ್ಲುವಂತಾ ಗಿದೆ. ತಮ್ಮ ಕರಾಳ ಭವಿಷ್ಯ ನೆನೆದೇ ಪಾಪ ಅವರೆಲ್ಲ ಕಂಗಾಲಾಗಿದ್ದಾರೆ. ಜೈಲಿನಿಂದ ಹೊರಗಿದ್ದರೆ ಸಾಕು ಎಂದು ಮಾಡಬಾರದ ದೇವರಿಗೆಲ್ಲ ಮಾಡ್ತಾ ಕುಳಿತಿದ್ದಾರೆ; ಕೇಳಬಾರದ ಜ್ಯೋತಿಷಿಗಳ ಕಾಲು ಹಿಡಿಯುತ್ತಾ ಇದ್ದಾರೆ. ಅವರೆಲ್ಲ ಅಭಯಹಸ್ತ ನೀಡಿದ್ದರೂ ಕಾನೂನಿನ ಬಿಗಿ ಕೊರಳಿನ ಸುತ್ತ ಹೆಚ್ಚುತ್ತಲೇ ಇದೆ. ಇದನ್ನು ಸಡಿಲ ಮಾಡ್ತೀವಿ ಭಯಬೀಳಬೇಡಿ ಎಂದು ಧೈರ್ಯವಂಥ ಕಾನೂನು ಪಂಡಿತರು ಭರವಸೆ ನೀಡಿದರೂ ಭಯವಂತೂ ನೀಗಿಲ್ಲ. ಹಾಗಂತ ವಕೀಲರನ್ನು ಸಂಶಯಿಸುವಂತಿಲ್ಲ. ಅವರೂ ಶ್ರಮವಹಿಸುತ್ತಿದ್ದಾರೆ. ಇಂತಹ ಮೊಕದ್ದಮೆಗಳಲ್ಲಿ ಗೆದ್ದರೆ ತಮ್ಮ ನಿಪುಣತೆಗೂ ಒಂದು ಮೆರಗು ಅನ್ನೋದನ್ನು ಅವರು ತಿಳಿದಿದ್ದಾರೆ. ಇಂತಹ ಕೇಸುಗಳು ತಾನೆ ಅವರ ಭಾಗ್ಯದ ಬಾಗಿಲು ತೆರೆಯೋದು!



ಎಚ್.ಎಲ್. ಕೇಶವಮೂರ್ತಿ

ಅಣಕ

ಕಕ್ಷಿದಾರರಿಗೆ ಆಗಬಹುದಾದ ಶಿಕ್ಷೆಗಿಂತ ಅದ ಭಯವೇ ಹೆಚ್ಚು ಕಾಡುತ್ತಿದೆ. ಹೇಗಾದರೂ ಇದರಿಂ ಪಾರಾದರೆ ಸಾಕು ಎಂದು ಪೂರ್ಣ ಸಹಕಾರ ನೀಡುತ್ತಿದ್ ಜ್ವರ, ಹೃದಯಬೇನೆ ಇಂತಹವಕ್ಕೆಲ್ಲ ನ್ಯಾಯಾಲಯ ಸೊ ಹಾಕುವ ಕಾಲ ಇದಲ್ಲ. ಈಗ ಏನಿದ್ದರೂ ಹೊಸ ಹೊ ರೋಗಗಳನ್ನು ಸೃಷ್ಟಿಸಬೇಕಾಗಿದೆ. ಕಾನೂನು ಪಂಡಿತ ಇವುಗಳ ಜವಾಬ್ದಾರಿ ಹೊತ್ತಿರುತ್ತಾರೆ. ಅವರು ಯಾ ಕಾಯಿಲೆ ಸೂಚಿಸುತ್ತಾರೋ ಅದನ್ನು ಕಕ್ಷಿದಾರ ಆವಾಹಿ ಕೊಳ್ಳುತ್ತಾನೆ.

ಓಬಳಾಪುರಂ ಗಣಿ ಎಂ.ಡಿ. ಶ್ರೀನಿವಾಸ ರೆಡ್ಡಿಯ ನಿದರ್ಶನವನ್ನೇ ನೋಡಬಹುದು. ಅವರಿಗೆ ಇದ್ದಕ್ಕಿದ್ದ 'ಮರೆಗುಳಿ' ರೋಗ ಬಡಿದಿದೆ! ಸಿಬಿಐ ಅಧಿಕಾರಿಗ 'ಬ್ಯಾಂಕ್ ಲಾಕರ್ ಕೀ ಎಲ್ಲಿಟ್ಟಿದ್ದಿಯೋ ಮಾರಾಯ' ಅ ಗೋಗರೆದರೂ 'ಎಲ್ಲಿಟ್ಟಿದ್ದೇನೋ ಗೊತ್ತಿಲ್ಲ, ಮರೆ ಹೋಗಿದೆ' ಅಂದಿದ್ದಾನೆ. ಹೀಗೆ ಹೇಳಿದ ಎಂದೇನ ಲಾಕರ್ ತೆಗೆಯದೆ ಇರಲಿಲ್ಲ. ತಜ್ಞರನ್ನು ಕರೆಸಿ ತೆಗೆಸಿದ ನಿಜ. ಆದರೂ ಮರೆಗುಳಿ ರೋಗ ಬಂದಿದೆ ಎನ್ನುವುದ ಪ್ರಾಯೋಗಿಕವಾಗಿ ತೋರಿಸಿದ್ದೂ ನಿಜ ತಾನೆ! ಇನ್ನುಮುಂ ಅವರ ಕೇಳಿದ ಪ್ರಶ್ನೆಗಳಿಗೆಲ್ಲ 'ಗೊತ್ತಿಲ್ಲ', 'ಮರೆತುಹೋಗಿ ಎಂದೇ ಉತ್ತರಿಸಬಹುದು!

ನ್ಯಾಯಾಲಯ ಎಂದು ಒಂದು ಇರುವುದಲ್ಲಾ. ತಾ ಕೇಳಿದ ಮುಜುಗರ ತರುವ ಪ್ರಶ್ನೆಗಳಿಗೆಲ್ಲ ಮರೆತುಹೋಗಿ ಎನ್ನುವ ಉತ್ತರವನ್ನೇ ನೀಡುತ್ತಾನೆ ಎಂದು ತನಿಖಾಧಿಕಾರಿಗ ಅದರ ಗಮನಕ್ಕೆ ತರಬೇಕು. ಆಗ ಅದು ಅವನ ಮನಶಾಸ್ತ್ರಜ್ಞರ ವಶಕ್ಕೆ ಒಪ್ಪಿಸುತ್ತೆ. ಅವರು ಕೂಲಂಕಷವಾ ತನಿಖೆ ಮಾಡುತ್ತಾರೆ. ಆ ನಂತರ ಹೀಗೂ ಆಗಬಹುದ ಹಾಳಾದ ಹಣ ಅನ್ನೋದು ಭಾರೀ ಕೆಟ್ಟದಲ ಶ್ರೀನಿವಾಸರೆಡ್ಡಿ ರೋಗವೇ ಅವರಿಗೂ ತಾತ್ಕಾಲಿಕವಾ ಬಡಿಯಬಹುದು. ಕಲಿತ ವಿದ್ಯೆ ಎಲ್ಲವೂ ಮರೆತುಹೋ ಬಹುದು. ಇವನಿಗೆ ಮರೆಗುಳಿ ರೋಗ ಇದೆ ಎಂ ದೃಢೀಕರಿಸಬಹುದು. ಆ ಒಂದು ಹಾಳೆ ಸಾಕು ನು ವಕೀಲರಿಗೆ. ನಮ್ಮ ಕಕ್ಷಿದಾರ ಇಂತಹ ರೋಗದಿ ಬಳಲ್ತಿದ್ದಾನೆ. ಅವನನ್ನು ಮಾನಸಿಕ ಆಸ್ಪತ್ರೆಗೆ ದಾಖ ಮಾಡಬೇಕು ಎಂದು ಭರ್ಜರಿಯಾಗಿ ಮೇಜುಕುಟ್ಟಿ ವಾ ಮಂಡಿಸುತ್ತಾರೆ. ನ್ಯಾಯಪೀಠ ಹಾಗೇ ಮಾಡಬೇಕಾಗಿ ಬರು ನಂತರ ಇದ್ದೇ ಇದೆ. ಜೈಲು ಸೆಲ್ಲಿನಿಂದ ಆಸ್ಪತ್ರೆ ಐಷಾರಾಮಿ ಕೊಠಡಿಗೆ ಕೈದಿ ವರ್ಗಾವಣೆ!

ಎಲ್ಲ ವೈದ್ಯರು ಹೀಗೆ ಇರುವುದಿಲ್ಲ ಅನ್ನುವುದ ನಿಜವೆ. ಆದರೆ ಕೆಲವರು ಹೀಗೆ ಮಾಡಿದರೂ ಆಶ್ಚರ್ಯವಿ ಇತ್ತೀಚೆಗೆ ಕೋರ್ಟಿಗೆ ಹಾಜರಾಗಬೇಕಾದ, ಜೈಲಿನ ಒ ಇರುವ ಪ್ರತಿಷ್ಠಿತ ಎನ್ನಿಸಿಕೊಂಡವರಿಗೆ ಇದ್ದಕ್ಕಿದ್ದಂತೆ ಎಂತೆ ಹದ್ದೋ ರೋಗ ವಕ್ಕರಿಸುತ್ತಿದೆಯಲ್ಲ ಹೀಗೆ ಬಂದಿರುವು ಸತ್ಯ ಅಂತ ದೃಢೀಕರಣ ಮಾಡುತ್ತಾರಲ್ಲ ವೈದ್ಯರು ಅಂತಹವರ ಬಳಿ ಇರುವ ಹಣದ ತನಿಖೆ ಮಾಡಿ ದೃಢೀಕರಣ ಪತ್ರ ನೀಡುವ ಮುನ್ನ ಮತ್ತು ನಂತರ ಎಷ್ಟ ಅಂತ... ಒಳ್ಳೆಯದಾಗಬಹುದಾ....!

ಹೆಣ್ಣು ಎಂದರೆ ಮನಸ್ಸಿಗೆ ಬಂದಂತೆ ಹೊಡೆಯುವ ವಸ್ತುವೇ?

ಹೊಡೆಸಿ, ಬಡಿಸಿಕೊಳ್ಳುವುದು ಸಾಕಾಗಿ ಕೊನೆಗೆ ಮಾರಣಾಂತಿಕವಾಗಿ ಗಾಯಗೊಂಡು ಆಸ್ಪತ್ರೆ ಸೇರಿ, ತನ್ನ ಗಂಡನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟರೆ, ನೀನು ಮಾಡಿದ್ದು ತಪ್ಪು ಎಂದು ಆಕೆಯಿಂದಲೇ ಸುಳ್ಳು ಹೇಳಿಸುವ ಮಟ್ಟಕ್ಕೆ ದೊಡ್ಡತನ ಪ್ರದರ್ಶಿಸಿರುವ ಮಹಾನ್ ಸಿನಿಮಾ ನಟರು, ನಿರ್ಮಾಪಕರಿಗೆ ಏನೆಂದು ಕರೆಯಬೇಕೋ ತಿಳಿಯುತ್ತಿಲ್ಲ. ಒಂದು ವೇಳೆ ಆಕೆ ತಮ್ಮ ಮಗಳು, ತಂಗಿ ಆಗಿದ್ದರೆ ಹಾಗೆ ಬೆದರಿಸುತ್ತಿದ್ದರೇ? ನೂರಾರು ಸಿನಿಮಾಗಳಲ್ಲಿ ನಟಿಸಿ ಖ್ಯಾತಿ ಪಡೆದಿರುವವರೂ ಸಹ ಹೆಂಡತಿಯನ್ನು ಗಂಡ ಹೊಡೆಯುವುದು, ಮಗ ತಾಯಿಯನ್ನು ಹೊಡೆಯುವುದು ಸಹಜ ಎಂದು ಹೇಳಿದ್ದಾರೆ. ಸ್ವಲ್ಪ ಗಮನಿಸಿ: ಅವರು ಮಗ ಅಪ್ಪನಿಗೆ ಹೊಡೆಯುವುದು ಸಾಮಾನ್ಯ ಅಂಥ ಹೇಳಲಿಲ್ಲ, ಹೇಳಲೂ ಹಿಂದೇಟು ಹಾಕಿರುವ ಅವರು ಇನ್ನು ಹೊಡೆಸಿಕೊಳ್ಳುತ್ತಾರೆಯೇ? ಹಾಗಾದರೆ ಹೆಣ್ಣು ಅಂದರೆ ಹೊಡೆಸಿ, ಬಡಿಸಿಕೊಳ್ಳಲು ಮನೆಗೆ ತರುವ ವಸ್ತುವೇ? ಇವರ ನಿಲುವನ್ನು ನೋಡಿದರೆ ಇವರು ತಮ್ಮ ಹೆಂಡತಿಯರಿಗೆ ಮನೆಯಲ್ಲಿ ಹೊಡೆಯುತ್ತಾರೆಂದಾಯಿತು. ಪಾಪ, ತಮ್ಮ ಗಂಡಂದಿರ ಮರ್ಯಾದೆ ಹೋಗುತ್ತೆ ಎಂದು ಹೇಳುವುದಿಲ್ಲವೋ ಏನೋ ಆ ಹೆಣ್ಣುಮಕ್ಕಳು.


ಇನ್ನೂ ಕೆಲವರು ದರ್ಶನ್ ಅವರ ವೃತ್ತಿಜೀವನ ಹಾಳಾಗಬಾರದು ಎಂದು ಏನೆಲ್ಲಾ ಸಬೂಬು ಹೇಳಿ ಆತನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಿರುವುದು ನೋಡಿದರೆ ಆಚ್ಚರಿಯಾಗುತ್ತದೆ. ಆತನ ವೃತ್ತಿಜೀವನ ಹಾಳಾಗಬಾರದು ಎಂದು ಆತನ ಹೆಂಡತಿ ಬಾಸುಂಡೆ ಬರುವ ಹಾಗೆ ದಿನವೂ ಹೊಡೆಸಿಕೊಂಡು, ಸಿಗರೇಟಿನಿಂದ ಮೈಸುಡಿಸಿಕೊಳ್ಳಬೇಕೇ?

ಹಲವು ದಿನಗಳ ಹಿಂದೆಯೇ ತಮ್ಮ ಪತ್ರಿಕೆಯಲ್ಲಿ ದರ್ಶನಾವತಾರದ ಬಗ್ಗೆ ಓದಿದ್ದೆ. ಅದಕ್ಕಿಂತಲೂ ಮುಂಚೆ ಅಯಪ್ಪ ತನ್ನ ಅವ್ವನಿಗೂ ಹಿಂಸೆ ನೀಡಿದ್ದು ತಿಳಿದುಬಂದಿತ್ತು. ಹಣದ ಮದ ತಲೆಗೇರಿ, ಅನೈತಿಕತೆಗೆ ಮನಸ್ಸು ವಾಲಿದರೆ ಏನೆಲ್ಲಾ ಅವಾಂತರ ಸೃಷ್ಟಿಯಾಗುತ್ತದೆ ಎನ್ನುವುದಕ್ಕೆ ದರ್ಶನ್ ಉತ್ತಮ ಉದಾಹರಣೆಯಾಗಿದ್ದಾನೆ.

ಪ್ರೀತಿಸಿ ಮದುವೆಯಾದ ಹೆಂಡತಿಯ ಕಿವಿ ಹರಿದು, ಆಕೆಯನ್ನು ಚಪ್ಪಲಿಯಲ್ಲಿ ಹೊಡೆದದ್ದು ದರ್ಶನ್ ನಿಜಜೀವನದಲ್ಲಿ ಓರ್ವ ಖಳನಾಯಕ ಎನ್ನುವುದನ್ನು ಪಕ್ಕಾಗೊಳಿಸಿದೆ. ಮಹಿಳೆಯರಿಗೆ ಚಾಲೇಂಜ್ ಆಗಿರುವ ಇಂತವರ ಸಂತತಿ ಕ್ಷೀಣಿಸಬೇಕಿದೆ. ಕಂಡಹಾಗೆಯಲ್ಲಿ ಹಲವು ವಿಚಾರಗಳನ್ನು ಎತ್ತಿರುವ ಗೌರಿ ಮೇಡಂರವರಿಗೆ ಧನ್ಯವಾದಗಳು.

– ಬಸವರಾಜ ಪಾಟೀಲ್ ಹಳ್ಳಿ ಹಸಮಕಲ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಕಳೆದ ಎಂಟು ವರ್ಷಗಳಲ್ಲಿ ಕರ್ನಾಟಕದ ಸಂಪತ್ತನ್ನು ಕೊಳ್ಳೆ ಹೊಡೆದ ರಾಜಕೀಯವಾಗಿ ಅಟ್ಟಹಾಸದಿಂದ ಮೆರೆದ, ಅಕ್ಷರಶಃ ದಬ್ಬಾಳಿಕೆ, ಬ್ಲಾಕ್ ಮೇಲ್ ತಂತ್ರಗಾರಿಕೆಯ ಮೂಲಕ ರಾಜ್ಯದ ಬಿಜೆಪಿ ಹೊಣೆಗೇಡಿ ನಾಯಕರನ್ನು ಹಾಗೂ ಸರ್ಕಾರವನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸಿದ ಗಣಿಚೋರ ರೆಡ್ಡಿಗಳು ಈಗ ಸಿಕ್ಕಿಬಿದ್ದಿದ್ದಾರೆ. ಈ ನೆಲದ ಕಾನೂನು ಈಗ ತನ್ನೆಲ್ಲ ನ್ಯಾಯವಂತಿಕೆಯನ್ನು ಬಳಸಿ ಇವರನ್ನು ಶಿಕ್ಷಿಸಲಿ ಎಂದು ಆಶಿಸೋಣ.

ಆದರೆ ಗಣಿಚೋರ ರೆಡ್ಡಿಗಳ ಅಕ್ರಮಗಳ ಫಲಾನು ಭವಿಗಳ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಇವರಲ್ಲಿ ರಾಜಕಾರಣಿಗಳ ಪೈಕಿ ರಾಜ್ಯದ ಹಾಗೂ ಕೇಂದ್ರದ ಬಿಜೆಪಿಯ ಪ್ರಮುಖ ನಾಯಕರ ಬಗ್ಗೆ ಸೂಕ್ಷ್ಮ ತನಿಖೆಯಾಗಬೇಕಲ್ಲವೇ? ಸದಾನಂದ ಗೌಡರು ಬಿಜೆಪಿಯ ರಾಜ್ಯಾಧ್ಯಕ್ಷರಾಗಿದ್ದ ಕಾಲದಲ್ಲೇ ಈ ರೆಡ್ಡಿಗಳು ತಮ್ಮ ಲೂಟಿಯನ್ನು ನಡೆಸಿದ್ದರು ಹಾಗು ಆಪರೇಷನ್ ಕ'ಮಲ' ಎನ್ನುವ ಅನಿಷ್ಟ ಪ್ರಜಾಪ್ರಭುತ್ವ ವಿರೋಧಿ ಕಾರ್ಯತಂತ್ರದ ಮೂಲಕ ಈ ರಾಜ್ಯದ ಹಾಗೂ ಈ ರಾಜ್ಯದ ವಿರೋಧ ಪಕ್ಷಗಳ ನೈತಿಕತೆಯನ್ನೇ ಹಾಳುಮಾಡಿದ್ದು ಈ ಅಕ್ರಮ ಗಣಿ ಸಂಪತ್ತಿನ ಮೂಲಕ. ಆಗ ಇದಕ್ಕೆ ಬೆಂಬಲ ಸೂಚಿಸಿದ ಸದಾನಂದ ಗೌಡರು ಈಗ ಮುಖ್ಯಮಂತ್ರಿ. ಇವರೂ ಕೂಡ ಇದಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಜವಾಬ್ದಾರರಲ್ಲವೇ??

ಎಸ್.ಪಿ.ಬಿ. ಮಗ ಸೋನಾಳನ್ನು ರೇಪ್ ಮಾಡಿದ್ನಾ?

ಎಸ್.ಪಿ. ಬಾಲಸುಬ್ರಹ್ಮಣ್ಯಮ್‌ರಂತಹ ಸಜ್ಜನ, ಮೇರು ಪ್ರತಿಭಾವಂತನ ಮಗ ಚರಣ್ ಸಿನಿಮಾ ನಟಿಯೊಬ್ಬಳ ರೇಪ್ ಕೇಸಿನಲ್ಲಿ ಸಿಲುಕಿಕೊಂಡಿದ್ದಾನೆ.

ಸತತ ನಾಲ್ಕು ದಶಕಗಳಿಂದ ಭಾರತ ಚಿತ್ರರಂಗದಲ್ಲಿ ಬ್ಯುಸೀ ಗಾಯಕರಾಗಿ, ಪೋಷಕ ಕಲಾವಿದರಾಗಿ ಗುರುತಿಸಿಕೊಂಡಿರುವ ಎಸ್ಪಿ ಯಾವತ್ತಿಗೂ ವಿವಾದ, ಅಪವಾದಗಳಿಗೆ ಆಹಾರವಾದವರಲ್ಲ. ತಾವಾಯಿತು ತಮ್ಮ ಕಲಾಸೇವೆಯಾಯಿತು ಎಂದು ಬದುಕುತ್ತಾ ಬಂದಿರುವವರು. ಇಂತಹ ಎಸ್ಪಿ ಮಗ ಯಾರೋ ಚಿಲ್ಲರೆ ನಟಿಯೊಬ್ಬಳ ಮಾನಭಂಗಕ್ಕೆ ಪ್ರಯತ್ನಿಸಿದ್ದಾನೆ ಎಂದರೆ ನಂಬುವುದಾದರೂ ಹೇಗೆ?


ಹಾಗೆ ನೋಡಿದರೆ ಎಸ್ಪಿ ಚರಣ್ ಕೂಡಾ ಈವರೆಗೂ ಯಾವ ತರಲೆಗಳಿಗೂ ತಗುಲಿಕೊಂಡಿರಲಿಲ್ಲ. ಆದರೆ ಸೋನಾ ಎಂಬ ಚಿತ್ರನಟಿ ಚರಣ್ ತನ್ನನ್ನು ರೇಪ್ ಮಾಡಲು ಯತ್ನಿಸಿದರು ಎಂದು ಆರೋಪಿಸಿದ್ದಾಳೆ. ಮಾತ್ರವಲ್ಲ ಚೆನ್ನೈನ ಪಾಂಡಿ ಬಜಾರ್ ಪೊಲೀಸರಿಗೆ ದೂರು ನೀಡಿ ಪತ್ರಿಕಾಗೋಷ್ಠಿಯನ್ನೂ ನಡೆಸಿ ಚರಣ್‌ನನ್ನು ಬೀದಿಗೆಳೆದಿದ್ದಾಳೆ.

ಯಾರೀ ಸೋನಾ?

ದಕ್ಷಿಣ ಭಾರತದ ಬಹುತೇಕ ಭಾಷೆಗಳ ಚಿತ್ರಗಳಲ್ಲಿ ಮಾದಕವಾಗಿ ಕಾಣಿಸಿಕೊಳ್ಳುವ ಈ ಐಟಂ ನಟಿ ಮೊದಮೊದಲು ತಮಿಳು ಮತ್ತು ಮಲಯಾಳಂ ಚಿತ್ರಗಳಲ್ಲಿ ನಟಿಸಿದ್ದಳು. ಈಕೆಯ ತಂದೆ ಫ್ರೆಂಚ್ ಮತ್ತು ತಾಯಿ ಶ್ರೀಲಂಕಾದವರು. ಕನ್ನಡದಲ್ಲಿ ವಿಷ್ಣುವರ್ಧನ್ ನಟಿಸಿದ್ದ, ನಾಗಾಭರಣ ನಿರ್ದೇಶಿಸಿದ್ದ 'ನಂ ಯಜಮಾನ್ರು' ಚಿತ್ರದಲ್ಲೂ ಸೋನಾ ನಟಿಸಿದ್ದಳು. ರಜನಿಕಾಂತ್ ಅವರ 'ಕುಚೇಲನ್' ಚಿತ್ರದಲ್ಲೂ ಸೋನಾ ಕಾಣಿಸಿಕೊಂಡಿದ್ದಳು. ಕೇರಳದ ಶಕೀಲಾ ಎಂಬ ಸೆಕ್ಸ್ ಬಾಂಬ್‌ಗೆ ಪ್ರತಿಸ್ಪರ್ಧೆ ಒಡ್ಡಿ ಆಕೆಯ ಮಾರ್ಕೆಟ್‌ಅನ್ನು ಕಬಳಿಸಿದ ಸೋನಾ ಮಾಡಿರುವುದೆಲ್ಲಾ ತಗಡು ಪಾತ್ರಗಳೇ. ಆದರೆ ಈಕೆಯನ್ನು ಹಾಕಿಕೊಂಡರೆ ಪೋಲಿ, ಪುಂಡರು ಮುಗಿಬೀಳುತ್ತಾರೆ ಅನ್ನೋ ಕಾರಣಕ್ಕೆ ಸೋನಾಳಿಗೆ ಸಿಕ್ಕಾಪಟ್ಟೆ ಅವಕಾಶಗಳು ಸಿಕ್ಕುತ್ತಲೇ ಇರುತ್ತವೆ.


ನಟಿ ಸೋನಾ

ಇನ್ನು ಎಸ್ಪಿ ಚರಣ್ ಬಹಳ ಹಿಂದೆಯೇ ಕನ್ನಡದಲ್ಲಿ 'ಎಡಬಿಡಂಗಿ' ಎಂಬ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದ. ಆದರೆ ಆ ಚಿತ್ರ ರಿಲೀಸೇ ಆಗಲಿಲ್ಲ. ನಂತರ ರಾಧಿಕಾಳ ಜೊತೆ 'ಹುಡುಗಿಗಾಗಿ' ಚಿತ್ರದಲ್ಲೂ ನಟಿಸಿದ. ನಂತರ ತಮಿಳಿನಲ್ಲೂ 'ನಾಲೋ', 'ಸರೋಜಾ', 'ದ್ರೋಹಿ' ಮುಂತಾದ ಚಿತ್ರಗಳಲ್ಲಿ ನಟಿಸಿದ. ತಮಿಳಿನ ಕೆಲವು ಸೀರಿಯಲ್ಲುಗಳಲ್ಲೂ ಕಾಣಿಸಿಕೊಂಡ. ಆದರೆ ಚರಣ್‌ಗೆ ನಟನೆ ಅಷ್ಟಾಗಿ ಒಗ್ಗಲಿಲ್ಲ. ಹೀಗಾಗಿ ಸಿನಿಮಾ ನಿರ್ಮಾಣಕ್ಕಿಳಿದ ಚರಣ್ 'ಮಾಗಿ', 'ಚೆನ್ನೈ 600028', 'ಕುಂಗುಮ ಪೂವುಂ', 'ನಾಣ್ಯಂ', ಮತ್ತು ಕನ್ನಡದವರೇ ಆದ ಸಂಪತ್ ರಾಜ್ ನಟನೆಯ 'ಅರಣ್ಯ ಕಾಂಡಂ' ಚಿತ್ರಗಳನ್ನು ನಿರ್ಮಿಸಿದ್ದಾನೆ. ಈತನಿಗೆ ಮದುವೆಯಾಗಿ ಅವಳಿ ಮಕ್ಕಳೂ ಇವೆ.



ಚರಣ್

ನಡೆದದ್ದೇನು?

ಸದ್ಯ ನಿರ್ಮಾಪಕನಾಗಿ ಬ್ಯುಸೀ ಆಗಿರುವ ಚರಣ್‌ಗೆ ಈ ಸೋನಾ ಅನ್ನೋ ಜಲಕ್‌ಬುಲಕ್ ನಟಿ ಯಾಕೆ ತಗುಲಿಕೊಂಡಳೋ ಗೊತ್ತಿಲ್ಲ.

ಅರ್ಜುನ್ ಸರ್ಜಾ ಮತ್ತು ಅಜಿತ್ ನಟಿಸಿರುವ 'ಮಂಗಾತ' ಚಿತ್ರದ ಯಶಸ್ಸಿಗಾಗಿ ನಟ ವೈಭವ್ ರೆಡ್ಡಿ ಮನೆಯಲ್ಲಿ ಪಾರ್ಟಿ ಇತ್ತಂತೆ. ಈ ಸಂದರ್ಭದಲ್ಲಿ ಚರಣ್ ತನ್ನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಅನ್ನೋದು ಸೋನಾಳ ಆರೋಪ.

"ನಟ ವೈಭವ್ ರೆಡ್ಡಿಯವರ ಟಿ-ನಗರದಲ್ಲಿನ ಮನೆಯಲ್ಲಿ ನಡೆದ ಪಾರ್ಟಿಗೆ ನಾನು ಹೋಗಿದ್ದೆ. ಈ ಸಂದರ್ಭದಲ್ಲಿ ವಿಪರೀತ ಮದ್ಯ ಸೇವಿಸಿದ್ದ ಚರಣ್ ಅಸಭ್ಯವಾಗಿ ವರ್ತಿಸಿದ. ಚರಣ್ ಅವರಿಗೆ ಜೊತೆಯಲ್ಲಿದ್ದ ವೆಂಕಟ್ ಪ್ರಭು ಕೂಡ ಸಹಕಾರ ನೀಡಿದರು. ಅವರಿಬ್ಬರೂ ಸೇರಿಕೊಂಡು ನನ್ನನ್ನು ಕೆಡಿಸಲು ಯತ್ನಿಸಿದರು. 'ಚಿತ್ರಗಳಲ್ಲಿ ಬಟ್ಟೆ ಬಿಚ್ಚೇರಾ, ಈಗ ನಿಜವಾಗಿ ಬಿಚ್ಚಲು ಹಿಂದೇಟು ಏಕೆ?' ಅಂತ ಚರಣ್ ಅಸಹ್ಯವಾಗಿ ಮಾತನಾಡಲು ಪ್ರಾರಂಭಿಸಿದ. 'ನನ್ನ ಜೊತೆ ಮಲಗಲು ಸಿದ್ಧವಿದ್ದರೆ ಎಷ್ಟೇ ದುಡ್ಡು ಕೊಡಲೂ ಸಿದ್ಧ' ಎಂದೆಲ್ಲ ಅರಚಲು ಪ್ರಾರಂಭಿಸಿದ ಚರಣ್ ನನ್ನನ್ನು ಅನುಭವಿಸಲು ಮುಂದಾದ. ಅವರಿಂದ ಹೇಗೋ ತಪ್ಪಿಸಿಕೊಂಡು ಬಂದಿದ್ದೇನೆ. ನಾನೊಬ್ಬಳು ನಟಿಯಾಗಿರಬಹುದು. ಅದು ನನ್ನ ವೃತ್ತಿ, ಹಾಗೆಂದು ನನಗೆ ಘನತೆ-ಗೌರವ ಇಲ್ಲವೆಂದು ಅವರು ಭಾವಿಸಿದಂತಿದೆ. ಈ ಹಿಂದೆಯೂ ಚರಣ್ ಇದೇ ರೀತಿ ನನಗೆ ಲೈಂಗಿಕ ಕಿರುಕುಳ ನೀಡಿದ್ದರು. ಆದರೂ ಸುಮ್ಮನಿದ್ದೆ. ಈಗ ರೋಸಿ ಹೋಗಿರುವ ನಾನು ಪೊಲೀಸರಿಗೆ ದೂರು ನೀಡಿದ್ದೇನೆ. ಇಂತಹ ಪ್ರಸಂಗ ಮರು ಕಳಿಸಬಾರದು ಅನ್ನೋದು ನನ್ನ ಉದ್ದೇಶ. ಈ ವಿಚಾರವಾಗಿ ಚರಣ್ ಹತ್ತು ದಿನಗಳೊಳಗೆ ಕ್ಷಮೆ ಯಾಚಿಸದೇ ಇದ್ದರೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಮಾಧ್ಯಮಗಳಿಗೆ ಸ್ಟೇಟ್‌ಮೆಂಟು ನೀಡಿದ್ದಾಳೆ ಸೋನಾ.



ಸೋನಾ ಆರೋಪಿಸಿರುವ ಮತ್ತೊಬ್ಬ ವ್ಯಕ್ತಿ ವೆಂಕಟ್ ಪ್ರಭು ಕೂಡಾ ಬೇರೆ ಯಾರೂ ಅಲ್ಲ. ಸಂಗೀತ ದಿಗ್ಗಜ ಇಳಯರಾಜಾ ಅವರ ಸಹೋದರ ಗಂಗೈ ಅಮರನ್ ಅವರ ಹಿರಿಯ ಪುತ್ರ. ಈತ ಕೂಡಾ ಹಿನ್ನೆಲೆ ಗಾಯಕ. ಇತ್ತೀಚೆಗೆ ನಿರ್ದೇಶನವನ್ನೂ ಆರಂಭಿಸಿರುವ ವೆಂಕಟ್‌ಪ್ರಭು 'ಮಂಗಾತ' ದಂತಹ ಯಶಸ್ವಿ ಸಿನಿಮಾಗಳನ್ನು ನೀಡಿರುವ ಯುವಕ.

ಹೀಗಿರುವಾಗ ಐಟಂ ನಟಿಯೊಬ್ಬಳು ಇಬ್ಬರು ಪ್ರತಿಭಾವಂತರ ಕುಡಿಗಳ ವಿರುದ್ಧ ಯರ್ರಾಬಿರ್ರಿ ಆರೋಪ ಹೊರಿಸಿದ್ದಾಳೆ. ಈ ಹಿಂದೆ ಸೋನಾ ಹಲವಾರು ನಟರೊಂದಿಗೆ ಅಫೇರು ಹೊಂದಿದ್ದಳು ಎನ್ನುವ ಮಾತೂ ಇದೆ. ಕುಡಿದ ಅಮಲಿನಲ್ಲಿ ಆಕೆ ಒಮ್ಮೆ ಅಮಾಯಕನ ಮೇಲೆ ಕಾರು ಚಲಾಯಿಸಿದ ವಿಚಾರ ದೊಡ್ಡ ರಾದ್ಧಾಂತವಾಗಿತ್ತು, ಚಿತ್ರೀಕರಣ ಸಮಯದಲ್ಲಿ ಹಗಲಲ್ಲೇ ಈಕೆ ಭರ್ತಿ ಕುಡಿದುಬರುತ್ತಾಳೆ ಅನ್ನೋ ಕಾರಣಕ್ಕೆ ತಮಿಳು ಕಲಾವಿದರ ಸಂಘ ಈಕೆಗೆ ಒಮ್ಮೆ ಛೀಮಾರಿ ಹಾಕಿತ್ತು. ಇಂಥ ಸೋನಾ ಈಗ ಪಬ್ಲಿಕ್ಕಾಗಿ ಇಬ್ಬರು ಯುವಕರ ಮೇಲೆ ಗೂಬೆ ಕೂರಿಸುತ್ತಿರುವುದು ತಮಿಳು ಚಿತ್ರರಂಗದವರಿಗೆ ಕಿರಿಕಿರಿ ಉಂಟುಮಾಡಿದೆ.


ವೆಂಕಟ್‌ಪ್ರಭು

• ಅರುಣ್

ಪತ್ರಿಕೆಗಳು ಯು.ವಿ.ಸಿಂಗ್ ವರದಿ ಆಧರಿಸಿ ಅಲ್ಲಿ ಪ್ರಸ್ತಾವಿಸಲ್ಪಟ್ಟ ಅಧಿಕಾರಿಗಳ ಬಗ್ಗೆ, ಅವರ ಮೇಲೆ ಕ್ರಮ ಜರಗಿಸುವ ಸಾಧ್ಯತೆಗಳ ಬಗ್ಗೆ ಬರೆಯುತ್ತಿವೆ. ನಿಜಕ್ಕೂ ಸಂತೋಷ. ಆದರೆ ಯು.ವಿ.ಸಿಂಗ್ ಸಲ್ಲಿಸಿರುವ ವರದಿಯಲ್ಲಿ ಬಂದಿರುವ 'ಜಿ.ಜೆ.ಆರ್ ಸರ್'ರ ಫಲಾನುಭವಿಗಳ ಪಟ್ಟಿಯಲ್ಲಿ ಕೆಲವು ಪತ್ರಕರ್ತರ ಹೆಸರುಗಳು (ಕೋಡ್ ರೂಪದಲ್ಲಿ) ಇರುವುದು ಬಹಿರಂಗಗೊಂಡಿದೆ. ಆದರೂ ಈ ಆಪಾದಿತ ಪತ್ರಕರ್ತರ ಬಗ್ಗೆ ಬರೆಯಲಿಕ್ಕೆ ಯಾಕೆ ಉತ್ಸಾಹ ಪತ್ರಿಕೆಗಳು ಯಾಕೆ ತೋರುತ್ತಿಲ್ಲ? ಈ ಪತ್ರಕರ್ತರ ರೆಡ್ಡಿಗಳೊಂದಿಗಿನ ಬಹಿರಂಗ ಸ್ನೇಹ, ಚೆಲ್ಲಾಟ ನಮ್ಮ ಪತ್ರಿಕೆಗಳಿಗೆ ಅನೈತಿಕತೆ, ಭ್ರಷ್ಟಾಚಾರ ಅನ್ನಿಸುತ್ತಿಲ್ಲ? ಏಕೆ ಈ ಅಸಹಾಯಕತೆ, ಭಯ?

- ಬಿ.ಶ್ರೀಪಾದ್ ಭಟ್, ಬೆಂಗಳೂರು

ಕಳೆದ ವಾರ ಗೌರಿ ಲಂಕೇಶರು ಬರೆದ 'ದರ್ಶನ್ ಸಂತತಿ ಮಹಿಳೆಯರ ಬದುಕಿನ ಬಹುದೊಡ್ಡ ಚಾಲೆಂಜ್' ಲೇಖನ ತುಂಬಾ ಚೆನ್ನಾಗಿತ್ತು.

- ಮನೋಹರ ಮಲಿಪಾಟೀಲ್, ಈ ಮೇಲ್ ಮುಖಾಂತರ

ಕನ್ನಡ ಸಾಹಿತ್ಯ ಉಳಿದ ಭಾಷೆಗಳಿಗಿಂತ ಅತ್ಯುತ್ತಮವಾದದ್ದನ್ನು ನೀಡುತ್ತಲೇ ಬಂದಿದೆ. ಪ್ರತಿ ಬಾರಿ ಜ್ಞಾನಪೀಠ ಪ್ರಶಸ್ತಿ ಘೋಷಣೆಯಾಗುವಾಗಲೂ ಎಲ್ಲಿ ಎಸ್.ಎಲ್.ಭೈರಪ್ಪ ಅದಕ್ಕೆ ಭಾಜನರಾಗುತ್ತಾರೋ ಎಂಬ ಆತಂಕ ಕಾಡುತ್ತದೆ. ಈಗ ಆ ಪ್ರಶಸ್ತಿ ಚಂದ್ರಶೇಖರ ಕಂಬಾರರಿಗೆ ದಕ್ಕಿರುವುದರಿಂದ ಕೆಲವು ಅಭಿಮಾನಿ ನಾವೆಲ್ಲ ನಿರಾಳರಾಗಿರಬಹುದು.

- ರಂಗಸ್ವಾಮಿ, ಮೈಸೂರು

ದರ್ಶನ್‌ನ ಮುಂದಿನ ಸಿನಿಮಾದ ಹೆಸರು: '90 ಕುಡಿ ಹೆಂಡ್ರಿಗೆ ಹೊಡಿ'

ಅದರಲ್ಲಿ ದರ್ಶನನೇ ನಾಯಕ ನಟ, ನಿಖಿತಾಳೇ ನಾಯಕಿ.
ಚಿತ್ರಕತೆ: ಅಂಬರೀಶ್
ನಿರ್ದೇಶನ: ಜಗ್ಗೇಶ್
ಫೈಟ್ ದೃಶ್ಯಗಳ ನಿರ್ದೇಶನ: ದುನಿಯಾ ವಿಜಯ್
ನಿರ್ಮಾಪಕ: ರಾಕ್ ಲೈನ್ ವೆಂಕಟೇಶ್

- ಇಸ್ಮತ್ ಫರೀಜ್, ಮಂಗಳೂರು



ಗೌರಿ ಲಂಕೇಶರ ಸಂಪಾದಕೀಯ 'ದರ್ಶನ್ ಸಂತತಿ ಮಹಿಳೆಯರ ಬದುಕಿನ ಬಹುದೊಡ್ಡ ಚಾಲೆಂಜ್' ಚೆನ್ನಾಗಿದೆ. ಡಾ.ಸೋಮನಾಥ್ ಅವರ ವರದಿ ಓದಿದ ಮೇಲೆ ಇನ್ನು ಯಾವತ್ತೂ ದರ್ಶನ್ ಹೀರೋ ಆಗಿ ನಟಿಸದ ಹಾಗೆ ಅವನ ಮುಖಕ್ಕೆ ಸಿಗರೇಟ್ ಇಟ್ಟು ಸುಡಬೇಕೆನ್ನಿಸಿತು. ಅಷ್ಟಕ್ಕಾದರೂ ನಾನು ಸಿಗರೇಟ್ ಸೇದೋದಕ್ಕೆ ಶುರುಮಾಡಬೇಕು.

- ಶಶಿಧರ್ ಹೆಮ್ಮಾಡಿ

ಅಧಿಕಾರಕ್ಕಾಗಿ ಪುಂಡ ಪೋಕರಿಗಳ ಪಡೆಯನ್ನು ಕಟ್ಟಿಕೊಂಡು ದತ್ತಪೀಠ, ಗೋಹತ್ಯೆ, ಮತಾಂತರ ಮುಂತಾದ ವಿಷಯಗಳನ್ನು ಇಟ್ಟುಕೊಂಡು ಧರ್ಮ ಧರ್ಮಗಳ ಮಧ್ಯೆ ಗಲಭೆ ಎಬ್ಬಿಸಿ ಚುನಾವಣೆಯಲ್ಲಿ ಗೆದ್ದದ್ದು ಶೃಂಗೇರಿಯ ಶಾಸಕ ಜೀವರಾಜ್. ಆದರೆ ಅಧಿಕಾರ ಸಿಕ್ಕಿದ ನಂತರ ತನ್ನ ಬೆಂಬಲಕ್ಕೆ ನಿಂತಿದ್ದ ಕಾರ್ಯಕರ್ತರನ್ನೆ ಕಡೆಗಣಿಸಿದವರು ಜೀವರಾಜ್. ಈಗ ಆತ ಮತ್ತೊಂದು ಅವಧಿಗೆ ಶಾಸಕನಾಗಬೇಕೆಂದುಕೊಂಡು ಭಜರಂಗ ದಳಕ್ಕೆ ಜೀವ ತುಂಬಿಸಿ ಬಡ ದಲಿತರ ಮೇಲೆ ಮತ್ತು ಮುಸ್ಲಿಮರ ಮೇಲೆ ದಾಳಿ ಮಾಡಿಸಿಕೊಂಡು ಚಿಕ್ಕಮಗಳೂರು ಜಿಲ್ಲಾದ್ಯಂತ ಗಲಭೆಗಳನ್ನು ಮಾಡಿಸಲಾರಂಭಿಸಿದ್ದಾರೆ. ಹಾಗೆ ಮಾಡುವ ಮೂಲಕ ಅಧಿಕಾರಕ್ಕೆ ಬರುವ ಕೆಟ್ಟ ಪ್ರಯತ್ನದಲ್ಲಿ ಜೀವರಾಜ್ ಇರುವುದನ್ನು ಪ್ರಕಟಿಸಿ ಜೀವರಾಜ್‌ರ ಕುತಂತ್ರವನ್ನು ಬಯಲಿಗೆಳೆದ ಪತ್ರಿಕೆಗೆ ಅಭಿನಂದನೆಗಳು.

ಕೊಪ್ಪದಲ್ಲಿ ಭಜರಂಗಿಗಳು ಕೈಗೆ ಸಿಕ್ಕ ಬಡ ದಲಿತರ ಮತ್ತು ಮುಸ್ಲಿಮರ ಮೇಲೆ "ಗೋಮಾಂಸ ತಿನ್ನುತ್ತಿದ್ದರು", "ಗೋ ಮಾಂಸ ಮಾರುತ್ತಿದ್ದರು" ಎಂದು ಆರೋಪಗಳನ್ನು ಹೊರಿಸಿ ನಿರಂತರ ದಾಳಿ ನಡೆಸುತ್ತಿವೆ. ಹೀಗೆ ಅಮಾಯಕರ ಮೇಲೆ ದಾಳಿ ಮಾಡಿದ ನಂತರ ಅವರನ್ನೇ ಪೊಲೀಸರಿಗೆ ಭಜರಂಗಿಗಳು ಒಪ್ಪಿಸುವ ಸಂದರ್ಭದಲ್ಲಿ ಪೊಲೀಸರು ಸರಿಯಾಗಿ ವಿಚಾರಣೆ ಮಾಡದೆ ಅಮಾಯಕರ ಮೇಲೆಯೇ ಕೇಸ್ ದಾಖಲಿಸುತ್ತಿರುವುದನ್ನು ನೋಡಿದರೆ ಈ ಭಜರಂಗಿಗಳ ಬೆಂಬಲಕ್ಕೆ ಇಡೀ ಪೊಲೀಸ್ ಇಲಾಖೆಯೇ ನಿಂತಿರುವಂತೆ ಕಾಣುತ್ತದೆ.

ಸಮಯಸಾಧಕ ರಾಜಕಾರಣಿಗಳ ಬೆಂಬಲ ಪಡೆದುಕೊಂಡು ಅಟ್ಟಹಾಸದಿಂದ ಮೆರೆಯುತ್ತ ಅಮಾಯಕರ ಮೇಲೆ ದಾಳಿ ಮಾಡುತ್ತಿರುವ ಭಜರಂಗಿಗಳೆ ಎಚ್ಚರ! ನೀವು ನಿಮ್ಮ ದಾಂಧಲೆಗಳನ್ನು ನಿಲ್ಲಿಸದಿದ್ದರೆ ನಿಮ್ಮಿಂದ ಅನ್ಯಾಯಕ್ಕೊಳಗಾದ ಜನರೇ ನಿಮ್ಮನ್ನು ರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಹೊಡೆಯುವ ದಿನ ದೂರವಿಲ್ಲ, ಆಗ ನಿಮ್ಮ ಬೆಂಬಲಕ್ಕೆ ಯಾವ ರಾಜಕಾರಣಿಯೂ ಇರುವುದಿಲ್ಲ ಎಂಬ ಸತ್ಯವನ್ನು ಭಜರಂಗಿಗಳು ಅರ್ಥಮಾಡಿಕೊಳ್ಳದಿದ್ದರೆ ಅವರಿಗೆ ಉಳಿಗಾಲವಿಲ್ಲ.

- ಅಲ್ತಾಫ್, ಬೆಳಗುಳ

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 5-10-2011 RNI No. KARKAN2005/1



ಕಳ್ಳ ಮಳ್ಳ ಸುಳ್ಳ ಕಮಾಲ್!

'ಕಳ್ಳ ಮಳ್ಳ ಸುಳ್ಳ' ಎಂಬ ಚಿತ್ರ ಬಾಕ್ಸ್ ಆಫೀಸಿನಲ್ಲಿ ಆರಂಭದಲ್ಲಿ ಕುಂಟಿದ್ದರೂ ಈಗ ಸಾಕಷ್ಟು ಚೇತರಿಸಿಕೊಂಡು ತುಂಬಿದ ಪ್ರದರ್ಶನವನ್ನು ಕಾಣುತ್ತಿದೆ. ಇತ್ತೀಚೆಗೆ ಸೋಲಿನ ಸರಮಾಲೆಯನ್ನೇ ಕಾಣುತ್ತಿದ್ದ ನಿರ್ಮಾಪಕ ಮಂಜುಗೆ ಈ ಚಿತ್ರದ ಯಶಸ್ಸು ಸ್ವಲ್ಪಮಟ್ಟಿಗೆ ನಗು ತರಿಸಬಹುದು.

ಇದು ಹಿಂದಿಯ 'ನೋ ಎಂಟ್ರಿ' ಚಿತ್ರದ ರೀಮೇಕ್. ಹಿಂದಿ ಚಿತ್ರ ನೋಡಿದವರಿಗೆ ಈ ಚಿತ್ರ ಅಷ್ಟೊಂದು ಮಜಾ ನೀಡಲಾರದು. ಆದರೆ ಹಿಂದಿಯನ್ನು ನೋಡದ ಪ್ರೇಕ್ಷಕರಿಗೆ ಈ ಚಿತ್ರ ಹಾಸ್ಯದ ಕಚಗುಳಿಯನ್ನು ಇಡುತ್ತದೆ. ರಮೇಶ್ ಅರವಿಂದ್ ಅನೇಕ ವರ್ಷಗಳ ನಂತರ ಅತ್ಯಂತ ಲವಲವಿಕೆಯಿಂದ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರ ಭಾವಾಭಿನಯವೇ ಈ ಚಿತ್ರದ ಹೈಲೈಟ್ ಎನ್ನಬಹುದು. ಕ್ರೇಜಿ ಸ್ಟಾರ್ ರವಿಚಂದ್ರನ್ ಅತಿಥಿ ನಟರಾಗಿ ಕಾಣಿಸಿಕೊಂಡಿದ್ದರೂ ತನ್ನ ಹಳೆಯ ದಿನಗಳನ್ನು ನೆನಪಿಸುವ ರೀತಿಯಲ್ಲಿ ನಟಿಸಿದ್ದಾರೆ. ಆಶ್ಚರ್ಯವೆಂದರೆ ಇವರಿಬ್ಬರ ನಡುವೆ ವಿಜಯರಾಘವೇಂದ್ರ ಕೂಡ ತನ್ನ ಪಾತ್ರಕ್ಕೆ ಜೀವ ತುಂಬಿರುವುದು. ಇಡೀ ಚಿತ್ರದಲ್ಲಿ ಗ್ಲಾಮರಸ್ ಆಗಿ ಕಾಣುವ ರಾಗಿಣಿ ಪಡ್ಡೆ ಹುಡುಗರ ಹೊಸ ಡಾರ್ಲಿಂಗ್ ಆಗಿ ಹೊರಹೊಮ್ಮಬಹುದು.

ಎಷ್ಟೋ ವರ್ಷಗಳ ನಂತರ ಕನ್ನಡದಲ್ಲಿ ಕಾಸು ಕೊಟ್ಟ ಪ್ರೇಕ್ಷಕರಿಗೆ ಮೋಸವಾಗದಂತೆ ಈ ಚಿತ್ರ ರಂಜಿಸುತ್ತಿದೆ. ಅಷ್ಟೇ ಅಲ್ಲ, ಆಯಾಸವಾಗಿ ಬಳಲಿದಂತಿದ್ದ ರಮೇಶ್ ಅರವಿಂದ್, ರವಿಚಂದ್ರನ್ ಮತ್ತು ವಿಜಯ ರಾಘವೇಂದ್ರರಿಗೆ ಇದು ಹೊಸ ಚೈತನ್ಯ ಮತ್ತು ಹುರುಪನ್ನು ತಂದುಕೊಟ್ಟಿದೆ.



ರತ್ನನ ಜೊತೆ ಪುನೀತ?

ಪುನೀತ್ ರಾಜ್‌ಕುಮಾರ್ ಖ್ಯಾತ ಛಾಯಾಗ್ರಾಹಕ ರತ್ನವೇಲು ಅವರ ನಿರ್ದೇಶನದಲ್ಲಿ ನಟಿಸಲು ಒಪ್ಪಿದ್ದಾರೆಂಬ ಸುದ್ದಿ ಕೇಳಿಬರುತ್ತಿದೆ. ಇದು ನಿಜವೇ ಆದಲ್ಲಿ ದಕ್ಷಿಣ ಭಾರತದ ಶ್ರೇಷ್ಠ ಛಾಯಾಗ್ರಾಹಕ ಎಂಬ ಹೆಗ್ಗಳಿಕೆಯ ರತ್ನವೇಲು ಈಗಾಗಲೇ ಹಲವು ಕನ್ನಡ ಚಿತ್ರಗಳಲ್ಲಿ ... ಗ್ರಾಹಕರಾಗಿದ್ದರೂ ಈಗ ನಿರ್ದೇಶಕರಾಗಿ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡ...

ಇದಕ್ಕಿಂತ ಮುಖ್ಯವಾಗಿ ಪುನೀತ್‌ಗೆ ಶ್ರೇಷ್ಠ ತಂತ್ರಜ್ಞರನ್ನು ಕಂಡರೆ ಎಲ್ಲಿಲ್ಲದ ... ಬಹುಶಃ ಈ ಕಾರಣಕ್ಕಾಗಿಯೇ ಇರಬೇಕು, ಅವರು ದಿನೇಶ್‌ಬಾಬು ನಿರ್ದೇಶನದ ... ವೃತ್ತಿಜೀವನದ ಎರಡನೇ ಚಿತ್ರ 'ಅಭಿ'ಯಲ್ಲಿ ನಟಿಸಿದ್ದರು. ಅದಾದನಂತರ ಬಹುತೇ... ಎಲ್ಲಾ ಚಿತ್ರಗಳಲ್ಲಿ ಅತ್ಯುತ್ತಮ ಛಾಯಾಗ್ರಾಹಕ ಇರಲೇಬೇಕೆಂದು ತನ್ನ ನಿರ್ಮಾ... ಜೊತೆ ಪುನೀತ್ ಹಠ ಹಿಡಿದಿದ್ದರು. ಅಷ್ಟೇ ಏಕೆ, ಅವರ ವಜ್ರೇಶ್ವರಿ ಸಂ... ನಿರ್ಮಿಸಿದ 'ಜಾಕಿ' ಚಿತ್ರಕ್ಕೂ ಛಾಯಾಗ್ರಾಹಕ ಸತ್ಯ ಹೆಗ್ಡೆ ಕೇಳಿದ ಬಹುತೇಕ ಸೌಲಭ್ಯಗಳನ್ನು ನೀಡಲೇಬೇಕು ಎಂದು ತನ್ನ ಸಹೋದರ ರಾಘವೇಂದ್ರರನ್ನು ಒ... ದ್ದರು. ಕೆಲವು ವರ್ಷಗಳ ಹಿಂದೆ ತಮ್ಮ ಸಂಸ್ಥೆಗಾಗಿ ಪುನೀತ್ ಅತ್ಯಂತ ... ವೆಚ್ಚದ ಕ್ಯಾಮರಾವನ್ನು ವಿದೇಶದಿಂದ ಖರೀದಿಸಿದರು. ಆಗ ಪುನೀತ್ ಆ ಕ್ಯಾ... ಜೊತೆ ನಿಂತುಕೊಂಡು ಹೆಮ್ಮೆಯಿಂದ ಬೇಕಾದಷ್ಟು ಫೋಟೋಗಳನ್ನು ತೆಗೆಸಿಕೊಂ... ಅಂದಹಾಗೆ, ರತ್ನವೇಲು ಕೆಲವು ವರ್ಷಗಳ ಹಿಂದೆ ರಮೇಶ್ ನಿರ್ದೇ... 'ಸಯನೈಡ್' ಚಿತ್ರಕ್ಕೆ ಕ್ಯಾಮರಾ ಕೆಲಸ ಮಾಡಿದಾಗ ಅವರನ್ನು ಕನ್ನಡದ ನಾಯಕಿ... ತಾರಾ ಮತ್ತು ಮಾಳವಿಕಾ ವಾರಗಟ್ಟಲೆ ಹೊಗಳಿದ್ದರು. ಅಂತಹ ರತ್ನ... ಆನಂತರ ಯೋಗರಾಜ್ ಭಟ್ಟರ 'ಗಾಳಿಪಟ' ಚಿತ್ರದಲ್ಲೂ, ಮೊನ್ನೆ ಗೋ... ಸ್ಟಾರ್ ಗಣೇಶ್ ನಿರ್ದೇಶಿಸಿದ 'ಕೂಲ್' ಚಿತ್ರದಲ್ಲೂ ತಮ್ಮ ಕ್ಯಾಮರಾ ಕೈಚ... ಪ್ರದರ್ಶಿಸಿದ್ದರು.

ಈ ಎಲ್ಲ ಕಾರಣಗಳಿಂದ ರತ್ನವೇಲು ನಿರ್ದೇಶನದಲ್ಲಿ ಪುನೀತ್ ನಟಿಸಲು ಒಪ್ಪಿಕೊ... ಯಾವುದೇ ಆಶ್ಚರ್ಯವಿಲ್ಲ. ಏಕೆಂದರೆ ಒಂದು ಒಳ್ಳೆಯ ಸಿನಿಮಾ ಆಗುವುದರಲ್ಲಿ ತಂತ್ರಜ್ಞರ ಕೊಡುಗೆ ಎಷ್ಟು ಎಂಬುದು ಪುನೀತ್‌ಗೆ ಚೆನ್ನಾಗಿ ಗೊತ್ತಿದೆ.



ಪರ್ಮನೆಂಟ್ ರಿಕಾಣಿ!

ಕಳೆದ ವರ್ಷ ನಟನೆಗೆ ರಾಜ್ಯ ಪ್ರಶಸ್ತಿಗಳನ್ನು ಪಡೆದ ರಾಧಿಕಾ ಪಂಡಿತ್ ಮತ್ತು ಲೂಸ್ ಮಾದಾ ಯಾನೆ ಯೋಗೀಶ್ ಮೊದಲ ಬಾರಿಗೆ ಒಂದು ಚಿತ್ರದಲ್ಲಿ ನಾಯಕ-ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ಹೆಸರು 'ಅಲೆಮಾರಿ'. ಇದರ ನಿರ್ಮಾಪಕರು 'ಮಂದಾಕಿನಿ' ಎಂಬ ಚಿತ್ರವನ್ನು ಮಾಡಿ ಕೈ ಸುಟ್ಟುಕೊಂಡ ಶ್ರೀನಿವಾಸ್. ಈ ಚಿತ್ರವನ್ನು ಸಂತು ಎಂಬ ಹೊಸ ನಿರ್ದೇಶಕನ ಕೈಗೆ ನೀಡಿದ್ದಾರೆ. 'ಮಂದಾಕಿನಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದಾಗ ಇದೇ ಶ್ರೀನಿವಾಸ್ ಒಂದು ಪತ್ರಿಕಾಗೋಷ್ಠಿ ಕರೆದು "ಇನ್ನು ಮುಂದೆ ನಾನು ಸಿನಿಮಾ ಕಡೆ ತಿರುಗಿಯೂ ನೋಡಲ್ಲ" ಎಂದಿದ್ದರು. ಅಷ್ಟೇ ಅಲ್ಲ, ಸಿನಿಮಾ ಪತ್ರಕರ್ತರಿಗೆ ವಿದಾಯದ ಪಾರ್ಟಿಯನ್ನೂ ನೀಡಿದ್ದರು.

ಆದರೀಗ ಅದೇ 'ಮಂದಾಕಿನಿ' ಶ್ರೀನಿವಾಸ್ ಗಾಂಧಿನಗರದಲ್ಲಿ ಅತ್ಯಂತ ಬಿಸಿಯಾಗಿರುವ ನಿರ್ಮಾಪಕರಾಗಿದ್ದಾರೆ. ಮೊನ್ನೆ ಮೊನ್ನೆಯಷ್ಟೇ ಬಿಡುಗಡೆಯಾದ ಶಿವರಾಜ್‌ಕುಮಾರ್ ನಟಿಸಿದ್ದ ನೂರನೇ ಚಿತ್ರ 'ಜೋಗಯ್ಯ'ದ ಬೆಂಗಳೂರು ಹಂಚಿಕೆಯನ್ನು ಇವರು ವಹಿಸಿಕೊಂಡಿದ್ದರು. ಆದರೆ ಆ ಚಿತ್ರ ಕೂಡ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ಮುಗ್ಗರಿಸಿ ದಾಗ ಈ ಮನುಷ್ಯ ಸಿನಿಮಾ ಪತ್ರಕರ್ತರನ್ನು ಕರೆದು ಮತ್ತೊಂದು ವಿದಾಯದ ಪಾರ್ಟಿ ನೀಡುತ್ತಾರೇನೋ ಎಂದು ಎಲ್ಲರೂ ಭಾವಿಸಿದ್ದರು. ಆದರೆ ಈ ಬಾರಿ 'ಮಂದಾಕಿನಿ' ಶ್ರೀನಿವಾಸ್ ಅಂತಹ ಗಿಮಿಕ್ ಮಾಡಲು ಹೋಗಲಿಲ್ಲ. ಅದಕ್ಕಿಂತ ಕುತೂಹಲಕಾರಿ ಅಂಶ ಯಾವುದೆಂದರೆ ಈಗಾಗಲೇ ಶ್ರೀನಿವಾಸ್ ಅತ್ಯಂತ ಗುಟ್ಟಾಗಿ ಬರಗೂರು ರಾಮಚಂದ್ರಪ್ಪ ನಿರ್ದೇಶನದಲ್ಲಿ 'ಕರಿಗೆ ಹಾರ' ಎಂಬ ಚಿತ್ರವನ್ನು ನಿರ್ಮಿಸಿದ್ದಾರಂತೆ. ಅಂದರೆ 'ಅಲೆಮಾರಿ' ಚಿತ್ರ ಅವರು ನಿರ್ಮಿಸುತ್ತಿರುವ ಮೂರನೆ ಚಿತ್ರ. ಇದು ಮಾತ್ರವಲ್ಲದೆ ಇನ್ನೂ ನಾಲ್ಕು ಹೊಸ ಚಿತ್ರಗಳ ನಿರ್ಮಾಣಕ್ಕೂ ಅವರು ಭರದ ಸಿದ್ಧತೆ ನಡೆಸುತ್ತಿದ್ದಾರಂತೆ.

ಇದೆಲ್ಲದರ ಅರ್ಥ, 'ಮಂದಾಕಿನಿ' ಶ್ರೀನಿವಾಸ್ ಇನ್ನು ಮುಂದೆ ಗಾಂಧಿನಗರದಲ್ಲೇ ಪರ್ಮನೆಂಟ್ ಆಗಿ ರಿಕಾಣಿ ಹೂಡಲಿದ್ದಾರೆ. ಗಾಂಧಿನಗರದಲ್ಲಿ ಒಳ್ಳೆಯ ನಿರ್ಮಾಪಕರು ಅಪರೂಪವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಂತಹ 'ಅಲೆಮಾರಿ'ಯನ್ನು ಸ್ವಾಗತಿಸೋಣ.

ಸಾರಥಿ ಸಾಥ್ ಇಲ್ಲ



ಸದ್ಯಕ್ಕೆ ಪತ್ನಿಪೀಡಕ ಎಂಬ ಹೊಸ ಬಿರುದು ಪಡೆದಿರುವ ದರ್ಶನ್ ಪರಪ್ಪನ ಅಗ್ರಹಾರ ಜೈಲಿನಲ್ಲಿ ಮುದ್ದೆ ಮುರಿಯುತ್ತಿರುವಾಗಲೇ ಆತ ನಟಿಸಿರುವ 'ಸಾರಥಿ' ಚಿತ್ರವನ್ನು ಬಿಡುಗಡೆ ಮಾಡಬೇಕೋ ಅಥವಾ ಆತನ ಬಿಡುಗಡೆಗಾಗಿ ಕಾಯಬೇಕೋ ಎಂಬ ಬಿಕ್ಕಟ್ಟಿನಲ್ಲಿ ಸಿಲುಕಿದ್ದಾರೆ ಆ ಚಿತ್ರದ ನಿರ್ಮಾಪಕ. ಗಾಂಧಿನಗರದ ಕೆಲವು ಪಂಡಿತರ ಪ್ರಕಾರ ದರ್ಶನ್ ಜೈಲಿನಲ್ಲಿರುವಾಗಲೇ ಚಿತ್ರವನ್ನು ಬಿಡುಗಡೆ ಮಾಡಿದರೆ ಅನುಕಂಪದ ಆಧಾರದ ಮೇಲೆ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಮಂದಿರಕ್ಕೆ ಲಗ್ಗೆ ಹಾಕಿ ಚಿತ್ರ ಹಿಟ್ ಆಗುತ್ತದೆ. ಆದರೆ ಕೆಲವು ಪಂಡಿತರ ಪ್ರಕಾರ ಆತ ಬಿಡುಗಡೆಯಾಗಿ ಮಾನಸಿಕವಾಗಿ ಒಂದಿಷ್ಟು ಸುಧಾರಿಸಿದ ನಂತರವೇ ಚಿತ್ರವನ್ನು ಬಿಡುಗಡೆ ಮಾಡಿದರೆ ಹಿಟ್ ಆಗುತ್ತದೆ. ಆದರೆ ವಿಷಯ ಏನು ಅಂದರೆ 'ಸಾರಥಿ' ಚಿತ್ರ ಚೆನ್ನಾಗಿ ಮೂಡಿಬಂದಿದ್ದು ಪ್ರೇಕ್ಷಕರು ಅದನ್ನು ಒಪ್ಪಿಕೊಂಡರೆ ದರ್ಶನ್ ಒಂದು ರೀತಿಯಲ್ಲಿ ತನ್ನ ಜೀವನದ ದೊಡ್ಡ ಅಗ್ನಿಪರೀಕ್ಷೆಯಲ್ಲಿ ಗೆದ್ದಂತೆ. ಆಕಸ್ಮಾತ್ ಆ ಚಿತ್ರ ಚೆನ್ನಾಗಿದ್ದರೂ ಆತನ ಇತ್ತೀಚಿನ ರಿಯಲ್ ಲೈಫ್ ದುರ್ನಡತೆಯನ್ನು ಮನಸ್ಸಿನಲ್ಲಿಟ್ಟು ಪ್ರೇಕ್ಷಕರು ಚಿತ್ರಕ್ಕೆ ಬಹಿಷ್ಕಾರ ಹಾಕಿದರೆ ದರ್ಶನ್‌ನ ವೃತ್ತಿಜೀವನ ಖತಂ ಎಂದೇ ಲೆಕ್ಕ.

ರಾಜಕೀಯ ವಲಯದಲ್ಲಿ ಅನುಕಂಪದ ಅಲೆ ಆಗಾಗ ರಾಜಕಾರಣಿಗಳಿಗೆ ಸಹಾಯಕವಾಗಿದೆ. ಆದರೆ ಸಿನಿಮಾ ರಂಗದಲ್ಲಿ ಅದು ಸಾಧ್ಯವೇ ಇಲ್ಲ. ಉದಾಹರಣೆಗೆ ಕಳೆದ ವರ್ಷ ವಿಷ್ಣುವರ್ಧನ್ ನಿಧನ ಹೊಂದಿದ ಕೂಡಲೇ ದಿನೇಶ್‌ಬಾಬು ನಿರ್ದೇಶನದ 'ಮಾಸ್ಟರ್' ಚಿತ್ರವನ್ನು ನಿರ್ಮಾಪಕ ಗಣೇಶ್ ತರಾತುರಿಯಲ್ಲಿ ಬಿಡುಗಡೆ ಮಾಡಿದರು. ವಿಷ್ಣು ನಿಧನದ ಬೆನ್ನಿಗೇ ಈ ಚಿತ್ರ ನೋಡಲು ಅಭಿಮಾನಿಗಳು ಲಗ್ಗೆ ಹಾಕುತ್ತಾರೆಂದು ಗಣೇಶ್ ಲೆಕ್ಕ ಹಾಕಿದ್ದರು. ಆದರೆ ಚಿತ್ರ ಒಂದೇ ವಾರಕ್ಕೆ ಥಿಯೇಟರ್‌ನಿಂದ ಎತ್ತಂಗಡಿಯಾಯಿತು. ಆದರೆ ಆನಂತರ ತೆರೆಕಂಡ ವಿಷ್ಣು ನಟಿಸಿದ್ದ 'ಆಪ್ತ ರಕ್ಷಕ' ರಜತಮಹೋತ್ಸವ ಆಚರಿಸಿತ್ತು.

ಈ ಹಿನ್ನೆಲೆಯಲ್ಲಿ 'ಸಾರಥಿ'ಯ ಪಯಣ ಯಾವಾಗ ಪ್ರಾರಂಭ ಎಂಬುದು ಒಗಟಾಗಿಯೇ ಇದೆ.



ಸನ್ಮಾನದ ಪರಿ

ಮೊನ್ನೆ ಸುಧೀರ್ ಅತ್ತಾವರ್ ನಿರ್ದೇಶನದ 'ಪರಿ' ಚಿತ್ರದ ... ಬಿಡುಗಡೆ ಸಮಾರಂಭ ನಡೆಯಿತು. ಈ ಸಮಾರಂಭದಲ್ಲಿ ಗುರು ಸಮಾ... ಹಿರಿಯ ನಿರ್ದೇಶಕ ಗೀತಪ್ರಿಯ ಮತ್ತು ಸಂಗೀತ ನಿರ್ದೇಶಕ ... ನಾಗೇಂದ್ರ ಜೋಡಿ ಖ್ಯಾತಿಯ ರಾಜನ್ ಅವರನ್ನು ಸನ್ಮಾನಿಸಲಾ... ಹಳಬರನ್ನು ಉದ್ಯಮದವರು ಸಂಪೂರ್ಣವಾಗಿ ಮರೆತಿರುವ ... ಸಂದರ್ಭದಲ್ಲಿ ಮೊದಲ ಬಾರಿಗೆ ಚಿತ್ರವೊಂದನ್ನು ಮಾಡುತ್ತಿರುವ ನಿ... ಸುಧೀರ್ ಅತ್ತಾವರ್ ಮತ್ತು ನಿರ್ಮಾಪಕ ತ್ರಿವಿಕ್ರಮ್ ಅವ... ಸಾಧಕರನ್ನು ಸನ್ಮಾನಿಸಿದ್ದು ಮನಸ್ಸಿಗೆ ಮುದ ನೀಡಿತು. ಹೀಗೆ ಹಳ... ಸಾಂಕೇತಿಕವಾಗಿ ಸನ್ಮಾನಿಸುವ ಮುಖಾಂತರ ನಿರ್ದೇಶಕ ಅ... ತುಂಬಾ ಜಾಣತನದಿಂದ ತನ್ನ ಚಿತ್ರದ ಹಾಡುಗಳು ಕೂಡ ಆ ... ಮಾಧುರ್ಯವನ್ನು ಹೊಂದಿದೆ ಎಂಬುದನ್ನು ತೋರಿಸಿದರು. 'ಪರಿ' ... ಹಾಡುಗಳ ತುಣುಕುಗಳನ್ನೂ ಈ ಸಂದರ್ಭದಲ್ಲಿ ಅವರು ತೋರಿ... ನಿಜಕ್ಕೂ ಸಂಗೀತ ನಿರ್ದೇಶಕ ವೀರ ಸಮರ್ಥ್ ಆ ಕಾಲದ ಹಾಡು... ನೆನಪಿಸುವ ರೀತಿಯಲ್ಲಿ ಹಾಡುಗಳನ್ನು ಸಂಯೋಜಿಸಿದ್ದಾರೆ.

ಈಗಿನ ಅಬ್ಬರದ ಸಂಗೀತವನ್ನು ಇಷ್ಟಪಡುವ ಯುವ... ಇಂತಹ ಹಳೆಯ ಮಾಧುರ್ಯವಿರುವ ಹಾಡುಗಳನ್ನು ಹೇಗೆ ಸ್ವೀಕ... ಎಂಬುದನ್ನು ನೋಡಬೇಕಾಗಿದೆ. ಅಂದಹಾಗೆ ಈ ... ಯುವಜನಾಂಗ ಇಷ್ಟಪಟ್ಟು ಕುಣಿದು ಕುಪ್ಪಳಿಸುವ ಉಷಾ ... ಅವರ ಹಾಡೂ ಇದೆ. 'ಪರಿ' ಚಿತ್ರದ ನಿರ್ಮಾಪಕರು ಹೊ... ನಿರ್ದೇಶಕರ ಪಾಲಿಗೂ ಇದು ಚೊಚ್ಚಲ ಅನುಭವ. ಅ... ತಾರಾ ಮೌಲ್ಯವಿಲ್ಲದ ರಾಕೇಶ್, ಸ್ಮಿತಾ ಮತ್ತು ಹರ್ಷಿತ ... ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹ... ತುಂಬಿ ತುಳುಕುತ್ತಿರುವ ಈ ಚಿತ್ರವನ್ನು ಪ್ರೇಕ್ಷಕ ಯಾ... ಸ್ವಾಗತಿಸುತ್ತಾನೆ? ಎಂಬುದನ್ನು ನೋಡಬೇಕು.

ಸತ್ಯಾನಂದನಿಗೆ ನಿತ್ಯಾನಂದನ ಕಾಟ!



ಮದನ್ ಪಟೇಲ್ ಎಂಬ ಅರೆ ರಾಜಕಾರಣಿ ಮತ್ತು ಅರೆ ಸಿನಿಮಾ ನಿರ್ದೇಶಕ ಭಾರೀ ಸುದ್ದಿ ಮಾಡಿ ಆರಂಭಿಸಿದ್ದ 'ಸತ್ಯಾನಂದ' ಎಂಬ ಚಿತ್ರ ಈಗ ನೆನೆಗುದಿಗೆ ಬಿದ್ದಿದೆ. ವಿಶ್ವ ಹಿಂದೂ ಪರಿಷತ್ ಈ ಚಿತ್ರವನ್ನು ಬಿಡುಗಡೆ ಮಾಡಬಾರದೆಂದು ಈಗಾಗಲೇ ಒಂದು ಕಡೆ ಪ್ರಚಾರ ಆರಂಭಿಸಿದರೆ ಮತ್ತೊಂದು ಕಡೆ ಕೋರ್ಟ್ ಈ ಚಿತ್ರದ ಬಿಡುಗಡೆಗೆ ತಡೆಯಾಜ್ಞೆ ನೀಡಿದೆ. ವಿಹಿಂಪ ತನ್ನ ಚಿತ್ರಕ್ಕೆ ಖ್ಯಾತೆ ತೆಗೆದದ್ದನ್ನು ನೋಡಿ ಮದನ್ ಪಟೇಲ್ ಅವಾಕ್ಕಾಗಿದ್ದರು. ಯಾಕೆಂದರೆ ಅವರೀಗ ಆಡಳಿತ ಪಕ್ಷವಾದ ಬಿಜೆಪಿಯಲ್ಲಿ ಸಕ್ರಿಯ ಕಾರ್ಯಕರ್ತ. ಆದ್ದರಿಂದ ವಿಹಿಂಪ ನಾಯಕರನ್ನು ಹೇಗಾದರೂ ಮಾಡಿ ಓಲೈಸಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು, ಆದರೆ ಕೋರ್ಟ್ ಕೂಡ ತನ್ನ ಚಿತ್ರಕ್ಕ ಅಡ್ಡಬರುತ್ತದೆ ಎಂದು ಅವರು ಲೆಕ್ಕಹಾಕಿರಲಿಲ್ಲ. ಈ ಚಿತ್ರವನ್ನು ಆರಂಭಿಸುವಾಗಲೇ ಇದು ರಾಸಲೀಲೆ ಖ್ಯಾತಿಯ ನಿತ್ಯಾನಂದ ಸ್ವಾಮೀಜಿಯ ಪೋಲಿ ಕತೆ ಎಂದು ಭಾರೀ ಪ್ರಚಾರವನ್ನು ಮದನ್ ಪಟೇಲ್ ಪರೋಕ್ಷವಾಗಿ ಪಡೆದಿದ್ದರು. ಆಗ ನಿತ್ಯಾನಂದನ ಅನುಯಾಯಿಗಳೂ ತಮ್ಮ ವಿರೋಧ ವ್ಯಕ್ತಪಡಿಸಿದ್ದರು. ಇಂತಹ ಹಲವಾರು ವಾದ-ವಿವಾದಗಳ ನಡುವೆಯೂ ಮದನ್ ಪಟೇಲ್ ಈ ಚಿತ್ರವನ್ನು ಸಂಪೂರ್ಣಗೊಳಿಸಿದ್ದರು. ಇನ್ನೇನು ಇದನ್ನು ಬಿಡುಗಡೆ ಮಾಡಬೇಕು ಎನ್ನುವಷ್ಟರಲ್ಲಿ ಈಗ ಕೋರ್ಟ್ ತೀರ್ಪು ನೀಡಿದೆ.

ಇಷ್ಟೆಲ್ಲ ಆದರೂ "ಯಾವುದೇ ಕಾರಣಕ್ಕೂ ಈ ಚಿತ್ರವನ್ನು ಕೈಬಿಡುವು ದಿಲ್ಲ, ಕೋರ್ಟ್‌ಗೆ ಮನವರಿಕೆ ಮಾಡಿ ಚಿತ್ರವನ್ನು ಬಿಡುಗಡೆ ಮಾಡುತ್ತೇನೆ" ಎನ್ನುತ್ತಿದ್ದಾರೆ ಮದನ್ ಮಲ್ಲು ಅಲಿಯಾಸ್ ಮದನ್ ಪಟೇಲ್.

ಮದನ್ ಅವರ ಸತ್ಯಾನಂದ ಗೆಲ್ಲುತ್ತಾನೋ ಅಥವಾ ನಿತ್ಯಾನಂದ ...ತಾನೋ? ಕಾಯಬೇಕಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, ...